|| ಓಂ ||

ಶ್ರೀ ವಾದಿರಾಜವಿರಚಿತ

ಸರಸಭಾರತೀವಿಲಾಸಃ

ಬಿ. ವೆಂಕಟೇಶಾಚಾರ್ಯರ

ಸರಳ ಕನ್ನಡ ಅನುವಾದಸಹಿತ

ರಾಮಕೃಷ್ಣಪ್ಪ ದ್ವೈತವೇದಾಂತ ಪಾಠಶಾಲಾ ಸಮಿತಿ

ಬೆಂಗಳೂರು

ಮೊದಲ ಮುದ್ರಣ: ಮಾರ್ಚ್ 1956

ರಾಮಕೃಷ್ಣಪ್ರದ್ವೈತವೇದಾಂತಪಾಠಶಾಲಾ ಸಮಿತಿಯವರಿಂದ
ಪ್ರಕಟಿಸಲ್ಪಟ್ಟಿದೆ.

ಬೆಲೆ: ರೂ. 1-8-0

ಮುದ್ರಣ:

ಪ್ರಭಾ ಮುದ್ರಣಾಲಯ

ಬೆಂಗಳೂರು-೪.

ಪ್ರಸ್ತಾವನಾ

ಶ್ರೀರಾಮಕೃಷ್ಣಪ್ಪ ದ್ವೈತವೇದಾಂತ ಪಾಠಶಾಲೆಯು ಬೆಂಗಳೂರು ಚಾಮರಾಜಪೇಟೆ ಐದನೆಯ ರಸ್ತೆಯಲ್ಲಿರುವ ಶ್ರೀಮದ್ ಮಾಧ್ವಸಂಘದ ಕಟ್ಟಡದಲ್ಲಿ ನಡಿಯುತ್ತಿದೆ.

ಇಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಉಪದೇಶಕ್ಕಾಗಿ "ಸರಸಭಾರತೀ-ವಿಲಾಸ"ವೆಂಬೀ ಗ್ರಂಥವನ್ನು ಇಡಲು, ಈ ಪಾಠಶಾಲಾ ಕಾರ್ಯಕಾರೀ ಸಮಿತಿಯ ಕಾರ್ಯದರ್ಶಿಗಳಾದ ದಿವಂಗತ ಶ್ರೀಮದ್ ಕೈವಾರ ವೆಂಕಟ ರಾಯರು ನನ್ನಲ್ಲಿ ಕೊಟ್ಟರು. ಇದನ್ನು ಪೂರ್ತಿಯಾಗಿ ಓದಿ ಒಂದಾವರ್ತಿ ಶ್ರೀಮದ್ ಮಾಧ್ವಸಂಘದಲ್ಲಿ ಪಾಠಹೇಳಿದೆನು. ಅಷ್ಟಕ್ಕೇ ತೃಪ್ತಿಯಾಗಲಿಲ್ಲ. ಈ ಗ್ರಂಥದಲ್ಲಿರುವ ರತ್ನಪ್ರಾಯವಾದ ಅನೇಕ ಸಿದ್ಧಾಂತತತ್ತ್ವಗಳನ್ನು ಸಂಸ್ಕೃತಭಾಷಾ ಪರಿಚಯವಿಲ್ಲದ ಎಲ್ಲ ಸಜ್ಜನರೂ ಓದಿ ತಿಳಿಯಲು ಅನು ಕೂಲವಾಗುವಂತೆ, ತಿಳಿಗನ್ನಡದಲ್ಲಿ ಈ ಕೃತಿಯನ್ನು ಸರಳ ಭಾಷಾಂತರ ಮಾಡುವುದರಿಂದ ಶ್ರೀಹರಿವಾಯುಗಳಿಗೂ ಹಾಗೂ ಗ್ರಂಥಕರ್ತರಾದ ಶ್ರೀವಾದಿರಾಜರಿಗೂ ಪ್ರೀತಿಯಾಗುವುದೆಂದು ಯೋಚಿಸಿದೆನು. ನನ್ನಲ್ಲಿ ವೇದಾಂತ ಗ್ರಂಥಾಭ್ಯಾಸಮಾಡುತ್ತಿರುವ ಶಿಷ್ಯವರ್ಗಕ್ಕೆ ಸೇರಿದ ಶ್ರೀ ಜಿ. ಕೆ. ಮಧ್ವರಾಯರು ಭಾಷಾಂತರವನ್ನು ಬರೆಯಲು ಒಪ್ಪಿ ಮುಂದೆ ಬಂದರು.

ನನ್ನ ಕರಗತವಾದ ಎರಡು ಅಚ್ಚಿನ ಪುಸ್ತಕಗಳಲ್ಲಿ ಕೆಲವು ಅಚ್ಚಿನ ತಪ್ಪುಗಳಿರುವುದು ಕಂಡುಬಂದವು. ಅವುಗಳನ್ನು ತಿದ್ದಿ ಸರಿಪಡಿಸಲು ಶ್ರೀ ಸೋದಾಮಠದ ಶ್ರೀಶ್ರೀಗಳವರನ್ನು ಪ್ರಾರ್ಥಿಸಲು, ಅವರು ಶ್ರೀಮಠದ ಪುಸ್ತಕಭಂಡಾರದಲ್ಲಿದ್ದ ತುಳುಲಿಪಿಯ ವಾಲೇಗರಿ ಪುಸ್ತಕವನ್ನು ದಯ ಪಾಲಿಸಿದರು. ಈ ರೀತಿಯಲ್ಲಿ ಅನುಗ್ರಹಮಾಡಿದ ಶ್ರೀ ಶ್ರೀ ವಿಷ್ಣೋತ್ತಮ-ತೀರ್ಥಶ್ರೀಪಾದಂಗಳವರಿಗೆ ನನ್ನ ಭಕ್ತಿಪೂರ್ವಕವಾದ ಪ್ರಣಾಮವನ್ನು ಅರ್ಪಿಸುತ್ತೇನೆ. ಅಲ್ಲದೆ ಶ್ರೀಸತ್ಯಪ್ರಮೋದತೀರ್ಥರ ಪುಸ್ತಕಭಂಡಾರ ದಲ್ಲಿನ ಬಾಲಬೋಧೆ ಲಿಪಿಯ ಒಂದು ಪ್ರತಿಯು ಲಭಿಸಿತು. ತುಳುಲಿಪಿ

ಯಲ್ಲಿದ್ದ ಪುಸ್ತಕವನ್ನು ಓದಿ ಸಹಕರಿಸಲು ವಿದ್ವಾನ್ ಶ್ರೀ ಇನ್ನಾಕೃಷ್ಣಾಚಾರ್ಯರು ಮುಂದುಬಂದು ಸಹಾಯಮಾಡಿದರು. ಹೀಗೆ ನಾಲ್ಕು ಪುಸ್ತಕಗಳನ್ನು ಹೋಲಿಸಿ ನೋಡಿ ನಮ್ಮ ಬುದ್ಧಿಗೆ ಸರಿಯಾದದ್ದೆಂದು ತಿಳಿದ ಮೂಲಶ್ಲೋಕಗಳಿಗನುಸಾರವಾಗಿ ಭಾಷಾಂತರಮಾಡಿ ಇದೆ. ಪ್ರಸಕ್ತವಾದ ಪ್ರಮಾಣಗಳು ಅಲ್ಲಲ್ಲಿ ಉದಾಹರಿಸಲ್ಪಟ್ಟಿವೆ. ಅಲ್ಲದೆ ಅವಶ್ಯಕವಿದ್ದೆಡೆಯಲ್ಲಿ ಅರ್ಥವಿಸ್ತಾರವು ಮಾಡಲಾಗಿದೆ.

ವಾದಿರಾಜೋಕ್ತಿಚಾತುರ್ಯಮಶಕ್ಯಂ ಜ್ಞಾತುಮಂಜಸಾ ।
ತಥಾಪಿ ವಕ್ಷ್ಯೇ ತಚ್ಛಿಕ್ಷಾಮನುಸೃತ್ಯೈವ ಲೇಶತಃ ॥

ವಾದಿರಾಜರ ಮಾತಿನ ಚಾತುರ್ಯವನ್ನು ಚೆನ್ನಾಗಿ ತಿಳಿಯಲು ಶಕ್ಯವಲ್ಲ. ಆದರೂ ಅವರ ಉಪದೇಶವನ್ನು ಅನುಸರಿಸಿಯೇ ಸ್ವಲ್ಪವಾಗಿ ಹೇಳುತ್ತೇನೆ ಎಂಬುದಾಗಿ ರುಕ್ಮಿಣೀಶವಿಜಯಕ್ಕೆ ವ್ಯಾಖ್ಯಾನಮಾಡಿದ ಅವರ ಶಿಷ್ಯರೇ ಅಂದಮೇಲೆ ವಾದಿರಾಜರಿಂದ ಶಿಕ್ಷಿತರಲ್ಲದ ನಮ್ಮಗಳಿಗೆ ಅವರ ಅಭಿಪ್ರಾಯವನ್ನು ಪೂರ್ಣವಾಗಿ ತಿಳಿಯುವುದು ಅತ್ಯಂತ ಅಸಾಧ್ಯ. ಹೀಗಿದ್ದರೂ ಬಹುಅವರ್ತಿ ಗ್ರಂಥವನ್ನು ಓದಿ ನನ್ನ ಬುದ್ಧಿಯಿಂದ ವಿಚಾರಮಾಡಿ ರಾಜರ ಅಭಿಪ್ರಾಯವನ್ನು ಸ್ವಲ್ಪಮಟ್ಟಿಗೆ ಬರೆದಿರುತ್ತೇನೆ. ಸಾಧ್ಯವಾದಮಟ್ಟಿಗೆ ತತ್ವಗಳಲ್ಲಾಗಲೀ ಅರ್ಥವಿವರಣೆಯಲ್ಲಾಗಲೀ ಭಾಷಾದಲ್ಲಾಗಲೀ ತಪ್ಪುಗಳು ಬರದಂತೆ ಪ್ರಯತ್ನಿಸಿದೆ.

ಈ ಗ್ರಂಥರಚನೆಯಲ್ಲಿ ನೆರವಾದ ಪಂಡಿತ ಶ್ರೀ ಅಳಗಿರೀಶಾಚಾರ್ಯರಿಗೆ ಕೃತಜ್ಞನಾಗಿರುವೆನು.

ಬಿ. ವೆಂಕಟೇಶಾಚಾರ್ಯ.


श्रीहयग्रीवमूर्ती.

[illegible]
[illegible] ॥



ಭಾವಿಸಮೀರಶ್ರೀವಾದಿರಾಜರು

ಶ್ರೀವಾದಿರಾಜರು ಮತ್ತು ಅವರ ಕೃತಿಗಳು

ವ್ಯಾಸಾಯ ಭವನಾಶಾಯ ಶ್ರೀಶಾಯ ಗುಣರಾಶಯೇ |
ಹೃದ್ಯಾಯ ಶುದ್ಧವಿದ್ಯಾಯ ಮಧ್ವಾಯ ಚ ನಮೋ ನಮಃ ||

ಉಡುಪಿ ಎಂಟು ಮಠಗಳಲ್ಲಿ ಒಂದಾದ ಸೋದೇಮಠದ ಮೊದಲನೆಯ ಪರಮಹಂಸರು ಶ್ರೀಮಧ್ವಾಚಾರ್ಯರಿಂದ ಸಂನ್ಯಾಸಪಡೆದ ಶ್ರೀವಿಷ್ಣುತೀರ್ಥರು. ಇವರು ಪೂರ್ವಾಶ್ರಮದಲ್ಲಿ ಶ್ರೀಮದಾನಂದತೀರ್ಥರ ತಮ್ಮಂದಿರು. ಇವರ ಪರಂಪರೆಯಲ್ಲಿ ಹದಿನೇಳನೆಯವರು ಶ್ರೀವಾಗೀಶತೀರ್ಥರು. ಇವರ ಶಿಷ್ಯರು ಲೋಕದಲ್ಲಿ ಭಾವಿಸಮೀರರೆಂದು ಪ್ರಸಿದ್ಧರಾದ ಶ್ರೀವಾದಿರಾಜತೀರ್ಥರು. ಇವರ ತಂದೆ ರಾಮಾಚಾರ್ಯರು. ತಾಯಿಯು ಸರಸ್ವತೀ ದೇವಿಯರು. ಈ ದಂಪತಿಗಳಿಗೆ ಸಂತಾನವಿಲ್ಲದಿರಲು ವಾಗೀಶತೀರ್ಥರನ್ನು ಶರಣುಹೊಂದಿದರು. ಅವರ ವರಪ್ರಭಾವದಿಂದ ಜನಿಸಿದ ಮಗುವೇ ವರಾಹಾಚಾರ್ಯರು. ಮುಂದೆ ಶ್ರೀವಾದಿರಾಜರೆಂದು ಪ್ರಸಿದ್ಧರಾದ ಮಹಾನುಭಾವರು ಇವರೇ.

ಇವರ ಜೀವಿತಕಾಲ ಶಾ-ವಾ-ಶ. ೧೪೦೨-೧೫೨೨. ಬ್ರಹ್ಮಚರ್ಯಾಶ್ರಮದಲ್ಲಿರುವಾಗ ಸಣ್ಣ ವಯಸ್ಸಿನಲ್ಲಿಯೇ ಶ್ರೀವಾಗೀಶತೀರ್ಥರಿಂದ ಸಂನ್ಯಾಸವನ್ನು ಪಡೆದು ಶ್ರೀವಾದಿರಾಜರೆಂಬ ಅನ್ವರ್ಥನಾಮದಿಂದ ಲೋಕದಲ್ಲಿ ಪ್ರಸಿದ್ಧರಾಗಿ ಅತ್ಯುತ್ತಮವಾದ ವೇದಾಂತಗ್ರಂಥಗಳನ್ನೂ, ಕಾವ್ಯಗಳನ್ನೂ ರಚಿಸಿ ವಾದದಲ್ಲಿ ಪ್ರತಿವಾದಿಗಳನ್ನು ನಿಗ್ರಹಿಸಿ ಶ್ರೀಮದಾನಂದತೀರ್ಥರ ಸತ್ಸಿದ್ಧಾಂತವನ್ನು ಲೋಕದಲ್ಲಿ ನಿರ್ದುಷ್ಟವಾದದ್ದೆಂದೂ, ಮೋಕ್ಷದಾಯಕವೆಂದೂ ಪ್ರಸಿದ್ಧಿಗೊಳಿಸಿದರು.

ಇಷ್ಟೇ ಅಲ್ಲ. ಸಂಸ್ಕೃತಭಾಷಾಭಿಜ್ಞರಲ್ಲದ ಜನರಿಗೆ ತತ್ವವನ್ನು ತಿಳಿಸುವುದಕ್ಕಾಗಿ ಕನ್ನಡ ಭಾಷೆಯಲ್ಲಿ ಅನೇಕ ಕೀರ್ತನೆಗಳನ್ನೂ, ಗದ್ಯಪದ್ಯಾತ್ಮಕವಾದ ಕೃತಿಗಳನ್ನೂ ಹೃದಯಂಗಮವಾದ ರೀತಿಯಲ್ಲಿ ರಚಿಸಿರುತ್ತಾರೆ.

ಈ ಮಹನೀಯರು-ತಮ್ಮ ಜೀವಿತಕಾಲದಲ್ಲಿ ಆಶ್ಚರ್ಯವನ್ನುಂಟು ಮಾಡುವ ಅನೇಕ ಕಾರ್ಯಗಳನ್ನು ಮಾಡಿ ತಮ್ಮ ಮಹಿಮೆಯನ್ನು ಜನರಿಗೆ ತೋರಿಸಿರುತ್ತಾರೆ. ಇವರ ವಿಸ್ತಾರವನ್ನು ಇತರರು ತಮ್ಮ *ಗ್ರಂಥಗಳಲ್ಲಿ ವರ್ಣಿಸಿರುವರು. ಮುಖ್ಯವಾಗಿ ವಾದಿರಾಜರ ಗ್ರಂಥಗಳ ಮಹತ್ವವನ್ನು ಸ್ವಲ್ಪಮಟ್ಟಿಗೆ ತಿಳಿಸುವುದು ಈ ಲೇಖನದ ಗುರಿ.

ಶ್ರೀವಾದಿರಾಜರು ಅನೇಕ ವಾಕ್ಯಾರ್ಥಗ್ರಂಥಗಳನ್ನು ರಚಿಸಿರುತ್ತಾರೆ. ಅವುಗಳಲ್ಲಿ ಮುಖ್ಯವಾದದ್ದು **"ಯುಕ್ತಿಮಲ್ಲಿಕಾ"**. ಇದು ವಾಕ್ಯಾರ್ಥಗ್ರಂಥ ವಾದರೂ ಕಾವ್ಯದ ಸೊಬಗನ್ನು ಒಳಗೊಂಡಿದೆ. ಎಲ್ಲವೂ ಶ್ಲೋಕರೂಪ ವಾದದ್ದು. ಜೈನ ಬೌದ್ಧಾದಿ ಮತಗಳನ್ನು ನಿರಾಕರಿಸುವುದಲ್ಲದೆ ಮುಖ್ಯ ವಾಗಿ ಮಾಯಾವಾದವನ್ನು ಖಂಡಿಸುವುದು ಈ ಗ್ರಂಥದ ಗುರಿ.

"ನ ಸ್ನೇಹಾನ್ನ ಚ ವಿಸ್ನೇಹಾದ್ಯುಕ್ತ್ಯಾಕೃಷ್ಟೇನ ಕೇವಲಂ |
ಯತಃ ಕೃತಾಸಿ ತತ್ತ್ವರ್ತರಸಿಕಾನಾಂ ಮುದೇಭವ || ಗುಣಸೌರಭ ೨೪

ಇದರ ಭಾವ:– ಕೇವಲ ಸ್ವಮತದಲ್ಲಿನ ಸ್ನೇಹದಿಂದಲೇ ಆಗಲೀ, ಪರಮತದಲ್ಲಿನ ದ್ವೇಷದಿಂದಲೇ ಆಗಲೀ, ಎಲೈ ಯುಕ್ತಿಮಲ್ಲಿಕೆಯೇ, ನೀನು ನನ್ನಿಂದ ಮಾಡಲ್ಪಡಲಿಲ್ಲ. ಸಮೀಚೀನವಾದ ಯುಕ್ತಿಗಳಿಂದ ತತ್ವವನ್ನು ನಿರ್ಣಯಿಸುವುದರಲ್ಲಿ ಪ್ರೀತಿಯುಳ್ಳ ನಾನು ನಿನ್ನನ್ನು ರಚಿಸಿರುತ್ತೇನೆ. ಆದ್ದರಿಂದ ವಿಚಾರದಲ್ಲಿ ರಸಿಕರಾದವರ ಆನಂದಕ್ಕೆ ಆಗು–ಅಂದರೆ ಈ ಯುಕ್ತಿಮಲ್ಲಿಕೆಯು ಪಕ್ಷಪಾತವಿಲ್ಲದೇ ವಿಚಾರಪೂರ್ವಕವಾಗಿ ಸಿದ್ಧಾಂತ ವನ್ನು ಸ್ಥಾಪಿಸಲು ಪ್ರವೃತ್ತವಾದದ್ದು. ಆದ್ದರಿಂದ ಮತ್ಸರಾದಿದೋಷಗಳಿಲ್ಲದ ವಿಚಾರಪರರಾದ ಸಜ್ಜನರಿಗೆ ಆನಂದವನ್ನುಂಟುಮಾಡುತ್ತದೆ.

ಈ ಯುಕ್ತಿಮಲ್ಲಿಕೆಯಲ್ಲಿ ಐದು ಸೌರಭಗಳುಂಟು. ಒಂದನೆಯದು ಗುಣಸೌರಭ. ಇದರಲ್ಲಿ ಮುಖ್ಯವಾಗಿ ಬ್ರಹ್ಮಸೂತ್ರಗಳ ಮೊದಲನೆಯ

*೧. ಶ್ರೀನಿವಾಸಭಟ್ಟಕೃತ ಶ್ರೀವಾದಿರಾಜಗುರುವರರ ಚರಿತ್ರೆ.
೨. ಬೇಲೂರು ಕೇಶವದಾಸಕೃತ ಕರ್ಣಾಟಕ ಭಕ್ತವಿಜಯ ಭಾಗ–೧.
೩. ಶ್ರೀರಾಮಚಂದ್ರಾಚಾರ್ಯ ವಿರಚಿತ ಶ್ರೀವಾದಿರಾಜಗುರುವರ ಚರಿತಾಮೃತಂ.

ಅಧ್ಯಾಯದಲ್ಲಿ ನಿರ್ಣೀತವಾದ ಶ್ರೀಮನ್ನಾರಾಯಣನ ಕಲ್ಯಾಣಗುಣ ಪೂರ್ಣತ್ವವನ್ನು ಸವಿಸ್ತಾರವಾಗಿ ಮಾಯಾವಾದಖಂಡನಪೂರ್ವಕ ಆನಂದ ವನ್ನುಂಟುಮಾಡುವ ಯುಕ್ತಿಗಳಿಂದ ಸ್ಥಾಪಿಸಿದ್ದಾರೆ.

ಎರಡನೆಯದು ಶುದ್ಧಿಸೌರಭ:– ಇಲ್ಲಿ ಬ್ರಹ್ಮಮೀಮಾಂಸಾಶಾಸ್ತ್ರದ ಎರಡನೆಯ ಅಧ್ಯಾಯದಲ್ಲಿ ಉಕ್ತವಾದ ಪರಮಾತ್ಮನು ನಿರ್ದೋಷನು ಎಂಬ ಪ್ರಮೇಯವನ್ನು ಅವರದೇ ಆದ ಅನೇಕ ಹೊಸಹೊಸ ಯುಕ್ತಿಗಳಿಂದ ಪ್ರತಿಪಾದಿಸಿರುತ್ತಾರೆ. ವೇದ-ಭಾಗವತಾದಿಪುರಾಣ-ಭಾರತ-ಗೀತಾ ಇವುಗಳಲ್ಲಿನ ವಾಕ್ಯಗಳನ್ನು ಉದಹರಿಸುವುದರಿಂದ ತಾವು ಹೇಳಿದ ಯುಕ್ತಿಗಳು ಸಚ್ಛಾಸ್ತ್ರಗಳ ಆಧಾರವುಳ್ಳದ್ದೆಂದು ತೋರಿಸಿರುತ್ತಾರೆ.

ಮೂರನೆಯದು ಭೇದಸೌರಭ:– ಇಲ್ಲಿ ಮೊದಲು ಬ್ರಹ್ಮಸೂತ್ರದ ಪ್ರಥಮಾಧ್ಯಾಯದ ಅಧಿಕರಣಗಳನ್ನು ಅನುವಾದಮಾಡಿ ಜೀವಪರಮಾತ್ಮರ ಭೇದವನ್ನು ಸ್ಥಾಪಿಸಿರುತ್ತಾರೆ. ಅನಂತರ ಶ್ರುತಿ ಸ್ಮೃತಿ ಯುಕ್ತಿಗಳಿಂದ ಜೀವಪರಮಾತ್ಮರ ಭೇದದಲ್ಲಿಯೇ ಸರ್ವಸಚ್ಛಾಸ್ತ್ರಕ್ಕೂ ತಾತ್ಪರ್ಯವೆಂಬುದನ್ನು ನಿಪುಣತರವಾದ ರೀತಿಯಲ್ಲಿ ಮನಮುಟ್ಟುವಂತೆಯೂ ಸಜ್ಜನರಿಗೆ ಸಂತೋಷವನ್ನುಂಟುಮಾಡುವಂತೆಯೂ ವರ್ಣಿಸಿರುತ್ತಾರೆ.

ನಾಲ್ಕನೆಯದು ವಿಶ್ವಸೌರಭ:– ಈ ಸೌರಭವಲ್ಲಿ ಜಗತ್ತು ಸತ್ಯವೆಂಬ ಪ್ರಮೇಯವನ್ನು ಪ್ರಬಲವಾದ ಯುಕ್ತಿಜಾಲನೆಯಿಂದ ಸ್ಥಾಪಿಸಿರುತ್ತಾರೆ. ಈ ಪ್ರಮೇಯವು ತತ್ವವಾದಿಗಳಿಗೆ ಬಹು ಮುಖ್ಯವಾದದ್ದು. ಮುಕ್ತಿಯು ಭಗವತ್ಪ್ರಸಾದಸಾಧ್ಯ. ಪ್ರಸಾದವು ಭಕ್ತ್ಯೇಕಸಾಧ್ಯ. ಭಕ್ತಿಯು ಭಗವಂತನ ಮಹಿಮಾಜ್ಞಾನಪೂರ್ವಕವಾಗಿರಬೇಕು. ಪರಮಾತ್ಮನು ಸೃಷ್ಟಿಮಾಡಿದ ಜಗತ್ತು ಸತ್ಯವಲ್ಲದೆ ಇಂದ್ರಜಾಲದಂತೆ ಮಿಥ್ಯಾಆಗಿದ್ದಲ್ಲಿ ಅವನು ಸತ್ಯವಾದ ಜಗತ್ತನ್ನು ಸೃಷ್ಟಿಸಲು ಶಕ್ತನಲ್ಲವೆಂಬ ನ್ಯೂನತೆಯು ಬಂದು ಅವನಲ್ಲಿ ಉತ್ತಮ ಭಕ್ತಿಮಾಡಲು ಆಗಲಾರದು. ಆದ್ದರಿಂದ ವಿಚಿತ್ರವಾದ ಸತ್ಯವಾದ ಜಗತ್ತನ್ನು ಸೃಷ್ಟಿಮಾಡುತ್ತಾನಾದ್ದರಿಂದ ಪರಮಾತ್ಮನು ನಿರ್ದೋಷನೂ ಅನಂತಗುಣಪೂರ್ಣನೂ ಎಂಬುದು ಸಂಭಾವಿತವಾಗುತ್ತದೆ ಎಂದು

ತಿಳಿದು ಅಧಿಕಾರಿಯು ಅವನಲ್ಲಿ ಮೋಕ್ಷದಾಯಕವಾದ ಭಕ್ತಿಯನ್ನು ಮಾಡುತ್ತಾನೆ. ಆದ್ದರಿಂದ ವಾದಿರಾಜರು ಈ ವಿಶ್ವಸೌರಭದಲ್ಲಿ ಅನೇಕ ಶ್ರುತಿ ಸ್ಮೃತಿಗಳನ್ನುದಾಹರಿಸಿ ಸಮೀಚೀನವಾದ ಯುಕ್ತಿಗಳಿಂದ ವಿಶ್ವಸತ್ಯತ್ವ ವನ್ನು ಸಾಧಿಸಿರುತ್ತಾರೆ.

ಐದನೆಯದು ಫಲಸೌರಭ:—ಈ ಸೌರಭದ ಮೊದಲು ಭಾಗದಲ್ಲಿ ಬ್ರಹ್ಮಮೀಮಾಂಸದ ಮೂರನೇ ಅಧ್ಯಾಯದಲ್ಲಿ ಉಕ್ತವಾದ ಜ್ಞಾನಸಾಧನೆ ಯನ್ನು ವಿವರಿಸಿದ್ದಾರೆ. ಅನಂತರ ಮುಕ್ತಿಯ ಸ್ವರೂಪವನ್ನೂ ಮುಕ್ತರ ಭೋಗವನ್ನೂ ಬ್ರಹ್ಮಸೂತ್ರಗಳ ನಾಲ್ಕನೆಯ ಅಧ್ಯಾಯದಲ್ಲಿ ವೇದವ್ಯಾಸರು ಹೇಳಿರುವುದನ್ನು ನಿರ್ಣಯಿಸಿ ಮಾಯಾವಾದಿಗಳು ಹೇಳುವ ನಿರ್ಗುಣ ಮುಕ್ತಿಯು ಅಪ್ರಾಮಾಣಿಕವೆಂದೂ ತೋರಿಸಿರುತ್ತಾರೆ. ಅಲ್ಲದೆ ಈ ಸೌರಭದಲ್ಲಿ ಜೀವೋತ್ತಮರಾದ ವಾಯುದೇವರ ಮಹಿಮೆಯನ್ನು ಬಳಿ-ತ್ಥಾದಿಸೂಕ್ತಗಳ ವ್ಯಾಖ್ಯಾನ ಮಾಡುವುದರಮೂಲಕ ಸಜ್ಜನರ ಮನಸ್ಸಿಗೆ ಆನಂದವನ್ನುಂಟುಮಾಡುವರೀತಿಯಲ್ಲಿ ವರ್ಣಿಸಿರುತ್ತಾರೆ. ಇವೆಲ್ಲವನ್ನೂ ಯುಕ್ತಿಮಲ್ಲಿಕೆಯನ್ನು ಟೀಕಿಸಿರುವ ವಾದಿರಾಜರ ಶಿಷ್ಯರಾದ ಸುರೋತ್ತಮ ತೀರ್ಥರು ಅವರ ಅವತಾರಿಕೆಯಲ್ಲಿ ಹೀಗೆ ಸಂಗ್ರಹಿಸಿರುತ್ತಾರೆ.

"ಸಮನ್ವಯಾಧ್ಯಾಯಪ್ರತಿಪಾದ್ಯಂ ಸರ್ವಗುಣಪೂರ್ಣತ್ವಂ ಗುಣ-ಸೌರಭಸರ್ವಸ್ವೇನ ಮನಃಪ್ರಿಯಂ ಕುರ್ವನ್ ತದನಂತರಮವಿರೋ-ಧಾಧ್ಯಾಯಪ್ರತಿಪಾದ್ಯಂ ನಿರ್ದೋಷತ್ವಂ ಶುದ್ಧಿಸೌರಭಸರ್ವಸ್ವೇನ ರಂಜಯನ್ ಪುನರೇತದಧ್ಯಾಯದ್ವಯೇಪಿ ಸೂತ್ರೇ ಸೂತ್ರೇ ಪ್ರತಿಪಾದಿತಂ ಜೀವೇಶ್ವರಭೇದಂ ಭೇದಸೌರಭಸರ್ವಸ್ವೇನ ಪ್ರತಿಪಾದಯನ್ ತದನು ಜನ್ಮಾದ್ಯಸ್ಯಯತ ಇತಿಸೂತ್ರ ಪ್ರತಿಪಾದಿತ ಜಗಜ್ಜನ್ಮಾದಿ ಕಾರಣತ್ವಲಕ್ಷಣ-ಪರಿರಕ್ಷಣಾಯ ವಿಶ್ವಸೌರಭಸರ್ವಸ್ವೇನ ಜಗತಸ್ಸತ್ಯತಾಂ ಸಂಸ್ಥಾಪಯನ್ ಪುನಸ್ಸಾಧನಫಲಾಧ್ಯಾಯಪ್ರತಿಪಾದ್ಯಂ ಸಾಧನಂ ಫಲಂ ಚ ಫಲಸೌರಭ-ಸರ್ವಸ್ವೇನ ಸಂಗೃಹ್ಣನ್ ಪ್ರಮಾಣಾಧೀನಾ ಪ್ರಮೇಯಸಿದ್ಧಿರಿತಿ ನ್ಯಾಯೇನ ಪಂಚಸೌರಭೋಕ್ತಪ್ರಮೇಯಸ್ಯಾಪಿ ಪ್ರಮಾಣಸಾಪೇಕ್ಷತ್ವಾತ್ ಪ್ರಮಾ-ಣೇಷು ಚ ಪ್ರಾಬಲ್ಯಮಾಗಮಸ್ಯೈವ ಜಾತ್ಯಾಶೇಷುತ್ರಿಷು ಸ್ಮೃತಮಿತಿ

ವಚನಾದಲೌಕಿಕೇಽರ್ಥೇ ಪ್ರಬಲಪ್ರಮಾಣಭೂತವೇದಸ್ಯ ನ ವಿಲಕ್ಷಣತ್ವಾದಸ್ಯ ತಥಾತ್ವಂಚ ಶಬ್ದಾದಿತಿಸೂತ್ರೇ ನಿತ್ಯತಯಾ ಪ್ರತಿಪಾದಿತಂ ಸ್ವತಃಪ್ರಾಮಾಣ್ಯಂ ಸಮರ್ಥಯಿತುಂ ವೇದಾಪೌರುಷೇಯತಾಂ ತಾವದಾದೌ ಸಾಧಯಿತುಮುಪಕ್ರಮತೇ."

ಈ ವಾಕ್ಯದ ಅಭಿಪ್ರಾಯ ಹೀಗೆ:- ಬ್ರಹ್ಮಸೂತ್ರದ ಸಮನ್ವಯಾಧ್ಯಾಯದಲ್ಲಿ (ಮೊದಲನೆಯ ಅಧ್ಯಾಯದಲ್ಲಿ) ಪ್ರತಿಪಾದ್ಯವಾದ ವಿಷ್ಣುವಿನ ಗುಣಪೂರ್ಣತ್ವವನ್ನು ಗುಣಸೌರಭದ ಪೂರ್ತಿ ಸಪ್ರಮಾಣವಾಗಿ ನಿರೂಪಿಸಿ ವಾದಿರಾಜರು ಓದುವವರ ಮನಸ್ಸಿಗೆ ಪ್ರೀತಿಯನ್ನುಂಟುಮಾಡುತ್ತಾರೆ; ಅವಿರೋಧಾಧ್ಯಾಯದಲ್ಲಿ (ಎರಡನೆಯ ಅಧ್ಯಾಯದಲ್ಲಿ) ಪ್ರತಿಪಾದಿತವಾದ ಪರಮಾತ್ಮನ ನಿರ್ದೋಷತ್ವವನ್ನು ಶುದ್ಧಿಸೌರಭದಲ್ಲಿ ಮನೋಹರವಾಗಿ ಪ್ರತಿಪಾದಿಸುತ್ತಾರೆ. ಪುನಃ ಬ್ರಹ್ಮಸೂತ್ರದ ಈ ಎರಡು ಅಧ್ಯಾಯಗಳಲ್ಲಿ ಸೂತ್ರಸೂತ್ರದಲ್ಲಿಯೂ ಉಕ್ತವಾದ ಜೀವೇಶ್ವರರಿಗಿರುವ ಭೇದವನ್ನು ಭೇದಸೌರಭಪೂರ್ತಿ ಪ್ರತಿಪಾದಿಸಿ ಅನಂತರ 'ಜನ್ಮಾದ್ಯಸ್ಯಯತಃ' ಎಂಬ ಸೂತ್ರದಲ್ಲಿ ಉಕ್ತವಾದ ಜಗಜ್ಜನ್ಮಾದಿಕಾರಣತ್ವರೂಪವಾದ ವಿಷ್ಣುವಿನ ಲಕ್ಷಣವನ್ನು ರಕ್ಷಿಸುವುದಕ್ಕಾಗಿ ವಿಶ್ವಸೌರಭ ಪೂರ್ತಿ ಜಗತ್ತಿನ ಸತ್ಯತ್ವವನ್ನು ಸ್ಥಾಪಿಸಿರುತ್ತಾರೆ. ಬ್ರಹ್ಮಸೂತ್ರದ ಮೂರು ಮತ್ತು ನಾಲ್ಕನೆಯ ಅಧ್ಯಾಯಗಳಲ್ಲಿ ಪ್ರತಿಪಾದ್ಯವಾದ ಬ್ರಹ್ಮಜ್ಞಾನಸಾಧನ ಬ್ರಹ್ಮಜ್ಞಾನವ ಫಲ ಇವೆರಡನ್ನೂ ಫಲಸೌರಭದಲ್ಲಿ ಸಂಗ್ರಹಿಸುತ್ತಾರೆ. ಪ್ರಮೇಯವು ಪ್ರಮಾಣಾಧೀನವಾದ್ದರಿಂದ ಈ ಐದುಸೌರಭಗಳಲ್ಲಿಯೂ ಉಕ್ತವಾದ ಪ್ರಮೇಯ ಸಮುದಾಯವು ಸಿದ್ಧಿಸುವುದಕ್ಕಾಗಿ ಸೂತ್ರದಲ್ಲಿ ಸೂಚಿಸಿರುವ ರೀತಿಯಲ್ಲಿ ನಿರ್ದೋಷವಾದ ಪ್ರಮಾಣವು ಅಪೌರುಷೇಯವಾದ ವೇದವಾದ್ದರಿಂದ ಅದರ ಸ್ವತಃಪ್ರಮಾಣವನ್ನು ಪ್ರತಿಪಾದಿಸುವುದಕ್ಕೆ ಮೊದಲು ಆ ವೇದದ ಅಪೌರುಷೇಯತ್ವವನ್ನು ಸಾಧಿಸಲು ಉಪಕ್ರಮಿಸುತ್ತಾರೆ.

ಈ ಯುಕ್ತಿಮಲ್ಲಿಕಾಗ್ರಂಥದ ಮಹತ್ವವನ್ನು ಎಷ್ಟು ವರ್ಣಿಸಿದರೂ ಸ್ವಲ್ಪವೇ. ಅದನ್ನು ಓದಿಯೇ ಆ ಮಹತ್ವವನ್ನು ತಿಳಿಯಬೇಕು. ಮಧ್ವಸಿದ್ಧಾಂತವನ್ನು ನಿಸ್ಸಂಶಯವಾಗಿ ತಿಳಿಯಲು ಶ್ರೀಮನ್ನ್ಯಾಯಸುಧಾ-

ವ್ಯಾಸಂಗವು ಹೇಗೆ ಅವಶ್ಯಕವೋ ಹಾಗೆಯೇ ಯುಕ್ತಿಮಲ್ಲಿಕಾಗ್ರಂಥದ ವ್ಯಾಸಂಗವೂ ಅವಶ್ಯಕವೆಂದು ನನ್ನ ಅಭಿಪ್ರಾಯ.

ರುಕ್ಮಿಣೀಶವಿಜಯ:–ಇದು ಮಹಾಕಾವ್ಯ. ಇದರ ನಾಯಕ ಶ್ರೀಕೃಷ್ಣಪರಮಾತ್ಮ. ನಾಯಕಿಯು ರುಕ್ಮಿಣೀದೇವಿ. ಈ ಕಾವ್ಯದಲ್ಲಿ ಶ್ರೀಮದ್ಭಾಗವತ ದಶಮಸ್ಕಂಧದ ಪೂರ್ವಭಾಗದಲ್ಲಿ ಉಕ್ತವಾದ ಕೃಷ್ಣ ಕಥೆಯೂ ಉತ್ತರಭಾಗದಲ್ಲಿನ ರುಕ್ಮಿಣೀ ಸ್ವಯಂವರವೂ ವರ್ಣಿಸಲ್ಪಟ್ಟಿರು ವುದಲ್ಲದೆ ಷಣ್ಮಹಿಷಿಯರೇ ಮೊದಲಾದ ಹದಿನಾರುಸಹಸ್ರ ಸ್ತ್ರೀಯರ ವಿವಾಹವೂ ಸೂಚಿತವಾಗಿದೆ. ಈ ಗ್ರಂಥವು ಕೇವಲ ಕಾವ್ಯವೆಂದು ತಿಳಿಯ ಕೂಡದು. ಏಕೆಂದರೆ–ಆನಂದತೀರ್ಥರ ಸಿದ್ಧಾಂತದ ಪ್ರಮೇಯಗಳು ಎಲ್ಲ ಕಡೆಯಲ್ಲಿಯೂ ಸಯುಕ್ತಿಕವಾಗಿ ಪ್ರತಿಪಾದಿಸಲ್ಪಟ್ಟಿವೆ. ಬಹುಶಃ ತತ್ತ್ವವಿಚಾರವು ಮತ್ತು ಕಾವ್ಯದ ವೈಖರಿಯು ಒಟ್ಟಿಗೆ ಇರುವುದು ದುರ್ಲಭ. ಈ ರುಕ್ಮಿಣೀಶವಿಜಯದಲ್ಲಾದರೋ ಕಾವ್ಯದ ಸೌಂದರ್ಯಕ್ಕೆ ಹ್ರಾಸ ಬರದಂತೆ ತತ್ತ್ವವಿಚಾರವು ಹೃದಯಂಗಮವಾದ ರೀತಿಯಲ್ಲಿ ಕಂಡುಬರುತ್ತೆ. ಇದಕ್ಕೆ ಒಂದು ದೃಷ್ಟಾಂತ.

ಕಸ್ಮಾನ್ಮುಹ್ಯಥ ಮಾನವಾ ಮುರಭಿದಃ ಸರ್ವೋತ್ತಮತ್ವೇ ಪುರಾ |
ಯಃ ಪದ್ಮಾಸನಧೂರ್ಜಟಿಪ್ರಭೃತಿಭಿಃ ಕಾರ್ಯಾರ್ಥಿಭಿಃ ಪ್ರಾರ್ಥಿತಃ ||
ಗರ್ಭೇ(ಗೀರ್ಭಿರಭಿಷ್ಟುತಃ ಫಣಿಫಣೇ ನೃತ್ಯಂಶ್ಚ ಯಃ ಸೇವಿತಃ |
ಸದ್ವೇಣುಂ ರಣಯಂಶ್ಚ ನಮ್ರತನುಭಿರ್ಯೋ ವಿಸ್ಮಿತೈರೀಕ್ಷಿತಃ || ೧೩ ||

ಕೃಷ್ಣಾಯಾಮಪಿ ತೈರ್ನಕ್ತೈಃ ಪರಿವೃತಂ ದೃಷ್ಟ್ವಾತ್ರ ಶ್ವಫಲ್ಕಾತ್ಮಜೋ |
ಯಂ ತುಷ್ಟಾವಗುಣೈರಬದ್ಧಮಿತರಾನ್ಬದ್ಧಾನುದೀರ್ಯಸ್ಫುಟಂ ||
ಸೇವಾತುಷ್ಟಹೃದೋಽಪಿ ದೇವನಿಕರಾದಪ್ರಾಪ್ತಮುಕ್ತಿಂ ಪ್ರಭು-
ರ್ಯಃಪ್ರಾದಾನ್ಮುಚುಕುಂದಭೂಮಿಪತಯೇ ತೈರ್ನಿದ್ರಿತಾಯಾಪ್ಯಲಂ ||

ಎಲೈಮನುಷ್ಯರೇ ! ಮುರಾರಿಯ ಸರ್ವೋತ್ತಮತ್ವದಲ್ಲಿ ಏನುಕಾರಣ ಮೋಹಪಡುತ್ತೀರಿ? ಸರ್ವೋತ್ತಮನು ಹೌದೋ ಅಲ್ಲವೋ ಎಂಬ ಸಂಶಯವೇಕೆ? ಭಾರದಿಂದ ಪೀಡಿತಳಾದ ಭೂದೇವಿಯು ಬ್ರಹ್ಮಾದಿದೇವತೆ

ಗಳನ್ನು ಶರಣುಹೊಂದಿದಾಗ ಭೂಭಾರಹರಣ ರೂಪಕಾರ್ಯದಲ್ಲಿ ಸಮರ್ಥ ರಲ್ಲದ ಆ ದೇವತೆಗಳಿಂದ ಶ್ರೀ ಕೃಷ್ಣನು ಅವತಾರಕ್ಕೆ ಮೊದಲು ಪ್ರಾರ್ಥಿ ಸಲ್ಪಟ್ಟನು. ದೇವಕಿಯ ಗರ್ಭದಲ್ಲಿದ್ದಾಗ ಪುನಃ ಅವರಿಂದ ಸ್ತುತಿಸ ಲ್ಪಟ್ಟನು. ಕಾಳಿಯನ ಹೆಡೆಯಮೇಲೆ ಕುಣಿಯುವವೇಳೆ ಈ ದೇವತೆಗಳು ನರ್ತನಮಾಡುವ ಕೃಷ್ಣನ ನರ್ತನವನ್ನನುಸರಿಸಿ ಮೃದಂಗವೇಮೊದಲಾದ ವಾದ್ಯಗಳನ್ನು ಮಾಡಿ ಸೇವಿಸಿದರು. ಅಲ್ಲದೇ ಈ ಕೃಷ್ಣಪರಮಾತ್ಮನು ವಿಚಿತ್ರವಾದ ರೀತಿಯಲ್ಲಿ ವೇಣುಗಾನ ಮಾಡುವಸಮಯದಲ್ಲಿ ನಮ್ರಭಾವ ದಿಂದ ಅದನ್ನುಕೇಳಿ ಅವರಸ್ವರೂಪವು ಇಂಥಾದ್ದೆಂದು ತಿಳಿಯದೇ ಆಶ್ಚರ್ಯ ದಲ್ಲಿ ಮಗ್ನರಾಗಿ ಕೃಷ್ಣನನ್ನು ಭಕ್ತಿಭಾವದಿಂದ ನೋಡಿದರು. ಇಂತಹ ದೇವತೆಗಳಿಗಿಂತ ಶ್ರೀಕೃಷ್ಣನು ಅತ್ಯುತ್ತಮನೆಂಬುದು ಸಿದ್ಧವಾಯಿತು.

ಮತ್ತು ಯಮುನಾನದಿಯಲ್ಲಿ ಸ್ನಾನಕ್ಕಾಗಿ ಮುಳುಗಿದಾಗ ಅಕ್ರೂರನು ಭಕ್ತಿಯಿಂದ ನಮ್ರರಾದ ಈ ದೇವತೆಗಳಿಂದ ಸುತ್ತಲ್ಪಟ್ಟ ಶೇಷಶಾಯಿಯಾದ ಶ್ರೀಕೃಷ್ಣನನ್ನು ನೋಡಿ "ಇತರರೆಲ್ಲರೂ ಪ್ರಕೃತಿಯಿಂದ ಬದ್ಧರು. ನೀನು ಅದರಿಂದ ಬದ್ಧನಲ್ಲ." ಹೀಗೆಂದು ಪರಮಾತ್ಮನನ್ನು ಸ್ಫುಟವಾಗಿ ಸ್ತುತಿಸಿದ್ದಾನೆ. ಮುಚುಕುಂದಮಹಾರಾಜನು ದೇವತೆಗಳಿಗೆ ಸಹಾಯ ಮಾಡಿದನು. ಆ ಸಹಾಯದಿಂದ ತೃಪ್ತರಾದ ದೇವತೆಗಳು ಅವನಿಗೆ ಮುಕ್ತಿ ಯನ್ನು ಕೊಡಲು ಸಮರ್ಥರಾಗದೆ ಕೇವಲ ನಿದ್ರೆಯನ್ನು ಕೊಟ್ಟರು. ಇದರಿಂದ ಮುಚುಕುಂದನು ನಿದ್ರೆಮಾಡುತ್ತಿದ್ದರೂ ಅವನಿದ್ದೆಡೆಗೆ ತಾನೇ ಬಂದು ಕಾಲಯವನನಿಂದ ಅವನನ್ನು ಎಬ್ಬಿಸಿ ಮುಕ್ತಿಯನ್ನು ಕೊಟ್ಟನು. ಹೀಗಿರುವಾಗ ಶ್ರೀಕೃಷ್ಣಪರಮಾತ್ಮನ ಸರ್ವೋತ್ತಮತ್ವದಲ್ಲಿ, ಎಲೈ ಮಾನವರೇ, ನಿಮಗೆ ಏಕೆ ಸಂದೇಹ?

ಹೀಗೆ ಪ್ರತಿಯೊಂದು ಶ್ಲೋಕದಲ್ಲಿಯೂ ಆಚಾರ್ಯರ ಸಿದ್ಧಾಂತವು ಓದುವವನ ಮನಸ್ಸಿಗೆ ನಿಸ್ಸಂಶಯವಾಗಿ ತೋರುವಂತೆ ಪ್ರತಿಪಾದಿಸಿದ್ದಾರೆ. ಇದರಿಂದ ಕಾವ್ಯದ ಸೊಬಗು ಹೆಚ್ಚಿದೆಯೇ ಹೊರ್ತು ಕಡಿಮೆಯಾಗಲಿಲ್ಲ. ಈ ರೀತಿಯಾದ ಕಾವ್ಯರಚನೆಯು ವಾದಿರಾಜಕೃತಿಗಳಲ್ಲಿ ಕಂಡುಬಂದಂತೆ ಇನ್ನಾರ ಕೃತಿಯಲ್ಲಿಯೂ ಕಂಡುಬಂದಿಲ್ಲವೆಂದರೆ ಉತ್ಪ್ರೇಕ್ಷೆಯಾಗಲಾರದು.

ರುಕ್ಮಿಣೀಶವಿಜಯಕ್ಕೆ ಹೋಲಿಸಬೇಕಾದರೆ ಇರುವುದು ಒಂದೇ ಗ್ರಂಥ. ಅದು ಶ್ರೀಮದ್ಭಾಗವತ.

ಯುಕ್ತಿಮಲ್ಲಿಕಾ, ರುಕ್ಮಿಣೀಶವಿಜಯ ಈ ಎರಡು ಗ್ರಂಥಗಳನ್ನು ಶ್ರದ್ಧಾಪೂರ್ವಕವಾಗಿ ಪ್ರತಿಯೊಬ್ಬನೂ ಶ್ರವಣಪಠನಮನನಗಳನ್ನು ಮಾಡತಕ್ಕದ್ದು ಹರಿಪ್ರೀತಿಜನಕವಾದದ್ದು.

ಶ್ರೀಸೋದಾಮಠಾಧೀಶ್ವರರಾದ ವಿಶ್ವೋತ್ತಮತೀರ್ಥಶ್ರೀಪಾದಂಗಳವರು ವಾದಿರಾಜಕೃತ 'ಹರಿಭಕ್ತಿಲತಾ' 'ಶ್ರುತಿತತ್ವಪ್ರಕಾಶಿಕಾ' ಇವೇ ಮೊದಲಾದ ಗ್ರಂಥಗಳನ್ನು ಛಾಪಿಸಿ ಶ್ರದ್ಧಾಳುಗಳಿಗೆ ಉಚಿತವಾಗಿ ದಾನ ಮಾಡುತ್ತಿರುತ್ತಾರೆ. ಇದು ಶ್ರೀಗಳವರು ಮಾಡುತ್ತಿರುವ ಮಹದನುಗ್ರಹ.

ಶ್ರೀಮದ್ವಾದಿರಾಜೀಯ ಗ್ರಂಥ ಪ್ರಕಾಶನ ಸಮಿತಿಯು ರಾಜರ ಗ್ರಂಥಗಳನ್ನು ಚೆನ್ನಾಗಿ ಶೋಧಿಸಿ ಛಾಪಿಸುವದರ ಮೂಲಕ ಪ್ರಸಿದ್ಧಿಗೊಳಿಸುತ್ತಿದ್ದಾರೆ. ಇದು ಈ ಸಮಿತಿಯು ಸಜ್ಜನರಿಗೆ ಮಾಡುವ ಮಹದುಪಕಾರ. ಶ್ರೀವಾದಿರಾಜರ ಗ್ರಂಥಗಳು ಪ್ರಾಕೃತ ಭಾಷೆಯಲ್ಲಿಯೂ ಅನೇಕವಿವೆ. ಈಗ ಉಪಲಬ್ಧವಾಗಿರುವ ಗ್ರಂಥಗಳ ಪಟ್ಟಿಯು ಮೇಲೆ ಸೂಚಿಸಿದ ಸಮಿತಿಯವರಿಂದ ತಿಳಿಯಬಹುದು.

ಸರಸಭಾರತೀವಿಲಾಸ :–'ವಿಷ್ಣೋಸ್ಸರ್ವೋತ್ತಮತ್ವಂ ಚ ಸರ್ವದಾ ಪ್ರತಿಪಾದಯ' ವಿಷ್ಣುವಿನ ಸರ್ವೋತ್ತಮತ್ವವನ್ನು ಸರ್ವದಾ ಪ್ರತಿಪಾದಿಸು. ಎಂದು ಸಂನ್ಯಾಸವನ್ನು ಕೊಡುವವೇಳೆಯಲ್ಲಿ ಗುರುವು ಶಿಷ್ಯನಿಗೆ ವಿಧಿಸಬೇಕೆಂದು ಶ್ರೀಮದಾನಂದತೀರ್ಥರು 'ಯತಿಪ್ರಣವಕಲ್ಪ' ಎಂಬ ತಮ್ಮ ಗ್ರಂಥದಲ್ಲಿ ಹೇಳಿರುತ್ತಾರೆ.

ಮೋಕ್ಷಕ್ಕೆ ಕಾರಣವಾದ ಪರಮಾತ್ಮನ ಉತ್ತಮ ಪ್ರಸಾದವು ವಿಷ್ಣು-ಸರ್ವೋತ್ತಮತ್ವಜ್ಞಾನವಿಲ್ಲದಿದ್ದಲ್ಲಿ ಲಭಿಸುವುದಿಲ್ಲ.

ಯಸ್ಯ ಪ್ರಸಾದಾತ್ಪರಮಾರ್ತಿರೂಪಾದಸ್ಮಾತ್ಸಂಸಾರಾನ್ಮುಚ್ಯತೇನಾ-
ಪರೇಣ |
ನಾರಾಯಣೋಽಸೌ ಪರಮೋ ವಿಚಿಂತ್ಯೋ ಮುಮುಕ್ಷುಭಿಃ ಕರ್ಮ-
ಪಾಶಾದಮುಷ್ಮಾತ್' [ನಾರಾಯಣಶ್ರುತಿಃ]

ಯಾವನಾರಾಯಣನ ಪ್ರಸಾದದಿಂದ (ಅಧಿಕಾರಿಯು) ಅತಿದುಃಖ ರೂಪವಾದ ಈ ಸಂಸಾರದಿಂದ ಬಿಡುಗಡೆಯನ್ನು ಹೊಂದುತ್ತಾನೆಯೋ, ಇನ್ನು ಯಾವುದರಿಂದಲೂ ಹೊಂದುವದಿಲ್ಲವೋ ಆ ನಾರಾಯಣನು ಸರ್ವೋತ್ತಮನೆಂದು ಅವನ ಪ್ರೀತ್ಯರ್ಥವಾಗಿ ಕರ್ಮಪಾಶದಿಂದ ಬಿಡುಗಡೆ ಯನ್ನಪೇಕ್ಷಿಸುವವನಿಂದ ತಿಳಿಯಲ್ಪಡಬೇಕು. ಈ ಶ್ರುತಿಯಿಂದ ಸಿದ್ಧ ವಾದದ್ದು ಇದು:- ನಾರಾಯಣನ ಪರಮಪ್ರಸಾದದಿಂದಲೇ ಮೋಕ್ಷ. ಆ ಪ್ರಸಾದವು ಪರಮಾತ್ಮನ ಸರ್ವೋತ್ತಮತ್ವಜ್ಞಾನದಿಂದಲೇ ಲಭ್ಯ. ಇದಕ್ಕೆ ಬೇರೆ ಉಪಾಯವಿಲ್ಲ. ಪರಮಾತ್ಮನು ಗೀತೆಯಲ್ಲಿ ಹೀಗೆ ಹೇಳಿದ್ದಾನೆ. 'ಯೋ ಮಾಮೇವಮಸಂಮೂಢೋ ಜಾನಾತಿ ಪುರುಷೋತ್ತಮಂ| ಸ ಸರ್ವವಿದ್ಭಜತಿ ಮಾಂ ಸರ್ವಭಾವೇನ ಭಾರತ ||'-ಯಾವನಾವರೆ ಸಂಮೋಹವರ್ಜಿತನಾಗಿ ನನ್ನನ್ನು ಕ್ಷರಾಕ್ಷರ ಪುರುಷರಿಗೆ ಉತ್ತಮನೆಂದು ತಿಳಿಯುತ್ತಾನೆಯೋ ಅವನು ಸರ್ವವನ್ನೂ ತಿಳಿದವನು. ಅಲ್ಲದೆ ಹೀಗೆ ತಿಳಿದವನು ನನ್ನನ್ನು ಸರ್ವಪ್ರಕಾರದಿಂದಲೂ ಪೂಜಿಸಿದಂತಾಯಿತು. ಈ ಗೀತಾವಾಕ್ಯದಿಂದ ಎರಡು ಪ್ರಮೇಯ ಸಿದ್ಧವಾಗುತ್ತವೆ.

೧. ಹೀಗೆ ನನ್ನನ್ನು ಪುರುಷೋತ್ತಮನೆಂದು ತಿಳಿದವನು, ಸರ್ವ ವನ್ನೂ ತಿಳಿದವನು ಎಂದು ಶ್ರೀಕೃಷ್ಣನು ಹೇಳಿರುತ್ತಾನೆಯಾದ್ದರಿಂದ ವೇದಾದಿಸಕಲಸಚ್ಛಾಸ್ತ್ರಗಳಿಗೆ ವಿಷ್ಣುವಿನ ಸರ್ವೋತ್ತಮತ್ವದಲ್ಲಿಯೇ ತಾತ್ಪರ್ಯ ಎಂದು ಸಿದ್ಧವಾಯಿತು.

೨. ಪರಮಾತ್ಮನಿಗೆ ಅತಿತುಷ್ಟಿಕರವಾದದ್ದು, ಅವನು ಸರ್ವೋತ್ತಮ ನೆಂಬ ಜ್ಞಾನ. ಆದ್ದರಿಂದಲೇ ಶ್ರೀಕೃಷ್ಣಪರಮಾತ್ಮನು ತನ್ನ ಪುರುಷೋತ್ತ-ಮತ್ವವನ್ನು ಯಾವನು ತಿಳಿಯುವನೋ ಅವನು ತನ್ನನ್ನು ಸರ್ವಪ್ರಕಾರ ದಿಂದ ಭಜಿಸಿದಂತಾಯಿತು ಎಂದು ಹೇಳಿರುತ್ತಾನೆ.

ಈ ವಿಷ್ಣುವಿನ ಸರ್ವೋತ್ತಮತ್ವಜ್ಞಾನವು ದೇವತಾತಾರತಮ್ಯ-ಪೂರ್ವಕವಾಗಿರಬೇಕು.

'ದೇವತಾತಾರತಮ್ಯಂ ಚ ಸರ್ವೋತ್ಕೃಷ್ಟಂ ಚ ಕೇಶವಂ| ಜ್ಞಾತ್ವೈ-ವ ಮುಚ್ಯತೇ ಹ್ಯಸ್ಮಾನ್ನಾನ್ಯಥಾ ತು ಕಥಂಚನ|| [ಋಗ್ಭಾಷ್ಯ].

ದೇವತಾತಾರತಮ್ಯವನ್ನೂ ಸರ್ವೋತ್ತಮನಾದ ಕೇಶವನನ್ನೂ ತಿಳಿದೇನೇ ಅಧಿಕಾರಿಯು ಸಂಸಾರದಿಂದ ಬಿಡುಗಡೆಯನ್ನು ಹೊಂದುತ್ತಾನೆ. ಇನ್ನಾವುದರಿಂದಲೂ ಸರ್ವಥಾ ಅಲ್ಲ.

ಈ ಪ್ರಮೇಯವನ್ನು ಮುಂದೆ ಹೇಳುವ ಪ್ರಕಾರ ಆಚಾರ್ಯರು ಛಾಂದೋಗ್ಯಭಾಷ್ಯದಲ್ಲಿ ವಿಶದಪಡಿಸಿರುತ್ತಾರೆ.

'ಅಕಾರೇಣಾಧಿಕಂಪ್ರೋಕ್ತಮುಕಾರೇಣೋಚ್ಚಮುಚ್ಯತೇ | ತಥಾಮಿತಂ ಸರ್ವವೇದೈರ್ಮಕಾರೇಣಾಭಿಧೀಯತೇ | ಅಧಿಕೋಚ್ಚಮಿತಿಜ್ಞಾತಮೋಮಿತ್ಯಸ್ಯಾರ್ಥಈರಿತಃ ||೧|| ತದೇತತ್ಪರಮತ್ವಂತು ಯಥಾಕ್ರಮಮುದೀರ್ಯತೇ | ದೇವತಾನುಕ್ರಮಜ್ಞಾಶ್ಚ ವಿಷ್ಣೋಃ ಪರಮತಾವಿದಃ | ಏಕಾಂತಿನಸ್ತೇವಿಜ್ಞೇಯಾ ಯಥಾಕ್ರಮಪರಾಸ್ತಥಾ | ಅಸ್ಯಾವಸಾವುಚ್ಚ ಇತಿ ಕ್ರಮಸ್ಯಾಂತಗತಂ ಹರಿಂ| ಏಕಮೇವ ತು ಯೇ ವಿದ್ಯುಸ್ತೇಹ್ಯೇಕಾಂತಿನ ಈರಿತಾಃ | ಏವಂ ಯಥಾಕ್ರಮಜ್ಞಾಶ್ಚ ಸದೈಕಾಂತಪರಾಯಣಾಃ | ಪ್ರವಿಶಂತಿ ಪರಂ ದೇವಂ ನಾರಾಯಣಮನಾಮಯಂ| ವಿಷ್ಣೌ ಭಕ್ತಿರ್ವಿಶೇಷೇಣ ಮೋಕ್ಷಾನಾಪ್ತೌ ಹಿ ಕಾರಣಂ | ತದ್ಭಕ್ತೇಷು ಕ್ರಮೇಣೈವ ರಮಾದ್ಯೇಷುತ್ವನಂತರಂ | ತೃತೀಯಮಪಿವೈರಾಗ್ಯಂ ನಚಾನ್ಯನ್ಮೋಕ್ಷಕಾರಣಂ | ಏತತ್ಸಾಧನತಾಹೇತೋಸ್ತ್ರವಸ್ಯದ್ಧಿ ವಿಧೀಯತೇ ||'

ಓಂಕಾರದಲ್ಲಿನ 'ಅ' ಕಾರಕ್ಕೆ ಅಧಿಕವೆಂತಲೂ 'ಉ' ಕಾರಕ್ಕೆ ಉಚ್ಚವೆಂತಲೂ ಮಕಾರಕ್ಕೆ ಅಧಿಕೋಚ್ಚವಾಗಿ ಸರ್ವವೇದದಿಂದ ತಿಳಿಯಲ್ಪಟ್ಟಿದ್ದು ಎಂದರ್ಥ. ಅಂತೂ ಓಂಕಾರಕ್ಕೆ ವಿಷ್ಣುವು ಅತ್ಯುತ್ತಮನೆಂದು ಸರ್ವವೇದದಿಂದ ಪ್ರತಿಪಾದಿಸಲ್ಪಟ್ಟಿದ್ದಾನೆ ಎಂದು ಅರ್ಥ. ಈ ವಿಷ್ಣುವಿನ ಸರ್ವೋತ್ತಮತ್ವವು ಕ್ರಮಾನುಸಾರ ಹೇಳಲ್ಪಡುತ್ತೆ. ದೇವತಾತಾರತಮ್ಯವನ್ನು ತಿಳಿದು ಯಾರು ವಿಷ್ಣುವಿನ ಸರ್ವೋತ್ತಮತ್ವವನ್ನು ತಿಳಿಯುತ್ತಾರೆಯೋ ಅವರು ಏಕಾಂತಿಗಳು ಮತ್ತು ಯಥಾಕ್ರಮರು ಅಂದರೆ (ದೇವತಾತಾರತಮ್ಯಜ್ಞಾನದಲ್ಲಿ ಆಸಕ್ತರಾದವರು) ಎಂದು ಹೇಳಲ್ಪಡುತ್ತಾರೆ. ಇವನಿಗಿಂತ ಇವನು ಉತ್ತಮನು ಎಂಬೀಕ್ರಮದ ಕೊನೆಯಲ್ಲಿರುವವನು ಹರಿಯೊಬ್ಬನೇ. ಅವನಮೇಲೆ ಯಾರೂ ಇಲ್ಲ. ಎಂಬೀಪ್ರಕಾರವಾಗಿ

ಯಾರು ತಿಳಿಯುವರೋ ಅವರು ಏಕಾಂತಿಗಳು ಎಂದು ಅನಿಸಿಕೊಳ್ಳುತ್ತಾರೆ. ಈರೀತಿಯಲ್ಲಿ ದೇವತಾತಾರತಮ್ಯವನ್ನು ತಿಳಿದು ಸರ್ವೋತ್ತಮನಾದ್ದರಿಂದ ಏಕಾಂತಶಬ್ದವಾಚ್ಯನಾದ ಹರಿಯನ್ನು ಆಶ್ರಯಿಸಿದವರು ಏಕಾಂತಪರಾಯಣರು. ಇವರು ಪೂರ್ಣನೂ ಕ್ರೀಡಾದಿಗುಣವಿಶಿಷ್ಟನೂ ನಿರ್ದೋಷನೂ ಆದ ನಾರಾಯಣನನ್ನು ಪ್ರವೇಶಿಸುತ್ತಾರೆ. ಅಂದರೆ ಮುಕ್ತರಾಗುತ್ತಾರೆ. ಮೋಕ್ಷಕ್ಕೆ ಕಾರಣವಾದದ್ದು ಮುಖ್ಯವಾಗಿ ವಿಷ್ಣುವಿನಲ್ಲಿ ಮಾಡುವ ಭಕ್ತಿ. ಅನಂತರ ಯೋಗ್ಯತಾನುಸಾರವಾಗಿ ಅವನ ಭಕ್ತರಾದ ರಮಾದಿಗಳಲ್ಲಿ ಮಾಡುವ ಭಕ್ತಿ. ಮೂರನೆಯದು ವೈರಾಗ್ಯ. ಮೋಕ್ಷಕ್ಕೆ ಕಾರಣವಾದದ್ದು ಬೇರೆಯಾವದೂ ಅಲ್ಲ. ಈ ಸಾಧನಸಂಪತ್ತಿಗೋಸ್ಕರ ಬೇರೆ ಎಲ್ಲ ಸಾಧನೆಯು ಹೇಳಲ್ಪಟ್ಟಿದೆ.

ಈಗ ಮೇಲೆ ಹೇಳಿದ ತತ್ತ್ವವನ್ನು ನಿರವಕಾಶವಾದ ಪ್ರಮಾಣಗಳಿಂದ ವಿಸ್ತಾರವಾಗಿ ನಿರೂಪಿಸುವುದಕ್ಕಾಗಿ ಈ ಸರಸಭಾರತೀವಿಲಾಸವೆಂಬ ಅತ್ಯುಪಾದೇಯವಾದ ಗ್ರಂಥವನ್ನು ವಾದಿರಾಜರು ರಚಿಸಿರುತ್ತಾರೆ.

'ಚಾರ್ವಪೂರ್ವಪದಶ್ರೇಣೀಂ ದುರ್ವಾಗ್ಗರ್ವಾಪಹಾರಿಣೀಂ |
ಸರ್ವೇಷ್ಟಕಾರಿಣೀಮುರ್ವೀಂ ಕುರ್ವೇ ಸರಸಭಾರತೀಂ ||'

ಸುಂದರವೂ ಅಪೂರ್ವವೂ ಆದ ಪದಸರಣಿಯುಳ್ಳ ದುರ್ವಾದಿಗಳ ಗರ್ವವನ್ನು ಅಪಹರಿಸತಕ್ಕ ಮತ್ತು (ಸಜ್ಜನರಿಗೆ) ಸರ್ವೇಷ್ಟಾರ್ಥವನ್ನು ಕೊಡುವ ಉತ್ಕೃಷ್ಟವಾದ "ಸರಸಭಾರತೀ" (ವಿಲಾಸ) ಎಂಬ ಗ್ರಂಥವನ್ನು ರಚಿಸುತ್ತೇನೆ ಎಂದು ವಾದಿರಾಜರೇ ಈಗ್ರಂಥದ ಆದಿಯಲ್ಲಿ ಹೇಳಿರುತ್ತಾರೆ. ಸರ್ವದೇವೋತ್ತಮನು ಶ್ರೀನಾರಾಯಣನು. ಅನಂತರ ರಮಾದೇವಿಯು. ಆಕೆಯ ನಂತರ ವಾಯು (ಬ್ರಹ್ಮ) ದೇವರು. ತದನಂತರ ಭಾರತೀ (ಸರಸ್ವತೀ)ದೇವಿಯು. ಇವರ ಕೆಳಗೆ ರುದ್ರಾದಿ ಎಲ್ಲ ದೇವತೆಗಳು. ೧ ರಮಾ, ೨ ಬ್ರಹ್ಮವಾಯುಗಳು, ೩ ಭಾರತೀ, ಸರಸ್ವತೀದೇವಿಯರು. ಈ ಐವರು ಪರಶುಕ್ಲತ್ರಯದಲ್ಲಿ ಸೇರಿದವರು. ಯಾವಾಗಲೂ ಪರನಾದ ನಾರಾಯಣನ ವಿಷಯದಲ್ಲಿ ಇವರು ಶುದ್ಧವಾದ ಮನಸ್ಸುಳ್ಳವರು. ಅಂದರೆ ಯಾವಾಗಲೇ ಆಗಲೀ ಪರಮಾತ್ಮನಿಗೆ ವಿರೋಧವಾದ ಮನೋವೃತ್ತಿಯುಳ್ಳವರಲ್ಲ. ಸದಾ ಸರ್ವತ್ರ ಪರಮಾತ್ಮನು ನಿರ್ದೋಷನೂ ಗುಣಪೂರ್ಣನೂ ಎಂದು

ತಿಳಿದು ಅಚ್ಛಪ್ರವಾದ ಭಕ್ತಿಯಿಂದ ಅವನ ಇಚ್ಛೆಯನ್ನರಿತು ಮನಸ್ಸಿನಲ್ಲಿ ವಿರುದ್ಧಭಾವನೆಯನ್ನು ಸರ್ವಥಾ ಮಾಡದೆ ವರ್ತಿಸುತ್ತಾರೆ.

ಮೊದಲನೆಯ ವಿಲಾಸದಲ್ಲಿ ಪರಮಾತ್ಮನನ್ನು ಸ್ತುತಿನತಿಗಳಿಂದ ಸಂತೋಷಗೊಳಿಸಿ ಎರಡನೆಯ ವಿಲಾಸದಲ್ಲಿ ತಾರತಮ್ಯಾನುಸಾರ ದೇವತೆಗಳಿಗೆ ನಮಿಸಿ ಅವರ ಅನುಗ್ರಹವನ್ನು ಬೇಡಿ, ಮಿಕ್ಕ ಹತ್ತು ವಿಲಾಸಗಳಲ್ಲಿ ಪ್ರತಿಜ್ಞಾತವಾದ ಪ್ರಮೇಯವನ್ನು ಹೃದಯಂಗಮವಾದ ರೀತಿಯಲ್ಲಿ ಪ್ರತಿಪಾದಿಸಿರುತ್ತಾರೆ.

ತಾರತಮ್ಯವನ್ನು ವ್ಯಕ್ತಮಾಡುವದಕ್ಕಾಗಿ ವೇದಪುರಾಣಗಳಲ್ಲಿ ಹೇಳಿರುವ ರುದ್ರಾದಿ ದೇವತೆಗಳ ದೋಷಗಳನ್ನು ವಾದಿರಾಜರು ಅನುವಾದ ಮಾಡುತ್ತಾರೆ. ಹೀಗೆ ಮಾಡುವುವರಲ್ಲಿ ಇವರಿಗೆ ವಿಷ್ಣುವಿನ ಸರ್ವೋತ್ತ-ಮತ್ವವನ್ನು ಹೇಳುವುದರಲ್ಲಿ ತಾತ್ಪರ್ಯವೇಹೊರತು ಕೇವಲ ದೇವತೆಗಳ ದೋಷವನ್ನು ಹೇಳುವುದು ತಾತ್ಪರ್ಯವಲ್ಲ.

"ನಿರ್ದೋಷತ್ವಂ ಹರೇರ್ವಕ್ತಿ ದೋಷಮನ್ಯೇಷ್ವಪಿಕ್ರಮಾತ್ |
ತಾರತಮ್ಯಸ್ಯ ವಿಜ್ಞಪ್ತ್ಯೈವಚೋದೋಷಸ್ಯಾರ್ಥವತ್ || (ಋಗ್ಭಾಷ್ಯ)

ವೇದವು ಹರಿಯ ನಿರ್ದೋಷತ್ವವನ್ನೂ ಮತ್ತು ಇತರರಲ್ಲಿ ಕ್ರಮವಾಗಿ ದೋಷವನ್ನೂ ಹೇಳುತ್ತದೆ. ದೇವತೆಗಳ ತಾರತಮ್ಯವನ್ನು ತೋರಿಸುವುದರಲ್ಲಿ ಆ ದೇವತೆಗಳಲ್ಲಿ ದೋಷವನ್ನು ಹೇಳುವ ವಚನವು ಪ್ರಯೋಜನ-ಕಾರಿಯು.

"ಶ್ರುತೇಶ್ಚ ಸಂಮತಂ ಸರ್ವಂ ನೃಣಾಂ ಭಕ್ತಿಪ್ರದಂ ಹರೌ |
ಅಂತೇ ವಿಮುಕ್ತಿದಂ ತಸ್ಮಾತ್ ಕೀರ್ತನೀಯಂ ದಿನೇ ದಿನೇ" ||

ಈ ಗ್ರಂಥದಲ್ಲಿ ಹೇಳಿರತಕ್ಕ ಸರ್ವಪ್ರಮೇಯವೂ ಶ್ರುತಿಸಂಮತವಾದದ್ದು. ಜನರಿಗೆ ಹರಿಯಲ್ಲಿ ಭಕ್ತಿಯನ್ನು ಕೊಡತಕ್ಕದ್ದು. ಕೊನೆಯಲ್ಲಿ ಮುಕ್ತಿದಾಯಕವಾದದ್ದು. ಆದ್ದರಿಂದ ಪ್ರತಿದಿನದಲ್ಲಿಯೂ ಪಠನಮಾಡುವುದಕ್ಕೆ ಯೋಗ್ಯವಾದದ್ದು.

ಶ್ರೀಕೃಷ್ಣಾರ್ಪಣಮಸ್ತು.

ಬೆಂಗಳೂರು.
೨೯—೩—೫೬ }

ಬಿ. ವೆಂಕಟೇಶಾಚಾರ್ಯ.

ವಿಷಯಾನುಕ್ರಮಣಿಕೆ



ಪಂಚಮೋ ವಿಲಾಸಃ

ವಾಯುದೇವರು ಮೂಲರೂಪದಲ್ಲಿಯೂ, ಅವತಾರಗಳಲ್ಲಿಯೂ ಪರಮಾತ್ಮನ ವಿಷಯದಲ್ಲಿ ಸರ್ವದಾ ಶುದ್ಧಮನಸ್ಕರೆಂಬುದನ್ನೂ, ಇತರ ದೇವತೆಗಳಿಗಿಂತ ಶ್ರೇಷ್ಠರೆಂಬುದನ್ನೂ ಸ್ಥಾಪಿಸಲು ಛಾಂದೋಗ್ಯ ಉಪನಿಷತ್ತಿನ ಆದಿಭಾಗದಲ್ಲಿ ಉಕ್ತವಾದ ಆಖ್ಯಾಯಿಕೆಯನ್ನು ಅನುವಾದ ಮಾಡಿ ವಾಯುದೇವರು ಪರಮಾತ್ಮನ ಪೂಜೆಗೆ ನಿರ್ಮಿತ್ಯವಾದ ಪ್ರತಿಮೆಯೆಂದು ಸ್ಥಾಪಿಸುತ್ತಾರೆ. ಹಾಗೆಯೇ ಹನುಮಂತನು ಮಾಡಿದ ರಾಮದೇವರ ಸೇವೆಯನ್ನು ವಿಚಾರಮಾಡಿ ಆತನ ಶುಕ್ಲತ್ವವನ್ನು ವರ್ಣಿಸುತ್ತಾರೆ.

ಷಷ್ಠೋ ವಿಲಾಸಃ

ಈ ವಿಲಾಸದಲ್ಲಿ ಹನುಮಂತನ ಮತ್ತು ಭೀಮಸೇನನ ಬುದ್ಧಿಶುದ್ಧತ್ವವನ್ನು ಸಯುಕ್ತಿಕವಾಗಿ ಪ್ರತಿಪಾದಿಸುತ್ತಾರೆ.

ಸಪ್ತಮೋ ವಿಲಾಸಃ

ಈ ವಿಲಾಸದಲ್ಲಿ ವಾಯ್ವವತಾರರಾದ ಶ್ರೀಮಧ್ವಾಚಾರ್ಯರ ಬುದ್ಧಿಯು ಪರಮಾತ್ಮನವಿಷಯದಲ್ಲಿ ಶುದ್ಧವಾದುದೆಂದು ತೋರಿಸಲು, ಪರಮತಖಂಡನ, ಸೂತ್ರಭಾಷ್ಯಾದಿರಚನ ಇವುಗಳಿಂದ ಅವರು ಮಾಡಿದ ವಿಷ್ಣುಸರ್ವೋತ್ತಮತ್ವಸ್ಥಾಪನೆಯನ್ನು ವರ್ಣಿಸಿರುತ್ತಾರೆ. ಅಲ್ಲದೆ ಶಾಂತಿಪಾಠದಲ್ಲಿ ಸರ್ವರಿಂದ ಪಠಿತವಾದ "ನಮಸ್ತೇ ವಾಯೋ ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ" ಎಂಬ ವಾಕ್ಯವನ್ನು ವಿಚಾರಮಾಡಿ ವಾಯುದೇವರ ಶುಕ್ಲತ್ವವನ್ನು ನಿರ್ಣಯಿಸಿರುತ್ತಾರೆ.

ಅಷ್ಟಮೋ ವಿಲಾಸಃ

ತಲವಕಾರ, ಛಾಂದೋಗ್ಯ, ಷಟ್ಪ್ರಶ್ನ, ಬೃಹದಾರಣ್ಯಕ, ಐತರೇಯ ಈ ಐದು ಉಪನಿಷತ್ತುಗಳಲ್ಲಿನ ಆಖ್ಯಾಯಿಕಾಗಳನ್ನನುವಾದಮಾಡಿ ವಾಯುದೇವರು ಮೂಲರೂಪದಲ್ಲಿಯೂ ಅವತಾರರೂಪಗಳಲ್ಲಿಯೂ ಶುದ್ಧರೆಂದೂ ರುದ್ರಾದಿದೇವತೆಗಳಿಗಿಂತ ಉತ್ತಮರೆಂದೂ ವಾದಿರಾಜರು ಸಮರ್ಥಿಸಿರುತ್ತಾರೆ.

ನವಮೋ ವಿಲಾಸಃ

ಗರುಡ, ಶೇಷ (ಬಲರಾಮ), ರುದ್ರ (ದುರ್ವಾಸ, ಅಶ್ವತ್ಥಾಮ) ಮತ್ತು ಇಂದ್ರಾದಿದೇವತೆಗಳಿಗೆ ಆಗಾಗ ಕಲಿಯ ಪ್ರವೇಶದಿಂದ ಪರ-

ಮಾತ್ಮನ ವಿಷಯದಲ್ಲಿ ಬುದ್ಧಿಮಾಲಿನ್ಯವು ಉಂಟು ಎಂಬುದಕ್ಕೆ ದೃಷ್ಟಾಂತಗಳನ್ನು ಈ ವಿಲಾಸದಲ್ಲಿ ಕೊಟ್ಟಿರುತ್ತಾರೆ.

ದಶಮೋ ವಿಲಾಸಃ ೧೫೩

ವಿಷ್ಣುವಿನ ಸರ್ವೋತ್ತಮತ್ವವನ್ನು ಸರ್ವದಾ ಪ್ರತಿಪಾದಿಸು ಎಂದು ಶ್ರೀಮದಾಚಾರ್ಯರ ಆಜ್ಞಾ ಇರುವುದರಿಂದ ಈ ಸರ್ವೋತ್ತಮತ್ವವನ್ನು ಸಾಧಿಸುವುದಕ್ಕಾಗಿ ರುದ್ರಾದಿದೇವತೆಗಳಲ್ಲಿರುವ, ವೇದಪುರಾಣೋಕ್ತವಾದ ಪಾರತಂತ್ರ್ಯ ಅಜ್ಞಾನ ಇವೇ ಮೊದಲಾದ ದೋಷಗಳನ್ನು ಈ ವಿಲಾಸದಲ್ಲಿ ವರ್ಣಿಸಿರುತ್ತಾರೆ. ಮತ್ತು ಜಗಜ್ಜನ್ಮಾದಿಕರ್ತೃತ್ವರೂಪಬ್ರಹ್ಮಲಕ್ಷಣವು ದೋಷಯುಕ್ತನಾದ ಶಂಭುವಿನಲ್ಲಿ ಕೂಡುವುದಿಲ್ಲವೆಂದು ಹೇಳುವ ಪತ್ಯುರಸಾಮಂಜಸ್ಯಾತ್ ಎಂಬ ಸೂತ್ರದ ಅರ್ಥವನ್ನು ವಿವರಿಸುತ್ತಾರೆ.

ಏಕಾದಶೋ ವಿಲಾಸಃ ೧೬೬

ಈ ವಿಲಾಸದಲ್ಲಿ ಭಾಗವತೋಕ್ತರೀತಿಯಿಂದ "ಪತ್ಯುರಸಾಮಂಜಸ್ಯಾತ್" ಎಂಬ ಸೂತ್ರದಲ್ಲಿ ಸೂಚಿತವಾದ ರುದ್ರದೇವರ ದೋಷಗಳನ್ನು ವಿವರಿಸುತ್ತಾರೆ. ವೃಕಾಸುರೋಪಾಖ್ಯಾನದಲ್ಲಿ ರುದ್ರದೇವರಿಗೆ ಅಜ್ಞಾನ, ಕಾಮಕ್ರೋಧಾದಿಗಳು ಉಂಟು ಎಂದು ತೋರಿಸಿ ರುದ್ರನಲ್ಲಿ ಕಂಡುಬರುವ ಯಾವದೋಷವೂ ಹರಿಯಲ್ಲಿ ಇಲ್ಲವೆಂದು ತೋರಿಸುತ್ತಾರೆ.

ಮೂಲರೂಪದಲ್ಲಿಯೂ, ಅವತಾರರೂಪಗಳಲ್ಲಿಯೂ, ಶ್ರೀಹರಿಯ ಸೃಷ್ಟಿಯು ಅವನ ಇಚ್ಛಾಮಾತ್ರದಿಂದಲೇ, ತನ್ನ ರೇತಸ್ಸಿನಿಂದಲ್ಲ ಎಂಬ ಪ್ರಮೇಯವನ್ನು ಸಮರ್ಥಿಸಿದ್ದಾರೆ.

ದ್ವಾದಶೋ ವಿಲಾಸಃ ೧೮೬

ಶಂಭುವಿನ ಅವತಾರರಾದ ಶುಕಾಚಾರ್ಯರಿಗೆ ತಮ್ಮ ತಂದೆ ಬಾದರಾಯಣರು ಸೂತ್ರದಲ್ಲಿ ಹೇಳಿರುವ ಅಸಾಮಂಜಸ್ಯವು ಇಷ್ಟವಾದುದೇ.

ಸೂತ್ರಗಳಿಗೆ ಮುಖ್ಯಾಧಿಕಾರಿಗಳು ದೇವತೆಗಳು. ಆದ್ದರಿಂದ ಸೂತ್ರೋಕ್ತವಾದ ರುದ್ರನ ದೋಷವು ದೇವಶ್ರೇಷ್ಠನಾದ ಆ ರುದ್ರನಿಗೂ ಸಂಮತವೇ ಆಗಿರಬೇಕು.

ಕರ್ತುಂ-ಅಕರ್ತುಂ-ಅನ್ಯಥಾಕರ್ತುಂ ಎಂದರೆ ಮಾಡುವುದಕ್ಕೂ ಮಾಡದೇ ಇರುವುದಕ್ಕೂ ಅನ್ಯಥಾ ಮಾಡುವುದಕ್ಕೂ ಶಕ್ತಿಯು ನಿಯಮವಾಗಿ ಪರಮಾತ್ಮನಲ್ಲಿ ಮಾತ್ರ ಉಂಟು. ಇತರ ದೇವತೆಗಳಲ್ಲಿಲ್ಲ.

ಲಕ್ಷ್ಮೀದೇವಿಯ ಪ್ರೀತ್ಯರ್ಥವಾಗಿ "ಯಾವ ನಾನು ರುಕ್ಮಿಣೀಶ-ವಿಜಯವನ್ನು ಮಾಡಿದೆನೋ, ಆ ನಾನು ಭಾರತೀದೇವಿಯ ಪ್ರೀತ್ಯರ್ಥವಾಗಿ ಈ ಸರಸಭಾರತೀವಿಲಾಸವನ್ನು ಮಾಡಿರುವೆನು" ಎಂದು ಹೇಳಿ ಹರಿವಾಯುಗಳಿಗೆ ನಮಸ್ಕಾರಮಾಡಿ ಗ್ರಂಥವನ್ನು ಮುಗಿಸುತ್ತಾರೆ.



ಶ್ರೀಮನ್ಮಧ್ವಾಚಾರ್ಯರು

॥ ಓಂ ॥

ಶ್ರೀ ಸರಸಭಾರತೀವಿಲಾಸಃ

ಪ್ರಥಮೋ ವಿಲಾಸಃ

[ಮಂಗಳಾಚರಣ–ಗ್ರಂಥ ಪ್ರಯೋಜನ–ಹಯಗ್ರೀವ ಸ್ತುತಿ
ದಶಾವತಾರಾದಿಭಗವದ್ರೂಪಗಳ ಮಹಿಮಾ ವರ್ಣನೆ.]

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತರಾಮಕೃಷ್ಣವೇದವ್ಯಾಸಾತ್ಮಕ-
ಲಕ್ಷ್ಮೀಹಯಗ್ರೀವಾಯ ನಮಃ

॥ ಹರಿಃ ಓಂ ॥

ಕರೋತು ಮಮ ಕಲ್ಯಾಣಂ ಹರಿರ್ಹಯಮುಖಾಭಿಧಃ ।
ಗುರುಶ್ಚ ಮಧ್ವನಾಮಾ ಮೇ ವರದೋಽಸ್ತು ನಿರಂತರಂ ॥ ೧ ॥

ಜಡಾಜಡಾತ್ಮಕಂ ವಿಶ್ವಂ ಕೃತ್ವಾಽಧಿಷ್ಠಾಯ ಸಂಹರನ್ ।
ಸ್ವಭಾವಾತ್ಕ್ರೀಡತೇ ಯಸ್ತಂ ವಂದೇ ಶ್ರೀಮಧ್ವವಲ್ಲಭಂ ॥

ತಪೋವಿದ್ಯಾವಿರಕ್ತ್ಯಾದಿಸದ್ಗುಣೌಘಾಕರಾನಹಂ ।
ವಾದಿರಾಜಗುರೂನ್ ವಂದೇ ಹಯಗ್ರೀವದಯಾಶ್ರಯಾನ್ ॥

ಶ್ರೀವಾದಿರಾಜರು ತಾವು ರಚಿಸಲಿರುವ ಗ್ರಂಥದ ಆದಿಯಲ್ಲಿ ಹರಿ ಗುರುಗಳ ಪ್ರಾರ್ಥನಾರೂಪವಾದ ಮಂಗಳವನ್ನು ಆಚರಿಸುತ್ತಾರೆ:– ಹಯವದನನಾಮಕ ಹರಿಯು ನಿರಂತರ ನನಗೆ ಮಂಗಳವನ್ನು ಮಾಡಲಿ. ಅಲ್ಲದೆ ಮಧ್ವನಾಮಕಗುರುವು ನನಗೆ ಸದಾ ಇಷ್ಟಪ್ರದನಾಗಲಿ. ॥ ೧ ॥

ಚಾರ್ವಪೂರ್ವಪದಶ್ರೇಣೀಂ ದುರ್ವಾಗ್ಗರ್ವಾಪಹಾರಿಣೀಂ ।
ಸರ್ವೇಷ್ಟಕಾರಿಣೀಮುರ್ವೀಂ ಕುರ್ವೇ ಸರಸಭಾರತೀಂ ॥ ೨ ॥

ಸುಂದರವೂ ಅಪೂರ್ವವೂ ಆದ ಪದಸರಣಿಯುಳ್ಳ ದುರ್ವಾದಿಗಳ ಗರ್ವವನ್ನು ಅಪಹರಿಸತಕ್ಕ ಮತ್ತು (ಸಜ್ಜನರಿಗೆ) ಸರ್ವ ಇಷ್ಟಾರ್ಥವನ್ನು ಕೊಡುವ ಉತ್ಕೃಷ್ಟವಾದ "ಸರಸಭಾರತೀ" (ವಿಲಾಸ) ಎಂಬ ಗ್ರಂಥವನ್ನು ರಚಿಸುತ್ತೇನೆ.

ಸರಸಭಾರತೀ—ಶೃಂಗಾರಾದಿ ನವರಸಭರಿತವಾದ ವಾಣೀ.

"ನಾಮೈಕದೇಶೇ ನಾಮಗ್ರಹಣಂ" ಎಂಬ ನ್ಯಾಯಾನುಸಾರವಾಗಿ "ಸರಸಭಾರತೀವಿಲಾಸ" ಎಂದು ಹೇಳುವುದಕ್ಕೆ ಬದಲು "ಸರಸಭಾರತೀ" ಎಂದು ಹೇಳಿರುತ್ತಾರೆ.

ಅನಲ್ಪದರ್ಪಕಂದರ್ಪಾಶಕ್ಯಸರ್ಪಾದುಪಪ್ಲುತಂ ।
ಹಯಾಸ್ಯ ತೇ ದಯಾಪೀಯೂಷಜಯಾ ಜೀವಯಾನಯಾ ॥೩॥

ಬಹುದರ್ಪವುಳ್ಳ ಕಾಮವೆಂಬ ಸಹಿಸಲಶಕ್ಯವಲ್ಲದ ಸರ್ಪದಿಂದ ಹಿಂಸಿತರಾದ (ಸಜ್ಜನಸಮೂಹವನ್ನು) ಎಲೈ ಹಯವದನ! ನಿನ್ನ ದಯೆಯೆಂಬ ಅಮೃತದಿಂದ ಉತ್ಪನ್ನವಾದ ಈ ಗ್ರಂಥದಿಂದ ಬದುಕಿಸು.

ಸಂಸಾರದಿಂದ ಬಿಡುಗಡೆಯನ್ನು ಅಪೇಕ್ಷಿಸುವವನು ಕಾಮವನ್ನು ಜಯಿಸಬೇಕು. ಹಯವದನದೇವರ ಕೃಪೆಯಿಂದ ನನ್ನಿಂದ ರಚಿತವಾದ ಈ ಗ್ರಂಥದ ಶ್ರವಣಮನನವು ಕಾಮವನ್ನು ಜಯಿಸುವುದರಲ್ಲಿ ಅಧಿಕಾರಿವರ್ಗಕ್ಕೆ ಸಹಕಾರಿಯಾಗುತ್ತೆಂದು ಅಭಿಪ್ರಾಯ.

ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ ।
ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಂ ॥ಗೀತಾ ೩-೩೭.

ಕಾಮಾತ್ಕ್ರೋಧೋಽಭಿಜಾಯತೇ ।
ಕುತ್ಸಿತೋ ದರ್ಪೋಽಸ್ಯ ಇತಿ ಕಂದರ್ಪಃ ।

ಕಸ್ಯ ಕಸ್ಯ ಪ್ರಿಯಂ ಬ್ರೂಮಃ ಸ್ತುಮಃ ಕಂ ಕಂ ಪದೇಪದೇ ।
ಕಸ್ಮೈ ಕಸ್ಮೈ ದಿಶಾಮೋಽರ್ಘಂ ಕಸ್ಮಾದ್ವಾಽಸ್ಯತ್ಪ್ರಯೋಜನಂ ॥

(ಲೋಕದಲ್ಲಿ) ಯಾರು ಯಾರಿಗೆ ಒಳ್ಳೆಯ ಮಾತನ್ನಾಡೋಣ? ಯಾರಾರನ್ನು ಪದೇಪದೇ ಸ್ತೋತ್ರಮಾಡೋಣ? ಯಾರಾರಿಗೆ ಕಾಣಿಕೆಯನ್ನೊಪ್ಪಿಸೋಣ? ಇಷ್ಟುಮಾಡಿದರೂ ಯಾರಿಂದತಾನೇ ನಮಗೇನು ಪ್ರಯೋಜನ? ಲೋಕದ ಜನರನ್ನು ಅನುಸರಿಸುವುದರಿಂದ ನಿಜವಾದ ಯಾವ ಪ್ರಯೋಜನವೂ ಇಲ್ಲ; ಆದುದರಿಂದ ಹಯವದನನನ್ನು ಶರಣು ಹೊಂದಿ ಅವನಿಂದಲೇ ಸಿಗುವ ಉತ್ತಮ ಪುರುಷಾರ್ಥವನ್ನು ಪಡೆಯಬೇಕು. ॥ ೪ ॥

ಕ್ವಾಹಂ ನೃಹಯತೇಽಂಘ್ರ್ಯರ್ಕಶರಣಃ ಕರುಣಾಂಬುಧೇ ।
ಕ್ವೇದಂ ನಿಸ್ಸಾರಸಂಸಾರನೀಹಾರಾವರಣಂ ಮಮ ॥ ೫ ॥

ಕರುಣಾಸಮುದ್ರನಾದ ಎಲೈ ನರಹಯನೇ! ನಿನ್ನ ಪಾದವೆಂಬ ಸೂರ್ಯನನ್ನು ಆಶ್ರಯಿಸಿದ ನಾನೆಲ್ಲಿ? ನನಗೆ ನಿಸ್ಸಾರವಾದ ಸಂಸಾರವೆಂಬ ಮಂಜಿನ ಮುಸುಕು ಎಲ್ಲಿ? ಅಂದರೆ ಸೂರ್ಯಪ್ರಕಾಶವು ಹೇಗೆ ಸುಲಭವಾಗಿ ಮಂಜನ್ನ ಹೋಗಿಸುತ್ತದೆಯೋ ಹಾಗೆಯೇ ನಿನ್ನ ಪಾದಕಮಲವನ್ನು ಆಶ್ರಯಿಸಿದ ನನಗೆ ಸಂಸಾರವು ನಿವೃತ್ತಿ ಆಗಬೇಕು; ಆದರೆ ಸಂಸಾರವು ಇನ್ನೇ ಇದೆ. ನೀನು ದಯಮಾಡಿದಲ್ಲಿ ಈ ಸಂಸಾರವು ನಿವೃತ್ತಿಯಾಗುವುದು ಎಷ್ಟುಮಾತ್ರ? ನೀನು ದಯಮಾಡಿ ಸಂಸಾರದಿಂದ ನನ್ನನ್ನು ಬಿಡುಗಡೆಮಾಡೆಂದು ಅಭಿಪ್ರಾಯ. ॥ ೫ ॥

ಹಯಾಸ್ಯ ಸುಜನಾಕಾಂಕ್ಷ್ಯ ಗತಾಲಸ್ಯಾಽಶ್ರಿತಸ್ಯ ಮೇ ।
ರಹಸ್ಯಜ್ಞ ರಹಸ್ಯಾಜ್ಞಾಪಯ ಜ್ಞಾನಸ್ಯ ಸಂಪದಂ ॥ ೬ ॥

ಸಜ್ಜನರಿಂದ ಅಪೇಕ್ಷಿತನಾದ ಆಲಸ್ಯರಹಿತನಾದ ಎಲೌ ಹಯವದನನೇ! ವೇದಾಂತರಹಸ್ಯವನ್ನು ತಿಳಿದ ನೀನು ಏಕಾಂತದಲ್ಲಿ ಜ್ಞಾನ-

ಸಂಪತ್ತನ್ನು, ನಿನ್ನನ್ನು ಆಶ್ರಯಿಸಿದ ನನಗೆ ತೋರಿಸಿಕೊಡು ಅಂದರೆ ದಯಪಾಲಿಸು. ಇದರ ಅಭಿಪ್ರಾಯ: ಶಾಸ್ತ್ರಾರ್ಥವು ಬಹು ಗುಟ್ಟಾದದ್ದು. ಹೇಗೆ ಭೂಮಿಯಲ್ಲಿ ಗುಟ್ಟಾಗಿ ಇಡಲ್ಪಟ್ಟ ನಿಧಿಯನ್ನು ಅದು ಇರುವ ಸ್ಥಳದ ಗುಟ್ಟನ್ನು ಬಲ್ಲವನೇ ತೋರಿಸಬಲ್ಲನೋ ಹಾಗೆಯೇ ಶಾಸ್ತ್ರಾರ್ಥವೂ ಕೂಡ ಶಾಸ್ತ್ರದ ಗುಟ್ಟನ್ನು ಬಲ್ಲವನೇ ತಿಳಿಸಬಲ್ಲ. ಸರ್ವಶಾಸ್ತ್ರರಹಸ್ಯ ವನ್ನೂ ಬಲ್ಲ ಶ್ರೀ ಹಯವದನನು ಆಶ್ರಯಿಸಿದವರಿಗೆ ಜ್ಞಾನಸಂಪತ್ತನ್ನು ದಯಪಾಲಿಸುವನು. 'ನಾನು ನಿನ್ನನ್ನು ಆಶ್ರಯಿಸಿದ್ದೇನೆ. ಆಶ್ರಿತನಾದ ನನಗೆ ಗೂಢವಾದ ಶಾಸ್ತ್ರಾರ್ಥವನ್ನು ಬೋಧಿಸು' ಎಂದು ವಾದಿರಾಜರು ಪ್ರಾರ್ಥಿಸುತ್ತಾರೆ. || ೬ ||

ಪ್ರಮಾಣ:– ನಾರಾಯಣೇನ ದೃಷ್ಟಸ್ತು ಪ್ರತಿಬುದ್ಧೋ ಭವೇ-ತ್ಪುಮಾನ್ |

ಅರ್ಥ :– ನಾರಾಯಣನ ಅನುಗ್ರಹದೃಷ್ಟಿಯುಳ್ಳವನೇ ಜ್ಞಾನವನ್ನು ಪಡೆಯುತ್ತಾನೆ. (ಮೋಕ್ಷಧರ್ಮ–ನಾರಾಯಣೀಯ)

ಅಂಧೋಽಹಂ ಕರುಣಾಸಿಂಧೋ ವೀಕ್ಷೇ ನ ಕ್ಷೇಮಪದ್ಧತಿಂ |
ಇಂದಿರೇಶ ಕರಂ ಗೃಹ್ಣನ್ ವರ್ತಯಾನಿಂದ್ಯವರ್ತ್ಮನಿ || ೭ ||

ಎಲೈ ಕರುಣಾಸಮುದ್ರನೇ! ನಾನು ಕುರುಡನು. ಮೋಕ್ಷಮಾರ್ಗ ವನ್ನು ಕಾಣೆನು. ಹೇ ರಮಾನಾಥ! ಕೈಯನ್ನು ಹಿಡಿದು ಅದುಷ್ಟವಾದ ಮಾರ್ಗವಲ್ಲಿ (ಸನ್ಮಾರ್ಗವಲ್ಲಿ) ನನ್ನನ್ನು ನಡೆಯಿಸು. || ೭ ||

ಅನುತ್ಸಾಹಮುಹೋತ್ಸಾಹಚರಣಸ್ಮರಣೇ ಸತಾಂ |
ಶರಣೇ ಸತಿ ಜಲ್ಪಂತಃ ಕಿಮುಸಂತೋ ಹಸಂತು ನಃ || ೮ ||

ಸಜ್ಜನರಿಗೆ ರಕ್ಷಕವಾದ ಶ್ರೀವಾಯುದೇವರ ಮತ್ತು ಶ್ರೀವಿಷ್ಣುವಿನ ಪಾದಸ್ಮರಣೆಯು ನಮಗೆ ಇದ್ದಲ್ಲಿ ನಿಂದಿಸುವ ಅಸಜ್ಜನರು (ನಮ್ಮನ್ನು)

ನೋಡಿ ನಕ್ಕರೆ ನಗಲಿ. ಅವರಿಂದ ಆಗುವುದೇನು? ಹಂವಾಯುಗಳನ್ನು ಭಕ್ತಿಪೂರ್ವಕವಾಗಿ ಆಶ್ರಯಿಸಿದ ಸಜ್ಜನರು ಸಾಮಾನ್ಯಜನರ ಅಪಹಾಸ, ನಿಂದೆ ಮೊದಲಾದವುಗಳನ್ನು ಲಕ್ಷಿಸರು ಎಂದು ಅಭಿಪ್ರಾಯ. || ೮ ||

ಅನುತ್ಸಾಹಃ = ಋಜುಗಣಸ್ಥನು. ಇಲ್ಲಿ ವಾಯುದೇವರು.
ಋಜೂನಾಮೇಕ ಏವಾಸ್ತಿ ಪರಮೋತ್ಸಾಹವರ್ಜನಂ. ||ಅ||ವ್ಯಾ||
ಮಹೋತ್ಸಾಹಃ = ವಿಷ್ಣುವು.
ಮಹೋತ್ಸಾಹೋ ಮಹಾಬಲಃ | (ವಿಷ್ಣುಸಹಸ್ರನಾಮ)

ಕೋ ವಾ ಜೀವಾಪರಸ್ತ್ವಾಂ ತಾ ದೇವಾಭ್ಯೈ ರ್ವಾಜಿದೇವತಃ |
ಯೋಽವಾಗಾವಾತಿ ಯಚ್ಚೋರ್ಧ್ವಂ ತಾವುಭೌ ವಾಮನಾಶ್ರಿತೌ ||

ಯಾವ ಅಪಾನವಾಯು ಕೆಳಗೆ ಹೋಗುತ್ತದೆಯೋ ಮತ್ತು ಯಾವ ಪ್ರಾಣವಾಯು ಮೇಲೆ ಹೋಗುತ್ತದೆಯೋ ಅವೆರಡೂ ವಾಮನನನ್ನು ಆಶ್ರಯಿಸಿವೆ, ಎಂದಮೇಲೆ ಆ ವಾಮನರೂಪಿಯಾದ ಹಯವದನನನ್ನು ಬಿಟ್ಟು ಬೇರೆ ಯಾರು ಜೀವನನ್ನು ಕಾಪಾಡುವವನು?

ಇದಕ್ಕೆ ಪ್ರಮಾಣ :–

ಊರ್ಧ್ವಂ ಪ್ರಾಣಮುನ್ನಯತ್ಯಪಾನಂ ಪ್ರತ್ಯಗಸ್ಯತಿ |
ಮಧ್ಯೇ ವಾಮನಮಾಸೀನಂ ವಿಶ್ವೇದೇವಾ ಉಪಾಸತೇ ||

ಕಾಠ. ೨-೨-೩.

ನ ಪ್ರಾಣೇನ ನಾಪಾನೇನ ಮರ್ತ್ಯೋ ಜೀವತಿ ಕಶ್ಚನ |
ಇತರೇಣ ತು ಜೀವಂತಿ ಯಸ್ಮಿನ್ನೇತಾವುಪಾಶ್ರಿತೌ ||

೨-೨-೫.

ಯಾವ ವಾಮನನು ಅಂಗುಷ್ಠಮಾತ್ರದ ಪರಿಮಿತಿಯುಳ್ಳವನೋ ಅವನು ಪ್ರಾಣವಾಯುವನ್ನು ಮೇಲಕ್ಕೆ ಹೋಗುವಂತೆ ಪ್ರೇರಿಸುತ್ತಾನೆ. ಅಪಾನವಾಯುವನ್ನು ಕೆಳಗೆ ಹೋಗುವಂತೆ ಪ್ರೇರಿಸುತ್ತಾನೆ. ಅಂತಹ ಹೃದಯಮಧ್ಯದಲ್ಲಿರುವ ವಾಮನನನ್ನು ಸರ್ವದೇವತೆಗಳೂ ಪೂಜಿಸು

ಸಂಪತ್ತನ್ನು, ನಿನ್ನನ್ನು ಆಶ್ರಯಿಸಿದ ನನಗೆ ತೋರಿಸಿಕೊಡು ಅಂದರೆ ದಯಪಾಲಿಸು. ಇದರ ಅಭಿಪ್ರಾಯ : ಶಾಸ್ತ್ರಾರ್ಥವು ಬಹು ಗುಟ್ಟಾದದ್ದು. ಹೇಗೆ ಭೂಮಿಯಲ್ಲಿ ಗುಟ್ಟಾಗಿ ಇಡಲ್ಪಟ್ಟ ನಿಧಿಯನ್ನು ಅದು ಇರುವ ಸ್ಥಳದ ಗುಟ್ಟನ್ನು ಬಲ್ಲವನೇ ತೋರಿಸಬಲ್ಲನೋ ಹಾಗೆಯೇ ಶಾಸ್ತ್ರಾರ್ಥವೂ ಕೂಡ ಶಾಸ್ತ್ರದ ಗುಟ್ಟನ್ನು ಬಲ್ಲವನೇ ತಿಳಿಸಬಲ್ಲ. ಸರ್ವಶಾಸ್ತ್ರರಹಸ್ಯ ವನ್ನೂ ಬಲ್ಲ ಶ್ರೀ ಹಯವದನನು ಆಶ್ರಯಿಸಿದವಂಗೆ ಜ್ಞಾನಸಂಪತ್ತನ್ನು ದಯಪಾಲಿಸುವನು. 'ನಾನು ನಿನ್ನನ್ನು ಆಶ್ರಯಿಸಿದ್ದೇನೆ. ಆಶ್ರಿತನಾದ ನನಗೆ ಗೂಢವಾದ ಶಾಸ್ತ್ರಾರ್ಥವನ್ನು ಬೋಧಿಸು' ಎಂದು ವಾದಿರಾಜರು ಪ್ರಾರ್ಥಿಸುತ್ತಾರೆ. || ೬ ||

ಪ್ರಮಾಣ:– ನಾರಾಯಣೇನ ದೃಷ್ಟಸ್ತು ಪ್ರತಿಬುದ್ಧೋ ಭವೇ-ತ್ಪುಮಾನ್ |

ಅರ್ಥ :– ನಾರಾಯಣನ ಅನುಗ್ರಹದೃಷ್ಟಿಯುಳ್ಳವನೇ ಜ್ಞಾನವನ್ನು ಪಡೆಯುತ್ತಾನೆ. (ಮೋಕ್ಷಧರ್ಮ–ನಾರಾಯಣೀಯ)

ಅಂಧೋಽಹಂ ಕರುಣಾಸಿಂಧೋ ವೀಕ್ಷೇ ನ ಕ್ಷೇಮಪದ್ಧತಿಂ |
ಇಂದಿರೇಶ ಕರಂ ಗೃಹ್ಣನ್ ವರ್ತಯಾನಿಂದ್ಯವರ್ತ್ಮನಿ || ೭ ||

ಎಲೈ ಕರುಣಾಸಮುದ್ರನೇ! ನಾನು ಕುರುಡನು. ಮೋಕ್ಷಮಾರ್ಗ ವನ್ನು ಕಾಣೆನು. ಹೇ ರಮಾನಾಥ! ಕೈಯನ್ನು ಹಿಡಿದು ಅದುಷ್ಟವಾದ ಮಾರ್ಗದಲ್ಲಿ (ಸನ್ಮಾರ್ಗದಲ್ಲಿ) ನನ್ನನ್ನು ನಡೆಯಿಸು. || ೭ ||

ಅನುತ್ಸಾಹಮಹೋತ್ಸಾಹಚರಣಸ್ಮರಣೇ ಸತಾಂ |
ಶರಣೇ ಸತಿ ಜಲ್ಪಂತಃ ಕಿಮಸಂತೋ ಹಸಂತು ನಃ || ೮ ||

ಸಜ್ಜನರಿಗೆ ರಕ್ಷಕವಾದ ಶ್ರೀವಾಯುದೇವರ ಮತ್ತು ಶ್ರೀವಿಷ್ಣುವಿನ ಪಾದಸ್ಮರಣೆಯು ನಮಗೆ ಇದ್ದಲ್ಲಿ ನಿಂದಿಸುವ ಅಸಜ್ಜನರು (ನಮ್ಮನ್ನು)

ನೋಡಿ ನಕ್ಕರೆ ನಗಲಿ. ಅವರಿಂದ ಆಗುವುದೇನು? ಹರಿವಾಯುಗಳನ್ನು ಭಕ್ತಿಪೂರ್ವಕವಾಗಿ ಆಶ್ರಯಿಸಿದ ಸಜ್ಜನರು ಸಾಮಾನ್ಯಜನರ ಅಪಹಾಸ, ನಿಂದೆ ಮೊದಲಾದವುಗಳನ್ನು ಲಕ್ಷಿಸರು ಎಂದು ಅಭಿಪ್ರಾಯ. ॥ ೮ ॥

ಅನುತ್ಸಾಹಃ = ಋಜುಗಣಸ್ಥನು. ಇಲ್ಲಿ ವಾಯುದೇವರು.
ಋಜೂನಾಮೇಕ ಏವಾಸ್ತಿ ಪರಮೋತ್ಸಾಹವರ್ಜನಂ. ॥ಅ॥ವ್ಯಾ॥
ಮಹೋತ್ಸಾಹಃ = ವಿಷ್ಣುವು.
ಮಹೋತ್ಸಾಹೋ ಮಹಾಬಲಃ । (ವಿಷ್ಣುಸಹಸ್ರನಾಮ)

ಕೋ ವಾ ಜೀವಾಪರಿತ್ರಾತಾ ದೇವಾಚ್ಛ್ರೀವಾಜಿದೇವತಃ ।
ಯೋಽವಾಗ್ಯಾತಿ ಯಚ್ಚೋರ್ಧ್ವಂ ತಾವುಭೌ ವಾಮನಾಶ್ರಿತೌ ॥

ಯಾವ ಅಪಾನವಾಯು ಕೆಳಗೆ ಹೋಗುತ್ತದೆಯೋ ಮತ್ತು ಯಾವ ಪ್ರಾಣವಾಯು ಮೇಲೆ ಹೋಗುತ್ತದೆಯೋ ಅವೆರಡೂ ವಾಮನನನ್ನು ಆಶ್ರಯಿಸಿವೆ, ಎಂದಮೇಲೆ ಆ ವಾಮನರೂಪಿಯಾದ ಹಯವದನನನ್ನು ಬಿಟ್ಟು ಬೇರೆ ಯಾರು ಜೀವನನ್ನು ಕಾಪಾಡುವವನು?

ಇದಕ್ಕೆ ಪ್ರಮಾಣ :—

ಊರ್ಧ್ವಂ ಪ್ರಾಣಮುನ್ನಯತ್ಯಪಾನಂ ಪ್ರತ್ಯಗಸ್ಯತಿ ।
ಮಧ್ಯೇ ವಾಮನಮಾಸೀನಂ ವಿಶ್ವೇದೇವಾ ಉಪಾಸತೇ ॥

ಕಾಠ. ೨-೨-೩.

ನ ಪ್ರಾಣೇನ ನಾಪಾನೇನ ಮರ್ತ್ಯೋ ಜೀವತಿ ಕಶ್ಚನ ।
ಇತರೇಣ ತು ಜೀವಂತಿ ಯಸ್ಮಿನ್ನೇತಾವುಪಾಶ್ರಿತೌ ॥

೨-೨-೫.

ಯಾವ ವಾಮನನು ಅಂಗುಷ್ಠಮಾತ್ರದ ಪರಿಮಿತಿಯುಳ್ಳವನೋ ಅವನು ಪ್ರಾಣವಾಯುವನ್ನು ಮೇಲಕ್ಕೆ ಹೋಗುವಂತೆ ಪ್ರೇರಿಸುತ್ತಾನೆ. ಅಪಾನವಾಯುವನ್ನು ಕೆಳಗೆ ಹೋಗುವಂತೆ ಪ್ರೇರಿಸುತ್ತಾನೆ. ಅಂತಹ ಹೃದಯಮಧ್ಯದಲ್ಲಿರುವ ವಾಮನನನ್ನು ಸರ್ವದೇವತೆಗಳೂ ಪೂಜಿಸು

ತ್ತಾರೆ. ಮೃತ್ಯುವಿನ ಅಧೀನನಾದ ಯಾವ ಜೀವನೇ ಆಗಲಿ ಪ್ರಾಣನಿಂದಾಗಲೀ ಅಪಾನನಿಂದಾಗಲೀ ಜೀವಿಸಿಲ್ಲ. ಆದರೆ ಪ್ರಾಣಾಪಾನಗಳಿಂದ ಬೇರೆಯಾದ, ಮತ್ತು ಪ್ರಾಣಾಪಾನಗಳು ಆಶ್ರಯಿಸಿಕೊಂಡು ಯಾವನಲ್ಲಿ ಇವೆಯೋ ಅಂತಹ ವಾಮನನಿಂದಲೇ ಪ್ರಾಣಿಗಳು ಜೀವಿಸುತ್ತಾರೆ. ॥ ೯ ॥

ಸುಮತಿಭಿರನುಮೇಯಂ ಶುಭ್ರಕಾಯಂ ಸಹಾಯಂ
ಸುಖಮಯಮನಪಾಯಂ ಮುಕ್ತ್ಯುಪಾಯಂ ವಿಮಾಯಂ ।
ನೃಹಯಮಹಮಮೇಯಂ ಧ್ಯೇಯಮಾಮ್ನಾಯಗೇಯಂ
ಸದಯಮಸದಜೇಯಂ ಶ್ರೀಸಹಾಯಂ ಭಜೇಯಂ ॥ ೧೦ ॥

ಉತ್ತಮ ಮತಿವಂತರಿಂದ ಶಾಸ್ತ್ರಕ್ಕನುವಾದ ರೀತಿಯಲ್ಲಿ ತಿಳಿಯಲ್ಪಡುವ, ಬಿಳಿಯ ದೇಹವುಳ್ಳ, ಅನಿಮಿತ್ತೋಪಕಾರಿಯಾದ, ಆನಂದಮಯನಾದ, ಚ್ಯುತಿರಹಿತನಾದ, ಮುಕ್ತಿಗೆ ಸಾಧನನಾದ, ಮಾಯಾರಹಿತನಾದ, ಯಾರಿಂದಲೂ ಪೂರ್ತಿಯಾಗಿ ತಿಳಿಯಲು ಅಸಾಧ್ಯನಾದ, ಧ್ಯಾನಾರ್ಹನಾದ, ಸಾಮಗಾನ (ಅಥವಾ ವೇದ) ಪ್ರತಿಪಾದ್ಯನಾದ, ದಯಾವಂತನಾದ, ದುಷ್ಟರಿಂದ ಜಯಿಸಲು ಅಸಾಧ್ಯನಾದ, ಶ್ರೀ ಸಹಾಯನಾದ ಈ ನೃಹಯನನ್ನು ಭಜಿಸುತ್ತೇನೆ. ॥ ೧೦ ॥

ಸದಾ ರಹಸ್ಯಸ್ತುತ ಹೃತ್ತಮಿಸ್ರಪ್ರದೀಪ ಪಾಪಾತ್ಮಭಿರಪ್ರದೃಶ್ಯ ।
ಹಯಾಸ್ಯ ವಿಶ್ವಾಶ್ರಯ ಭಕ್ತವಶ್ಯ ತವಾಂಘ್ರಿದಾಸ್ಯಂ ಮಮ
ಸರ್ವದಾ ಸ್ಯಾತ್ ॥ ೧೧ ॥

ಯಾವಾಗಲೂ ಉಪನಿಷತ್ತಿನಿಂದ ಸ್ತುತನಾದ ಅಂದರೆ ಉಪನಿಷತ್ತಿನಲ್ಲಿ ಪ್ರತಿಪಾದ್ಯನಾದ, ಮನಸ್ಸಿನಲ್ಲಿನ ಅಜ್ಞಾನವೆಂಬ ಕತ್ತಲೆಗೆ ಉತ್ತಮ ದೀಪಪ್ರಾಯನಾದ, ಪಾಪಾತ್ಮರಿಗೆ ಅಗೋಚರನಾದ, ಪ್ರಪಂಚಕ್ಕೆ ಆಶ್ರಯಭೂತನಾದ, ಅಥವಾ ವಾಯುದೇವರಿಗೆ ಆಶ್ರಯನಾದ, ಭಕ್ತರಿಗೆ ವಶನಾದ ಎಲೈ ಹಯವದನ! ನಿನ್ನ ಪಾದದಾಸ್ಯವು ನನಗೆ ಸರ್ವದಾ ಇರಲಿ. ॥ ೧೧ ॥

ರಹಸ್ಯಂ = ಉಪನಿಷತ್ತು ಎಂದರ್ಥ. ವಿಶ್ವೋವಾಯುರುದಾಹೃತಃ = ವಿಶ್ವವೆಂದರೆ ವಾಯು. ಪ್ರಾಣಸ್ಯ ಗಾ = ವಾಯುದೇವರಿಗೆ ಆಶ್ರಯನು ನಾರಾಯಣನು.

ತರುಣತರಣಿಕೋಟಿಪ್ರಖ್ಯಭಾಭಾಸ್ವರಂ ತೇ
ಚರಣಮರಣಮೀಶಾಹಂ ಪ್ರಪದ್ಯೇ ಹಯಾಸ್ಯ ।
ಅರುಣಕಿರಣಧೂತಾನೇಕತಾಮಿಸ್ರವನ್ಮೇ
ಮರಣಹರಣನಾನಾವ್ಯಾಧಿರಾಧಿಶ್ಚ ನಶ್ಯಾತ್ ॥ ೧೨ ॥

ಹಯವದನಸ್ವಾಮಿಯೇ, ಕೋಟಿ ಬಾಲಸೂರ್ಯರ ಸಮವಾದ ಕಾಂತಿಯಿಂದ ಹೊಳೆಯುವ ನಿನ್ನ ಪಾದವನ್ನು ಶರಣು ಹೊಂದುತ್ತೇನೆ. ಇದರಿಂದ, ಬಾಲಸೂರ್ಯನ ಕೆಂಪು ಕಿರಣಗಳಿಂದ ಚದರಿಸಲ್ಪಟ್ಟ ಬಹು ಕತ್ತಲಿನಂತೆ, ಎಲೈ ಸಂಸಾರನಿವರ್ತಕನೇ, ನನ್ನ ಅನೇಕ ವಿಧವಾದ ದೇಹದ ಮತ್ತು ಮನಸ್ಸಿನ ರೋಗವು ನಾಶವಾದೀತು.

ಇದರ ಅಭಿಪ್ರಾಯ:- ಸೂರ್ಯೋದಯವಾದ ಕೂಡಲೇ ಹೇಗೆ ಕತ್ತಲೆಯು ಹೋಗುತ್ತದೆಯೋ ಹಾಗೆಯೇ ಹಯವದನನನ್ನು ಅನನ್ಯ-ಭಕ್ತಿಯಿಂದ ಶರಣು ಹೊಂದಿದವರ ಸರ್ವಾನಿಷ್ಟವೂ ಆ ದೇವನ ಅನುಗ್ರಹದಿಂದ ನಾಶವಾಗುತ್ತೆ. ॥ ೧೨ ॥

ಮಕರಾಕೃತೇ ಮಹಿತಮಂದರೋದ್ಧೃತೇ
ರಚಿತಸ್ತುತೇ ರದನಕೋಟಿಲಗ್ನಕ್ಷಿತೇ ।
ನಮತಾಂ ಗತೇ ನರಮೃಗೋಜ್ಜ್ವಲಾಕೃತೇ
ರುಚಿರಶ್ರುತೇಽನುಮತಾಂಘ್ರಿಪದ್ಮೋನ್ನತೇ ॥ ೧೩ ॥

ಕೃತದುಷ್ಕೃತೇ ರವಿಸುತೇ ಕೃತಸತ್ಕೃತೇ
ಹನುಮನ್ನತೇ ಕೃತರತೇ ರಘೂಣಾಂ ಪತೇ ।
ವಿಲಸನ್ನತೇ ದಶಶಿರಶ್ಚಮೂಸಂಹೃತೇ
ವಿಲಸತ್ಕೃತೇ ತವ ಯಶೋ ದಿವಿ ದ್ಯೋತತೇ ॥ ೧೪ ॥

ಮಕರಾಕಾರವುಳ್ಳವನೇ (ಮತ್ಸ್ಯರೂಪಿಯೇ), ದೊಡ್ಡದಾದ ಮಂದರ-ಪರ್ವತವನ್ನು ಧಾರಣಮಾಡಿದ ಆಮೆಯ ಆಕಾರವುಳ್ಳವನೇ, ದೇವತೆಗಳಿಂದ ಮಾಡಲ್ಪಟ್ಟ ಸ್ತೋತ್ರವುಳ್ಳವನೇ, ಕೋರೆಹಲ್ಲಿನ ತುದಿಯಲ್ಲಿ ಲಗ್ನವಾದ ಭೂಮಿಯುಳ್ಳ ವರಾಹನೇ, ನಮಸ್ಕರಿಸುವವರಿಗೆ ಆಶ್ರಯದಾತನೇ, ಚೆನ್ನಾಗಿ ಪ್ರಕಾಶಿಸುವ ನರಸಿಂಹರೂಪವುಳ್ಳವನೇ ಅಂದರೆ ನರಸಿಂಹರೂಪದಿಂದ ಅಭಿವ್ಯಕ್ತನಾದವನೇ, ಮನೋಹರವಾದ ಖ್ಯಾತಿಯುಳ್ಳವನೇ, ಭಕ್ತನಾದ ಇಂದ್ರನಿಗಾಗಿ ಮೇಲೆತ್ತಿದ ಪಾದವುಳ್ಳ ವಾಮನನೇ, ದುಷ್ಟ-ಕ್ಷತ್ರಿಯರನ್ನು (ಕೊಡಲಿಯಿಂದ) ಭೇದಿಸಿದ ಪರಶುರಾಮನೇ, ಮಾಡಿದ ಉಪಕಾರವನ್ನು ಸುಗ್ರೀವನು ಅಲಕ್ಷ್ಯಮಾಡಲು ಹನುಮಂತನ ಅಭಿ-ಪ್ರಾಯದಂತೆ ಸುಗ್ರೀವನಲ್ಲಿ ಪ್ರೀತಿಮಾಡಿದ ರಘುಪತಿಯೇ, ದಶಕಂಧರನ ಸೈನ್ಯವನ್ನು ನಾಶಮಾಡಿದವನೇ, ಕ್ಷೋಭಿಸುವ (ರಾವಣಹನನಾದಿ) ಮಹತ್ಕಾರ್ಯ ಮಾಡಿದವನೇ, ನಿನ್ನ ಯಶಸ್ಸು ಸ್ವರ್ಗದಲ್ಲಿ ಚೆನ್ನಾಗಿ ಬೆಳಗುತ್ತದೆ. || ೧೩-೧೪ ||

ರಾಮದೇವರು ವಾಲಿಯನ್ನು ಸಂಹರಿಸಿ ಸುಗ್ರೀವನಿಗೆ ಕಪಿರಾಜ್ಯದಲ್ಲಿ ಪಟ್ಟಾಭಿಷೇಕವನ್ನು ಮಾಡಿದಮೇಲೆ ಸುಗ್ರೀವನು ನಾಲ್ಕು ತಿಂಗಳು ಕಳೆದರೂ ಸೀತಾನ್ವೇಷಣರೂಪವಾದ ರಾಮಕಾರ್ಯದಲ್ಲಿ ಉದಾಸೀನನಾಗಿ ಮೈ ಮರೆತಿರಲು ರಾಮದೇವರು ಅಸಮಾಧಾನದಿಂದ ಲಕ್ಷ್ಮಣನನ್ನು ಸುಗ್ರೀವನಲ್ಲಿಗೆ ಕಳುಹಿಸಿದರು. ಆಗ ಸುಗ್ರೀವನು ಎಚ್ಚೆತ್ತು ಸೀತಾನ್ವೇಷಣದಲ್ಲಿ ಪ್ರಸಕ್ತನಾದನು.

ಧೃತಪರ್ವತೇಂದ್ರನುತ ನೀರದದ್ಯುತೇ
ಸ್ಥಿರಸನ್ನತೇ ಪುರವಧೂಷು ದತ್ತಾಮತೇ |
ಸುಧಿಯಾಂಗತೇ ಕಲಿಪರಾಕ್ರಮಾಧಃಕೃತೇ
ನತಿರಸ್ತು ತೇ ಕೃತಸಮಸ್ತಧರ್ಮಸ್ಥಿತೇ || ೧೫ ||

ಪರ್ವತಶ್ರೇಷ್ಠವಾದ ಗೋವರ್ಧನವನ್ನು ಎತ್ತಿ ಹಿಡಿದವನೇ, ಇಂದ್ರನಿಂದ ಸ್ತುತಿಸಲ್ಪಟ್ಟವನೇ, ಮೇಘದ ಬಣ್ಣವುಳ್ಳವನೇ, ಸ್ಥಿರವಾದ

ಉತ್ತಮಜ್ಞಾನವುಳ್ಳವನೇ, ತ್ರಿಪುರಾಸುರರ ಪತ್ನಿಯರಲ್ಲಿ ಮೋಹವನ್ನುಂಟು ಮಾಡಿದವನೇ, ಉತ್ತಮ ಜ್ಞಾನವುಳ್ಳವರಿಗೆ ಗತಿಯಾದವನೇ, ಕಲ್ಕಿಯಾಗಿ ಅವತಾರ ಮಾಡಿ ಕಲಿಯ ಪರಾಕ್ರಮವನ್ನು ಕೆಳಮೆಟ್ಟಿದವನೇ, ಸಮಸ್ತ-ಧರ್ಮಸ್ಥಾಪನೆಯನ್ನು ಮಾಡಿದವನೇ! ನಿನಗೆ ನಮಸ್ಕಾರವಿರಲಿ. ||೧೫||

ಇತಿ ಮೋದತೇ ಕಲಿಜಿತೇ ದ್ವಿಷಾಂ ನಿಘ್ನತೇ
ಶರಣಾಗತೇ ಸುವಿನತೇ ದಯಾಂ ಕುರ್ವತೇ ।
ಶುಭಧೀಮತೇ ವಿದಧತೇ ಜಗದ್ವಿಭ್ರತೇ (ದ್ವಿಭ್ರತೇ)
ಕರುಣಾವತೇ ಹೃದಿ ಸತೇ ನಮೋಽದ್ಯಾಸ್ತು ತೇ || ೧೬ ||

ಹೀಗೆ ಆನಂದಪಡುವ, ಕಲಿಯನ್ನು ಜಯಿಸಿದ, ಶತ್ರುಗಳನ್ನು ಸಂಹರಿಸುವ, ಶರಣಾಗತರಲ್ಲಿಯೂ ಮತ್ತು ಭಕ್ತಿಪೂರ್ವಕವಾಗಿ ನಮಸ್ಕರಿಸಿದವರಲ್ಲಿಯೂ ದಯೆಯನ್ನು ಮಾಡುವ, ಶುದ್ಧಬುದ್ಧಿಯುಳ್ಳ, ಜಗತ್ತನ್ನು ಸೃಷ್ಟಿಮಾಡುವ, ಅದನ್ನು ಧಾರಣೆಮಾಡುವ, ಕರುಣಾವಂತನಾದ, ಸರ್ವರ ಹೃದಯದಲ್ಲಿ ನೆಲಸಿರುವ ನಿನಗೆ ಈಗ ನಮಸ್ಕಾರವಿರಲಿ. ||೧೬||

ಸುಗದಾಭೃತೇ(ಸುಮವತೇ)ಽಖಿಲಂ ಜಾನತೇ
ಭುವಿ ಭಾಸ್ವತೇ ಸುಖಯತೇ ಹಿತಂ ದಿತ್ಸತೇ ।
ಸ್ಥಿರತಾವತೇ ದಶದಿಶಾಸು ಚಾಧಾವತೇ
ಸುಯಶಸ್ಕೃತೇ ವಿಲಸತೇ ನಮೋಽಸ್ತ್ವೀಶ ತೇ || ೧೭ ||

ಉತ್ತಮವಾದ ಗದಾವನ್ನು ಧಾರಣಮಾಡಿದ, ಪುಷ್ಪದಿಂದ ಮಾಡಿದ ವನಮಾಲಾಲಂಕೃತನಾದ ಅಥವಾ ನಾಭಿಯಲ್ಲಿ ಅಖಿಲಲೋಕಾತ್ಮಕವಾದ ಪದ್ಮವುಳ್ಳ, ಸರ್ವಜ್ಞನಾದ, ಭೂಮಿಯಲ್ಲಿ ಪ್ರಕಾಶಿಸುವ, ಭಕ್ತರಿಗೆ ಸುಖವನ್ನು ಉಂಟುಮಾಡುವ, ವಾಂಛಿತಪ್ರದನಾದ (ಇಷ್ಟಾರ್ಥವನ್ನು ಕೊಡುವ), ಪ್ರಪಂಚವು ಸ್ಥಿರವಾಗಿರುವಹಾಗೆ ಅದನ್ನು ಕಾಪಾಡುವ ಅಥವಾ ಸ್ಥಿರತ್ವವುಳ್ಳ ಅಂದರೆ ಸ್ಥಾಣುವೇ ಆದರೂ ಹತ್ತು ದಿಕ್ಕುಗಳಲ್ಲಿಯೂ ಸ್ವೇಚ್ಛೆಯಾಗಿ ಸಂಚಾರಮಾಡುವ, ಉತ್ತಮವಾದ ಯಶಸ್ಸನ್ನು ಉಂಟುಮಾಡುವ

ಅಥವಾ ಭಕ್ತರಿಗೆ ಯಶಸ್ಸನ್ನು ತಂದುಕೊಡುವ, ಪ್ರಕಾಶಿಸುವ ಎಲೈ ಈಶನೇ, ನಿನಗೆ ನಮಸ್ಕಾರವಿರಲಿ. || ೧೭ ||

ಧರಣೀಕೃತೇ ಸಕಲದುರ್ಜನಾನ್ ಶಾಸತೇ
ಗತದುಷ್ಕೃತೇ ಮನಸಿ ಧರ್ಮಮಾಶಾಸತೇ ।
ಖಲಧಿಕ್ಕೃತೇ ಶ್ರುತಿಪಥಂ ಸದಾ ರಕ್ಷತೇ
ಶಿರಸಾ ನಮೋಽಸ್ತು ಕುಮತೇರ್ಧನಂ ಘ್ನತೇ || ೧೮ ||

ಭೂದೇವಿಯ ನಿಮಿತ್ತವಾಗಿ ಸರ್ವದುರ್ಜನರನ್ನೂ ಶಿಕ್ಷಿಸುವ, ಪಾಪ-ದೂರನಾದ, ಮನಸ್ಸಿನಲ್ಲಿ ಧರ್ಮವನ್ನು (ಧರ್ಮಸಂಸ್ಥಾಪನೆಯನ್ನು) ಅಪೇಕ್ಷಿಸುವ, ದುಷ್ಟರನ್ನು ಧಿಕ್ಕರಿಸುವ, ವೇದಮಾರ್ಗವನ್ನು ಯಾವಾಗಲೂ ರಕ್ಷಿಸುವ, ದುಷ್ಟಬುದ್ಧಿಯ ಧನವನ್ನು ಸೂರೆಗೊಳ್ಳುವ ನಿನಗೆ ಶಿರಸಾ ನಮಸ್ಕಾರವಿರಲಿ, ಅಂದರೆ ನಿನಗೆ ಶಿರಸಾ ನಮಸ್ಕಾರಮಾಡುವೆನು ಎಂದಭಿಪ್ರಾಯ. || ೧೮ ||

ದಶಾಸ್ಯಸದೃಶಾಕಾರಾಃ ದಿಶಾಸು ತ್ರಿದಶಾರ್ಥದಾಃ ।
ಕೃಶಾನುಮುಖ್ಯಾ ಯದ್ಭೀತ್ಯಾಽನುಶಾಸಂತಿ ಜಗತ್ಕಿಲ || ೧೯ ||

ಅಗ್ನಿಯೇಮೊದಲಾದ (ದಿಕ್ಪಾಲಕ) ದೇವತೆಗಳು ಯಾವ ಪರಮಾತ್ಮನ ಭಯದಿಂದ ಜಗತ್ತನ್ನು ರಕ್ಷಿಸುತ್ತಾರೆಂದು ಪ್ರಸಿದ್ಧಿ ಇದೆಯೋ ಆ ಪರಮಾತ್ಮನಿಗೆ ದೇವತೆಗಳಿಗೆ ಅಭೀಷ್ಟವನ್ನು ಕೊಡತಕ್ಕ ಆಯಾ ದೇವತೆಗಳಿಗೆ ಸದೃಶವಾದ ಹತ್ತು ರೂಪಗಳು ಆಯಾ ದಿಕ್ಕಿನಲ್ಲಿವೆ. || ೧೯ ||

ಆಗ್ನೇಯ ದಿಕ್ಕಿಗೆ ಪಾಲಕನಾದ ಅಗ್ನಿಯು ತನ್ನ ರೂಪಕ್ಕೆ ಸದೃಶವಾದ ರೂಪವನ್ನು ತಾಳಿದ ಆ ದಿಕ್ಕಿನಲ್ಲಿರುವ ಪರಮಾತ್ಮನಿಂದ ಪ್ರೇರಿತನಾಗಿ ಅಥವಾ ಅವನ ಆಜ್ಞಾಧಾರಕನಾಗಿ ತನ್ನ ಕೆಲಸವನ್ನು ನಡಿಸುತ್ತಾನೆ. ಹೀಗೆಯೇ ಎಲ್ಲಾ ದಿಕ್ಪಾಲಕರೂ ತಮ್ಮ ದಿಕ್ಕಿನಲ್ಲಿರುವ ತಮಗೆ ಸದೃಶವಾದ

ರೂಪವನ್ನು ಧರಿಸಿದ ಪರಮಾತ್ಮನ ಆಜ್ಞಾಧಾರಕರಾಗಿ ಭಯಭಕ್ತಿಯಿಂದ ಜಗತ್ತನ್ನು ಪಾಲಿಸುತ್ತಾರೆ.

ಇದಕ್ಕೆ ಪ್ರಮಾಣ :-

ಭಯಾದಸ್ಯಾಗ್ನಿಸ್ತಪತಿ ಭಯಾತ್ತಪತಿ ಸೂರ್ಯಃ |
ಭಯಾದಿಂದ್ರಶ್ಚ ವಾಯುಶ್ಚ ಮೃತ್ಯುರ್ಧಾವತಿ ಪಂಚಮಃ ||

ಕಠ.ಉ. ೨-೬ವಲ್ಲಿ.

ತತೋಽಭಿತೋ ಹಿತೋ ವಿಷ್ಣುರ್ಮತೋ ಮತಿಮತೋ ಭುವಿ |
ಕುತೋಽಸ್ಯ ಸದೃಶೋಽತೋಽನ್ಯಃ ಸತೋ ಮುಕ್ತಿರಿತೋ ಯತಃ ||

ಆದ್ದರಿಂದ ಅಂತಹ ವಿಷ್ಣುವು ಜ್ಞಾನವಂತರಿಗೆ ಅತಿಶಯವಾಗಿ ಹಿತನು ಎಂದು ಲೋಕದಲ್ಲಿ ತಿಳಿಯಲ್ಪಟ್ಟವನಾಗಿದ್ದಾನೆ. ಈ ವಿಷ್ಣುವಿನಿಂದ ಸಜ್ಜನರಿಗೆ ಸಂಸಾರದಿಂದ ಮುಕ್ತಿಯು ಎಂದಮೇಲೆ ಇವನಿಗಿಂತ ಬೇರೆಯಾದವನು ಇವನಿಗೆ ಸಮಾನನು ಎಲ್ಲಿ ಇರುವನು ? ಇಲ್ಲವೇ ಇಲ್ಲ. ||೨೦||

ಶಂಖಾಕ್ಷಮಾಲಾಪುಸ್ತಕೈಸ್ಸ್ವಜನಹೃಚ್ಛಂಕಾಕಲಂಕಾಜ್ಞತಾ-
ಹಂಕಾರಾದ್ಯಘರಾಶಿಖಂಡನಕರಾಲಂಕಾರಮುದ್ರೋಜ್ಜ್ವಲಂ |
ಹುಂಕಾರಾರ್ದಿತದಾನವಂ ಹೃತಸುರಾತಂಕಾರ್ತಿಮನ್ಯೂನವೀ-
ಕ್ಷಾಂಕಾಸಂಖ್ಯವಿಧುದ್ಯುತಿಂ ಹಯಮುಖಂ ತಂ ಕಾಮದಂ
ಕಾಮಯೇ || ೨೧ ||

ಶಂಖ, ಅಕ್ಷಮಾಲಾ, ಶುದ್ಧವಾದ ಪುಸ್ತಕ ಇವುಗಳಿಂದಲೂ ಮತ್ತು ಭಕ್ತರ ಮನಸ್ಸಿನ ಶಂಕಾ, ಕಲಂಕ, ಅಜ್ಞಾನ, ಅಹಂಕಾರ ಇವೇ ಮೊದಲಾದ ದೋಷರಾಶಿಯನ್ನು ಖಂಡನಮಾಡುವ ಮತ್ತು ಹಸ್ತಾಲಂಕಾರವಾದ ಜ್ಞಾನಮುದ್ರೆಯಿಂದಲೂ ಪ್ರಕಾಶಿಸುವ, ಹುಂಕಾರದಿಂದ ಮಧುಕೈಟಭರನ್ನು ನಾಶಮಾಡುವ, ದೇವತೆಗಳ ಭಯ, ದುಃಖ ಇವುಗಳನ್ನು ಹೋಗಲಾಡಿಸಿದ ಮತ್ತು ಹ್ರಾಸವಿಲ್ಲದ ಕಳಂಕರಹಿತವಾದ ಅಸಂಖ್ಯಾತಚಂದ್ರ-

ಕಾಂತಿಯುಳ್ಳ, ಇಷ್ಟಾರ್ಥದಾಯಕನಾದ, ಹಯವದನನನ್ನು (ಅಂದರೆ ಅವನಅನುಗ್ರಹವನ್ನು) ಅಪೇಕ್ಷಿಸುತ್ತೇನೆ. ‖ ೨೧ ‖

ಅಗ್ರ್ಯಃಶ್ಲಾಘ್ಯಾರುಣಾಸ್ಯಾಗ್ರಃ ಸ್ರಗ್ವೀಸದ್ಗಿರಉದ್ಗಿರನ್ ।
ಸ್ವರ್ಗಿಮೃಗ್ಯೋ ಹಯಗ್ರೀವೋ ದುರ್ಗ್ರಹೋ ಮೇಽಸ್ತು ದೋರ್ಗ್ರಹಃ ‖ ೨೨ ‖

ಸರ್ವೋತ್ತಮನಾದ, ಶ್ಲಾಘ್ಯವಾದ ಕೆಂಪಗಿರುವ ಮುಖದ ಕೊನೆಯುಳ್ಳ, ಪುಷ್ಪಮಾಲಾವನ್ನು ಧರಿಸಿದ, ಉತ್ತಮವಾದ ವೇದವಾಕ್ಯಗಳನ್ನು ಸ್ಪಷ್ಟವಾಗಿ ಉಚ್ಚರಿಸುವ, ಸ್ವರ್ಗದಲ್ಲಿರುವ ದೇವತೆಗಳಿಂದ ಹುಡುಕಲ್ಪಡುವ, (ದೇವತೆಗಳ ವಿಚಾರಕ್ಕೆ ವಿಷಯನಾದ), ಯಾರಿಂದಲೂ ಪೂರ್ಣವಾಗಿ ತಿಳಿಯಲು ಸಾಧ್ಯವಲ್ಲದವನಾದ ಅಥವಾ ಅಸುರರಿಂದ ಹಿಡಿಯಲು ಅಸಾಧ್ಯನಾದ ಹಯಗ್ರೀವನು ನನ್ನ ಭುಜವನ್ನು ಹಿಡಿಯುವವನಾಗಲಿ ಅಂದರೆ ನನ್ನನ್ನು ಉದ್ಧರಿಸಲಿ. ‖ ೨೨ ‖

ಅಸುರರಿಂದ ಹಿಡಿಯಲು ಅಶಕ್ಯನಾದವನು–ಕಾಲಯವನನು ಕೃಷ್ಣನನ್ನು ಹಿಡಿಯಲು ಹಿಂಬಾಲಿಸಿದನು ಸಾಧ್ಯವಾಗಲಿಲ್ಲ.–ಅಂತೆಯೇ ದುರ್ಯೋಧನನು ಕೃಷ್ಣನನ್ನು ಕಟ್ಟಲು ಪ್ರಯತ್ನಿಸಿದನು–ಸಾಧ್ಯವಾಗಲಿಲ್ಲ.

ಋಗ್ವರ್ಗೋದ್ಗಾನೇಽಗ್ರಗಣ್ಯಃ ಸರ್ಗೇ ಸರ್ಗೇ ವಿಧೇರ್ಗುರುಃ ।
ಹೃದ್ಯೋಽರಿಘ್ನೋ ಹಯಗ್ರೀವೋಽನುಗ್ರೋದೃಗ್ಗೋಚರೋಽಸ್ತು ಮೇ ‖ ೨೩ ‖

ಋಕ್ಕುಗಳ ಸಮೂಹವನ್ನು ಉಚ್ಚವಾಗಿ ಗಾನಮಾಡುವುದರಲ್ಲಿ ಅಗ್ರ-ಗಣ್ಯನಾದ, ಪ್ರತಿಸೃಷ್ಟಿಯ ಆದಿಯಲ್ಲಿ ಹಿರಣ್ಯಗರ್ಭನಿಗೆ ಗುರುವಾದ, ಹೃದಯದಲ್ಲಿ ನೆಲಸಿರುವ, ಶತ್ರುನಾಶಕನಾದ, ಉಗ್ರನಲ್ಲದ, ಹಯಗ್ರೀವನು ನನ್ನ ಕಣ್ಣಿಗೆ ವಿಷಯನಾಗಲಿ. ‖ ೨೩ ‖

ಮುದ್ರಾಪುಸ್ತಕಶಂಖಾಕ್ಷ ವಿದ್ಯೋತಿತಕರಾಂಬುಜ ।
ಹೃದ್ಯವೇಷ ಹಯಗ್ರೀವ ಮದ್ಧ್ಯಾನವಿಷಯೋ ಭವ ‖ ೨೪ ‖

ಜ್ಞಾನಮುದ್ರೆ, ಪುಸ್ತಕ, ಶಂಖ, ಅಕ್ಷಮಾಲಾ ಇವುಗಳಿಂದ ಹೊಳೆಯುತ್ತಿರುವ ಕರಕಮಲವುಳ್ಳವನೇ, ಮನೋಹರವಾದ ವೇಷವುಳ್ಳವನೇ, ಎಲೈ ಹಯಗ್ರೀವ, ನನ್ನ ಧ್ಯಾನಕ್ಕೆ ವಿಷಯನಾಗು. ॥ ೨೪ ॥

ಕರ್ತ್ರೇ ಧರ್ತ್ರೇ ಚ ಸಂಹರ್ತ್ರೇ ಪಾತ್ರೇ ಚ ಹಯವಕ್ತ್ರ ಮೇ ।
ಪಿತ್ರೇ ಧಾತ್ರೇ ಧಿಯಾಂ ದಾತ್ರೇ ಸತ್ರೇ ಜಾತಾಯ ತೇ ನಮಃ ॥

ಜಗತ್ತನ್ನು ಸೃಷ್ಟಿಮಾಡಿದ, ಸೃಷ್ಟಿಸಿದ ಜಗತ್ತಿಗೆ ಸ್ಥಿತಿಕರ್ತನಾದ, ಅದನ್ನು ಅಂತ್ಯದಲ್ಲಿ ಸಂಹರಿಸುವ, ಸಜ್ಜನರನ್ನು ಕಾಪಾಡುವ, ಎಲೈ ಹಯವದನ, ನನ್ನ ತಂದೆಯೂ ತಾಯಿಯೂ ಜ್ಞಾನದಾತನೂ ಆದ, ಬ್ರಹ್ಮದೇವರ ಸತ್ರಯಾಗದಲ್ಲಿ ಹುಟ್ಟಿದ ನಿನಗೆ ನಮಸ್ಕಾರ. ॥ ೨೫ ॥

ವಿಕಸಂತಂ ಹೃತಧ್ವಾಂತಂ ಹೃದಿಸಂತಂ ಚ ಸಂತತಂ ।
ಗತಚಿಂತಂ ರಮಾಕಾಂತಂ ಗುಣವಂತಂ ಸ್ಮರಾಂತರ ॥ ೨೬ ॥

ಹೃದಯವನ್ನು ಅರಳಿಸುತ್ತಾ ಮತ್ತು ಅದರಲ್ಲಿನ ಕತ್ತಲನ್ನು ಹೋಗಲಾಡಿಸುತ್ತಾ ಅದರಲ್ಲಿ ಯಾವಾಗಲೂ ಇರುವ, ಚಿಂತಾದೂರನಾದ, ಸದ್ಗುಣಯುಕ್ತನಾದ, ರಮಾಕಾಂತನನ್ನು ಎಲೈ ಮನಸ್ಸೇ, ಸದಾ ಸ್ಮರಿಸು. ॥ ೨೬ ॥

ಅಂತರ = ಮನಸ್ಸು.

ವೀತಹೇಯಂ ಶ್ವೇತಕಾಯಂ ಧೂತಮಾಯಂ ಸುಧೀಮಯಂ ।
ಧ್ಯಾತೃಧ್ಯೇಯಂ ಸದಾಗೇಯಂ ಶ್ರೀಸಹಾಯಂ ಸ್ಮರಾಂತರ ॥೨೭॥

ದೋಷದೂರನಾದ, ಬಿಳಿದೇಹವುಳ್ಳ, ಮಾಯಾತೀತನಾದ, ಉತ್ತಮಜ್ಞಾನಸ್ವರೂಪನಾದ, ಧ್ಯಾನಮಾಡುವವರ ಧ್ಯಾನಕ್ಕೆ ವಿಷಯನಾದ, ಸದಾ ಸಜ್ಜನರಿಂದ ಸ್ತುತ್ಯನಾದ, ರಮಾಸಹಾಯನನ್ನು, ಎಲೈ ಮನಸ್ಸೇ, ಸದಾ ಸ್ಮರಿಸು. ॥ ೨೭ ॥

ಹಯವಕ್ತ್ರಂ ಸ್ಫುರದ್ಗಾತ್ರಂ ಸುಪವಿತ್ರಂ ಪತತ್ರಿಗಂ ।
ಸುಚರಿತ್ರಂ ರಣೇ ಜೈತ್ರಂ ಸುರಮಿತ್ರಂ ಸ್ಮರಾಂತರ ॥ ೨೮ ॥

ಹೊಳೆಯುವ ದೇಹವುಳ್ಳ, ಪರಮಪವಿತ್ರನಾದ, ಗರುಡನ ಮೇಲೆ ಕೂತು ಸಂಚರಿಸುವ, ಉತ್ತಮ ಚರಿತ್ರೆಯುಳ್ಳ, ಯುದ್ಧದಲ್ಲಿ ಯಾವಾಗಲೂ ಜಯಶೀಲನಾದ, ದೇವತೆಗಳ ಕಷ್ಟವನ್ನರಿತು ಅದನ್ನು ಪರಿಹಾರಮಾಡುವ ಹಯವದನನನ್ನು, ಎಲೈ ಮನಸ್ಸೇ, (ಸದಾ) ಸ್ಮರಿಸು. ॥ ೨೮ ॥

ಯಂ ದೇವಾಃ ಛಂದಸಾಮೀಶಂ ಕುಂದೇಂದುಪ್ರಭಮೀಡಿರೇ ।
ಸಂದೇಹಭ್ರಮಭೇತ್ತಾರಂ ವಂದೇ ತಂ ಹಯಕಂಧರಂ ॥ ೨೯ ॥

ವೇದಗಳಿಗೆ ಸ್ವಾಮಿಯಾದ, ಕುಂದಪುಷ್ಪದಂತೆಯೂ ಚಂದ್ರನಂತೆಯೂ ಕಾಂತಿಯುಳ್ಳ, ಸಂದೇಹ ಭ್ರಮ ಇವುಗಳನ್ನು ನಾಶಮಾಡುವ ಯಾವನನ್ನು ದೇವತೆಗಳು ಸ್ತೋತ್ರಮಾಡುತ್ತಾರೆಯೋ ಅಂತಹ ಹಯವದನನನ್ನು ವಂದಿಸುತ್ತೇನೆ. ॥ ೨೯ ॥

ತಾರಾಭಿಧೇಯಸ್ತಾರಾಭಹಾರಾಲಂಕಾರಭಾಸ್ಕರಾಃ ।
ಸಾರಾತ್ಸಾರೋ ಹಯಶಿರಾಸ್ತಾರಯೇದ್ದುಸ್ತರಾದರಾತ್ ॥ ೩೦ ॥

"ಓಂ" ಎಂಬ ಹೆಸರಿನಿಂದ ಕರೆಸಿಕೊಳ್ಳುವ, ನಕ್ಷತ್ರಗಳಂತೆ ಹೊಳೆಯುವ, ಹಾರಾಲಂಕಾರದಿಂದ ಪ್ರಕಾಶಿಸುವ ವಕ್ಷಸ್ಥಳವುಳ್ಳ, ಎಲ್ಲಾ ಉತ್ತಮವಾದ ವಸ್ತುಗಳಿಗಿಂತಲೂ ಉತ್ತಮನಾದ ಹಯವದನನು ದಾಟಲಶಕ್ಯವಾದ ಸಂಸಾರಾಖ್ಯದೋಷದಿಂದ ನಮ್ಮನ್ನು ಪಾರುಮಾಡಲಿ. ॥೩೦॥

ಅಲಂಕಾರ = ಆಭರಣ.

ವಾಮಾಂಕಸ್ಥಧರಾಕರಾಂಜಲಿಪುಟಪ್ರೇಮಾತಿಹೃಷ್ಟಾಂತರಂ
ಸೀಮಾತೀತಗುಣಂ ಫಣೀಂದ್ರಫಣಗಶ್ರೀಮಾನ್ಯಪಾದಾಂಬುಜಂ।
ಕಾಮಾದ್ಯಾತ್ತಕಶಂಖಚಕ್ರಸುವರೋದ್ದಾಮಾಭಯೋದ್ಯತ್ಕರಂ
ಸಾಮಾದೀಡ್ಯವರಾಹರೂಪಮಮಲಂ ಹೇ ಮಾನಸೇ ಸಂಸ್ಮರ ॥

ಎಡತೊಡೆಯಮೇಲೆ ಕೂತಿರುವ ಭೂದೇವಿಯ ಅಂಜಲಿಪುಟವನ್ನು ನೋಡುವುದರಿಂದ ಧರಾದೇವಿಯಲ್ಲಿ ತನಗಾದ ಪ್ರೀತಿಯಿಂದ ಅತಿ ಹರ್ಷಿತವಾದ ಮನಸ್ಸುಳ್ಳ, ಎಲ್ಲೆ ಮೀರಿದ ಕಲ್ಯಾಣಗುಣಗಳುಳ್ಳ, ಸರ್ಪಶ್ರೇಷ್ಠನ ಹೆಡೆಯಮೇಲಿಟ್ಟ ಮತ್ತು ಲಕ್ಷ್ಮೀದೇವಿಯಿಂದ ಪೂಜ್ಯವಾದ ಪಾದಕಮಲವುಳ್ಳ, ಕಾಮನಿಂದ ಅಭಿಮನ್ಯಮಾನವಾದ ಚಕ್ರದಿಂದಲೂ, ಅನಿರುದ್ಧನಿಂದ ಅಭಿಮನ್ಯಮಾನವಾದ ಶಂಖದಿಂದಲೂ, ವರಸೂಚಕವಾದ ಮತ್ತು ಅಭಯಸೂಚಕವಾದ ಎತ್ತಿ ಕಾಣುವ ಹಸ್ತಗಳುಳ್ಳ, ಸಾಮವೇದದಿಂದ ಸ್ತುತ್ಯನಾದ, ನಿರ್ದೋಷನಾದ ಈ ವರಾಹರೂಪಿಯನ್ನು, (ಸಂಸ್ಥಾನದ ಪ್ರತಿಮೆಯನ್ನು) ಎಲೈ ಮನಸ್ಸೇ, (ಚೆನ್ನಾಗಿ) ಸ್ಮರಿಸು. ‖ ೨೧ ‖

ಕೋಲಾಯ ಲಸದಾಕಲ್ಪಜಾಲಾಯ ವನಮಾಲಿನೇ |
ನೀಲಾಯ ನಿಜಭಕ್ತೌಘಪಾಲಾಯ ಹರಯೇ ನಮಃ ‖ ೨೨ ‖

ಪ್ರಕಾಶಮಾನವಾದ ಆಭರಣಸಮೂಹವುಳ್ಳ, ವನಮಾಲಾಯುತನಾದ, ನೀಲವರ್ಣನಾದ, ತನ್ನ ಭಕ್ತರ ಸಮೂಹವನ್ನು ಕಾಪಾಡುವ ವರಾಹರೂಪಿಯಾದ ಹರಿಗೆ ನಮಸ್ಕಾರ. ‖ ೨೨ ‖

ಧಾತ್ರೀಂ ಶುಭಗುಣಪಾತ್ರೀಮಾದಾಯಾಶೇಷವಿಬುಧಮೋದಾಯ।
ಶೇಷೇ ತಮಿಮಮದೋಷೇ ಧಾತುಂ ಹಾತುಂ ಚ ಶಂಕಿನಂ ಶಂಕೇ॥

ಸಮಸ್ತ ದೇವತೆಗಳಿಗೆ ಆನಂದವನ್ನುಂಟುಮಾಡುವುದಕ್ಕೋಸ್ಕರ ಶುಭಗುಣಗಳಿಗೆ ಆಶ್ರಯಳಾದ ಭೂದೇವಿಯನ್ನು ತೆಗೆದುಕೊಂಡು ಅದೋಷನಾದ ಶೇಷನಲ್ಲಿಡಲೇ ಅಥವಾ ನಾನೇ ಧರಿಸಲೇ ಎಂದು ಅನುಮಾನಿಸುತ್ತಿದ್ದಾನೇನು ಎಂದು ಈ ವರಾಹನನ್ನು ಶಂಕಿಸುತ್ತೇನೆ. ‖ ೨೩ ‖

ಯೋವಾಯೋರ್ವದನೇ ಸ್ವಹೃದ್ವರಸರಃಸಂಜಾತಪಾಸ್ತ್ರಾಂಬುಜ-
ಶ್ರೀಮಾಲಂಬನಸೌರಭಂ ಸುರಸಭಾಮಧ್ಯೇಪುಪೂರಪ್ರಭುಃ |

ತಂ ವ್ಯಾಸಂ ಹರಿತೋಪಲಾಚಲತುಲಂ ಶ್ರೀಶಂ ಭಜಾಮೋನಿಶಂ
ತಂ ಮಧ್ವಂ ಚ ನಿಜಾಧ್ವಯಾಯಿಷು ಯಥಾಯೋಗ್ಯಂ
ತದಂಶಾರ್ಪಕಂ || ೩೪ ||

ಯಾವ ಪ್ರಭುವು ತನ್ನ ಉತ್ತಮವಾದ ಮನಸ್ಸೆಂಬ ಸರೋವರದಲ್ಲಿ ಹುಟ್ಟಿದ ಶಾಸ್ತ್ರವೆಂಬ ಕಮಲದ ಪ್ರೀತ್ಯಾಶ್ರಯವಾದ ಸುಗಂಧವನ್ನು ದೇವತೆಗಳ ಸಭಾಮಧ್ಯದಲ್ಲಿ ವಾಯುದೇವರ ವದನದಲ್ಲಿ ತುಂಬಿದನೋ ಅಂತಹ ನೀಲಪರ್ವತದ ಸಾಮ್ಯವನ್ನು ಹೋಲುವ ಲಕ್ಷ್ಮೀಪತಿಯಾದ ವ್ಯಾಸದೇವನನ್ನೂ ಮತ್ತು ತನ್ನ ಮಾರ್ಗವನ್ನು ಹಿಡಿಯುವ ಜನರಲ್ಲಿ ಅವರ ಯೋಗ್ಯತಾನುಸಾರ ಆ ಶಾಸ್ತ್ರವೆಂಬ ಕಮಲದ ಸುವಾಸನೆಯ ಭಾಗ ವನ್ನು ಇಡತಕ್ಕ ಆ ಶ್ರೀಮಧ್ವನನ್ನೂ ಸದಾ ಭಜಿಸುತ್ತೇವೆ. || ೩೪ ||

ಕಮಲಪುಷ್ಪದಮೇಲೆ ಬೀಸುವ ತಂಗಾಳಿಯು (ವಾಯುವು) ಹೇಗೆ ತನ್ನ ಮಾರ್ಗದಲ್ಲಿರುವ ಜನರಿಗೆ ಕಮಲದ ವಾಸನೆಯನ್ನು ಬೀರುತ್ತದೆಯೋ ಹಾಗೆಯೇ ಮಧ್ವನಾಮಕ ವಾಯುದೇವರು ವೇದವ್ಯಾಸದೇವರ ಮನಸ್ಸೆಂಬ ಸರೋವರದಲ್ಲಿನ ಶಾಸ್ತ್ರವೆಂಬ ಕಮಲದ ಸೌರಭವನ್ನು ಸ್ವೀಕರಿಸಿ ತಮ್ಮ ಮಾರ್ಗವನ್ನವಲಂಬಿಸಿದ ಸಜ್ಜನರಿಗೆ ಅದನ್ನು ಬೀರುತ್ತಾರೆ. ಶಾಸ್ತ್ರಾರ್ಥ ವನ್ನು ವೇದವ್ಯಾಸರಿಂದ ತಿಳಿದು ಬ್ರಹ್ಮಸೂತ್ರಾದಿಗ್ರಂಥಗಳನ್ನು ಮಾಡಿ ತಮ್ಮ ಭಕ್ತರಿಗೆ ತತ್ವವನ್ನು ಬೋಧಿಸುತ್ತಾರೆಂದು ಅಭಿಪ್ರಾಯ.

ನಮಸ್ತೇ ನರಸಿಂಹಾಯ ಸಮಸ್ತ(ನಮಸ್ತೇ)ಬಲವೈರಿಣೇ |
ಪ್ರಮಾಸ್ತು ಮೇ ಭ್ರಮೋ ಮಾಸ್ತು ಶಮೋಸ್ತು ಮಮ ವೈರಿಣಾಂ||

ಸಮಸ್ತರಾದ ದುಷ್ಟರಿಗೆ ಶತ್ರುವಾದ ಎಲೈ ನರಸಿಂಹನೇ, ನಿನಗೆ ನಮಸ್ಕಾರವಿರಲಿ. ನನಗೆ ಯಥಾರ್ಥಜ್ಞಾನ ಆಗಲಿ–ಭ್ರಮವು ಹೋಗಲಿ–ನನ್ನ ಶತ್ರುಗಳು ನಾಶವಾಗಲಿ. || ೩೫ ||

ನಿಯಂತಾ ಸರ್ವದೇವಾನಾಂ ನಿಹಂತಾಖಿಲರಕ್ಷಸಾಂ |
ಸಮಂತಾ ಕಮಲಾಕಾಂತಃ ಸಮಂತಾತ್ಸುಖದೋಸ್ತು ಮೇ ||೩೬||

ಸರ್ವದೇವತೆಗಳಿಗೆ ನಿಯಾಮಕನಾದ, ಅಖಿಲರಾದ ರಾಕ್ಷಸರನ್ನು (ಸರ್ವ ದಿಕ್ಕುಗಳಲ್ಲೂ) ಸಂಹಾರಮಾಡತಕ್ಕ ಆ ಸರ್ವಜ್ಞನಾದ ರಮಾಕಾಂತನು ನನಗೆ ಪೂರ್ಣವಾಗಿ ಸುಖದಾಯಕನಾಗಲಿ. || ೨೬ ||

ನಿಯುಂಕ್ತೇ ದೇಹಿನೋ ಯೋಽಂತಃಸ್ವಯಂ ಭುಂಕ್ತೇ ಸುಖಾನಿ ಚ
ತದಂತೇ ಮುಕ್ತಿದಸ್ತಂತೇ ಭಜಂತೇ ಚಿಂತಿತಾರ್ಥದಂ || ೨೭ ||

ದೇಹಧಾರಣಮಾಡಿದ ಜೀವರನ್ನು ಯಾವನು ಒಳಗೆ ನಿಂತು ಪ್ರೇರಿಸುತ್ತಾನೋ, ತಾನಾದರೆ ಸುಖವನ್ನೇ ಅನುಭವಿಸುತ್ತಾನೋ ಮತ್ತು ದೇಹಯೋಗವಿಯೋಗಪರಂಪರಾರೂಪವಾದ ಸಂಸಾರದ ಕೊನೆಯಲ್ಲಿ ಜೀವಂಗೆ ಮುಕ್ತಿಯನ್ನು ಕೊಡುತ್ತಾನೋ ಇಷ್ಟಾರ್ಥಪ್ರದನಾದ ಆತನನ್ನು ಸಜ್ಜೀವರುಗಳು ಭಜಿಸುತ್ತಾರೆ. || ೨೭ ||

ಕುಂಡಲಪ್ರೋಲ್ಲಸದ್ಗಂಡಮಂಡಲಃ ಪಾಂಡವಪ್ರಿಯಃ ।
ದಂಡಯೇತ್ಪುಂಡರೀಕಾಕ್ಷಶ್ಚಂಡದಂಡಧರಾನುಗಾನ್ || ೨೮ ||

ಕರ್ಣಕುಂಡಲಗಳಿಂದ ಚೆನ್ನಾಗಿ ಪ್ರಕಾಶಿಸುವ ಕಪೋಲಪ್ರದೇಶವುಳ್ಳ, ಪಾಂಡವಪ್ರಿಯನಾದ ಪುಂಡರೀಕಾಕ್ಷನು ಭಯಂಕರವಾದ ದಂಡವನ್ನು ಧರಿಸಿದಯಮನ ಭಟರನ್ನು ದಂಡಿಸುತ್ತಾನೆ. ತನ್ನ ಭಕ್ತರು ದೇಹ ಬಿಡುವ ಕಾಲದಲ್ಲಿ, ಹರಿಯು ತಮ್ಮನ್ನು ಶಿಕ್ಷಿಸಾನೆಂದು ಭಕ್ತರ ಸಮೀಪಕ್ಕೆ ಬರಲು ಯಮದೂತರು ಭಯಪಡುವರು. ಅಂತ್ಯಕಾಲದಲ್ಲಿ ನಾರಾಯಣ-ಸ್ಮರಣೆಮಾಡಿದ ಅಜಾಮಿಳನ ಕಥೆಯೇ ಇದಕ್ಕೆ ದೃಷ್ಟಾಂತ. || ೨೮ ||

ಅನಃಕ್ಷಯಕರೋ ಲಕ್ಷ್ಮ್ಯಾಃ ಘನಸ್ತನಧೃತಃ ಸತಾಂ ।
ಮನಸ್ಥೋ ಯೋ ಹರೇಃ ಪಾದಃ ಸ ನಃ ಪಾತು ಪುನಃಪುನಃ ||

ಬಂಡಿಯನ್ನು (ಶಕಟಾಸುರನನ್ನು) ನಾಶಮಾಡಿದ, ಲಕ್ಷ್ಮೀದೇವಿಯ ಘನವಾದ ಸ್ತನವನ್ನು ಧರಿಸಿದ (ಸ್ತನದಿಂದ ಧರಿಸಲ್ಪಟ್ಟ) ಮತ್ತು ಸಜ್ಜನರ

ಮನಸ್ಸಿನಲ್ಲಿರುವ ಯಾವ ಹರಿಯ ಪಾದವೋ ಅದು ನಮ್ಮನ್ನು ಪದೇಪದೇ ಕಾಪಾಡಲಿ. || ೩೯ ||

ಅನಸ್ + ಕ್ಷಯ = ಅನಃಕ್ಷಯ = ಬಂಡಿಯ ನಾಶ.

ಯತ್ಪ್ರಾಪ್ತಿಶ್ಚ ಸತಾಂ ಮುಕ್ತಿರಪ್ರಾಕೃತಗುಣಾಂಬುಧಿಃ |
ದರ್ಪಘ್ನೋಽಖಿಲದೈತ್ಯಾನಾಂ ಸ ಪ್ರಾಜ್ಞಃ ಸಕಲೇಶ್ವರಃ || ೪೦ ||

ಯಾವನನ್ನು ಹೊಂದುವುದೇ ಸಜ್ಜನರಿಗೆ ಮುಕ್ತಿಯೋ, ಯಾವನು ಅಪ್ರಾಕೃತಕಲ್ಯಾಣಗುಣಸಮುದ್ರನೋ ಮತ್ತು ಸಮಸ್ತರಾದ ದೈತ್ಯರ ಗರ್ವವನ್ನು ನಾಶಮಾಡತಕ್ಕವನೋ, ಆ ಪ್ರಾಜ್ಞನಾಮಕಪರಮಾತ್ಮನು ಸಕಲರಿಗೂ ಸ್ವಾಮಿಯು. || ೪೦ ||

ವಂದಾರವೋಽಸ್ಯ ಬ್ರಹ್ಮಾದ್ಯಾಃ ಕಿಂ ದಾಸಾ ನ ವಿಚಾರಯ |
ಛಂದಾಂಸಿ ಚ ಗೃಣಂತ್ಯೇನಂ ಮಂದಾಸುರಮತಂ ತ್ಯಜ || ೪೧ ||

ಇವನನ್ನು ವಂದನಮಾಡುವ ಶೀಲವುಳ್ಳ ಬ್ರಹ್ಮಾದಿದೇವತೆಗಳು ಇವನಿಗೆ ದಾಸರಲ್ಲವೇನು? ಇದನ್ನು ವಿಚಾರಮಾಡು. ಅಲ್ಲದೆ ವೇದಗಳು ಇವನನ್ನು ಸ್ತೋತ್ರಮಾಡುತ್ತವೆ. (ಆದುದರಿಂದ) ಮಂದರಾದ ಅಸುರರ ಮತವನ್ನು ಬಿಡು. || ೪೧ ||

ಅನ್ಯೋಽಸಾವಯಮನ್ಯಶ್ಚ ಪೂರ್ಣೋಽಸಾವಯಮಲ್ಪಕಃ |
ಕಿಂ ನೋಚುರಿತ್ಥಂ ಶ್ರುತಯಸ್ತನ್ನೋದುರ್ಮತಮಾಶ್ರಯ || ೪೨ ||

ಇವನು (ಈ ಪರಮಾತ್ಮನು) ಬೇರೆ. ಇವನು (ಈ ಜೀವನು) ಬೇರೆ ಮತ್ತು ಈ ಪರಮಾತ್ಮನು ಪೂರ್ಣನು–ಜೀವನು ಅಲ್ಪನು–ಹೀಗೆಂದು ಶ್ರುತಿಗಳು ಹೇಳಲಿಲ್ಲವೇನು? ಆದ್ದರಿಂದ (ಜೀವೇಶ್ವರರಿಗೆ) ಐಕ್ಯವನ್ನು ಹೇಳುವ ದುರ್ಮತವನ್ನು ಆಶ್ರಯಿಸಬೇಡ.

ಜೀವೇಶ್ವರರಿಗೆ ಸ್ಫುಟವಾಗಿ ಭೇದವನ್ನು ಪ್ರತಿಪಾದಿಸುವ "ದ್ವಾಸುಪರ್ಣಾ" ಇವೇ ಮೊದಲಾದ ಶ್ರುತಿಗಳು ಇರುವುದರಿಂದ ಜೀವೇಶ್ವರರಿಗೆ

ಐಕ್ಯವನ್ನು ಹೇಳುವ ದುಷ್ಟವಾದ ಅದ್ವೈತಮತವನ್ನು ಆಶ್ರಯಿಸಬೇಡ ಎಂದಭಿಪ್ರಾಯ. ಇದರ ವಿಸ್ತಾರವನ್ನು ಯುಕ್ತಿಮಲ್ಲಿಕಾಭೇದಸೌರಭದಲ್ಲಿ ವಾದಿರಾಜರು ನಿಪುಣತರವಾಗಿ ಮಾಡಿರುತ್ತಾರೆ. ‖ ೪೨ ‖

ಕಿಂ ಚ ಪ್ರಾಂಚೋ ವದಂತೀತ್ಥಂ ತ್ವಂಚಾನುಸರ ತನ್ಮತಂ ।
ಅಂಚಾಸ್ಯ ಪಾದಯುಗಲಂ ಮುಂಚಾಸುರಮತಂ ಬುಧ ‖ ೪೩ ‖

ಅಲ್ಲದೆ ಪ್ರಾಚೀನರು ಹೀಗೆಯೇ ಅಂದರೆ ಜೀವೇಶ್ವರರು ಭಿನ್ನರೆಂದೇ ಹೇಳುತ್ತಾರೆ–ನೀನೂ ಅವರ ಮತವನ್ನು ಅನುಸರಿಸು. ಈ ಪರಮಾತ್ಮನ ಪಾದಯುಗಳವನ್ನು ಪೂಜಿಸು–ಎಲೈ ವಿವೇಕಿಯೇ, ಅಸುರರ ಮತವನ್ನು ಬಿಟ್ಟುಬಿಡು.

ವಿಷ್ಣುತತ್ವವಿನಿರ್ಣಯದಲ್ಲಿ ಶ್ರೀಮದಾಚಾರ್ಯರು "ನಚಾಭೇದೇ ಕಶ್ಚಿದಾಗಮಃ ಸಂತಿ ಚ ಭೇದೇ ಸರ್ವಾಗಮಾಃ" ಎಂದು ಪ್ರತಿಜ್ಞೆಯನ್ನು ಮಾಡಿ ಹೃದಯಂಗಮವಾದ ರೀತಿಯಲ್ಲಿ ಜೀವೇಶ್ವರರಿಗೆ ಭೇದವೇನೇ ಸರ್ವಶ್ರುತಿಸ್ಮೃತಿಗಳಿಗೆ ತಾತ್ಪರ್ಯವೆಂದು ಸಯುಕ್ತಿಕವಾಗಿ ನಿರ್ಣಯಿಸಿರುತ್ತಾರೆ. ‖ ೪೩ ‖

ಕರೀಂದ್ರವರದಂ ಪಶ್ಯ ಗಿರೀಂದ್ರಸ್ಯ ಚ ಧಾರಿಣಂ ।
ಸ್ವರಿಂದ್ರಮದಭೇತ್ತಾರಮರೀಂದ್ರಾಜ್ಞಾಕರಂ* ಸ್ಮರ ‖ ೪೪ ‖

ಗಜೇಂದ್ರನಿಗೆ ವರವನ್ನು ಕೊಟ್ಟ, ಗಿರಿಶ್ರೇಷ್ಠವಾದ ಗೋವರ್ಧನ ಪರ್ವತವನ್ನು ಧರಿಸಿದ, ಸ್ವರ್ಗಾಧಿಪತಿಯಾದ ಇಂದ್ರನ ಗರ್ವವನ್ನು ಮುರಿದ, ದೇವತೆಗಳ ಶತ್ರುಶ್ರೇಷ್ಠನಾದ ಬಲಿಚಕ್ರವರ್ತಿಯ ಆಜ್ಞೆಯನ್ನು ಪಾಲಿಸುವ, ಈ ಹರಿಯನ್ನು (ಅವನ ವಿಚಿತ್ರಮಹಿಮೆಯನ್ನು ವಿಚಾರ ಮಾಡಿ) ಸ್ಮರಿಸು. ‖ ೪೪ ‖

***ನೇಮಂ ವಿರಿಂಚೋ ಲಭತೇ ಪ್ರಸಾದಂ ನ ಶ್ರೀರ್ನ ಶರ್ವಃ ಕಿಮುತಾಪರೇ ತೇ ।**
ಯನ್ನೋಽಸುರಾಣಾಮಸಿ ದುರ್ಗಪಾಲೋ ವಿಶ್ವಾಭಿವಂದ್ಯೈರಪಿ ವಂದಿತಾಂಘ್ರಿಃ ‖
(ಅಷ್ಟಮಸ್ಕಂಧದಲ್ಲಿ ಪ್ರಹ್ಲಾದನ ವಚನ.)

ಭಿಯಾ ಧಾವಂತಮೀಶಾನಂ ಧಿಯಾಯೋಽಸಾವಪೀಪಲತ್ ।
ಶ್ರಿಯಾಯೋಽಸೌವೃತೋ ದೇವಃ ಶ್ರಯಾಸ್ಯ ಚರಣಾಂಬುಜಂ ॥

ಭಯದಿಂದ ಓಡತಕ್ಕ ರುದ್ರನನ್ನು ತನ್ನ ಬುದ್ಧಿಯಿಂದ ಯಾವ ಇವನು ಕಾಪಾಡಿದನೋ, ಯಾವ ದೇವನು (ಸಮುದ್ರದಿಂದ ಉತ್ಪನ್ನ ಳಾದ) ಲಕ್ಷ್ಮೀದೇವಿಯಿಂದ ವರಿಸಲ್ಪಟ್ಟನೋ ಅಂತಹ (ಸರ್ವೋತ್ತಮ ನಾದ) ಹರಿಯ ಪಾದಕಮಲವನ್ನು ಆಶ್ರಯಿಸು.

ವೃಕಾಸುರನಿಂದ ಹಿಂಬಾಲಿಸಲ್ಪಟ್ಟ ರುದ್ರನನ್ನು ಕಾಪಾಡಿದವನು ಶ್ರೀಹರಿಯಾದ್ದರಿಂದ ರುದ್ರಾದಿದೇವತೆಗಳು ಹರಿಗಿಂತ ಅತ್ಯಂತ ಅವರರು. ಮತ್ತು ಬ್ರಹ್ಮಾದಿದೇವತೆಗಳಿಗೆ ಉತ್ತಮಳಾದ ರಮಾದೇವಿಯು ತಾನು ಸಮುದ್ರದಿಂದ ಪ್ರಾದುರ್ಭೂತಳಾದಾಗ ಎಲ್ಲ ದೇವತೆಗಳಲ್ಲಿಯೂ ದೋಷ ವನ್ನು ಉದ್ಘಾಟನೆಮಾಡಿ ನಿರ್ದೋಷನಾದ ಪರಮಾತ್ಮನನ್ನು ವರಿಸಿದಳು. ಆದ್ದರಿಂದ ಹರಿಯೇ ಸರ್ವ ಸಜ್ಜನರಿಗೆ ಮುಖ್ಯಾಶ್ರಯನು. ॥ ೪೫ ॥

ಮೋದೀಹಯಾನನೋ ಯಶ್ಚ ಚ್ಛೇದೀದುಃಖಸ್ಯ ಯೋ ಸತಾಂ ।
ಭೇದೀ ಸಕಲತತ್ವಾನಾಂ ವೇದೀ ಕೋಽಸ್ಯ ಸಮೋ ವದ ॥(೧)೪೬॥

[ಮೋದೀ ಹಯಾನನೋ ಯಸ್ಯ ದುಃಖಚ್ಛೇದ್ಯಸ್ಯ ಚಾಸತಾಂ ।
ಭೇದೀ ಸಕಲತತ್ವಾನಾಂ ವೇದೀ ಕೋಽಸ್ಯ ಸಮೋ ವದ ॥] (೨) ೪೬

ಯಾವ ಹಯವದನನು ಆನಂದವುಳ್ಳವನೋ ಮತ್ತು ಸಜ್ಜನರ ದುಃಖಪರಿಹಾರಕನೋ, ಅಸಜ್ಜನರ ನಾಶಕನೋ, ಸಕಲ ತತ್ವವನ್ನೂ ತಿಳಿದವನೋ ಅಂತಹ ಇವನಿಗೆ ಯಾರು ಸಮರು? ಹೇಳು.

(೨) ಯಾರ ವಿಷಯದಲ್ಲಿ ಸಂತುಷ್ಟನಾಗಿ ಅವರ ದುಃಖಪರಿ-ಹಾರಕನೋ ಅಸಜ್ಜನರ ನಾಶಕನೋ ಸಕಲತತ್ವವನ್ನೂ ತಿಳಿದವನೋ ಅಂತಹ ಇವನಿಗೆ ಯಾರು ಸಮರು? ಹೇಳು. ॥ ೪೬ ॥

ಅನಂತಪುರನಾಥ ತೇ ಪದಸುಪದ್ಮಸೇವೀ ಜನೋ
ಭವೇದ್ವಿಜಿತದುರ್ಜನೋ ದುರಿತತರ್ಜನಃ ಸಜ್ಜನಃ ।
ಉಪೈತಿ ಚ ಪರಾಂ ಗತಿಂ ಸತತಮುನ್ನತಿಂ ಸನ್ನತಿಂ
ಭವಘ್ನ ಸ ಪುನರ್ಭವೀ ಪರಿಭವೀ ಕಥಂ ಸ್ಯಾದ್ಭವಾನ್ ॥ ೪೭ ॥

ಎಲೈ ಅನಂತಾಸನ ಸ್ವಾಮಿಯೇ, ನಿನ್ನ ಉತ್ತಮವಾದ ಪಾದ-ಪದ್ಮವನ್ನು ಸೇವಿಸುವ ಸಜ್ಜನರು ದುರ್ಜನರನ್ನು ಜಯಿಸುವವರಾಗುತ್ತಾರೆ. ಮತ್ತು ಪಾಪವನ್ನು ಭಯಪಡಿಸುವವರಾಗುತ್ತಾರೆ (ಅಂದರೆ ಪಾಪದೂರರಾಗುತ್ತಾರೆ). ಅಲ್ಲದೆ ಅಂಥಾ ಸಜ್ಜನರು ಉತ್ತಮವಾದ ಗತಿಯನ್ನು ಹೊಂದುತ್ತಾರೆ ಮತ್ತು ಮುಕ್ತಿಯನ್ನೂ, ಸತತವಾಗಿ ಮೇಲ್ಮೆಯನ್ನೂ, ಉತ್ತಮವಾದ ನಮ್ರಭಾವವನ್ನೂ ಪಡೆಯುತ್ತಾರೆ. ಅಂತಹ ಸಂಸಾರ-ನಾಶಕನಾದ ನೀನು ಪುನಃ (ಯಾವಾಗಲೇ ಆಗಲಿ) ಸಂಸಾರವುಳ್ಳವನೂ ಪರಾಭವವುಳ್ಳವನೂ ಹೇಗೆ ಆದೀಯೆ? ॥ ೪೭ ॥

ವಾದಿರಾಜಕೃತೇ ಶ್ರಾವ್ಯೇ ಕಾವ್ಯೇ ಭವ್ಯೇ ಸುಬುದ್ಧಿಭಿಃ ।
ಸೇವ್ಯೇ ಸರಸಭಾರತ್ಯಾಂ ವಿಲಾಸೋಽಭೂದ್ಧರಿಪ್ರಿಯಃ ॥ ೪೮ ॥

ವಾದಿರಾಜರು ರಚಿಸಿದ, ಕೇಳಲು ಇಂಪಾದ, ಸುಂದರವಾದ, ಉತ್ತಮ ಬುದ್ಧಿಯುಳ್ಳವರಿಂದ ಸೇವಿಸಲ್ಪಡಲು ಯೋಗ್ಯವಾದ, ಸರಸ-ಭಾರತೀಕಾವ್ಯದಲ್ಲಿ ಪ್ರಥಮ ವಿಲಾಸವು ಹರಿಗೆ ಪ್ರಿಯವಾಯಿತು. ॥ ೪೮ ॥

ಸರಸಭಾರತೀವಿಲಾಸಕಾವ್ಯದಲ್ಲಿ ಮೊದಲನೇ ವಿಲಾಸವು
ಪೂರ್ಣವಾಯಿತು.

ದ್ವಿತೀಯೋ ವಿಲಾಸಃ

|| ಶ್ರೀಗುರುಭ್ಯೋ ನಮಃ ಹರಿಃ ಓಂ ||

[ರಮಾದೇವಿ, ಬ್ರಹ್ಮದೇವರು–ವಾಯು–ಹನುಮದ್ಭೀಮ ಮಧ್ವ–ಸರಸ್ವತೀ–ಭಾರತೀ–ಶೇಷ–ಗರುಡ–ರುದ್ರ ಮತ್ತು ಇವರ ಪತ್ನಿಯರು–ವಿಘ್ನರಾಜ–ಗಂಗಾ–ತುಂಗಾ, ಈ ದೇವದೇವಿಯರ ಸ್ತುತಿಸತಿಗಳನ್ನುಮಾಡಿ ಜ್ಞಾನಭಕ್ತಿವೈರಾಗ್ಯಗಳನ್ನು ದಯಪಾಲಿಸಿರೆಂದು ಅವರನ್ನು ಪ್ರಾರ್ಥನೆ ಮಾಡಿದ್ದಾರೆ.]

ಶುಭವಿಭ್ರಮೇ ಭುವಿ ಮನೋರಮೇ
ರಮೇ ವಿದಿತಾಗಮೇ ಜಿತಸಮಸ್ತಚಿತ್ತಭ್ರಮೇ |
ವಿಗತಶ್ರಮೇ ಹರಿಪದಾಬ್ಜಸೇವೋದ್ಯಮೇ
ಶ್ರುತವಿಕ್ರಮೇ ನಿರುಪಮೇ ನಮೋ ನಿರ್ಮಮೇ || ೧ ||

ಶುಭವಾದ ವಿಲಾಸವುಳ್ಳವಳೇ, ವಿಶ್ವದಲ್ಲಿ ಮನೋಹರಳೇ, ಸರ್ವಶಾಸ್ತ್ರಜ್ಞಳೇ, ಮನಸ್ಸಿನ ಸಮಸ್ತವಾದ ಭ್ರಾಂತಿಯನ್ನು ಜಯಿಸಿದವಳೇ, ಶ್ರಮರಹಿತಳೇ, ಹರಿಪಾದಸೇವೆಯಲ್ಲಿ ಸದಾ ನಿರತಳೇ, ಶ್ರುತಿಯಲ್ಲಿ ಪ್ರಖ್ಯಾತವಾದ ಪರಾಕ್ರಮವುಳ್ಳವಳೇ, ಅಸಮಾನಳೇ, ಅಹಂಕಾರರಹಿತಳಾದ ರಮಾದೇವಿಯೇ, ನಿನಗೆ ನಮಸ್ಕಾರ. || ೧ ||

ವಿಷ್ಣೋರ್ವಕ್ಷಃಸ್ಥಿತಾ ಯಾ ಸಕಲಸುರನುತಾ ಪೀತವಸ್ತ್ರಾ ಶುಭಾಂಗೀ
ನಾನಾಲಂಕಾರದೀಪ್ತಾ ನಲಿನಯುಗಧರಾ ನವ್ಯಚಂದ್ರಪ್ರಕಾಶಾ |
ಕ್ಷಿತ್ಯಾಂ ಪತ್ಯಾಸಹೈವಾವತರತಿ ಚ ಸದಾ ಜನ್ಮದುಷ್ಕರ್ಮದೂರಾ
ಯಾಂಬಾ ವಿಶ್ವಸ್ಯ ಸಾ ಶ್ರೀಃ ಸುರತರುಕುಸುಮಾಲಂಕೃತಾ ಪಾತು ಯುಷ್ಮಾನ್ || ೨ ||

ಯಾವಳು ವಿಷ್ಣುವಿನ ವಕ್ಷಸ್ಥಲದಲ್ಲಿ ನೆಲಸಿದ್ದಾಳೆಯೋ, ಸಕಲ ದೇವತೆಗಳಿಂದ ಸ್ತುತ್ಯಳೋ, ಪೀತಾಂಬರವನ್ನು ಧರಿಸಿದ್ದಾಳೆಯೋ, ಶುಭವಾದ ಅಂಗಗಳು ಉಳ್ಳವಳೋ, ಅನೇಕ ಅಲಂಕಾರದಿಂದ ಪ್ರಕಾಶಿಸು

ತ್ತಿರುವಳೋ, ಯಾವಾಕೆಯು ಎರಡು ಕಮಲಗಳನ್ನು ಹಿಡಿವವಳೋ, ಉದಯಿಸುತ್ತಿರುವ ಪೂರ್ಣಚಂದ್ರನಂತೆ ಪ್ರಕಾಶಪೂರ್ಣಳೋ, ಭೂಮಿಯಲ್ಲಿ ಯಾವಾಗಲೂ ತನ್ನ ಪತಿಯಸಹಿತವಾಗಿ ಅವತಾರಮಾಡುವಳೋ, ಜನ್ಮ, ದುಃಖ, ಮೃತ್ಯು ಇವುಗಳಿಂದ ಸದಾ ದೂರಳೋ, ಸುರತರುವಿನ ಪುಷ್ಪಗಳಿಂದ ಅಲಂಕೃತಳಾದ ಲೋಕಮಾತೆಯಾದ ಆ ಶ್ರೀದೇವಿಯು ನಿಮ್ಮನ್ನು ಕಾಪಾಡಲಿ. ‖ ೨ ‖

ನಿರವದ್ಯೇ ನಿತ್ಯಭದ್ರೇ ಲಕ್ಷ್ಮಿ ಲಕ್ಷಣಲಕ್ಷಿತೇ ।
ಹರಿಪತ್ನಿ ಜಗತ್ಕರ್ತ್ರಿ ವರದಾತ್ರಿ ನಮೋಽಸ್ತು ತೇ ‖ ೩ ‖

ದೋಷರಹಿತಳೇ, ನಿತ್ಯಮಂಗಳರೂಪಳೇ, ಸರ್ವಶುಭಲಕ್ಷಣಗಳಿಂದ ತೋರುವವಳೇ, ಹರಿಪತ್ನಿಯೇ, ಜಗತ್ಕರ್ತಳೇ, ವರವನ್ನು ಕೊಡತಕ್ಕವಳೇ, ಹೇ ಲಕ್ಷ್ಮಿ, ನಿನಗೆ ನಮಸ್ಕಾರವಿರಲಿ. ‖ ೩ ‖

ವೇದಾಭಿಮಾನಿನೀಂ ಮಾರಜನನೀಂ ಭವವೈರಿಣೀಂ ।
ವ್ಯಾಧಿಪ್ರಶಮನೀಂ ಕೃಷ್ಣರಮಣೀಂ ನೌಮಿ ರುಗ್ಮಿಣೀಂ ‖ ೪ ‖

ವೇದಾಭಿಮಾನಿಯಾದ, ಮನ್ಮಥಮಾತೆಯಾದ, ಸಂಸಾರವೈರಿಣಿಯಾದ, ರೋಗವನ್ನು ಶಾಂತಿಮಾಡುವ, ಕೃಷ್ಣಪತ್ನಿಯಾದ ರುಕ್ಮಿಣೀದೇವಿಯನ್ನು ಸ್ತುತಿಸುತ್ತೇನೆ. ‖ ೪ ‖

ಬ್ರಹ್ಮಾದಿವಂದಿತಪದಾಮಿಂದಿರಾಂ ಪರರೂಪಿಣೀಂ ।
ಹೃದ್ಯಚಿದ್ರೂಪಸರ್ವಾಂಗೀಂ ಮಧ್ವಸಿದ್ಧಾಂತವರ್ಧಿನೀಂ ‖ ೫ ‖

ಮಾತರಂ ಸರ್ವಜಗತಾಂ ಪ್ರೀತ್ಯುತ್ಫುಲ್ಲಮುಖಾಂಬುಜಾಂ ।
ಅನರ್ಘ್ಯಹಾರಕೇಯೂರನೂಪುರಾದ್ಯೈರಲಂಕೃತಾಂ ‖ ೬ ‖

ಪೀತಾಂಬರಾಂ ರತ್ನಕಾಂಚೀಂ ಮಣಿಕುಂಡಲಮಂಡಿತಾಂ ।
ಕ್ವಣತ್ಕಿಂಕಿಣಿಝುಂಕಾರಾಂ ಕಂಕಣೈರಂಗದೈರಪಿ ‖ ೭ ‖

ಲಸತಾ ಹಸ್ತಷಟ್ಕೇನ ದ್ವಿಷತಾಂ ಹೃದ್ಭಯಂಕರೀಂ ।
ಪದ್ಮದ್ವಿತಯತಾಂಬೂಲನೀಲೋತ್ಪಲವರಾಭಯೈಃ ॥ ೮ ॥

ವಿರಾಜಿತಕರಾಂ ರಾಮಾಂ ಹರೇರಂಕಗತಾಂ ಸದಾ ।
ವಾದೇ ವಿಜಯದಾಂ ಶ್ರೀದಾಂ ಹ್ರೀದೇವೀಮಭಿವಾದಯೇ ॥

ವಾದದಲ್ಲಿ ಜಯವನ್ನು ಸಂಪಾದಿಸಿಕೊಡುವ, ಐಶ್ವರ್ಯದಾಯಿನಿ ಯಾದ "ಹ್ರೀ" ಎಂದು ಹೆಸರುಳ್ಳ ರಮಾದೇವಿಯನ್ನು ಅಭಿವಂದಿಸುತ್ತೇನೆ. ಎಂತಹ ಗುಣವಿಶಿಷ್ಟಳಾದ "ಹ್ರೀ"ದೇವಿಗೆ ವಂದನೆಯು ಅಂದರೆ ಹೇಳು ತ್ತಾರೆ:– ಬ್ರಹ್ಮಾದಿದೇವತೆಗಳಿಂದ ನಮಸ್ಕರಿಸಲ್ಪಟ್ಟ ಪಾದವುಳ್ಳವಳು. ಭಕ್ತರಿಗೆ ಐಶ್ವರ್ಯದಾಯಕಳು. (ಪರಮಾತ್ಮನನ್ನು ಹೊರತು) ಅತ್ಯುತ್ತಮ ಸ್ವರೂಪಳು. ಮನೋಹರವಾದ ಜ್ಞಾನಾತ್ಮಕವಾದ ಸರ್ವ ಅವಯವ ವುಳ್ಳವಳು. ಮಧ್ವಾಚಾರ್ಯರ ಸಿದ್ಧಾಂತವನ್ನು ವೃದ್ಧಿಗೊಳಿಸುವವಳು. ಸರ್ವಜಗತ್ತಿಗೆ ತಾಯಿಯು. (ಭಕ್ತರಲ್ಲಿ ತನಗಿರುವ) ಪ್ರೀತಿಯಿಂದ ಅರಳಿದ ಮುಖಕಮಲವುಳ್ಳವಳು, ಬೆಲೆ ಕಟ್ಟಲು ಅಳವಲ್ಲದ ಹಾರಕೇಯೂರ ನೂಪುರಾದಿಗಳಿಂದ ಅಲಂಕೃತಳು, ಪೀತಾಂಬರವನ್ನು ಧರಿಸಿದವಳು, ರತ್ನ ಖಚಿತವಾದ ಡಾಬು ಕುಂಡಲ ಇವುಗಳಿಂದ ಅಲಂಕೃತಳು, ಕಣಕಣ ಶಬ್ದ ಮಾಡುವ ಗೆಜ್ಜೆಗಳ ಝುಂಕಾರವುಳ್ಳ ಕೈ ಕಡಗ, ನಾಗಮುರಿಗೆ ಇವುಗಳಿಂದ ಮಂಡಿತಳಾದವಳು, ಪ್ರಕಾಶಮಾನವಾದ ಆರು ಹಸ್ತಗಳಿಂದ ಶತ್ರುಗಳ ಹೃದಯಕ್ಕೆ ಭಯವನ್ನುಂಟುಮಾಡುವವಳು, ಎರಡು ಪದ್ಮಗಳು-ತಾಂಬೂಲ ಕುಮುದ ಪುಷ್ಪ, ವರ ಮತ್ತು ಅಭಯ ಮುದ್ರೆಗಳಿಂದ ವಿರಾಜಿತವಾದ ಕರಗಳುಳ್ಳವಳು, ಸದಾ ಹರಿಯ ತೊಡೆಯಲ್ಲಿ ವಿರಾಜಿಸುವವಳು, ಇಂತಹ ಪರಮಸುಂದರಳಾದ ರಮಾದೇವಿಯನ್ನು ಅಭಿವಂದಿಸುತ್ತೇನೆ. ॥ ೫-೯ ॥

ಉದ್ಧತಾಸುರದುರ್ಧ್ವಾಂತವಿಧ್ವಂಸನಪಟೀಯಸಿ ।
ಸಿದ್ಧಾರಾಧ್ಯಪದೇ ದುರ್ಗೇ ಹೃದ್ರೋಗಂ ಮಮ ನಾಶಯ ॥೧೦॥

ಗರ್ವಿಷ್ಠರಾದ ಅಸುರರೆಂಬ ಕೆಟ್ಟ ಕತ್ತಲೆಯನ್ನು ನಾಶಮಾಡುವುದರಲ್ಲಿ ಪಟುವಾದ, ಮುಕ್ತರಿಂದ ಪೂಜಿಸಲ್ಪಟ್ಟ ಪಾದವುಳ್ಳ ದುರ್ಗಾದೇವಿಯೇ,

ನನ್ನ ಮನಸ್ಸಿನ ರೋಗವನ್ನು ಅಂದರೆ ಕಾಮ ಕ್ರೋಧಾದಿ ದೋಷಗಳನ್ನು ನಾಶಮಾಡು. ॥ ೧೦ ॥

ಸ್ವರ್ಗಾಪವರ್ಗದೇ ವಿಶ್ವಸರ್ಗೇ ಭೃಗ್ವಾದಿವಂದಿತೇ ।
ಹೃದ್ಯೋಽಸ್ತು ಮೇ ಹಯಗ್ರೀವೋ ದುರ್ಗೇ ಭವದನುಗ್ರಹಾತ್ ॥

ಸ್ವರ್ಗ ಮೋಕ್ಷಗಳನ್ನು ಕೊಡುವವಳೇ, ವಿಶ್ವವನ್ನು ಸೃಷ್ಟಿಸುವವಳೇ, ಭೃಗುಋಷಿಗಳೇ ಮೊದಲಾದ ಜ್ಞಾನಿಗಳಿಂದ ವಂದಿತಳಾದವಳೇ, ದುರ್ಗಾದೇವಿಯೇ, ನಿನ್ನ ಅನುಗ್ರಹದಿಂದ ಹಯಗ್ರೀವನು ನನ್ನ ಮನಸ್ಸಿನಲ್ಲಿ ನೆಲಸಿರಲಿ. ॥ ೧೧ ॥

ಅರ್ದಯಾರ್ದಯ ನಃ ಶತ್ರೂನ್ ಭದ್ರೇ ದುರ್ಗೇಽಪವರ್ಗದೇ ।
ತ್ವದ್ದಯಾ ಕ್ವ ಮಮಾಂಬೈಷಾ ದುರ್ದಶಾ ಕ್ವಾರಿಮರ್ದಿನಿ ॥೧೨॥

ಎಲೈ ಮಂಗಳರೂಪಿಣಿಯಾದ, ಮೋಕ್ಷದಾಯಕಳಾದ ದುರ್ಗಾದೇವಿಯೇ, ನಮ್ಮ ಶತ್ರುಗಳನ್ನು ನಾಶಮಾಡು, ನಾಶಮಾಡು. ಎಲೈ ಶತ್ರುನಾಶಕಳೇ, ನಿನ್ನ ದಯೆಯು ಎಲ್ಲಿ? ನನ್ನ ಈ ದುರ್ದಶೆಯು ಎಲ್ಲಿ? ಅಂದರೆ ನೀನು ದಯೆಮಾಡಿದರೆ ಸಂಸಾರರೂಪವಾದ ನನ್ನ ಈ ದುರ್ದಶೆಯು ಹೋಗುವುದು ನಿಶ್ಚಯ. ನೀನು ದಯೆಮಾಡದೆ ಇರುವುದರಿಂದಲೇ ಅದು ಇದುವರೆಗೂ ಹೋಗಿಲ್ಲ. ಆದುದರಿಂದ ನೀನು ನನ್ನಲ್ಲಿ ದಯೆಮಾಡಿ ಅದನ್ನು ಹೋಗಿಸು. ॥ ೧೨ ॥

ಚಕ್ರಶಂಖಾಂಕಿತಭುಜಾ ದೇವಾದೇವ್ಯಶ್ಚ ಸರ್ವದಾ ।
ಊರ್ಧ್ವಪುಂಡ್ರಧರಾ ಧ್ಯೇಯಾ ದ್ವಾದಶಾಂಗೇಷು ನಾಮಭಿಃ ।

ಪದ್ಮಾಕ್ಷತುಲಸೀಮಾಲಾಃ ಪದ್ಮಾಕ್ಷಹರಿಪೂಜಕಾಃ ।
ಪದ್ಮಾಪತೇಸ್ತು ಕಿಂಕರಾಃ ಪದ್ಮನಾಭಪುರೇ ಯಥಾ ॥ ೧೪ ॥

ವೈಕುಂಠದಲ್ಲಿ ಹೇಗೋ ಹಾಗೆ ಚಕ್ರಶಂಖಗಳಿಂದ ಲಾಂಛಿತವಾದ ಭುಜಗಳುಳ್ಳ, ಊರ್ಧ್ವಪುಂಡ್ರವನ್ನು ಧಾರಣೆಮಾಡಿದ ದೇಹದ ಹನ್ನೆರಡು

ಸ್ಥಾನಗಳಲ್ಲಿ ತೋರುವ ನಾಮಗಳಿಂದ ಅಂಕಿತರಾದ, ಪದ್ಮಾಕ್ಷಮಾಲಾ, ತುಲಸೀಮಾಲಾ ಇವುಗಳನ್ನುಳ್ಳ ಪುಂಡರೀಕಾಕ್ಷನಾದ ಹರಿಯನ್ನು ಪೂಜಿಸುವ, ಲಕ್ಷ್ಮೀಪತಿಯನ್ನು ಸ್ತೋತ್ರಮಾಡುವ ದೇವದೇವಿಯರು ನಮ್ಮಿಂದ ಸದಾ ಧ್ಯಾನಾರ್ಹರು. ಅಂದರೆ ದೇವದೇವಿಯರನ್ನು ವೈಷ್ಣವ-ದೀಕ್ಷೆಯುಳ್ಳವರೆಂದು ತಿಳಿದು ಅಧಿಕಾರಿಯು ಧ್ಯಾನಮಾಡಬೇಕು ಎಂದು ಅಭಿಪ್ರಾಯ. || ೧೭-೧೮ ||

ಜಗತ್ಸ್ರಷ್ಟ್ರೇ ಹರೇರ್ದ್ರಷ್ಟ್ರೇ ಸದಾ ಪೋಷ್ಟ್ರೇ ದಿವೌಕಸಾಂ |
ಮಖೈರ್ಯಷ್ಟ್ರೇ ಶ್ರುತೇರ್ಘೋಷ್ಟ್ರೇ ಮಮಾದೇಷ್ಟ್ರೇ ನಮೋ ನಮಃ || ೧೫ ||

ಜಗತ್ತನ್ನು ಸೃಷ್ಟಿಮಾಡುವ, ಸದಾ ಹರಿಯನ್ನು ಅಪರೋಕ್ಷದಿಂದ ನೋಡುವ, ದೇವತೆಗಳ ಪೋಷಕನಾದ, ಯಜ್ಞಗಳಿಂದ ಹರಿಯನ್ನು ಪೂಜಿಸುವ, ವೇದವನ್ನು ಘೋಷಿಸುವ, ನನಗೆ ಮಾರ್ಗದರ್ಶಕನಾದ ಬ್ರಹ್ಮದೇವನೇ, ನಿನಗೆ ನಮಸ್ಕಾರ. || ೧೫ ||

ಹರಿಪುತ್ರ ಪದ್ಮದಳನೇತ್ರ ವಿತ್ರಸ-
ತ್ಸುರಮಿತ್ರ ದೈತ್ಯ ಕುಲಜೈತ್ರ ನಿತ್ಯದಾ |
ಸುಪವಿತ್ರಗಾತ್ರ ಸುಚರಿತ್ರ ಚಿತ್ರಧಾ
ಕೃತಸತ್ರ ತೇಽತ್ರಭವತೇ ನಮೋ ನಮಃ || ೧೭ ||

ಹರಿಯ ಪುತ್ರನಾದ, ಪದ್ಮದಳದಂತೆ ನೇತ್ರವುಳ್ಳ, (ವಿತ್ರಸತ್)-ಬಹುಭಯಪಡತಕ್ಕ ದೇವತೆಗಳಿಗೆ ಮಿತ್ರನಾದ, ಸದಾ ದೈತ್ಯಸಮೂಹವನ್ನು ಜಯಿಸಿದ, ಪರಮಪವಿತ್ರವಾದ ದೇಹವುಳ್ಳ, ಉತ್ತಮ ಚರಿತ್ರೆಯುಳ್ಳ, ಅನೇಕಪ್ರಕಾರವಾಗಿ ಯಾಗಮಾಡಿದ ಎಲ್ಲ ಪೂಜ್ಯನಾದ ಬ್ರಹ್ಮನೇ, ನಿನಗೆ ನಮಸ್ಕಾರ. || ೧೭ ||

ಧ್ಯಾತ್ರೇ ಗಾತ್ರೇ ಹರೇಃ ಸ್ತೋತ್ರೇ ಶಾಸ್ತ್ರೇ ಸುಪಥವರ್ತಿನಾಂ |
ಪಾತ್ರೇ ಸತಾಂ ವಿಮುಕ್ತೇಶ್ಚ ದಾತ್ರೇ ಸೂತ್ರಾಯ ತೇ ನಮಃ ||

ಪರಮಾತ್ಮನನ್ನು ಧ್ಯಾನಮಾಡುವ, ವೇದಗಾನಮಾಡುವ, ಹರಿಯನ್ನು ಸ್ತೋತ್ರಮಾಡುವ, ದುಷ್ಟಮಾರ್ಗದಲ್ಲಿ ನಡೆಯುವವರನ್ನು ಶಿಕ್ಷಿಸುವ, ಸಜ್ಜನರನ್ನು ಪಾಲಿಸುವ, ಸಜ್ಜನರಿಗೆ ಮುಕ್ತಿದಾಯಕನಾದ, ಸೂತ್ರನಾಮಕನಾದ ವಾಯುವೇ ನಿನಗೆ ನಮಸ್ಕಾರ. ॥ ೧೭ ॥

ದಿತಿಜಪ್ರಭಂಜನ ಸದಾ ನಿರಂಜನ
ಪ್ರಥಿತಪ್ರಭಂಜನ ನಿಜಾನುರಂಜನ ।
ಅವ ಕಂಜನಾಭ ಶರಣಾಗತಂ ಜನಂ
ಸುರಪುಂಜಸೌಖ್ಯಕರ ವಜ್ರಪಂಜರ ॥ ೧೮ ॥

ದೈತ್ಯರನ್ನು ನಾಶಮಾಡುವವನೇ, ಸದಾ ದೋಷರಹಿತನೇ, ಪ್ರಸಿದ್ಧನಾದ ವಾಯುವೇ, ಭಕ್ತರಿಗೆ ಆನಂದಕರನೇ, ದೇವಸಮೂಹಕ್ಕೆ ಸುಖವನ್ನು ಉಂಟುಮಾಡುವವನೇ, ವಜ್ರಕಾಯನೇ, ಪದ್ಮನಾಭನನ್ನು ಶರಣು ಹೊಂದಿದ ಜನರನ್ನು ಕಾಪಾಡು. ॥ ೧೮ ॥

ನಮೋ ಹನುಮತೇ ರಾಮಧೀಮತೇ ಜಿತಕಾಮತೇ ।
ಮಮೇಷ್ಟಂ ದದತೇ ಸೀತಾಕೃತೇ ಶತ್ರುಜಿತೇ ಸತೇ ॥ ೧೯ ॥

ರಾಮದೇವರ ಮನೋಭಾವವನ್ನು ತಿಳಿದ, ಕಾಮನನ್ನು ಜಯಿಸಿದ, ನನಗೆ ಇಷ್ಟಾರ್ಥದಾಯಕನಾದ, ಸೀತಾನಿಮಿತ್ತಕವಾಗಿ ಶತ್ರುಗಳನ್ನು ಗೆದ್ದ, ಸಜ್ಜನಶ್ರೇಷ್ಠನಾದ (ನಿರ್ದುಷ್ಟನಾದ), ಹನುಮಂತನಾಮಕನಾದ ನಿನಗೆ ನಮಸ್ಕಾರ. ॥ ೧೯ ॥

ಹನುಮಂತಮೇಮಿ ಕೃತಸಿಂಧುಬಂಧನಂ
ಸ್ಮರತಾಂ ಧನಂ ವರಸಮೀರನಂದನಂ ।
ಅರವಿಂದನಾಭಪದಕಂಜವಂದನಂ
ಧೃತಚಂದನಂ ರಚಿತರಾಕ್ಷಸಾಕ್ರಂದನಂ ॥ ೨೦ ॥

ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದ, ತನ್ನನ್ನು ಸ್ಮರಣೆಮಾಡುವವರಿಗೆ ಐಶ್ವರ್ಯರೂಪನಾದ, ಉತ್ತಮರಾದ ವಾಯುದೇವರ ಮಗನಾದ, ಪದ್ಮನಾಭನ ಪದಕಮಲವನ್ನು ವಂದಿಸುವ, ಚಂದನ (ಗಂಧಮಾದನ) ಪರ್ವತವನ್ನು ಧಾರಣೆಮಾಡಿದ, ರಾಕ್ಷಸರನ್ನು ಅಳುವಂತೆ ಮಾಡಿದ ಹನುಮಂತನನ್ನು ಶರಣುಹೊಂದುತ್ತೇನೆ. || ೨೦ ||

ಅಭೀತಾಯ ವಿನೀತಾಯ ಹಿತಾಯ ಸ್ಮರತಾಂ ಸತಾಂ ।
ಸ್ತುತಾಯಾಸ್ತು ನಮಃ ಕುಂತೀಸುತಾಯಾನ್ಯಾಜಿತಾಯ ತೇ ||

ಭಯರಹಿತನಾದ, (ಲಕ್ಷ್ಮೀನಾರಾಯಣರಲ್ಲಿ) ನಮ್ರನಾದ, ಸ್ಮರಣೆ ಮಾಡತಕ್ಕ ಸಜ್ಜನರಿಗೆ ಹಿತನಾದ, (ವೇದದಲ್ಲಿ) ಸ್ತುತನಾದ, ಅನ್ಯರಿಂದ ಜಯಿಸಲ್ಪಡದ, ಕುಂತೀಪುತ್ರನಾದ (ಭೀಮಸೇನನೇ) ನಿನಗೆ ನಮಸ್ಕಾರವಿರಲಿ. || ೨೧ ||

ಸಪತ್ನಜನಭೀಕರಂ ಶುಭಗುಣೌಘರತ್ನಾಕರಂ
ಮಹತ್ತಮಗದಾಧರಂ ಹರಿಪದಾನಮತ್ಕಂಧರಂ ।
ಬಲೋರ್ಜಿತವೃಕೋದರಂ ರಚಿತರಾಜಸೂಯಾಧ್ವರಂ
ಸದಾ ಸ್ಮರತ ಸಾದರಂ ಹೃತಖಲಾಖ್ಯಪೃಥ್ವೀಭರಂ || ೨೨ ||

ಶತ್ರುಜನಭಯಂಕರನಾದ, ಮಂಗಳಕರವಾದ ಗುಣಗಳೆಂಬ ರತ್ನಸಮೂಹಕ್ಕೆ ಗಣಿಯಾದ ಅಥವಾ ಶುಭಗುಣಸಾಗರನಾದ, ಬಹು ದೊಡ್ಡದಾದ ಗದೆಯನ್ನು ಧರಿಸಿದ, ಹರಿಪಾದಕ್ಕೆ ಚೆನ್ನಾಗಿ ಬಾಗಿದ ಕೊರಳುಳ್ಳ ಬಲಪೂರ್ಣನಾದ, ರಾಜಸೂಯಯಾಗವನ್ನು ಮಾಡಿದ, ಭೂಭಾರರಾದ ದುಷ್ಟರನ್ನು ಸಂಹರಿಸಿದ, ಬಲಿಷ್ಠವಾದ ವೃಕನಾಮಕ ಅಗ್ನಿಯನ್ನು ಉದರದಲ್ಲಿ ಧರಿಸಿದ ಭೀಮಸೇನನನ್ನು ಆದರಪೂರ್ವಕವಾಗಿ ಸದಾ ಸ್ಮರಿಸಿರಿ. ||೨೨||

ಮಧ್ವಸಾಧ್ವ ಜನಾರಾಧ್ಯ ಶುದ್ಧಸಿದ್ಧಾಂತವರ್ಧನ ।
ಅದ್ವೈತಿಗಜಭೇರುಂಡ ಮರ್ದಯೋದ್ಧತಪದ್ಧತೀಃ || ೨೩ ||

ಸಾಧ್ಯಜನರಿಂದ ಪೂಜ್ಯನೂ, ಶುದ್ಧವಾದ ಸಿದ್ಧಾಂತವನ್ನು ವೃದ್ಧಿಗೊಳಿಸುವವನೂ, ಅದ್ವೈತಿಗಳೆಂಬ ಆನೆಗಳಿಗೆ ಭೇರುಂಡಪ್ರಾಯನೂ ಆದ ಎಲೈ ಮಧ್ವಗುರುವೇ, ನೀನು ಗರ್ವಿಷ್ಠರಾದ ಜನರನ್ನು ಶಿಕ್ಷಿಸು. ‖ ೨೩ ‖

ವಿದ್ವದಾದ್ಯಃ ಸ ಮಧ್ವೋದ್ಯ ಪ್ರೋದ್ಯತ್ಪ್ರದ್ಯೋತನದ್ಯುತಿಃ ।
ಹೃದ್ಯೋsನವದ್ಯೋ ಬುದ್ಧಿಂ ಮೇ ದದ್ಯಾಚ್ಛುದ್ಧಪ್ರಸಿದ್ಧಿಮಾನ್ ‖

ಪಂಡಿತಾಗ್ರಣಿಯಾದ, ಉದಯಿಸುತ್ತಿರುವ ಸೂರ್ಯನಿಗೆ ಸದೃಶವಾದ ಕಾಂತಿಯುಳ್ಳ, ಮನೋಹರನಾದ, ನಿರ್ದೋಷನಾದ, ವಿಮಲಕೀರ್ತಿಯುಳ್ಳ ಮಧ್ವನು ಈಗ ನನಗೆ ಜ್ಞಾನವನ್ನು ಕೊಡಲಿ. ‖ ೨೪ ‖

ನಮಾಮಿ ಯತಿರೂಪಿಣಂ ಕುಜನತಾಮನಸ್ತಾಪಿನಂ
ಸುತತ್ತ್ವಚಯದೀಪಿನಂ ತ್ರಿಸಮಯೇಷು ಚಾಪಾಪಿನಂ ।
ಕುಧೀದಿತಿಜಕೋಪಿನಂ ಶ್ರುತಿಪುರಸ್ಕೃತಾಲಾಪಿನಂ
ಸುದುರ್ಮತವಿಲೋಪಿನಂ ಸುಖಮುನಿಂ ಶುಭಾವಾಪಿನಂ ‖

ಯತಿರೂಪಿಯಾದ, ದುಷ್ಟಜನರ ಮನಸ್ಸಿಗೆ ತಾಪವನ್ನು ಕೊಡುವ, ಉತ್ತಮ ತತ್ತ್ವಗಳ ಸಮೂಹವನ್ನು ಪ್ರಕಾಶಮಾಡುವ, ಮೂರು ಕಾಲದಲ್ಲಿಯೂ ಪಾಪಲೇಶವಿಲ್ಲದ, ದುಷ್ಟಬುದ್ಧಿಯುಳ್ಳ ದೈತ್ಯರಲ್ಲಿ ಕೋಪವುಳ್ಳ, ವೇದವನ್ನು ಮುಂದೆಮಾಡಿಕೊಂಡು ಮಾತನಾಡುವ, ಅತಿ ದುಷ್ಟವಾದ ಮತಗಳನ್ನು ನಿರಾಕರಿಸುವ, ಕಲ್ಯಾಣವಂತನಾದ ಆನಂದತೀರ್ಥಮುನಿಯನ್ನು ನಮಸ್ಕರಿಸುತ್ತೇನೆ. ‖ ೨೫ ‖

ಹೃತಕುಸುಮಯಚೋರಂ ಹಾರಿಕಾಘಾಂಧಕಾರಂ
ಶಮಿತಸಕಲತಾಪಂ ಸರ್ವಲೋಕೈಕದೀಪಂ ।
ಸುಕವಿನುತಚರಿತ್ರಂ ಶುದ್ಧವಿದ್ಯಾಬ್ಧಿಮಿತ್ರಂ
ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಂ ‖ ೨೬ ‖

ದುಷ್ಟಮತಗಳೆಂಬ ಕಳ್ಳರನ್ನು ದೂರಮಾಡುವ, ಪಾಪವೆಂಬ ಕತ್ತಲನ್ನು ಹೋಗಲಾಡಿಸುವ, ಸಕಲ ತಾಪವನ್ನೂ ಶಮನಮಾಡುವ, ಸರ್ವಲೋಕಕ್ಕೂ ದೀಪಪ್ರಾಯನಾದ, ಉತ್ತಮ ಕವಿಗಳಿಂದ ಸ್ತುತಿಸಲ್ಪಟ್ಟ ಚರಿತ್ರೆಯುಳ್ಳ, ಶುದ್ಧವಾದ ವಿದ್ಯೆಯೆಂಬ ಸಮುದ್ರಕ್ಕೆ ಸ್ನೇಹಿತನಾದ, ಹೊಸಹೊಸದಾದ ಸದ್ಗುಣಗಳಿಂದ ಪೂರ್ಣನಾದ ಮಧ್ವನೆಂಬ ಚಂದ್ರನನ್ನು ಸ್ತುತಿಸುತ್ತೇನೆ. || ೨೬ ||

ತಪಸ್ವಿತಾಯಾಂ ಹರಿಭಕ್ತತಾಯಾಂ
ವಿಪಶ್ಚಿತಾಂ ಸಂಸದಿ ಪೂಜ್ಯತಾಯಾಂ ।
ಕೃಪಾಲುತಾಯಾಂ ಸುವಿರಕ್ತತಾಯಾಂ
ವಿಪದ್ರಿಪೋರ್ಮಧ್ವಮುನೇಃ ಸಮಃ ಕಃ || ೨೭ ||

ತಪಸ್ಸು ಮಾಡುವುದರಲ್ಲಿಯೂ, ಹರಿಭಕ್ತಿಯಲ್ಲಿಯೂ, ವಿದ್ವತ್ಸಭೆಯಲ್ಲಿ ಪೂಜಾರ್ಹತೆಯಲ್ಲಿಯೂ, ಕೃಪಾಲುತೆಯಲ್ಲಿಯೂ, ಉತ್ತಮವಾದ ವೈರಾಗ್ಯದಲ್ಲಿಯೂ, ವಿಪತ್ತಿಗೆ ಶತ್ರುವಾದ ಮಧ್ವಮುನಿಗೆ ಸಮನು ಯಾವನು? || ೨೭ ||

ನಮಾಮಿ ವಾಣೀಂ ಬ್ರಹ್ಮಾಣೀಂ ಕಲ್ಯಾಣೀಂ ಶುದ್ಧಧರ್ಮಿಣೀಂ ।
ಅಘೌಘಹಾರಿಣೀಂ ನಿತ್ಯತರುಣೀಂ ಮುಕ್ತಿಕಾರಿಣೀಂ || ೨೮ ||

ಬ್ರಹ್ಮಪತ್ನಿಯಾದ, ಮಂಗಳಸ್ವರೂಪಿಣಿಯಾದ, ಶುದ್ಧಧರ್ಮವಲ್ಲಿ ನಿರತಳಾದ, ಭಕ್ತರ ಪಾಪಸಮೂಹವನ್ನು ಹೋಗಿಸುವ, ನಿತ್ಯ ಯೌವನವುಳ್ಳ, ಮುಕ್ತಿಗೆ ಕಾರಣಳಾದ ವಾಣಿಯನ್ನು ನಮಸ್ಕರಿಸುವೆನು. ||೨೮||

ಹರೌ ಭಕ್ತಿಮತೀಂ ಭಾಗ್ಯವತೀಂ ಶತಧೃತೇಃ ಸತೀಂ ।
ಸರಸ್ವತೀಂ ಪುಣ್ಯವತೀಂ ಸ್ಮರಾಮೀಂದುಸಮದ್ಯುತಿಂ || ೨೯ ||

ಹರಿಯಲ್ಲಿ ಭಕ್ತಿಯುಳ್ಳ, ಭಾಗ್ಯವಂತಳಾದ, ಬ್ರಹ್ಮದೇವರ ಪತ್ನಿಯಾದ, ಪುಣ್ಯವಂತಳಾದ, ಚಂದ್ರನಂತೆ ಕಾಂತಿಯುಳ್ಳ ಸರಸ್ವತಿಯನ್ನು ಸ್ಮರಿಸುತ್ತೇನೆ. || ೨೯ ||

ಭಾರತೀಂ ಸುಮತಿಂ ಕೃಷ್ಣ ಧೀರತಿಂ ಸ್ಮರತಾಂ ಗತಿಂ |
ವಿರತಿಂ ವಿಷಯೇ ಸ್ವಾನುದ್ಧರತೀಂ ಮಾರುತೀಂ ಸ್ತುಮಃ || ೩೦ ||

ಒಳ್ಳೇ ಬುದ್ಧಿಯುಳ್ಳ, ಕೃಷ್ಣನ ಧ್ಯಾನದಲ್ಲಿ ರತಳಾದ (ಕೃಷ್ಣನ ಜ್ಞಾನದಲ್ಲಿ ಆಸಕ್ತಳಾದ), ತನ್ನನ್ನು ಸ್ಮರಣೆಮಾಡುವವರಿಗೆ ಆಶ್ರಯದಾಯಕಳಾದ, ವಿಷಯವೈರಾಗ್ಯವುಳ್ಳ, ತನ್ನ ಭಕ್ತರನ್ನು ಉದ್ಧಾರಮಾಡುವ-ವಾಯುಪತ್ನಿಯಾದ ಭಾರತಿಯನ್ನು ಸ್ತೋತ್ರಮಾಡುತ್ತೇವೆ. || ೩೦ ||

ಶಾರದಾ ಭವವಾರಾಶೇಃ ಪಾರದಾ ವರದಾ ಸತಾಂ |
ನೀರದಾಭಹರೇರ್ಜ್ಞಾನಸಾರದಾ ಪಾತು ಸರ್ವದಾ || ೩೧ ||

ಸಂಸಾರಸಮುದ್ರವನ್ನು ದಾಟಿಸುವ, ಸಜ್ಜನರಿಗೆ ಇಷ್ಟಾರ್ಥವನ್ನು ಕೊಡುವ, ಮೇಘಶ್ಯಾಮನಾದ ಹರಿಯ ಉತ್ತಮವಾದ ಜ್ಞಾನವನ್ನು ಭಕ್ತರಿಗೆ ಕೊಡುವ ಶಾರದೆಯು (ಭಾರತಿಯು) ಸರ್ವ ಸಜ್ಜನರನ್ನು ಸರ್ವದಾ ಕಾಪಾಡಲಿ. || ೩೧ ||

ಧೃತಲೋಕ ಧ್ವಸ್ತಶೋಕ ಫಣಾಜಾಲಪ್ರಭೋಜ್ಜ್ವಲ |
ವಿಶಂಕ ಹರಿಪರ್ಯಂಕ ಸುಶಾಂತಾನಂತ ತೇ ನಮಃ || ೩೨ ||

ಲೋಕವನ್ನು ಧರಿಸಿದ, ಶೋಕರಹಿತನಾದ, ಹೆಡೆಗಳ ಸಮೂಹದ ಪ್ರಭೆಯಿಂದ ಪ್ರಕಾಶಿಸುವ, ಸಂಶಯರಹಿತನಾದ, ಹರಿಗೆ ಹಾಸಿಗೆಯಾದ, ಪರಮಶಾಂತನಾದ ಎಲೈ ಶೇಷದೇವನೇ, ನಿನಗೆ ನಮಸ್ಕಾರ. || ೩೨ ||

ನಾಗನಾಗೇಂದ್ರಶಯನಂ ನಾಗಾನಾಮಧಿಪ ಪ್ರಭೋ |
ಆಗಮಸ್ತುತಚಾರಿತ್ರಂ ಯೋಗೀಂದ್ರಪ್ರಿಯ ದರ್ಶಯ || ೩೩ ||

ಸರ್ಪರಾಜನಾದ, ಯೋಗಿಶ್ರೇಷ್ಠರಿಗೆ ಪ್ರಿಯನಾದ, ಎಲೈ ಶೇಷ-ಪ್ರಭೋ, ಆಗಮದಿಂದ ಸ್ತೋತ್ರಮಾಡಲ್ಪಟ್ಟ ಚರಿತ್ರೆಯುಳ್ಳ ಶೇಷಶಾಯಿಯನ್ನು ತೋರಿಸು. || ೩೩ ||

ವೀಶಾಯ ರಿಪುನಾಶಾಯ ತ್ರಾಸಾಯಾಸಹರಾಯ ಚ ।
ಶ್ರೀಶದಾಸಾಯ ಲಸಿತಾಕಾಶವಾಸಾಯ ತೇ ನಮಃ ॥ ೩೪ ॥

ಪಕ್ಷಿರಾಜನಾದ, ಶತ್ರುನಾಶಕನಾದ, ಭಯವನ್ನೂ ಆಯಾಸವನ್ನೂ ಹೋಗಲಾಡಿಸುವ, ರಮೇಶನ ದಾಸನಾದ, ಪ್ರಕಾಶಿಸುವ ಆಕಾಶದಲ್ಲಿ ಸಂಚರಿಸುವ (ಗರುಡದೇವನೇ), ನಿನಗೆ ನಮಸ್ಕಾರ.

ಲಸಿತಾಕಾಶವಾಸಾಯ, ಈ ವಿಶೇಷಣದ ಅಭಿಪ್ರಾಯ ಹೀಗೆ– ಜ್ಯೋತಿಸ್ಸ್ವರೂಪನಾದ ಪರಮಾತ್ಮನನ್ನು ತನ್ನ ಮೇಲೆ ಕೂಡಿಸಿಕೊಂಡು ಗರುಡನು ಸಂಚಾರಮಾಡುವಾಗ ಸುತ್ತಲೂ ಆಕಾಶವು ಕಾಂತಿಯುಕ್ತ ವಾಗಿರುತ್ತದೆ. ॥ ೩೪ ॥

ಗಂಗಾಧರಂ ಜಟಾಜೂಟವಿನ್ಯಸ್ತೇಂದುಕಲೋಜ್ವಲಂ ।
ಪೀತಶ್ವೇತಾರುಣಹರಿಚ್ಛ್ಯಾಮಾನನಸರೋರುಹಂ ॥ ೩೫ ॥

ತ್ರಿನೇತ್ರಪಂಕ್ತ್ಯಾ ಲಸಿತಪಂಚವಕ್ತ್ರಂ ಶುಚಿಸ್ಮಿತಂ ।
ಊರ್ಧ್ವಪುಂಡ್ರಧರಂ ಚಕ್ರಶಂಖಾಂಕಿತಭುಜದ್ವಯಂ ॥ ೩೬ ॥

ಪದ್ಮಾಕ್ಷತುಲಸೀಮಾಲಾವಿದ್ಯೋತಿತಶಿರೋಧರಂ ।
ನೀಲಗ್ರೀವಂ ಲಸದ್ರತ್ನಭಾಸ್ವರಾಹೀಶಭೂಷಣಂ ॥ ೩೭ ॥

ಮೃಗಶೂಲವರಾಭೀತಿಹಸ್ತಂ ಸ್ಫಟಿಕಸನ್ನಿಭಂ ।
ಗೌರೀಮನೋಹರತನುಂ ಗೌರನಂದೀಶವಾಹನಂ ॥ ೩೮ ॥

ಸದಾಧ್ಯಾತೃಬುಧಾಭೀಷ್ಟಪ್ರದಾನೈಕಧುರಂಧರಂ ।
ಹರೇಃ ಪ್ರಿಯಂ ಧ್ಯಾನರತಂ ಸ್ಮರಾಮ್ಯಘಹರಂ ಹರಂ ॥ ೩೯ ॥

ಗಂಗೆಯನ್ನು ಧರಿಸಿದ, ಜಟಾಸಮೂಹದಲ್ಲಿಡಲ್ಪಟ್ಟ ಚಂದ್ರಕಲೆಯಿಂದ ಪ್ರಕಾಶಿಸುವ, ಹಳದಿ, ಬಿಳುಪು, ಕೆಂಪು, ಎಲೆ ಹಸರು, ಕಪ್ಪು ಈ ಬಣ್ಣ ಗಳಿಂದ ಮನೋಹರವಾದ ಮುಖಕಮಲಗಳುಳ್ಳ, ಮೂರು ನೇತ್ರಗಳ

ಸಾಲಿನಿಂದ ಶೋಭಿಸುವ ಪಂಚಮುಖನಾದ, ಮನೋಹರವಾದ ಮುಗುಳು ನಗೆಯುಳ್ಳ, ಊರ್ಧ್ವಪುಂಡ್ರವನ್ನು ಧಾರಣೆಮಾಡಿದ, ಚಕ್ರ ಶಂಖ ಇವುಗಳಿಂದ ಅಂಕಿತವಾದ ಭುಜದ್ವಯವುಳ್ಳ, ಪದ್ಮಾಕ್ಷ-ತುಲಸೀಮಾಲಾ ಇವುಗಳಿಂದ ಪ್ರಕಾಶಿತವಾದ ಕಂಠವುಳ್ಳ, ನೀಲಗ್ರೀವನಾದ, ಪ್ರಕಾಶವನಾನವಾದ ರತ್ನದಿಂದ ಹೊಳೆಯುವ ಸರ್ಪಶ್ರೇಷ್ಠನೇ ಭೂಷಣವಾಗಿವುಳ್ಳ, ವರ ಅಭಯ ಸೂಚಕವಾದ ಜಿಂಕೆ ಮತ್ತು ಶೂಲವನ್ನು ಹಿಡಿದ ನಾಲ್ಕು ಹಸ್ತಗಳುಳ್ಳ, ಸ್ಫಟಿಕಮಣಿಯ ಸದೃಶವಾದ ಕಾಂತಿಯುಳ್ಳ, ಗೌರೀದೇವಿಯ ಮನಸ್ಸನ್ನು ಆಕರ್ಷಿಸುವ ಶರೀರವುಳ್ಳ, ಬೆಳ್ಳಗಿರುವ ನಂದೀಶನೇ ವಾಹನವಾಗುಳ್ಳ, ಧ್ಯಾನಮಾಡುವ ಜ್ಞಾನಿಗಳ ಅಭೀಷ್ಟವನ್ನು ಕೊಡುವುದರಲ್ಲಿ ಸದಾ ಮುಂದಾಳಾದ, ಹರಿಗೆ ಪ್ರಿಯನೂ, ಅವನ ಧ್ಯಾನದಲ್ಲಿ ರತನೂ ಆದ, ಪಾಪನಾಶಕನಾದ, ಹರನನ್ನು ಸ್ಮರಿಸುತ್ತೇನೆ. || ೩೫-೩೯ ||

ಗಿರೀಂದ್ರವಾಸ ಗೌರೀಶ ಪುರನಾಶ ಸತಾಂ ವಶ ।
ಫಣೀಂದ್ರಭೂಷ ನಿರ್ದೋಷ ಮಮ ತೋಷಕರೋ ಭವ ||೪೦||

ಪರ್ವತಶ್ರೇಷ್ಠವಾದ ಕೈಲಾಸದಲ್ಲಿ ವಾಸಮಾಡುವವನೇ, ಗೌರೀನಾಥನೇ, ತ್ರಿಪುರವನ್ನು ನಾಶಮಾಡಿದವನೇ, ಸಜ್ಜನರಿಗೆ ವಶನಾದವನೇ, ಸರ್ಪಶ್ರೇಷ್ಠವೇ ಆಭರಣವಾಗಿ ಉಳ್ಳವನೇ, ದೋಷದೂರನೇ, ನನಗೆ ಸಂತೋಷಕರನಾಗು. || ೪೦ ||

ಶೂರ ತ್ರಿಶೂಲಧರ ಮಾರಮದಾಪಹಾರ
ವೀರಾಸನಸ್ಥ ವಿಧಿಪುತ್ರ ವಿಶಾಲನೇತ್ರ ।
ಧೀರ್ಮೇಽಸ್ತು ದೀನಶರಣೇ ದಿನನಾಥದೀಪ್ತ
ಕ್ರೂರಾಸುರೋದರವಿದಾರಣನಾರಸಿಂಹೇ || ೪೧ ||

ಶೂರನೇ, ತ್ರಿಶೂಲವನ್ನು ಧರಿಸಿದವನೇ, ಮನ್ಮಥನ ಮದವನ್ನು ಹೋಗಲಾಡಿಸಿದವನೇ, ವೀರಾಸನದಲ್ಲಿ ಕುಳಿತಿರುವವನೇ, ಬ್ರಹ್ಮಪುತ್ರನೇ,

ವಿಶಾಲನೇತ್ರವುಳ್ಳವನೇ, ದೀನರಕ್ಷಕನಾದವನೇ, ಸೂರ್ಯನ ಪ್ರಕಾಶ ದಂತೆ ಪ್ರಕಾಶವುಳ್ಳ ಕ್ರೂರನಾದ ಹಿರಣ್ಯಕಶಿಪು ನಾಮಕ ಅಸುರನ ಹೊಟ್ಟೆ ಯನ್ನು ಬಗೆದ ನರಸಿಂಹನಲ್ಲಿ ನನ್ನ ಬುದ್ಧಿಯು ಇರುವಂತೆ ಅನುಗ್ರಹಿಸು. (ರುದ್ರದೇವರ ಉಪಾಸ್ಯಮೂರ್ತಿ ಶ್ರೀನರಸಿಂಹ) ॥ ೪೧ ॥

ಕರಸ್ಥಬೀಜಪೂರಾಕ್ತ ಶುಂಡಾದಂಡಸಿಚಂಡಿಲ ।
ವಿಘ್ನಾಧಿರಾಜ ಹಸ್ತೀಂದ್ರಮಸ್ತಕಾಯಾಸ್ತು ತೇ ನಮಃ ॥೪೨॥

ಹಸ್ತದಲ್ಲಿರುವ ಗಜನಿಂಬೆಯ ಹಣ್ಣನ್ನು ಮುಟ್ಟಿರುವ ನೀಳವಾದ ಸೊಂಡಿಲುಳ್ಳವನೇ, ಲಂಬೋದರನೇ, ವಿಘ್ನಾಧಿಪತಿಯೇ, ಶ್ರೇಷ್ಠವಾದ ಆನೆಯ ತಲೆಯುಳ್ಳವನೇ, ನಿನಗೆ ನಮಸ್ಕಾರವಿರಲಿ. ॥ ೪೨ ॥

ಹೇರಂಬ ಕುಂಭಲಸಿತಾಮಲಕುಂಕುಮಾಂಕ
ಮಾರಾರಿಪುತ್ರ ಕರಿವಕ್ತ್ರ ಪವಿತ್ರಗಾತ್ರ ।
ಕಾರುಣ್ಯರೂಪ ಸುಕಲಾಪ ಮಹಾಪ್ರತಾಪ
ಪ್ರಾರಬ್ಧಕಾರ್ಯ ಮುರುಧೈರ್ಯ ಭವೇದವಿಘ್ನಂ ॥೪೩॥

ಕುಂಭದಲ್ಲಿ ಪ್ರಕಾಶಿಸುವ ನಿರ್ಮಲವಾದ ಕುಂಕುಮದ ಗುರುತುಳ್ಳ, ಕಾಮಶತ್ರುವಾದರುದ್ರನ ಮಗನಾದ, ಆನೆಯ ಮುಖವುಳ್ಳ, ಪವಿತ್ರವಾದ ದೇಹವುಳ್ಳ, ಕರುಣಾರೂಪನಾದ, ಉತ್ತಮವಾದ ಆಭರಣವುಳ್ಳ, ಮಹಾ ಪ್ರತಾಪವುಳ್ಳ, ಎಲೈ ಉತ್ತಮಧೈರ್ಯವುಳ್ಳ ಹೇರಂಬನೇ, (ನಿನ್ನ ಪ್ರಸಾದದಿಂದ) ಪ್ರಾರಂಭಿಸಿದ ಕಾರ್ಯವು ನಿರ್ವಿಘ್ನವಾಗಿ ಸಮಾಪ್ತಿ ಯಾಗಲಿ. ॥ ೪೩ ॥

ರಮಾಯೈ ಹರಿಭಾಮಾಯೈ ಕ್ಷಮಾಯೈ ಚ ನಮೋ ನಮಃ ।
ಸರಸ್ವತ್ಯೈ ಚ ಸತ್ಯೈ ಚ ರತ್ಯೈ ನಿತ್ಯಂ ನಮೋ ನಮಃ ॥ ೪೪ ॥

ಈಗ ದೇವತಾಸ್ತ್ರೀಯರನ್ನು ನಮಿಸುತ್ತಾರೆ :–

ಹರಿಪತ್ನಿಯಾದ ರಮಾದೇವಿಗೂ ಮತ್ತು ಭೂದೇವಿಗೂ ಉತ್ಸಾಹದಿಂದ ಕೂಡಿದ ನಮಸ್ಕಾರವು. ಹಾಗೆಯೇ ಸರಸ್ವತೀದೇವಿಗೂ, ಸತೀ-ದೇವಿಗೂ ಮತ್ತು ರತೀದೇವಿಗೂ ಸದಾ ಆದರಪೂರ್ವಕವಾದ ನಮಸ್ಕಾರವು.

ಅಘಭಂಗೇ ಜಗತ್ತುಂಗೇ ಸುತರಂಗೇ ಹರೇಃ ಪದೇ ।
ಕೃತಸಂಗೇ ನಭೋಗಂಗೇ ಸದಪಾಂಗೇ ಶ್ರಮಂ ಹರ ॥ ೪೫ ॥

ಪಾಪನಾಶಿನಿಯಾದ, ಜಗತ್ತಿನಲ್ಲಿ ಶ್ರೇಷ್ಠಳಾದ, ಉತ್ತಮವಾದ ಅಲೆಗಳುಳ್ಳ, ಹರಿಪಾದವಲ್ಲಿ ಭಕ್ತಿಯುಳ್ಳ ಮತ್ತು ಹರಿಪಾದಸಂಬಂಧವುಳ್ಳ, ಅಲ್ಲದೆ ವಿಷ್ಣುಪದವಲ್ಲಿ ಹರಿಯುವ, ಉತ್ತಮ ಕಡೆಗಣ್ಣನೋಟವುಳ್ಳ ಆಕಾಶಗಂಗೆಯೇ, ಭಕ್ತರ ಶ್ರಮವನ್ನು ಹೋಗಿಸು.

"ಹರೇಃಪದೇ ಕೃತಸಂಗಾ" (೧) ಪರಮಾತ್ಮನ ಪಾದದಲ್ಲಿ ಭಕ್ತಿಯುಳ್ಳವಳು. (೨) ಹರಿ ಪಾದದಿಂದ ಉತ್ಪನ್ನಳಾದ್ದರಿಂದ ಆದರ ಸಂಬಂಧವುಳ್ಳವಳು. (೩) ಆಕಾಶದಲ್ಲಿ ಹರಿಯುವಳು ಆದ್ದರಿಂದ ಆಕಾಶಸಂಬಂಧವುಳ್ಳವಳು– ಹೀಗೆ ಮೂರರ್ಥ. ॥ ೪೫ ॥

ನಾಗಾರಿವಾಹನಾಂಘ್ರ್ಯಬ್ಜಯೋಗಾತ್ರೈಲೋಕ್ಯಪಾವನಿ ।
ಭಾಗೀರಥಿ ನಮಸ್ತುಭ್ಯಂ ರೋಗಂ ಮೇ ಹರ ದೇಹಗಂ ॥ ೪೬ ॥

ಸರ್ಪಗಳಿಗೆಶತ್ರುವಾದಗರುಡನನ್ನು ವಾಹನವಾಗುಳ್ಳಹರಿಯ ಪಾದ-ಕಮಲದ ಸಂಬಂಧನಿಮಿತ್ತದಿಂದ ಮೂರು ಲೋಕವನ್ನು ಪವಿತ್ರವನ್ನಾಗಿ ಮಾಡುವ ಭಾಗೀರಥಿಯೇ, ನಿನಗೆ ನಮಸ್ಕಾರ. ನನ್ನ ದೇಹದ ರೋಗವನ್ನು ಹೋಗಿಸು. ॥ ೪೬ ॥

ರಮಾರಮಣಪಾದಾಬ್ಜದ್ಯುಮದ್ರೇಣುಭಿರಂಕಿತೇ ।
ನಮೋ ಧವಳಗಂಗೇ ತೇ ಶ್ರಮಂ ಮೇ ಹರ ನಿರ್ಮಲೇ ॥ ೪೭ ॥

ರಮಾಕಾಂತನ ಪಾದಕಮಲದ ಕಾಂತಿಯುಕ್ತವಾದ ಧೂಳಿನಿಂದ ಗುರುತಿಸಲ್ಪಟ್ಟ ಧವಳಗಂಗೆಯೇ, ನಿನಗೆ ನಮಸ್ಕಾರ. ಪರಿಶುದ್ಧಳೇ, ನನ್ನ ಶ್ರಮವನ್ನು ಹೋಗಿಸು. ॥ ೪೭ ॥

ತುಂಗೇ ತುರಂಗವದನೋತ್ತುಂಗದಂಷ್ಟ್ರಾಸಮುದ್ಭವೇ।
ತಂ ಗೇಯಂ ಕವಿಭಿರ್ಮೇಂತರಂಗೇ ಸಾಂಗಂ ಸ್ಥಿರೀಕುರು ||೪೮||

ವರಾಹರೂಪಿಯಾದ ಹಯವದನನ ಎತ್ತರವಾದ ದಂಷ್ಟ್ರದಿಂದ ಉತ್ಪನ್ನಳಾದ ತುಂಗೆಯೇ, ಜ್ಞಾನಿಗಳಿಂದ ಸ್ತುತ್ಯನಾದ ಆ ಹಯವದನ ನನ್ನ ನನ್ನ ಮನಸ್ಸಿನಲ್ಲಿ ಪರಿವಾರಸಮೇತವಾಗಿ ಸ್ಥಿರವಾಗಿರುವಂತೆ ಮಾಡು. || ೪೮ ||

ಸುರಾಣಾಮುತ್ಕದಾರಾಣಾಂ ಸದಾರಾಣಾಂ ಪದಾಂಬುಜಂ ।
ಉರೂಣಾಂ ಸ್ವಸ್ತರೂಣಾಂ ಮೇ ಗುರೂಣಾಂ ಚ ನತೋಽಸ್ಮ್ಯಹಂ ||

ಪರಮ ಉದಾರರೂ, ಉತ್ತಮರೂ ಆದ, ಕಲ್ಪವೃಕ್ಷಪ್ರಾಯರಾದ, ನನ್ನ ಗುರುಗಳಾದ, ತಮ್ಮ ತಮ್ಮ ಪತ್ನಿಯರಿಂದ ಕೂಡಿದ ದೇವತೆಗಳ ಪಾದಕಮಲಕ್ಕೆ ನಾನು ನಮಸ್ಕರಿಸುವವನಾಗುತ್ತೇನೆ. || ೪೯ ||

ಭಕ್ತಿರ್ಹರೌ ಪ್ರಸಕ್ತಿಶ್ಚ ಸತ್ಸ್ವಸ್ತು ಸ್ಫೂರ್ತಿರೇವ ಚ ।
ವಿರಕ್ತಿಶ್ಚ ವಿಮುಕ್ತಿಶ್ಚ ಮೇಽಸ್ತು ಯುಷ್ಮದನುಗ್ರಹಾತ್ || ೫೦ ||

ಹರಿಯಲ್ಲಿ ಭಕ್ತಿಯೂ, ಸಜ್ಜನರಲ್ಲಿ ಉತ್ತಮವಾದ ಸಂಗವೂ, ಜ್ಞಾನಸ್ಫೂರ್ತಿಯೂ, ವೈರಾಗ್ಯವೂ, ಉತ್ತಮವಾದ ಮುಕ್ತಿಯೂ ನಿಮ್ಮ ಅನುಗ್ರಹದಿಂದ ನನಗೆ ಆಗಲಿ. || ೫೦ ||

ವಾದಿರಾಜಕೃತೇ ಶ್ರಾವ್ಯೇ ಕಾವ್ಯೇ ಭವ್ಯೇ ಸುಬುದ್ಧಿಭಿಃ ।
ಸೇವ್ಯೇ ಸರಸಭಾರತ್ಯಾಂ ವಿಲಾಸೋಽಭೂತ್ಸುರಪ್ರಿಯಃ || ೫೦ ||

ವಾದಿರಾಜರು ರಚಿಸಿದ, ಕೇಳಲು ಇಂಪಾದ, ಸುಂದರವಾದ, ಉತ್ತಮಬುದ್ಧಿಯುಳ್ಳವರಿಂದ ಸೇವಿಸಲ್ಪಡಲು ಯೋಗ್ಯವಾದ ಸರಸಭಾರತೀ ಕಾವ್ಯದಲ್ಲಿ ದ್ವಿತೀಯ ವಿಲಾಸವು ದೇವತೆಗಳಿಗೆ ಪ್ರಿಯವಾಯಿತು.

ಸರಸಭಾರತೀವಿಲಾಸಕಾವ್ಯದಲ್ಲಿ ಎರಡನೆಯ ವಿಲಾಸವು
ಪೂರ್ಣವಾಯಿತು.

ತೃತೀಯೋ ವಿಲಾಸಃ

|| ಶ್ರೀಗುರುಭ್ಯೋ ನಮಃ ಹರಿಃ ಓಂ ||

[ಶ್ರೀದೇವಿ (೧); ಬ್ರಹ್ಮ, ವಾಯು (೨); ಸರಸ್ವತೀ, ಭಾರತೀ (೩)- ಇವರು ಪರಮುಕ್ತತ್ರಯಕ್ಕೆ ಸೇರಿದವರು. ಇವರು ಯಾವಾಗಲೂ ಪರನಾದ ಶ್ರೀ ನಾರಾಯಣನಲ್ಲಿ ಮನಶ್ಚಾಂಚಲ್ಯವಿಲ್ಲದೇ ಅವನ ಇಚ್ಛಾನುಸಾರ ವರ್ತಿಸುತ್ತಾರೆ. ಈ ಮೂರನೆಯ ವಿಲಾಸದಲ್ಲಿ ರಮಾದೇವಿಯು ಮೂಲರೂಪದಲ್ಲಿಯೂ, ಅವತಾರ ರೂಪಗಳಲ್ಲಿಯೂ ಶುದ್ಧಮನಸ್ಕಳೆಂಬುವನ್ನು ಸಯುಕ್ತಿಕವಾಗಿ ವಾದಿರಾಜರು ವರ್ಣಿಸಿರುತ್ತಾರೆ.]

ಶ್ರೀಬ್ರಹ್ಮವಾಣೀಪ್ರಾಣೇಶ ಭಾರತ್ಯಾಖ್ಯಾಃ ಪರೇ ಹರೌ ।
ಪಂಚೈವಾಶ್ಚಂಚಲಾ ನೈವ ಕಥಂಚನ ಕದಾಚನ ॥ ೧ ॥

ಲಕ್ಷ್ಮೀದೇವಿಯು, ಬ್ರಹ್ಮದೇವರು, ಸರಸ್ವತಿಯು, ಮುಖ್ಯಪ್ರಾಣನು, ಭಾರತೀದೇವಿಯು ಈ ಐವರೂ ಸರ್ವೋತ್ತಮನಾದ ಹರಿಯ ವಿಷಯದಲ್ಲಿ ಯಾವರೀತಿಯಲ್ಲಾಗಲೀ ಯಾವಾಗಲೇ ಆಗಲಿ ಚಂಚಲರಲ್ಲ. ಇದರ ಅಭಿಪ್ರಾಯ:- ಪರಮಾತ್ಮನು ಸ್ವತಂತ್ರನೂ, ಸಕಲಗುಣಪರಿಪೂರ್ಣನೂ, ನಿರ್ದೋಷನೂ ಎಂಬ ಜ್ಞಾನದಲ್ಲಿ ದೃಢವಾದ ನಿಶ್ಚಯವು ಯಾವಾಗಲೂ ಇದ್ದು ಮನಸ್ಸಿನಲ್ಲಾಗಲೀ, ವಾಕ್ಕಿನಲ್ಲಾಗಲೀ, ಕಾಯದಲ್ಲಿಯೇ ಆಗಲೀ, ಯಾವರೀತಿಯಲ್ಲಾಗಲೀ, ಯಾವಾಗಲಾಗಲೀ, ಪರಮಾತ್ಮನಿಗೆ ಈ ಐವರೂ ವಿರುದ್ಧವಾಗಿ ನಡೆದುಕೊಳ್ಳುವವರಲ್ಲ. ॥ ೧ ॥

ಏಕೀಭಾವಾದ್ಬ್ರಹ್ಮವಾಯ್ವೋಸ್ತತ್ಪತ್ನ್ಯೋಸ್ತದ್ವದೇವ ಹಿ ।
ಏಕೀಭಾವೇ ಸತೀವಾಸ್ತು ತಿಸ್ರೋಭೂವನ್ ಹಿ ದೇವತಾಃ ॥ ೨ ॥

ಬ್ರಹ್ಮವಾಯುಗಳು ಒಬ್ಬರಾದ್ದರಿಂದ ಅಂದರೆ ಸಮರಾದ್ದರಿಂದ ಹಾಗೆಯೇ ಅವರ ಪತ್ನಿಯರೂ ಸಮರಾದ್ದರಿಂದ ಈ ಸಮತ್ವವನ್ನು ನೆನಪಿನಲ್ಲಿಟ್ಟು ರಮಾ-ಬ್ರಹ್ಮಾ-ವಾಯು-ಸರಸ್ವತೀ-ಭಾರತೀ ಈ ಐವರನ್ನು

ರಮಾ-ಬ್ರಹ್ಮಾ-ಸರಸ್ವತೀ ಎಂದು ವ್ಯವಹಾರಮಾಡಬಹುದು. ಅಂದರೆ ರಮಾ, ಬ್ರಹ್ಮಾ, ಸರಸ್ವತೀ ಎಂದು ಅರ್ಥ. || ೨ ||

ಯಚ್ಛುದ್ಧಾ ಪರಪರ್ಯಾಯಂ ಪದಂ ಶುಕ್ಲಾಭಿಧಂ ಬುಧಾಃ ।
ಅಹುಸ್ತೇನ ಪರೇ ತತ್ವೇ ಶುಕ್ಲಮೇತತ್ತ್ರಯಂ ಕಿಲ || ೩ ||

"ಶುದ್ಧ"ವೆಂಬ ಮತ್ತು "ಶುಕ್ಲ"ವೆಂಬ ಪದಗಳು ಏಕಾರ್ಥವುಳ್ಳವಾದ್ದರಿಂದ ಈ ಮೂವರನ್ನು ಒಟ್ಟುಗೂಡಿಸಿ ಪರಶುಕ್ಲತ್ರಯವೆಂದು ಜ್ಞಾನಿಗಳು ಹೇಳುತ್ತಾರೆ. "ಪರಶುಕ್ಲತ್ರಯಂ" ಎಂದರೆ ಪರಮಾತ್ಮನ ವಿಷಯದಲ್ಲಿ ಈ ಮೂವರು ದೇವತೆಗಳು ಹಿಂದೆ ನಿರೂಪಿಸಿದಂತೆ ಶುಕ್ಲರು ಅಂದರೆ ಶುದ್ಧರು. || ೩ ||

ಅನಾದ್ಯನಂತಕಾಲೇಽಪಿ ಯಾ ಜನ್ಮಮರಣೋಜ್ಝಿತಾ ।
ನಿತ್ಯಮುಕ್ತಾ ಚ ಯಾ ತಸ್ಮಾತ್ ತ್ಯಕ್ತಚಿತ್ತಭ್ರಮೈವ ಸಾ || ೪ ||

ರಮಾದೇವಿಯು ಅನಾದ್ಯನಂತಕಾಲದಿಂದಲೂ ಜನ್ಮಮರಣರಹಿತಳು ಮತ್ತು ನಿತ್ಯಮುಕ್ತಳು ಆಗಿದ್ದಾಳೆ. ಆದ್ದರಿಂದ ಈ ದೇವಿಯು ಮನಸ್ಸಿನ ಭ್ರಮೆಯಿಂದ ದೂರಳಾದವಳು. || ೪ ||

ಯಾ ಬ್ರಹ್ಮಣೋಽದ್ಯ ಜನನೀ ಯಾ ಪೂರ್ವಬ್ರಹ್ಮಕಲ್ಪಗಾ ।
ಲಯೇಽಪ್ಯಲೀನಾ ಯಾ ದೇವೀ ಬ್ರಹ್ಮಣಃ ಸಾ ದಿನೇ ದಿನೇ || ೫ ||

ಕಥಂಜನ್ಮವತೀ ಕೂರ್ಮ ಇವ ನಾರ್ಥೇರವಾತರತ್ ।
ಇತಿ ಸರ್ವೈರಶಕ್ಯ ವಕ್ತವ್ಯಮತಃ ಸ್ಮರಮುಣೋ ಯಥಾ || ೬ ||

ನಿತ್ಯಮುಕ್ತಸ್ತಥಾ ನಿತ್ಯಮುಕ್ತಾ ಶ್ರೀಲಕ್ಷ್ಮೀ ಸಧರ್ಮಿಣೀ ।
ಯದಿ ಮುಕ್ತೇಽಪಿ ದೋಷೋಽಸ್ತಿ ಮುಕ್ತ್ಯರ್ಥಂ ಪ್ರಯತೇತ ಕಃ ||

ಯಾವಾಕೆಯು ಈಗಿನ ಬ್ರಹ್ಮಜನನಿಯೋ, ಯಾವಾಕೆಯು ಪೂರ್ವ ಬ್ರಹ್ಮಕಲ್ಪದಲ್ಲಿದ್ದವಳೋ ಮತ್ತು ಬ್ರಹ್ಮನ ದೈನಂದಿನಪ್ರಲಯದಲ್ಲಿ ಲಯ-

ರಹಿತಳೋ ಅಂಥವಳು ನಮ್ಮಂತೆ ಹೇಗೆ ಜನ್ಮವುಳ್ಳವಳಾದಾಳು? ಆದ್ದರಿಂದ ತನ್ನ ಪತಿಯು ಹೇಗೆ ಸಮುದ್ರದಿಂದ ಕೂರ್ಮನಾಗಿ ಅವತರಿಸಿದನೋ ಹಾಗೆಯೇ ಸಮುದ್ರಮಥನ ಕಾಲದಲ್ಲಿ ಈಕೆಯ ಅವತಾರವೂ ಎಂದು ಎಲ್ಲರೂ ಹೇಳಬೇಕು. ತನ್ನ ರಮಣನಾದ ಶ್ರೀಹರಿಯು ಹೇಗೆ ನಿತ್ಯ-ಮುಕ್ತನೋ ಹಾಗೆಯೇ ಅವನ ಸಹಧರ್ಮಿಣಿಯಾದ ಶ್ರೀರಮಾದೇವಿಯೂ ನಿತ್ಯಮುಕ್ತಳು. ಮುಕ್ತನಲ್ಲಿಯೂ ಕೂಡ ದೋಷವಿದ್ದಲ್ಲಿ ಮುಕ್ತಿಗಾಗಿ ಯಾರುತಾನೆ ಪ್ರಯತ್ನಮಾಡಿಯಾರು? || ೫-೭ ||

ನಿತ್ಯಮುಕ್ತಾ ತು ಯಾ ಲಕ್ಷ್ಮೀರ್ನಿತ್ಯಂ ದೋಷೋಜ್ಝಿತೈವ ಸಾ |
ಲಯೇಽಪಿ ಹರಿಣಾ ಸಾರ್ಧಂ ಯಾ ಶೇತೇ ಪ್ರಲಯಾಂಬುನಿ || ೮ ||

ಯಾವಳು ಪ್ರಲಯಕಾಲದಲ್ಲಿಯೂ ನಾರಾಯಣನೊಡನೆ ಪ್ರಲಯೋ-ದಕದಲ್ಲಿ ಮಲಗಿರುವಳೋ ಅಂತಹ ನಿತ್ಯಮುಕ್ತಳಾದ ಶ್ರೀದೇವಿಯು ನಿತ್ಯವಾಗಿ ದೋಷರಹಿತಳು. || ೮ ||

ಹರ್ತಾಪಿ ಸರ್ವಲೋಕಸ್ಯ ಭರ್ತ್ಯೈವಾಸೀದ್ಧಿಯಃ ಶ್ರಿಯಃ |
ಇತ್ಥಂ ಮಹೋಪಕರ್ತಾರಂ ಧರ್ತಾರಂ ನಿತ್ಯಮಾತ್ಮನಃ || ೯ ||

ಕರ್ತಾರಮಘಭೇತ್ತಾರಂ ಧಿಕ್ಕರ್ತಾರಂ ವಿರೋಧಿನಾಂ |
ನಿತ್ಯಾನುರಕ್ತಧೀಃ ಸಾ ತಮದ್ಯಾಪ್ಯತ್ಯೇತಿ ನ ಕ್ವಚಿತ್ || ೧೦ ||

ಸರ್ವಲೋಕವನ್ನೂ ಪ್ರಲಯಮಾಡಿದರೂ ತನ್ನನ್ನು ಪ್ರಲಯ ಮಾಡದೆ ಯಾವನು ಕಾಪಾಡುತ್ತಾನೆಯೊ ಇಂತಹ ಮಹಾ ಉಪಕಾರ ವನ್ನು ಮಾಡುವ, ಸದಾ ತನ್ನನ್ನು (ವಕ್ಷಸ್ಥಳದಲ್ಲಿ) ಧರಿಸಿದ, ಲೋಕಕರ್ತ ನಾದ, ಪಾಪನಾಶಕನಾದ, ಶತ್ರುಗಳನ್ನು ಲಕ್ಷಿಸದ ಆ ಹರಿಯನ್ನು ನಿತ್ಯ ವಾಗಿ ಭಕ್ತಿಯಿಂದ ಕೂಡಿದ ಮನಸ್ಸುಳ್ಳ ಆ ಲಕ್ಷ್ಮಿಯು ಸ್ವಲ್ಪವಾದರೂ ಮೀರಳು. || ೯-೧೦ ||

ಕಸ್ತಾಂ ಕಲ್ಪೇತನ್ಯಥಾಕರ್ತುಂ ಶಕ್ತಿಂ ತತ್ತ್ವಪ್ರವರ್ತಿಕಾಂ ||೧೧-೧||

ಶಕ್ತಿಸ್ವರೂಪಳಾದ, ಸರ್ವತತ್ವಪ್ರೇರಕಳಾದ, ಆ ರಮಾದೇವಿಯ ಮನಸ್ಸನ್ನು ಬೇರೆಯಾಗಿಮಾಡಲು ಯಾವನು ತಾನೇ ಶಕ್ತನಾದಾನು?

ಅವತಾರಿಕಾ:– ಕಲ್ಯಾದಿದೈತ್ಯರು ಹೇಗೆ ಇತರರ ಮನಸ್ಸನ್ನು ಬದಲಾಯಿಸುತ್ತಾರೆಯೊ ಹಾಗೆಯೇ ಶ್ರೀದೇವಿಯ ಮನಸ್ಸನ್ನು ಏಕೆ ಬದಲಾಯಿಸಬಾರದು ಎನ್ನುವಿಯೇನು? ಇದು ಯುಕ್ತಿಯುಕ್ತವಲ್ಲವೆಂದು ವಾದಿರಾಜರು ಹೇಳುತ್ತಾರೆ.

ಲಯಾಗ್ನಿನೈವ ಯದ್ದಗ್ಧಾಃ ಖಲಾಃ ಕಲ್ಯಾದಯಸ್ತ್ವವ ||೧೧-೨||

ಲಯೇಪಿ ಲಯಹೀನಾ ಯಾ ಕಸ್ತಾಂ ಕ್ಷೋಭಯೇದ್ವದ ||೧೨-೧||

ಲಯಾಗ್ನಿಯಿಂದಲೇ ಈ ನೀನು ಹೇಳುವ ದುಷ್ಟರಾದ ಕಲ್ಯಾದಿ ದೈತ್ಯರು ಸುಡಲ್ಪಟ್ಟವರಾದ್ದರಿಂದ, ಲಯದಲ್ಲಿಯೂ ಲಯಹೀನಳಾದ ಆ ರಮಾದೇವಿಯನ್ನು ಯಾವ ದೈತ್ಯನು ತಾನೇ ಕ್ಷೋಭಮಾಡಿಯಾನು? ಹೇಳು || ೧೧-(೨) ೧೨-(೧) ||

ಅಂಕೇ ನಿಧಾಯ ಯಾ ಶೇಷಶಾಯಿನಃ ಪದಪಂಕಜಂ || ೧೨-೨ ||

ಭಕ್ತ್ಯಾ ನಿಷೇವತೇ ನಿತ್ಯಂ ಪತ್ಯುರ್ವಕ್ಷಃಸ್ಥಿತಾ ಚ ಯಾ |
ಸಭಾಯಾಮಪಿ ಯಾ ಭರ್ತುರಂಕಪರ್ಯಂಕವಾಸಿನೀ || ೧೩ ||

ಅವತಾರೇಪಿ ಯಾ ಭರ್ತ್ರಾ ಸಹೈವಾವತರೇತ್ಸದಾ |
ತತ್ರಾಪಿ ಯಂ ಯಂ ದಿತಿಜಂ ಮುಂಚತಿಸ್ಮ ಹರಿಃ ಪ್ರಭುಃ ||೧೪||

ತಂ ತಂ ಮುಂಚತಿ ಭೂರೂಪಾ ಸಂಪದ್ರೂಪಾ ರಮಾ ಕಿಲ |
ಅನುಗೃಹ್ಣಾತಿ ಯಂ ಭಕ್ತಂ ಸ್ವಪತಿರ್ಭಕ್ತವತ್ಸಲಃ || ೧೫ ||

ಶ್ರೀಶ್ಚ ತನ್ಮಂದಿರೇ ನಿತ್ಯಮಾಸ್ತೇ ಸಂಪತ್ಸ್ವರೂಪಿಣೀ |
ಅನ್ಯೋನ್ಯಸ್ನಿಗ್ಧಯೋರಿತ್ಥಂ ಕಸ್ತಾಂ ಕ್ಷೋಭಯೇತ್ಖಲಃ ||

ಶೇಷಶಾಯಿಯ ಪದಕಮಲವನ್ನು ತನ್ನ ತೊಡೆಯಮೇಲಿಟ್ಟುಕೊಂಡು ದೇವಿಯು ಸದಾ ಭಕ್ತಿಯಿಂದ ಸೇವಿಸುತ್ತಿರುವಳು, ಪತಿಯ ವಕ್ಷಸ್ಥಳದಲ್ಲಿ ಯಾವಾಗಲೂ ನೆಲಸಿರುವಳು, ಸಭಾದಲ್ಲಿಯೂ ಕೂಡ ರಮಾದೇವಿಯು ಪರ್ಯಂಕಸದೃಶವಾದ ಪತಿಯ ತೊಡೆಯಮೇಲೆ ಕುಳಿತಿರುವಳು, ಅಂದರೆ ಲಕ್ಷ್ಮೀನಾರಾಯಣರು ಯಾವಾಗಲೂ ಒಟ್ಟಿಗಿರುವರು ಎಂದಭಿಪ್ರಾಯ. ಅವತಾರದಲ್ಲಿಯೂ ಕೂಡ ರಮಾದೇವಿಯು ಗಂಡನ ಜೊತೆಯಲ್ಲಿಯೇ ಅವತಾರಮಾಡುವಳು. ಅಲ್ಲಿಯೂ (ಅವತಾರಗಳಲ್ಲಿಯೂ) ಯಾವಯಾವ ದೈತ್ಯನನ್ನು ಪ್ರಭುವಾದ ಹರಿಯು ಬಿಡುತ್ತಾನೆಯೋ ಅವನನ್ನು ಧರಾ-ರೂಪಳಾದ ಮತ್ತು ಸಂಪದ್ರೂಪಳಾದ ರಮಾದೇವಿಯು ಬಿಡುವಳು ಎಂದರೆ ರಾಜ್ಯೈಶ್ವರ್ಯಾದಿಗಳು ಹೋಗುವುವು ಎಂದರ್ಥ. ಯಾವ ಯಾವ ಭಕ್ತನನ್ನು ಭಕ್ತವತ್ಸಲನಾದ ತನ್ನ ಪತಿಯು ಅನುಗ್ರಹಿಸುತ್ತಾನೋ, ಸಂಪದ್ರೂಪಳಾದ ಲಕ್ಷ್ಮೀದೇವಿಯೂ ಕೂಡ ಅಂಥವನ ಮನೆಯಲ್ಲಿ ಸದಾ ನೆಲಸಿರುವಳು. ಹೀಗೆ ಅನ್ಯೋನ್ಯವಾಗಿ ರಮಾರಮೇಶರು ಪ್ರೀತಿಯುಳ್ಳವರಾಗಿರುವಲ್ಲಿ ಯಾವ ದುಷ್ಟನು ತಾನೆ ಆ ಲಕ್ಷ್ಮೀದೇವಿಯ ಮನಸ್ಸನ್ನು ಕಲಕಿಯಾನು? || ೧೬-(೨)-೧೭ ||

ಶ್ರೀಧಾಮಧಾಮರೂಪೇಣ ಯಾ ಮುಕ್ತಿರಿತಿ ಕೀರ್ತ್ಯತೇ ।
ತತ್ರ ಸ್ಥಿತೋಽಪಿ ಯೋ ಮುಕ್ತಃ ಸೋಽಪಿ ದೋಷೋಜ್ಝಿತಃ ಕಿಲ ||

ಸ್ವಾಶ್ರಿತಭ್ರಮಭೇತ್ರೀಂ ತಾಂ ಭೇತ್ತುಂ ಕಸ್ತೇಽಸುರಃ ಕ್ಷಮಃ ।
ನ ಯತ್ರ ಮಾಯಾ ಕಿಮುತಾಪರ ಇತ್ಯಾಹ ಯಾಂ ಶುಕಃ ||೧೮||

ಈ ಶ್ಲೋಕದಲ್ಲಿ ತ್ರಿಧಾಮ ಎಂಬುದು ವಿಷ್ಣುವಾಟಿ–ಶ್ವೇತದ್ವೀಪ, ಅನಂತಾಸನ, ವೈಕುಂಠ ಈ ಮೂರು ಲೋಕಗಳುಳ್ಳವನು ಎಂದು ಅದರ ಯೋಗಾರ್ಥ–ಯಾವ ರಮಾದೇವಿಯನ್ನು ವಿಷ್ಣುವಿನ ಲೋಕರೂಪಳಾಗಿರುವಳು ಎಂದು ಆಗಮವಚನವು ಹೇಳುತ್ತದೆಯೋ ಅಂತಹ ಲಕ್ಷ್ಮ್ಯಾತ್ಮಕವಾದ ಲೋಕದಲ್ಲಿ ಇರುವ ಮುಕ್ತನೂ ಕೂಡ ದೋಷರಹಿತನಷ್ಟೆ?

ಶುಕಾಚಾರ್ಯರು ಯಾವ ವಿಷ್ಣುಲೋಕರೂಪಳಾದ ರಮಾದೇವಿಯನ್ನು "ನಯತ್ರಮಾಯಾಕಿಮುತಾಪರೇ" ಎಂಬ ಶ್ಲೋಕದಲ್ಲಿ ತನ್ನನ್ನು ಆಶ್ರಯಿಸಿದ ಮುಕ್ತನ ಭ್ರಮೆಯನ್ನು ಛೇದಿಸುವಳೆಂದು ಹೇಳಿರುವರೋ ಅಂತಹ ರಮಾದೇವಿಯ ಮನಸ್ಸನ್ನು ಅನ್ಯಥಾ ಮಾಡಲು ಯಾವ ಅಸುರನು ಸಮರ್ಥನಾದಾನು? || ೧೭-೧೮ ||

ಶ್ರೀರೇವ ಲೋಕರೂಪೇಣ ವಿಷ್ಣೋಸ್ತಿಷ್ಠತಿ ಸರ್ವದಾ |
ಅತೋ ಹಿ ವೈಷ್ಣವಾ ಲೋಕಾ ನಿತ್ಯಾಶ್ಚೇ ಚೇತನಾ ಅಪಿ ||
ನ ವರ್ತತೇ ಯತ್ರ ರಜಸ್ತಮಸ್ತಯೋಃ ಸತ್ವಂ ಚ || ಇತ್ಯಾದಿ
ಗೀತಾ ತಾತ್ಪರ್ಯ ಅ. ೧೮. ಶ್ಲೋ. ೬೩.

ಶ್ರೀದೇವಿಯೇ ಸದಾ ವಿಷ್ಣುವಿನ ಲೋಕರೂಪಳಾಗಿರುವಳು. ಆದುದರಿಂದ ವಿಷ್ಣುಲೋಕಗಳು ನಿತ್ಯವೂ ಚೇತನಾತ್ಮಕವೂ ಆದವುಗಳೆಂದು ಪ್ರಸಿದ್ಧಿ.

ಭಾಗವತ ಎರಡನೇ ಸ್ಕಂಧ ಒಂಭತ್ತನೇ ಅಧ್ಯಾಯದ ೯ ಮತ್ತು ೧೦ನೇ ಶ್ಲೋಕಗಳು ಪ್ರಲಯಕಾಲದಲ್ಲಿ ಬಹುಕಾಲ ಪರಮಾತ್ಮನನ್ನು ಕುರಿತು ತಪಸ್ಸುಮಾಡಿದ ಬ್ರಹ್ಮದೇವರಿಗೆ ತನ್ನ ಲೋಕವನ್ನು ಶ್ರೀಹರಿಯು ತೋರಿಸಿದನು ಎಂಬೀ ಸಂದರ್ಭದಲ್ಲಿ ಪ್ರವೃತ್ತವಾಗಿವೆ.

"ತಸ್ಮೈ ಸ್ವಲೋಕಂ ಭಗವಾನ್ ಸಭಾಜಿತಃ
ಸಂದರ್ಶಯಾಮಾಸ ಪರಂ ನ ಯತ್ಪರಂ |
ವ್ಯಪೇತ ಸಂಕ್ಲೇಶವಿಮೋಹಸಾಧ್ವಸಂ
ಸಂದೃಷ್ಟವದ್ಭಿರ್ವಿಬುಧೈರಭಿಷ್ಟುತಂ || ೯ ||

ಪ್ರೀತಿಜನಕವಾದ ತಪಸ್ಸಿನಿಂದ ಪೂಜಿತನಾದ ಶ್ರೀಹರಿಯು ಯಾವ ಲೋಕಕ್ಕಿಂತ ಉತ್ತಮವಾದ ಲೋಕ ಇಲ್ಲವೋ ಅಂತಹ ತನ್ನ ಲೋಕವನ್ನು ಬ್ರಹ್ಮದೇವರಿಗೆ ತೋರಿಸಿದನು. ಎಂತಹ ಲೋಕವು ಎಂದರೆ– ಚೆನ್ನಾಗಿ ಅಪರೋಕ್ಷಜ್ಞಾನವುಳ್ಳ ಬುಧರಿಂದ ವಿಶೇಷವಾಗಿ ಸ್ತೋತ್ರ

ಮಾಡಲ್ಪಟ್ಟದ್ದು ಮತ್ತು ಅಜ್ಞಾನ, ಅಹಂಕಾರ, ರಾಗದ್ವೇಷಗಳಿಲ್ಲದ ಮಿಥ್ಯಾಜ್ಞಾನದಿಂದ ದೂರವಾದ ಭಯರಹಿತವಾದ ಲೋಕವು.

ಸೂಚನೆ:—ಆ ಲೋಕದಲ್ಲಿರುವ ಮುಕ್ತರಿಗೆ ಮೇಲೆ ಹೇಳಿದ ಭಯಾದಿದೋಷಗಳು ಇಲ್ಲವೆಂದು ಅಭಿಪ್ರಾಯ.

"ನ ವರ್ತತೇ ಯತ್ರ ರಜಸ್ತಮಸ್ತಯೋಃ
ಸತ್ವಂ ಚ ಮಿಶ್ರಂ ನ ಚ ಕಾಲವಿಕ್ರಮಃ ।
ನ ಯತ್ರ ಮಾಯಾ ಕಿಮುತಾಪರೇಹರೇ-
ರನುವ್ರತಾ ಯತ್ರ ಸುರಾಸುರಾರ್ಚಿತಾಃ ॥ ೧೦ ॥

ಕ್ಲೇಶಾದಿಗಳು ಇಲ್ಲದಿರುವುದಕ್ಕೆ ಕಾರಣವನ್ನು ಹೇಳುತ್ತಾರೆ.— ಯಾವ ಲೋಕದಲ್ಲಿ ಸತ್ವರಜಸ್ತಮೋಗುಣಗಳು ಇಲ್ಲವೋ, ಕಾಲಕೃತವಾದ ವ್ಯತ್ಯಾಸವು ಇಲ್ಲವೋ ಇಂಥಾ ಲೋಕವನ್ನು ಬ್ರಹ್ಮದೇವರಿಗೆ ತೋರಿಸಿದನು. ಸತ್ವಾದಿಗುಣಗಳು ಇಲ್ಲದೇ ಇರುವುದಕ್ಕೆ ಕಾರಣವನ್ನು ಹೇಳುತ್ತಾರೆ.- ಎಲ್ಲಿ ತ್ರಿಗುಣಾತ್ಮಕವಾದ ಮಾಯಾಶಬ್ದದಿಂದ ವಾಚ್ಯವಾದ ಪ್ರಕೃತಿಯೇ ಇಲ್ಲವೋ ಆ ಲೋಕದಲ್ಲಿ ಮಾಯಾವಿಕಾರದಿಂದ ಉಂಟಾಗುವ ದೋಷಗಳು ಎಲ್ಲಿ ಬಂತು? ಇಂತಹ ಲೋಕದಲ್ಲಿ ಮುಕ್ತರಾದ ಪರಮಾತ್ಮನ ಭಕ್ತರು ಸುರಾಸುರರಿಂದ ಅರ್ಚಿತರಾಗಿ ನೆಲಸಿರುತ್ತಾರೆ.

ಅಸೌರತಾಃ=ಅಸುರಾಃ— ಎಂದರೆ ಪರಮಾತ್ಮನಲ್ಲಿ ಆನಂದಪಡುತ್ತಾರೆ, ಆದ್ದರಿಂದ ಮುಕ್ತರು ಅಸುರರೆಂದು ಕರೆಯಲ್ಪಡುತ್ತಾರೆ. ॥ ೧೦ ॥

ಅಕುಂಠ ವೈಕುಂಠಲೋಕರೂಪಾ ಸಾ ಕ್ವ ಕ್ವ ತೇ ಭ್ರಮಃ ।
ಭರ್ತುರಂಗಂ ಸಮಾಲಿಂಗ್ಯ ಭೂಷಣಾದ್ಯಾತ್ಮನಾ ಸದಾ ॥ ೧೯ ॥

ಯಾ ಮೋದತೇ ರಮಾದೇವೀ ಸಮನೇತಿ ವದಂತಿ ಯಾಂ ।
ಅಸುರಾರೇರ್ಹರೇಃ ಪತ್ನೀ ಲಕ್ಷ್ಮ್ಯಾಃ ಶುದ್ಧತಮೈವ ಹಿ ॥ ೨೦ ॥

ಶಾಶ್ವತವಾದ ವೈಕುಂಠಲೋಕರೂಪಳಾದ ರಮಾದೇವಿ ಎಲ್ಲಿ? ನೀನು ಹೇಳುವ ಭ್ರಮವೆಲ್ಲಿ? ಅಂದರೆ, ಇಂತಹ ರಮಾದೇವಿಗೆ ಭ್ರಮುಬರುವ ದೆಂಬುದು ಅಸಂಭಾವಿತವೆಂದು ಅಭಿಪ್ರಾಯ. ಆ ಪರಮಾತ್ಮನ ಆಭರಣಾದಿ ರೂಪವನ್ನು ತಾಳಿ ಪತಿಯ ದೇಹವನ್ನು ಚನ್ನಾಗಿ ಆಲಂಗಿಸಿಕೊಂಡು ಸದಾ ಆನಂದಪಡುತ್ತಿರುವಳೋ ಮತ್ತು ಯಾವಾಕೆಯನ್ನು ಪರಮಾತ್ಮನಿಗೆ "ಸಮನಾ" ಎಂದು ಜ್ಞಾನಿಗಳು ಹೇಳುತ್ತಾರೆಯೋ ಅಂತಹ ದಾನವಾರಿ ಯಾದ ಹರಿಯ ಪತ್ನಿ ಲಕ್ಷ್ಮೀದೇವಿಯು ಅತ್ಯಂತ ಶುದ್ಧಳೇ ಎಂಬುವುದರಲ್ಲಿ ಸಂಶಯ:ವಿಲ್ಲ. ಇಲ್ಲಿ ಪ್ರಸಕ್ತವಾದ ಬ್ರಹ್ಮಸೂತ್ರವು ಇದು–

"ಓಂ ಸಮನಾ ಚಾಸೃತ್ಯುಪಕ್ರಮಾದಮೃತತ್ವಂ ಚಾನುಪೋಷ್ಯ ಓಂ"
ಅ. ೪-ಪಾ. ೨-ಸೂ. ೭

ಈ ಸೂತ್ರದ ಅಭಿಪ್ರಾಯ:–ಪರಮಾತ್ಮನಹಾಗೆ ಶ್ರೀದೇವಿಯೂ ದೇಶತಃ ಕಾಲತಃ ವ್ಯಾಪ್ತಳು ಮತ್ತು ನಿತ್ಯಮುಕ್ತಳು. ಅಂದರೆ ಇತರ ಅಧಿಕಾರಿಗಳಂತೆ ಒಂದು ಕಾಲದಲ್ಲಿ ಬದ್ಧಳಾಗಿದ್ದು ಪರಮಾತ್ಮನ ಉಪಾಸ ನಾದಿಗಳನ್ನು ಮಾಡಿ ಮುಕ್ತಿಯನ್ನು ಪಡೆದವಳಲ್ಲ. ಮತ್ತು ಪ್ರಲಯಕಾಲ ದಲ್ಲಿ ಲಯವನ್ನು ಹೊಂದುವವಳಲ್ಲ. ದೇಶದಿಂದಲೂ ಕಾಲದಿಂದಲೂ ವ್ಯಾಪ್ತಳಾಗಿರುವುದರಲ್ಲಿ ಪರಮಾತ್ಮನಿಗೆ ಸಮಳಾದ್ದರಿಂದ "ಸಮನಾ" ಎಂದು ಕರೆಸಿಕೊಳ್ಳಲ್ಪಡುತ್ತಾಳೆ. || ೧೯-೨೦ ||

ಪರಾರ್ಥಮಸುರಚ್ಛೇತ್ತುರ್ದಾರಾನ್ಮೋ ಹ್ಯಸುರಃ ಸ್ಪೃಶೇತ್ ।
ಯಾ ಮಾತಾ ಸರ್ವಲೋಕಸ್ಯ ಸಾ ಶ್ರೀಃ ಸ್ವರಮಣಂ ವಿನಾ ||೨೦||

ಪುತ್ರಭೂತಾನಿಮಾನ್ ಜೀವಾನ್ ಕಥಂ ವಾ ಕಾಮಯೇದ್ವದ ।
ಯಂ ಕಾಮಯೇ ತಂ ತಮುಗ್ರಂ ಕೃಣೋಮೀತ್ಯಾದಿನಾಽಖಿಲಾನ್ ||

ಸುರಾನ್ನಿರಾಕೃತ್ಯ ಮಮಯೋನಿರಪ್ಸ್ವಿತಿ ಯಾ ಜಗೌ ।
ಸ್ವಯಂ ಹಿ ಕೃತದೇವಾನ್ ಸಾ ಕಥಂ ಸ್ವೀಕುರುತೇ ವದ || ೨೧ ||

ಇತರರನ್ನು ರಕ್ಷಣೆಮಾಡುವುದಕ್ಕೋಸ್ಕರವಾಗಿ ಅಸುರರನ್ನು ಸಂಹರಿಸುವ ಶ್ರೀಹರಿಯ ಪತ್ನಿಯನ್ನು ಯಾವ ಅಸುರನು ಮುಟ್ಟಿಯಾನು? ಮತ್ತು ಯಾವ ರಮಾದೇವಿಯು ಸರ್ವಲೋಕಕ್ಕೂ ತಾಯಿಯೋ ಅಂತಹ ರಮಾದೇವಿಯು ಸ್ವರಮಣನಾದ ನಾರಾಯಣನನ್ನು ಬಿಟ್ಟು ಪುತ್ರರಾದ ಜೀವರನ್ನು ಹೇಗೆತಾನೆ ಕಾಮಿಸಿಯಾಳು? ಹೇಳು. ಮತ್ತು "ಯಾರಲ್ಲಿ ನಾನು ಅನುಗ್ರಹ ಮಾಡುತ್ತೇನೋ ಅವನಿಗೆ ರುದ್ರಪದವಿಯನ್ನು ಕೊಡುತ್ತೇನೆ ಅಥವಾ ಬ್ರಹ್ಮಪದವಿಯನ್ನೂ ಕೊಡುತ್ತೇನೆ." ಈ ರೀತಿ ಅಂಭ್ರಣೀಸೂಕ್ತದಲ್ಲಿ ಸರ್ವದೇವತೆಗಳನ್ನೂ ಕೂಡ ನಿರಾಕರಿಸಿ, "ನನಗೆ ಕಾರಣನಾದವನು ಸಮುದ್ರಶಾಯಿಯು" ಎಂದು ರಮಾದೇವಿಯು ತಾನೇ ಹೇಳಿಕೊಂಡಿರುವುದರಿಂದ, ಯಾರಿಗೆ ದೇವಪದವಿಯನ್ನು ಕೊಟ್ಟಿರುವಳೋ ಅಂಥವರನ್ನು ಆಕೆಯು ಹೇಗೆ ಸ್ವೀಕರಿಸತಕ್ಕದ್ದು ಸಾಧ್ಯ? ಹೇಳು. || ೨೧-೨೩ ||

ರುಕ್ಮಿಣೀಶವಿಜಯದ ೧೪ನೇ ಸರ್ಗದ ೪೨-೪೩ನೇ ಶ್ಲೋಕಾರ್ಥಸಾರವನ್ನು ಇಲ್ಲಿ ಹೇಳಿದೆ–

"ಧಿಕ್ಕೃತ್ಯಾಹಮುಮೇಶಹಂಸಗಮನೌ ಸ್ವರ್ಗೇಶ್ವರಾಗ್ನೀಭವ-
ತ್ಸೂಕ್ತಾಸಕ್ತಹೃದಂಗಲೋಕಮಖಿಲಂ ದೇವೌಘಮಾನ್ಯಾನ್ಮನೀನ್ |
ಸಚ್ಛಾಸ್ತ್ರಾರ್ಥ್ಯನಿಕೋವಿದಾನಪಿಬುಧಾ ತ್ವಯ್ಯೇವಯತ್ಸಸ್ಪೃಹಾ
ವಿಶ್ವಾಧೀಶ್ವರತಾಂ ಭವತ್ಸು ಭವತಸ್ತನ್ನಿಶ್ಚಿನೋಮಿ ಪ್ರಭೋ ||೪೨||

ಶಂಭುಃ ಪುತ್ರಸಮಃ ಸಮೋ ಪುರರಿಪುಃ ಪೌತ್ರಃ ಶಶೀಸೋದರಃ
ಸಿಂಧುರ್ಮೇಜನಕಾಯಿತೋಮಧುಸಖೋ ಮತ್ಸೂನುಕಲ್ಪಃ ಪ್ರಭೋ
ಅಂಬಾಹಂ ಸಕಲಸ್ಯಚೇತಿ ಕಮಲಾ ಕೃಷ್ಣೈಕಲಗ್ನಂಮನೋ
ಭೃಂಗಂ ದರ್ಶಯಿತುಂ ಕೃತೋಗ್ರಶಪಥಾ ಸ್ವಂರೂಪಮಸ್ಪಷ್ಟಯತ್ ||

ಈ ಮೇಲಿನ ಎರಡು ಶ್ಲೋಕಗಳೂ ರುಕ್ಮಿಣೀದೇವಿಯು ಶ್ರೀಕೃಷ್ಣನಿಗೆ ಬರೆದು ಬ್ರಾಹ್ಮಣನ ಮೂಲಕ ಕಳುಹಿಸಿದ ಪತ್ರದಲ್ಲಿದ್ದಂತೆ ವಾದಿರಾಜರು ರುಕ್ಮಿಣೀಶವಿಜಯದಲ್ಲಿ ವರ್ಣಿಸಿರುತ್ತಾರೆ. ಇದರ ಅಭಿಪ್ರಾಯ–ಅಂಭ್ರಣೀಸೂಕ್ತದಲ್ಲಿ ಅಂಭ್ರಣೀರೂಪಳಾದ ನಾನೇ, ಎಲ್ಲ ದೇವತೆಗಳೂ, ಎಲ್ಲ

ಋಷಿಗಳೂ, ಇತರ ಜ್ಞಾನಿಗಳೂ ಮತ್ತು ಇತರ ಎಲ್ಲ ಜನರೂ ನನ್ನ ಅಧೀನರೆಂದು ವರ್ಣಿಸಿ ನಾನು ಸಮುದ್ರಶಾಯಿಯಾದ ನಿನ್ನ ಅಧೀನಳು ಎಂದು ಹೇಳಿ ಸಮಸ್ತರಿಗೂ ನೀನು ಸ್ವಾಮಿಯೆಂದು ಸ್ಥಾಪಿಸಿರುತ್ತೇನೆ. ಆದ್ದರಿಂದ ನೀನೇ ನನಗೆ ಪತಿಯಾಗುವುದಕ್ಕೆ ಯೋಗ್ಯನು, ಮತ್ತೆ ಯಾರೂ ಅಲ್ಲ. ಇತರರೆಲ್ಲರೂ ನನ್ನನ್ನು ಉಪಜೀವಿಸಿಕೊಂಡಿರುವ ಚೇತನರು." (ವಿಶೇಷಾರ್ಥವನ್ನು ತಿಳಿಯಲು ಅಪೇಕ್ಷಿಸುವವರು ಮೇಲ್ಕಂಡ ರುಕ್ಮಿಣೀಶ-ವಿಜಯದ ವ್ಯಾಖ್ಯಾನವನ್ನು ನೋಡಬಹುದು.) "ಬ್ರಹ್ಮನು ನನಗೆ ಪುತ್ರನ ಹಾಗೆ, ತ್ರಿಪುರಶತ್ರುವಾದ ರುದ್ರನು ಮೊಮ್ಮಗನಂತೆ, ಚಂದ್ರನು ನನ್ನ ಸಹೋದರ, ಸಮುದ್ರರಾಜನು ನನ್ನ ತಂದೆಯಂತೆ, ಮನ್ಮಥನು ನನ್ನ ಮಗನಂತೆ, ಹೇ ಸ್ವಾಮಿ ಶ್ರೀಕೃಷ್ಣ! ಸಕಲ ಲೋಕಕ್ಕೂ ನಾನು ತಾಯಿಯು." ಹೀಗೆ ಲಕ್ಷ್ಮೀಸ್ವರೂಪಳಾದ ರುಕ್ಮಿಣೀದೇವಿಯು ತನ್ನ ಮನಸ್ಸೆಂಬ ದುಂಬಿಯು ಕೃಷ್ಣನಲ್ಲೇ ಲಗ್ನವಾಗಿದೆ ಎಂದು ತೋರಿಸುವುದಕ್ಕೆ ಹಿಂದೆ ಹೇಳಿದ ರೀತಿಯಲ್ಲಿ ತನ್ನ ಸ್ವರೂಪವನ್ನು ಸ್ಪಷ್ಟಮಾಡಿದಳು.

ಹರೌ ವಿರೋಧಂ ಸಾ ದೇವೀ ಕುರುತೇ ನ ಕದಾಚನ ।
ಸರ್ವಾಲಂಕಾರಭರಿತೇ ಸರ್ವಲೋಕಮನೋಹರೇ(ರಮೇ) ॥೨೪॥

ಸರ್ವೋತ್ತಮೇ ಸತಿ ಮನಃ ಕುರ್ವೀತಾನ್ಯತ್ರ ಸಾ ಕಥಂ ।
ಕಿಂ ಚ ಯತ್ರಾಸ್ತಿ ಸಾ ದೇವೀ ತತ್ರ ಭರ್ತಾಪಿ ವರ್ತತೇ ॥ ೨೫ ॥

ವ್ಯಾಪ್ತತ್ವಾದುಭಯೋಸ್ತಸ್ಮಾನ್ನಿತ್ಯಂ ಭರ್ತ್ರಾ ಸಹ ಸ್ಥಿತಾಂ ।
ಕಃ ಪಶ್ಯೇತ್ಕಃ ಸ್ಪೃಶೇದ್ಯಸ್ಯ ಚಕ್ರಂ ಶ್ರೀಃ ಕಿಲ ದುರ್ಜಯಾ ॥೨೬॥

ಹರಿಯಲ್ಲಿ ರಮಾದೇವಿಯು ಎಂದಿಗೂ ವಿರೋಧವನ್ನು ಮಾಡುವವಳಲ್ಲ. ಸರ್ವಾಲಂಕಾರಭರಿತನಾದ, ಸರ್ವಲೋಕಮನೋಹರನಾದ, ಸರ್ವೋತ್ತಮನಾದ ಪತಿಯು ಇರುವಾಗ ಆಕೆಯು ಬೇರೆಯವರಲ್ಲಿ ಮನಸ್ಸು ಹೇಗೆ ಮಾಡಿಯಾಳು? ಅಲ್ಲದೆ ರಮಾರಮೇಶರು ಇಬ್ಬರೂ ಸಮವ್ಯಾಪ್ತರಾಗಿರುವುದರಿಂದ ಎಲ್ಲಿ ಆ ದೇವಿಯು ಇರುತ್ತಾಳೆಯೋ ಅಲ್ಲಿ ಆಕೆಯ ಪತಿಯೂ

ಇರುವನು. ಯಾವ ಪತಿಯು ಚಕ್ರವು ದುರ್ಜಯನಾದ ಶ್ರೀದೇವಿಯಿಂದ ಅಭಿಮನ್ಯಮಾನವಾದದ್ದೋ ಅಂತಹ ಭರ್ತನ ಜೊತೆಯಲ್ಲಿ ಸದಾ ವಿರಾಜಮಾನಳಾದ ಮಹಾತಾಯಿಯನ್ನು ಯಾವನು ತಾನೇ ದುಷ್ಟ ಭಾವನೆಯಿಂದ ನೋಡಿಯಾನು? ಅಥವಾ ಮುಟ್ಟಿಯಾನು? ಯಾವನೂ ನೋಡಲಾರನು ಅಥವಾ ಮುಟ್ಟಲಾರನು. || ೨೪-೨೬ ||

ತದ್ಧಿ ಹರ್ಯಪ್ರಿಯಂ ದೇವಂ ದಾನವಂ ವಾನುಧಾವತಿ ।
ನಮ್ರಂ ರಕ್ಷತ್ಯನಮ್ರಂ ತು ದಿಧಕ್ಷತಿ ದಹತ್ಯಪಿ || ೨೭ ||

ಶಿರಶ್ಛಿನತ್ತಿ ಶಕ್ತಿಂ ಸ್ವಾಂ ವ್ಯನಕ್ತಿ ಕಿಲ ಲೀಲಯಾ ।
ಈದೃಕ್ ಚಕ್ರಸ್ವರೂಪಾಂ ತಾಂ ಭೀಷಯೇದ್ದೂಷಯೇಚ್ಚ ಕಃ ||

ಆ ಚಕ್ರದ ಮಹಿಮೆಯನ್ನು ಏನೆಂದು ಬಣ್ಣಿಸೋಣ! ಅದು ಪರಮಾತ್ಮನಿಗೆ ಅಪ್ರಿಯವನ್ನು ಮಾಡಿದವನು ದೇವನೇ ಆಗಲಿ, ದಾನವನೇ ಆಗಲೀ ಅವನನ್ನು ಶಿಕ್ಷಿಸಲು ಹಿಂಬಾಲಿಸಿ ಹೋಗುತ್ತದೆ. ನಮ್ರನಾದವನನ್ನು ರಕ್ಷಿಸುತ್ತದೆ. ಬೊಗ್ಗದೇ ಇದ್ದಲ್ಲಿ ಅಂತಹವನನ್ನು ಸುಡಲು ಹೋಗುತ್ತದೆ. ಸುಡಲೂ ಸುಡುತ್ತದೆ. ಕೆಲವು ಸಮಯಗಳಲ್ಲಿ ತಲೆಯನ್ನು ಕತ್ತರಿಸುತ್ತದೆ. ತನ್ನ ಸ್ವಂತಶಕ್ತಿಯನ್ನು ಲೀಲಾಮಾತ್ರದಿಂದ ವ್ಯಕ್ತ ಮಾಡುತ್ತದೆ. ಇಂತಹ ಚಕ್ರಸ್ವರೂಪಿಣಿಯಾದ ಆ ದುರ್ಗಾದೇವಿಯನ್ನು ಯಾವನು ಭಯಪಡಿಸಿಯಾನು? ಅಥವಾ ದೂಷಿಸಿಯಾನು? ||೨೭-೨೮||

ಅಂಬರೀಷನಮೇಲೆ ಕೋಪಗೊಂಡ ದೂರ್ವಾಸರು ಒಂದು ಕೃತ್ಯಾವನ್ನು ಸೃಷ್ಟಿಮಾಡಿ ಅಂಬರೀಷರಾಜನಮೇಲೆ ಬಿಟ್ಟಾಗ ಅವನಲ್ಲಿದ್ದ ಹರಿಯ ಚಕ್ರವು ದೂರ್ವಾಸರನ್ನು ಸುಡಲು ಅವರನ್ನು ಹಿಂಬಾಲಿಸಿತು. ಎಲ್ಲಿಯೂ ಆಶ್ರಯವು ಸಿಕ್ಕದೆ ಅಂಬರೀಷನನ್ನು ಶರಣುಹೊಂದಿದಾಗ ಚಕ್ರವು ಶಾಂತವಾಯಿತು. ದೂರ್ವಾಸರನ್ನು ಸುಡಲಿಲ್ಲ.

ಭಾಗವತ ೯ನೇ ಸ್ಕಂಧ-ಅ. ೬. ಶ್ಲೋ. ೬೩-೬೪.

ಕೃಷ್ಣನನ್ನು ಎದುರಿಸಿದ ಪೌಂಡ್ರಕವಾಸುದೇವನ ತಲೆಯನ್ನು

ಕತ್ತರಿಸಿತು. ಅಲ್ಲದೇ ಇವನ ಮಗನಾದ ಸುದಕ್ಷಿಣನು ಕೃಷ್ಣನ ವಿಷಯದಲ್ಲಿ ವಿಪರೀತವಾಗಿ ನಡೆದಕಾಲದಲ್ಲಿ ಕೃಷ್ಣನ ಚಕ್ರವು ಅವನ ಪಟ್ಟಣವನ್ನೇ ಸುಟ್ಟಿತು.—ಭಾಗವತ ೧೦ನೇ ಸ್ಕಂಧ-ಅ. ೬೯. ಶ್ಲೋ. ೩೬-೩೭-೩೨-೩೬.

ಶಿಶುಪಾಲನ ತಲೆಯನ್ನು ಕತ್ತರಿಸಿದ ವಿಷಯವು ಸುಪ್ರಸಿದ್ಧ.

ಭಾಗವತ ೧೦ನೇ ಸ್ಕಂಧ-ಅ. ೮೨. ಶ್ಲೋ. ೧೪.

ಇತ್ಥಂ ವಿಚಾರ್ಯಮಾಣೋಽಭೂಚ್ಛುದ್ಧಾ ಮೂಲತನೌ ರಮಾ ।
ಅವತಾರೇಽಪಿ ಶುದ್ಧೈವ ಸೇಯಂ ಮಂಗಳದೇವತಾ ॥ ೨೯ ॥

ಈಪ್ರಕಾರವಾಗಿ ವಿಚಾರಮಾಡಿದಲ್ಲಿ ಮೂಲರೂಪದಲ್ಲಿ ರಮಾ ದೇವಿಯು ಶುದ್ಧಳೆಂದು ಸಿದ್ಧವಾಯಿತು. ಮಂಗಳದೇವತೆಯಾದ ಈಕೆಯು ಅವತಾರಗಳಲ್ಲಿಯೂ ಕೂಡ ಶುದ್ಧಳೇ. ॥ ೨೯ ॥

ಯತೋ ನೀತಾಪಿ ಸಾ ಸೀತಾ ನೈವ ಭೀತಾ ದಶಾನನಾತ್ ।
ನೈವ ದೃಷ್ಟಾ ನ ಚ ಸ್ಪೃಷ್ಟಾ ತೇನ ದುಷ್ಟಾಂತರಾತ್ಮನಾ ॥ ೩೦ ॥

ಯಾವಕಾರಣದಿಂದ ದಶಕಂಠನಿಂದ ಒಯ್ಯಲ್ಪಟ್ಟರೂ ಆ ಸೀತಾ-ದೇವಿಯು ಭಯಪಡಲಿಲ್ಲವೋ, ದುಷ್ಟಮನಸ್ಸುಳ್ಳ ಅವನಿಂದ ನೋಡಲ್ಪಟ್ಟ ವಳೂ, ಮುಟ್ಟಲ್ಪಟ್ಟವಳೂ ಆಗಲೇ ಇಲ್ಲವೋ (ಆದ್ದರಿಂದ ಅವತಾರ ದಲ್ಲಿಯೂ ರಮಾದೇವಿಯು ಶುದ್ಧಳೇ). ॥ ೩೦ ॥

ಬಲಾತ್ಸ್ಪ್ರಷ್ಟುಂ ಯದಿ ಖಲಾಃ ಶಕ್ತಾಸ್ತರ್ಹ್ಯಜನೇ ವನೇ ।
ಸ್ಥಿತಾಮೇಕಾಕಿನೀಂ ಕಸ್ಮಾನ್ನ ಪಸ್ಪರ್ಶ ಬಲೀ ಖಲಃ ॥ ೩೧ ॥

ಬಲಾತ್ಕಾರದಿಂದ ದುಷ್ಟರು ಆಕೆಯನ್ನು ಮುಟ್ಟಲು ಸಮರ್ಥರಾದಲ್ಲಿ ನಿರ್ಜನವಾದ ಪಂಚವಟಿಯಲ್ಲಿ ಏಕಾಕಿನಿಯಾಗಿದ್ದ ಸೀತಾದೇವಿಯನ್ನು ಬಲಿಷ್ಠನಾದ ದುಷ್ಟ ರಾವಣನು ಏಕೆ ಮುಟ್ಟಲಿಲ್ಲ? ॥ ೩೧ ॥

ಸೀತಾಪ್ರತಿಕೃತಿಶ್ಚಾಪಿ ಯದಾ ರಕ್ಷೋಭಯಂಕರೀ ।
ತದಾ ಸಾಕ್ಷಾನ್ಮಹಾಲಕ್ಷ್ಮೀಃ ಕಿನ್ನ ರಕ್ಷೋಭಯಂಕರೀ ॥ ೩೨ ॥

ಸೀತಾದೇವಿಯ ಪ್ರತಿಕೃತಿಯೇನೇ ರಾಕ್ಷಸನಿಗೆ ಭಯವನ್ನುಂಟು ಮಾಡಿತು. ಅಂದಮೇಲೆ ಸಾಕ್ಷಾನ್ಮಹಾಲಕ್ಷ್ಮಿಯು ರಾಕ್ಷಸರಿಗೆ ಭಯಂಕರ ಳಲ್ಲವೇನು? ಭಯಂಕರಳೇ. ॥ ೩೨ ॥

ದುರ್ಗಾರೂಪೇಣ ಯಾ ಶುಂಭಂ ನಿಶುಂಭಂ ಚಾಪ್ಯಮರ್ದಯತ್।
ತಸ್ಯಾ ರಕ್ಷೋಭಯಂ ಕೋವಾ ಪ್ರೇಕ್ಷಾವಾನ್ ವಕ್ಷ್ಯತಿ ಕ್ಷಿತೌ ॥

ದುರ್ಗಾರೂಪಳಾದ ರಮಾದೇವಿಯು ಶುಂಭ ನಿಶುಂಭನಾಮಕ ದೈತ್ಯ ರನ್ನು ಸಂಹರಿಸಿದಳು. ಅಂದಮೇಲೆ ಆಕೆಗೆ ರಾಕ್ಷಸರಿಂದ ಭಯವುಂಟೆಂದು ಭೂಮಿಯಲ್ಲಿ ಯಾವ ವಿವೇಕಿಯು ಹೇಳುವನು? ॥ ೩೩ ॥

ದುರ್ಗಮ್ಯಂ ಯದ್ಬಲಾದನ್ಯೈಸ್ತದ್ಧಿ ದುರ್ಗಂ ವಿದುರ್ಬುಧಾಃ ।
ಅತೋ ದುರ್ಗಾಭಿಧಾಂ ದುರ್ಗಾಂ ಬಲಾತ್ಕೋವಾ ಖಲಃ
ಸ್ಪೃಶೇತ್ ॥ ೩೪ ॥

ಯಾವುದು ಅನ್ಯರಿಂದ ಬಲಾತ್ಕಾರದಿಂದ ಪ್ರವೇಶಿಸಲು ಸಾಧ್ಯವಲ್ಲದ್ದೋ ಅದನ್ನು ಜ್ಞಾನಿಗಳು ದುರ್ಗವೆಂದು ಕರೆಯುತ್ತಾರೆ. ಆದ್ದರಿಂದ 'ದುರ್ಗಾ' ಎಂದು ಕರೆಸಿಕೊಳ್ಳುವ ದುರ್ಗೆಯನ್ನು ಬಲಾತ್ಕಾರದಿಂದ ಯಾವ ದುಷ್ಟನು ಮುಟ್ಟಿಯಾನು ? ॥ ೩೪ ॥

ಯತಶ್ಚ ಭೀಷ್ಮಕಸ್ಯ ಗೃಹೇ ರುಗ್ಮಿಣೀಂ ಶ್ರೀಸ್ವರೂಪಿಣೀಂ ।
ಚೈದ್ಯ ಸಾಲ್ವಜರಾಸಂಧಪೂರ್ವಾ ರುಗ್ಮಿಪ್ರಚೋದಿತಾಃ ॥ ೩೫ ॥

ಬಲವಂತಃ ಖಲಾಃ ಸರ್ವೇ ಬಲವಂತಃ ಸ್ವಯಂವರೇ ।
ಏಕಾಕಿನೀಮಿಮಾಂ ಸಾಧ್ವೀಂ ದ್ರಷ್ಟುಂ ವಾ ಸ್ಪ್ರಷ್ಟುಮೇವ ವಾ ॥

ಕುತೋ ನರೇಕುರ್ದೇವಸ್ಯ ಯಾತ್ರಾಂ ಕರ್ತುಂ ಗತಾಮಪಿ ।
ಕೃಷ್ಣಸ್ತು ದೂರಾದಾಗತ್ಯ ತೃಣೀಕೃತ್ಯಾಖಿಲಾನ್ ನೃಪಾನ್ ॥ ೩೭ ॥

ನಿನ್ಯೇ ತದ್ರುಗ್ಮಿಣೀ ಶುದ್ಧಾ ಸಿದ್ಧಾ ವಿದ್ಯಾವತಾಂ ಮತೇ ।
ಹರ್ಯೇಕಪತ್ನೀ ತತ್ರೈವ ನಿತ್ಯಂ ಲಗ್ನಮನೋರಥಾ ॥ ೩೮ ॥

ಇತ್ಥಂ ಕಥಾ ಭಾಗವತೇ ಶ್ರುತಾ ರಾಮಾಯಣೇ ತಥಾ ।
ಶ್ರುತಾ ಚ ಭಾರತೇ ಚೈವ ನಿರವದ್ಯಸ್ಯ ಭಾಮಿನೀ ॥ ೩೯ ॥

ನಿರವದ್ಯತಮಾ ತಸ್ಮಾದ್ರಮಾ ಸರ್ವತ್ರ ಸರ್ವದಾ ।
ಕಿಂಚ ಕ್ಷೀರಾಂಬುಧೇರ್ಜಾತಾ ಲಕ್ಷ್ಮೀಃ ಸ್ವೀಯಸ್ವಯಂವರೇ ॥

ವಿಷ್ಣೋರನ್ಯಜ್ಜಗತ್ಸರ್ವಂ ಸದೇವಾಸುರಮಾನುಷಂ ।
ಧಿಕ್ಕೃತ್ಯ ತೇಷಾಂ ದೋಷಾಂಶ್ಚ ಪೃಥಕ್ ಪೃಥಗುದೀರ್ಯ ಚ ॥

ಅಸಾರಮಖಿಲಂ ಮತ್ವಾ ಸಾರಾತ್ಸಾರತರಂ ಹರಿಂ ।
ನಿಶ್ಚಿತ್ಯ ತಸ್ಯ ಸುಗುಣಾನ್ ಸತ್ಯತ್ಯಚ ಪದೇಪದೇ ॥ ೪೨ ॥

ಉತ್ಕೃತ್ಯ ಸಕಲಾನ್ ದೋಷಾನ್ ಧನ್ಯಾ ಕನ್ಯೈವ ಯಾ ರಮಾ ।
ಅನ್ವಮಂಸ್ತ ಸ್ವರಮಣಂ ಹರಿಂ ಸರ್ವಮನೋರಮಂ ॥ ೪೩ ॥

ಭೀಷ್ಮಕನ ಮನೆಯಲ್ಲಿ ಶ್ರೀಸ್ವರೂಪಿಣಿಯಾದ ರುಕ್ಮಿಣಿಯು ಅವತರಿಸಿದಳಷ್ಟೆ. ರುಕ್ಮಿಯಿಂದ ಪ್ರೇರಿತರಾದ ಛಲವಂತರೂ, ಬಲವಂತರೂ, ದುಷ್ಟರೂ ಆದ ಶಿಶುಪಾಲ, ಸಾಲ್ವ, ಜರಾಸಂಧನೇ ಮೊದಲಾದವರೆಲ್ಲರೂ ಪತಿವ್ರತೆಯಾದ ಏಕಾಕಿನಿಯಾಗಿ ಅಂಬಿಕಾಪೂಜೆಗೋಸುಗ ಯಾತ್ರೆಯನ್ನು ಮಾಡುತ್ತಿದ್ದ ರುಕ್ಮಿಣೀದೇವಿಯನ್ನು ನೋಡುವುದಕ್ಕೇ ಆಗಲೀ ಮುಟ್ಟುವುದಕ್ಕೇ ಆಗಲೀ ಏಕೆ ಸಮರ್ಥರಲ್ಲದೇ ಹೋದರು? ಕೃಷ್ಣನಾದರೋ ದೂರದಿಂದ ಬಂದು ಎಲ್ಲ ದುಷ್ಟರಾಜರನ್ನೂ ತೃಣೀಕರಿಸಿ ರುಕ್ಮಿಣೀದೇವಿಯನ್ನು ರಥದಲ್ಲಿ ಕೂಡಿಸಿಕೊಂಡು ಹೋದನು. ಆದ್ದರಿಂದ

ವಿದ್ಯಾವಂತರ ಮತದಲ್ಲಿ ರುಕ್ಮಿಣೀದೇವಿಯು ಶುದ್ಧಳು. ಪರಮಾತ್ಮನಿಗೇನೇ ಪತ್ನಿಯು. ಅವನಲ್ಲಿಯೇ ಸದಾ ಲಗ್ನವಾದ ಮನೋರಥವುಳ್ಳವಳು. ಈ ಪ್ರಕಾರವಾದ ಕಥೆಯು ಭಾಗವತದಲ್ಲಿಯೂ, ರಾಮಾಯಣದಲ್ಲಿಯೂ, ವೇದದಲ್ಲಿಯೂ, ಭಾರತದಲ್ಲಿಯೂ ಶ್ರುತವಾಗಿದೆ. ಆದ್ದರಿಂದ ಸರ್ವದೇಶ ಕಾಲಗಳಲ್ಲಿಯೂ ನಿರ್ದೋಷನಾದ ಪರಮಾತ್ಮನ ಪತ್ನಿಯು ಅತ್ಯಂತವಾಗಿ ದೋಷದೂರಳು. ಇಷ್ಟೇ ಅಲ್ಲ. ಕ್ಷೀರಸಮುದ್ರದ ಮಥನಕಾಲದಲ್ಲಿ ಸಮುದ್ರದಿಂದ ಆವಿರ್ಭೂತಳಾದ, ಧನ್ಯಳಾದ ಲಕ್ಷ್ಮೀದೇವಿಯು ತನ್ನ ಸ್ವಯಂವರದಲ್ಲಿ ದೇವ, ಅಸುರ, ಮಾನುಷರೂಪವಾದ ವಿಷ್ಣ್ವನ್ಯವಾದ ಸರ್ವಜಗತ್ತನ್ನೂ ಅವುಗಳಲ್ಲಿರುವ ದೋಷಗಳನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಅಲ್ಲಿಗಳೆದು ಸರ್ವವೂ ಅಸಾರವೆಂದೂ, ಹರಿಯೇ ಸಾರಾತ್ಸಾರತರನೆಂದೂ ನಿಶ್ಚಯಿಸಿ ಅವನ ಗುಣಗಳನ್ನು ಪದೇಪದೇ ಹೊಗಳಿ ಮತ್ತು ಅವನಲ್ಲಿ ಯಾವದೋಷವೂ ಇಲ್ಲವೆಂದು ಪ್ರಕಟಿಸಿ ಕನ್ಯಾರೂಪವನ್ನು ತಾಳಿದ ಧನ್ಯಳಾದ ರಮಾದೇವಿಯು ಅತ್ಯಂತ ಮನೋಹರನಾದ ಅವನನ್ನು ತನ್ನ ಪತಿಯನ್ನಾಗಿ ಅಂಗೀಕರಿಸಿದಳು. || ೩೫-೪೩ ||

ತಚ್ಚಿತ್ತಮನ್ಯಥಾಕರ್ತುಂ ದೇವೋ ವಾ ದಾನವೋಽಪಿ ವಾ ।
ನೈವಾಶಕ್ನೋತ್ತದಾ ಕೋಽಪಿ ಸಾ ಚ ವವ್ರೇ ಹರಿಂ ಪತಿಂ || ೪೪ ||

ಆ ಕಾಲದಲ್ಲಿ ಯಾವ ದೇವನೇ ಆಗಲೀ, ದಾನವನೇ ಆಗಲೀ ಒಬ್ಬನಾದರೂ ಆಕೆಯ ಮನಸ್ಸನ್ನು ಬೇರೆಯಾಗಿ ಮಾಡಲು ಸಮರ್ಥನಾಗಲಿಲ್ಲ. ಇಂತಹ ರಮಾದೇವಿಯು ಹರಿಯನ್ನು ಪತಿಯನ್ನಾಗಿ ವರಿಸಿದಳು. ||೪೪||

ದೋಷಜ್ಞಾಖಿಲದೇವಾನಾಂ ಗುಣಜ್ಞಾ ರಮಣಸ್ಯ ಚ ।
ಕುತೋಽನ್ಯತ್ರ ರತಿಂ ಕುರ್ಯಾದರತಿಂ ವಾ ಸ್ವಭರ್ತರಿ ||
ಕನ್ಯಾದಶಾಯಾಂ ಯಚ್ಚಿತ್ತಕ್ಷೋಭಂ ಕರ್ತುಂ ನ ಶೇಕಿರೇ ||೪೫||

ಪತಿಮುಕ್ತಾ ಯುವತ್ಯಾಶ್ಚ ಶಕ್ತಿಮುಕ್ತಾಶ್ಚ ಸರ್ವದಾ ।
ಚಿತ್ತಕ್ಷೋಭಾಯ ತೇ ದೈತ್ಯಾಃ ಶಕ್ನುವಂತಿ ಕಥಂ ವದ || ೪೬ ||

ಸರ್ವದೇವತೆಗಳಲ್ಲಿ ದೋಷವನ್ನು ನೋಡತಕ್ಕವಳೂ, ತನ್ನ ರಮಣನಲ್ಲಿ ಗುಣಗ್ರಾಹಿಯೂ ಆದ ರಮಾದೇವಿಯು ಇತರರಲ್ಲಿ ಆಸಕ್ತಿಯನ್ನೂ ತನ್ನ ಪತಿಯಲ್ಲಿ ಅನಾಸಕ್ತಿಯನ್ನೂ ಏಕೆ ತಾನೆ ಮಾಡಿಯಾಳು? ಸರ್ವಥಾ ಮಾಡುವುದೇ ಇಲ್ಲ. ಯಾವ ದೈತ್ಯರು ಕನ್ಯಾವಸ್ಥೆಯಲ್ಲಿಯೇ ಯಾವಾಕೆಯ ಮನಸ್ಸಿನ ಕ್ಷೋಭೆಯನ್ನು ಮಾಡಲು ಸಮರ್ಥರಾಗಲಿಲ್ಲವೋ ಅಂತಹ ದೈತ್ಯರು ಸರ್ವದಾ ಪತಿಯಿಂದ ಯುಕ್ತಳಾದ, ಯೌವನದಿಂದ ಕೂಡಿದ, ಸರ್ವಶಕ್ತಳಾದ ರಮಾದೇವಿಯ ಚಿತ್ತಕ್ಷೋಭೆಯನ್ನು ಮಾಡಲು ಹೇಗೆ ಶಕ್ತರು ಆದಾರು? || ೪೫-೪೬ ||

ಅತಃ ಸ್ವತೋಽನ್ಯತೋ ವಾಪಿ ಕದಾಚಿದಪಿ ಕುತ್ರಚಿತ್ ।
ರಮಾಯಾಂ ಹರಿಭಾಮಾಯಾಂ ದೋಷಸ್ಯಾವಸರೋ ನ ಹಿ ॥

ಆದ್ದರಿಂದ ತನ್ನಿಂದಲೇ ಆಗಲೀ, ತನ್ನಿಂದ ಬೇರೆಯಾದವರಿಂದಾಗಲೀ ಯಾವಾಗಲೂ ಎಲ್ಲಿಯೂ ಹರಿಪತ್ನಿಯಾದ ರಮಾದೇವಿಯಲ್ಲಿ ದೋಷಕ್ಕೆ ಅವಕಾಶವು ಇಲ್ಲವೇ ಇಲ್ಲ. || ೪೭ ||

ಯತೋಽಮಂಗಳಲೇಶಸ್ಯಾಪ್ಯವಕಾಶೋ ನ ತು ಶ್ರಿಯಾಂ ।
ಅತಏವ ವದಂತೀಮಾಂ ಸರ್ವೇ ಮಂಗಳದೇವತಾಂ ॥ ೪೮ ॥

ಲೇಶವಾದ ಅಮಂಗಳಕ್ಕೂ ಕೂಡ ಶ್ರೀದೇವಿಯಲ್ಲಿ ಅವಕಾಶ ಇಲ್ಲವೇ ಇಲ್ಲ. ಆದ್ದರಿಂದ ಈ ಮಹಾತಾಯಿಯನ್ನು ಸರ್ವರೂ ಮಂಗಳದೇವತಾ ಎಂದು ಕರೆಯುತ್ತಾರೆ. || ೪೮ ||

ವಾದಿರಾಜಕೃತೇ ಶ್ರಾವ್ಯೇ ಕಾವ್ಯೇ ಭವ್ಯೇ ಸುಬುದ್ಧಿಭಿಃ ।
ಸೇವ್ಯೇ ಸರಸಭಾರತ್ಯಾಂ ವಿಲಾಸೋಽಭೂತ್ತ್ರಿಯಃ ಪ್ರಿಯಃ ॥೪೯॥

ವಾದಿರಾಜರು ರಚಿಸಿದ, ಕೇಳಲು ಇಂಪಾದ, ಸುಂದರವಾದ, ಉತ್ತಮ ಬುದ್ಧಿಯುಳ್ಳವರಿಂದ ಸೇವಿಸಲ್ಪಡಲು ಯೋಗ್ಯವಾದ ಸರಸಭಾರತೀಕಾವ್ಯದಲ್ಲಿ ತೃತೀಯ ವಿಲಾಸವು ಲಕ್ಷ್ಮೀದೇವಿಗೆ ಪ್ರಿಯವಾಯಿತು. || ೪೯ ||

ಸರಸಭಾರತೀವಿಲಾಸಕಾವ್ಯದಲ್ಲಿ ಮೂರನೆಯ ವಿಲಾಸವು ಪೂರ್ಣವಾಯಿತು.

ಚತುರ್ಥೋ ವಿಲಾಸಃ

|| ಶ್ರೀಗುರುಭ್ಯೋ ನಮಃ ಹರಿಃ ಓಂ ||

[ರಮಾದೇವಿಯು ಸದಾ ಪರಮಾತ್ಮನ ವಿಷಯದಲ್ಲಿ ಬದ್ಧವಾದ ಮನಸ್ಸುಳ್ಳವಳು ಎಂಬುದನ್ನು ಭಾಗವತ ದಶಮಸ್ಕಂಧ ೬೦ನೇ ಅಧ್ಯಾಯದಲ್ಲಿ ವರ್ಣಿತವಾದ ಶ್ರೀಕೃಷ್ಣರುಕ್ಮಿಣಿಯರ ಪ್ರೇಮಕಲಹವನ್ನು ದೃಷ್ಟಾಂತವಾಗಿ ತೋರಿಸುತ್ತಾರೆ. ಇಲ್ಲಿ ಶ್ರೀಕೃಷ್ಣನು ತನ್ನಲ್ಲಿ ದೋಷಗಳನ್ನು ಆರೋಪಿಸಿಕೊಂಡು ಆಡಿದ ಮಾತುಗಳಿಗೆ ರುಕ್ಮಿಣಿಯು ಕೃಷ್ಣನಲ್ಲಿ ಕಲ್ಯಾಣಗುಣಗಳು ಬರುವಂತೆ ವ್ಯಾಖ್ಯಾನ ಮಾಡಿರುವಳು. ಎರಡು ಶ್ರುತಿಗಳಿಗೆ ವಿರೋಧವಿದ್ದಂತೆ ತೋರಿದರೆ ನಿಶ್ಚಿತಾರ್ಥವುಳ್ಳ ಅದೇ ವಿಷಯದ ಬೇರೆ ಪ್ರಮಾಣದ ಬಲದಿಂದ ವಿರೋಧಪರಿಹಾರಮಾಡಿ ಅರ್ಥಮಾಡಬೇಕೆಂಬ ನ್ಯಾಯವು ಈ ವಿಲಾಸದಲ್ಲಿ ವ್ಯಕ್ತವಾಗಿದೆ.]

ಅವತಾರಿಕಾ :—ಒಂದಾನೊಂದು ಸಮಯದಲ್ಲಿ ಏಕಾಂತದಲ್ಲಿ ಪರ್ಯಂಕಸ್ಥನಾದ ಶ್ರೀಕೃಷ್ಣಪರಮಾತ್ಮನನ್ನು ರುಕ್ಮಿಣೀದೇವಿಯು ಕೈಯಲ್ಲಿ ಹಿಡಿದ ವ್ಯಜನ(ಬೀಸಣಿಗೆ)ದಿಂದ ಸೇವೆಯನ್ನು ಮಾಡುತ್ತಿರುವಾಗ ಹರಿಯು ಹಾಸ್ಯಕ್ಕಾಗಿ ಹೀಗೆ ಹೇಳುತ್ತಾನೆ—

ಕೃಷ್ಣ : ರಾಜಭ್ಯೋ ಬಿಭ್ಯತಃ ಸುಭ್ರು ಸಮುದ್ರಂ ಶರಣಂ ಗತಾನ್ |
ಬಲವದ್ಭಿಃ ಕೃತದ್ವೇಷಾನ್ಪ್ರಾಯಸ್ತ್ಯಕ್ತನೃಪಾಸನಾನ್ ||
ಅಸ್ಪಷ್ಟವರ್ತ್ಮನಾಂ ಪುಂಸಾಮಲೋಕಪಥಮೀಯುಷಾಂ |
ಆಸ್ಥಿತಾಃ ಪದವೀಂ ಸುಭ್ರು ಪ್ರಾಯಃ ಸೀದಂತಿ ಯೋಷಿತಃ ||
ಭಾಗವತ ೧೦ನೇ ಸ್ಕಂಧ ಅ. ೬೦. ಶ್ಲೋ. ೧೨-೧೩

ರುಕ್ಮಿಣಿ : ಸತ್ಯಂ ಬಲಾದಿವ ಗುಣೇಭ್ಯ ಉರುಕ್ರಮಾಂತಃ
ಶೇತೇ ಸಮುದ್ರ ಉಪಲಂಭನಮಾತ್ರ ಆತ್ಮಾ |
ಯೋಽನಿತ್ಯಕೇಂದ್ರಿಯಗುಣೈಃ ಕೃತವಿಗ್ರಹಸ್ತ್ವಂ
ತ್ವತ್ಸೇವಯಾ ನೃಪಪದಂ ವಿಧುತಂ ತಮೋಂಧಂ ||
ಭಾಗವತ ೧೦ನೇ ಸ್ಕಂಧ ಅ. ೬೦. ಶ್ಲೋ. ೩೫.

"ಬಲಿಷ್ಠರಾದ ಮತ್ತು ಐಶ್ವರ್ಯವಂತರಾದ ಚೈದ್ಯ, ಜರಾಸಂಧರೇ ಮೊದಲಾದವರು ಸ್ವಯಂವರಕ್ಕೆ ಬಂದ ವೇಳೆಯಲ್ಲಿ ಅವರನ್ನು ಬಿಟ್ಟು ನನ್ನನ್ನು ಏಕೆ ವರಿಸಿದೆ?" ಎಂದು ಹೇಳುತ್ತಾ ತನ್ನಲ್ಲಿ ಅಜ್ಞರಿಗೆ ತೋರ ಬಹುದಾದ ದೋಷಗಳನ್ನು ಆರೋಪಿಸಿಕೊಂಡು ಮಾತನಾಡುತ್ತಾನೆ. ಆ ಮಾತುಗಳಿಗೆಲ್ಲಾ ರುಕ್ಮಿಣೀದೇವಿಯು ಪರಮಾತ್ಮನಲ್ಲಿ ಉತ್ತಮಗುಣಗಳು ಬರುವಂತೆ ವ್ಯಾಖ್ಯಾನಮಾಡಿ ಪರಮಾತ್ಮನು ಕಲ್ಯಾಣಗುಣಪೂರ್ಣನು, ನಿರ್ದೋಷನು ಎಂದು ಸ್ಥಾಪಿಸುವುದರಿಂದ ಆಕೆಯು ಶುಕ್ಲಳೆಂದು ಸಿದ್ಧ ವಾಯಿತು. ಇದನ್ನು ಹೇಳುವುದಕ್ಕಾಗಿ ರುಕ್ಮಿಣೀದೇವಿಯು ಪರಮಾತ್ಮನ ವಾಕ್ಯಗಳಿಗೆ ಮಾಡಿದ ಉತ್ತಮವಾದ ಅರ್ಥವನ್ನು ಸ್ವಲ್ಪ ಈ ವಿಲಾಸದಲ್ಲಿ ತೋರಿಸುತ್ತಾರೆ.

ಕಿಂಚ ಭಾಗವತೇ ಪ್ರೇಮಕಲಹೇ ಹರಿಣೋದಿತಂ ।
ಯದ್ವಾಕ್ಯಂ ತದ್ವಿಚಾರೇಪಿ ನಿರವದ್ಯಾಭವದ್ರಮಾ ॥ ೧ ॥

ಭಾಗವತದಲ್ಲಿ ವರ್ಣಿಸಿರುವ ಶ್ರೀಕೃಷ್ಣ ರುಕ್ಮಿಣೀದೇವಿಯರ ಪ್ರೇಮ-ಕಲಹದ ಸಂದರ್ಭದಲ್ಲಿ ಪರಮಾತ್ಮನಿಂದ ಹೇಳಲ್ಪಟ್ಟ ವಾಕ್ಯವನ್ನು ರುಕ್ಮಿಣೀದೇವಿಯು ವಿಚಾರಮಾಡಿದ ರೀತಿಯಿಂದಲೂ ರಮಾದೇವಿಯು ನಿರ್ದೋಷಳೆಂದು ಸಿದ್ಧವಾಯಿತು. ॥ ೧ ॥

ಬಲವದ್ಭಿಃ ಕೃತದ್ವೇಷಾ ವಯಂ ಇತ್ಯುದಿತೇ ಸತಿ ।
ಭರ್ತ್ರಾ ಭಕ್ತಭಯಚ್ಛೇತ್ರಾ ದಾತ್ರಾ ಸಕಲಸಂಪದಾಂ ॥ ೨ ॥

ಪ್ರತ್ಯಾಹ ತಂ ಪತಿಂ ಪ್ರೇತ್ಯಾ ಲಕ್ಷ್ಮೀರಕ್ಷುಣ್ಣಧೀಃ ಕಿಲ ।
ಬಲವಾನಿಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ ॥ ೩ ॥

ಇತಿ ಪ್ರಾಚೀನವಚನಾದನಿಕ್ಷೈಃ ಪ್ರಾಕೃತೇಂದ್ರಿಯೈಃ ।
ಬ್ರಹ್ಮರುದ್ರೇಂದ್ರಪೂರ್ವಾಣಾಂ ಗೀರ್ವಾಣಾನಾಂ ಚ ಸರ್ವದಾ ॥

ನಿತ್ಯಸ್ವರೂಪಭೂತಾನಾಂ ಶಕ್ತಿಚಿತ್ಸುಖತೇಜಸಾಂ ।
ನಿರೋಧಕೈಸ್ತತೋ ಹೇತೋಸ್ತೇಭ್ಯೋಽಪಿ ಬಲವತ್ತರೈಃ ॥ ೫ ॥

ಅನಾದಿಕಾಲಮಾರಭ್ಯ ಕೃತದ್ವೇಷೈರಿವ ಪ್ರಭೋ ।
ನಿತ್ಯಜ್ಞಾನಾತ್ಮೇಂದ್ರಿಯಸ್ತ್ವಂ ಯತಸ್ತ್ಯಕ್ತೋಽಪಿ ದೂರತಃ ॥೬॥

ಇತಿ ಭಾವಾದಿದಂ ಸರ್ವಮುಕ್ತಂ ಮಾಂ ಪ್ರತಿಲೀಲಯಾ ।
ನ ತು ತ್ವತ್ತೋಽಪಿ ಬಲವಾನ್ ಕಶ್ಚಿದಸ್ತಿ ಪುಮಾನಿತಿ ॥ ೭ ॥

"ಬಲವದ್ಭಿಃ ಕೃತದ್ವೇಷಾ ವಯಂ" "ನಾವು ಬಲಿಷ್ಠರಾದವರಿಂದ ದ್ವೇಷ ಮಾಡಲ್ಪಟ್ಟವರು–ಅಂದರೆ ಬಲಿಷ್ಠರಾದ ಜರಾಸಂಧನೇ ಮೊದಲಾದವರು ನಮ್ಮಲ್ಲಿ ದ್ವೇಷಮಾಡಿದ್ದಾರೆ." ಈಪ್ರಕಾರವಾಗಿ ಭಕ್ತರ ಭಯವನ್ನು ನಾಶ ಮಾಡತಕ್ಕ ಅವರಿಗೆ ಸರ್ವಸಂಪದ್ದಾಯನಾದ ಭರ್ತನಿಂದ ಹೇಳಲ್ಪಡುತ್ತಿರಲು ಪ್ರೀತಿಯಿಂದ "ಅಕ್ಷುಣ್ಣಧೀಃ"–ನಿರ್ವಿಕಾರವಾದ, ಸಮೀಚೀನ ಜ್ಞಾನ ವುಳ್ಳ, ಲಕ್ಷ್ಮಿಯ ಅವತಾರಳಾದ ರುಕ್ಮಿಣಿಯು ಹೀಗೆ ಹೇಳಿದಳಲ್ಲವೇ! ರುಕ್ಮಿಣಿಯ ಮಾತು. "ನಿತ್ಯವಾದ ಶಕ್ತಿ, ಸುಖ, ತೇಜಸ್ಸು ಇವೇ ಮೊದಲಾದ ಸ್ವರೂಪಭೂತ ಗುಣಗಳುಳ್ಳವರು ಬ್ರಹ್ಮರುದ್ರೇಂದ್ರರೇ ಮೊದಲಾದ ದೇವತೆಗಳು–ಅವರೂ ಇವರು ಇಂದ್ರಿಯಗಳಿಗೆ ವಶರು:— ಸರ್ವದಾ ಇಂದ್ರಿಯಗಳ ಸಮೂಹವು ಬಹಳ ಬಲಿಷ್ಠವಾದವು. ಇವು ವಿದ್ವಾಂಸರನ್ನೂ ಎಳೆದುಬಿಡುತ್ತವೆ—ಎಂಬ ಈ ಪ್ರಾಚೀನ ವಾಕ್ಯಕ್ಕೆ ಅನುಗುಣವಾಗಿ ಅನಿತ್ಯವಾದ ಈ ಪ್ರಾಕೃತೇಂದ್ರಿಯಗಳು ಹಿಂದೆ ಹೇಳಿದ ದೇವತೆಗಳ ಸ್ವರೂಪಭೂತವಾದ ಉತ್ತಮ ಗುಣಗಳು ಪ್ರಕಾಶವಾಗದಂತೆ ಅಡ್ಡಿಮಾಡುತ್ತವೆ. ಅಂದಮೇಲೆ ನಿತ್ಯವಾದ, ಜ್ಞಾನಾತ್ಮಕವಾದ ಇಂದ್ರಿಯ ಗಳುಳ್ಳ ನೀನು ಈ ಪ್ರಾಕೃತೇಂದ್ರಿಯಗಳಿಂದ ದೂರವಾಗಿ ಬಿಡಲ್ಪಟ್ಟದ್ದಿ. ಇದನ್ನು ನೋಡಿದರೆ ಅನಾದಿಕಾಲದಿಂದ ನಿನ್ನಲ್ಲಿ ಈ ಇಂದ್ರಿಯಗಳು ದ್ವೇಷ ಮಾಡಿ ಏನು ಮಾಡಲೂ ಸಾಧ್ಯವಿಲ್ಲದೇ ನಿನ್ನಿಂದ ದೂರವಾಗಿಹೋಗಿ ವೆಯೋ ಎಂಬಂತೆ ತೋರುತ್ತದೆ. ಇದರ ಅಭಿಪ್ರಾಯ–ಪ್ರಾಕೃತೇಂದ್ರಿಯ

ಗಳು ದೇವತೆಗಳನ್ನೂ ಕೂಡ ಬಾಧಿಸಲು ಸಮರ್ಥವಾಗಿವೆ—ಆದರೆ ನಿನ್ನನ್ನು ಏನೂ ಮಾಡಲಾರವು. ಈ ಅಭಿಪ್ರಾಯದಿಂದ ಎಲೈ ಸ್ವಾಮಿಯೇ, ಹಾಸ್ಯಕ್ಕಾಗಿ ಬೇರೇ ಅಭಿಪ್ರಾಯ ತೋರುವಹಾಗೆ ಈ ಸರ್ವವೂ ನಿನ್ನಿಂದ ಹೇಳಲ್ಪಟ್ಟಿತು. ನಿನಗಿಂತ ಬಲಿಷ್ಠನಾದ ಪುರುಷನು ಯಾರೂ ಯಾವಾಗಲೂ ಇಲ್ಲವೇ ಇಲ್ಲ. || ೨-೭ ||

ಬ್ರಹ್ಮದೇವರು ಇಂದ್ರಿಯಗಳನ್ನು ಜಯಿಸಿದವರು. ಆದರೂ ಛತ್ರಿ-ನ್ಯಾಯದಿಂದ ಅವರ ಹೆಸರನ್ನೂ ಇತರ ದೇವತೆಗಳ ಜೊತೆಗೆ ಸೇರಿಸಿದೆ.

ಕಟಾಕ್ಷಕ್ಷೇಪಮಾತ್ರೇಣ ಯಸ್ತ್ವಂ ಕಲ್ಪಕ್ಷಯೇ ಸತಿ |
ಸಸುರಾಸುರಗಂಧರ್ವಂ ಸ ಯಕ್ಷೋರಗರಾಕ್ಷಸಂ || ೮ ||

ಜಗತ್ಸಂಹೃತ್ಯ ಸಕಲಂ ಮಯಾ ಸಹ ಲಯಾಂಬುಧೌ |
ಶೇಷೇತ್ವತ್ತೋಽಪಿ ಬಲವಾನ್ ಕೋಽಸ್ತಿ ತತ್ಪುರುಷೋತ್ತಮ || ೯ ||

ಕಲ್ಪಾಂತ್ಯದಲ್ಲಿ ಕಡೆಗಣ್ಣಿನಿಂದ ನೋಡೋಣಮಾತ್ರದಿಂದ ಸುರಾಸುರ ಗಂಧರ್ವ ಯಕ್ಷ ಉರಗ ರಾಕ್ಷಸರಿಂದ ಸಹಿತವಾದ ಸಕಲ ಜಗತ್ತನ್ನೂ ಸಂಹಾರಮಾಡಿ ನನ್ನ ಸಹಿತವಾಗಿ ಪ್ರಲಯಸಮುದ್ರದಲ್ಲಿ ಮಲಗಿರುವಿ. ಆದ್ದರಿಂದ ಎಲೈ ಪುರುಷೋತ್ತಮನೇ, ನಿನಗಿಂತ ಬಲಿಷ್ಠನು ಯಾವನು ಇರುವನು ? || ೮-೯ ||

ಇತಿ ಪ್ರಿಯೋಕ್ತಿತಶ್ಚಾಪಿ ಚಿತ್ತಕ್ಷೋಭೋ ನ ಕಶ್ಚನ |
ಕಿಂತು ಪತ್ಯುಃ ಪ್ರಿಯಂ ನಿತ್ಯಮುಕ್ತತ್ವಾಖ್ಯಂ ಮನೋಹರಂ(ರಮಂ)

ಅರ್ಥಮೇವ ಗತಕ್ರೋಧಾ ಯಾ ವಕ್ತಿ ಸ್ವಪತಿಂ ಪ್ರತಿ |
ಭರ್ತರೀರ್ಷ್ಯಾದ್ವೇಷಪೂರ್ವದೋಷಾಣಾಮೀದೃಶೀ ರಮಾ ||

ಕಥಂ ಪಾತ್ರೀಭವೇನ್ಮಂದ ಕದಾಚಿತ್ಕೇನಚಿತ್ಕ್ವಚಿತ್ |
ಸರ್ವಶಾಸ್ತ್ರಾರ್ಥಕುಶಲಾ ಸರ್ವಜ್ಞಾ ವೇದಮಾನಿನೀ || ೧೨ ||

ಇತಿಯಾ(ಇತೋಽಪಿ) ನಿರವದ್ಯಾಸೀತ್ಸೇಯಂ ಮಂಗಳದೇವತಾ |

ಈಪ್ರಕಾರವಾಗಿ ಪತಿಯಿಂದ ಹೇಳಿಸಿಕೊಳ್ಳಲ್ಪಟ್ಟವಳಾದರೂ ಆಕೆಯು ಯಾವ ಮನಸ್ಕ್ಷೋಭೆಯೂ ಇಲ್ಲದವಳಾದಳು. ಇಷ್ಟೇ ಅಲ್ಲ, ಪತಿಗೆ ಪ್ರಿಯಕರವಾದ “ಪರಮಾತ್ಮನು ನಿತ್ಯಮುಕ್ತನು” ಎಂಬ ಮನೋಹರವಾದ ಅರ್ಥವನ್ನೇ ಕೋಪವಿಲ್ಲದವಳಾಗಿ ತನ್ನ ಪತಿಯನ್ನು ಕುರಿತು ಹೇಳಿದಳು, ಎಂದಮೇಲೆ, ಎಲೈ ಮಂದ, ಇಂತಹ ಸರ್ವಶಾಸ್ತ್ರಾರ್ಥವನ್ನಾಡುವುದರಲ್ಲಿ ಕುಶಲಳೂ, ಸರ್ವಜ್ಞಳೂ, ವೇದಾಭಿಮಾನಿಯೂ ಆದ ರಮಾದೇವಿಯು ಯಾವಾಗಲೇ ಆಗಲೀ, ಯಾವ ಕಾರಣದಿಂದಲೇ ಆಗಲೀ, ಯಾವೆಡೆಯಲ್ಲಾಗಲೀ, ಗಂಡನ ವಿಷಯದಲ್ಲಿ ಈರ್ಷ್ಯಾದ್ವೇಷ ಮೊದಲಾದ ದೋಷಗಳಿಗೆ ಹೇಗೆ ಪಾತ್ರಳಾದಾಳು? ಈರೀತಿಯಾಗಿ ಯಾವ ರುಕ್ಮಿಣಿಯು ನಿರ್ದೋಷಳಾದಳೋ ಆಕೆಯಿಂದ ಅಭಿನ್ನಳಾದ ರಮಾದೇವಿಯು ಮಂಗಳ ದೇವತಾ ಎಂದೆನಿಸಿಕೊಂಡಳು. || ೧೦-೧೩(೧) ||

ನಿಷ್ಕಿಂಚನಾ ವಯಂ ಶಶ್ವನ್ನಿಷ್ಕಿಂಚನಜನಪ್ರಿಯಾಃ || ೧೩(೨) ||
ತಸ್ಮಾತ್ಪ್ರಾಯೇಣ ನೋಹ್ಯಾಢ್ಯಾ ನ ಭಜಂತಿ ಸುಮಧ್ಯಮೇ ||

ವಾದಿರಾಜರು ಹಿಂದೆ ಹೇಳಿದ ವಿಷಯದಲ್ಲಿ ಮತ್ತೊಂದು ದೃಷ್ಟಾಂತವನ್ನು ಹೇಳುತ್ತಾರೆ. "ನಿಷ್ಕಿಂಚನಾ ಇತಿ" ಇದು ಶ್ರೀಕೃಷ್ಣನ ವಾಕ್ಯ. ಇದಕ್ಕೆ ಮೇಲೆ ತೋರುವ ಅರ್ಥ ಹೀಗೆ. ನಾವು ಬಡವರು–ಬಡ ಜನರಿಗೇ ನಾವು ಪ್ರಿಯರು–ಆದ್ದರಿಂದಲೇ ಪ್ರಾಯಶಃ ಶ್ರೀಮಂತರು ನಮ್ಮನ್ನು ಸೇವಿಸುವದಿಲ್ಲ. || ೧೩(೨)-೧೪(೧) ||

ಇತ್ಥಂ ರಹಸಿ ಪತ್ಯೈವ ಪ್ರೋಕ್ತೇಽಪಿ ಪ್ರತ್ಯುವಾಚ ತಂ || ೧೪ ||

ರಮಾ ಗತಭ್ರಮಾ ರಮ್ಯತಮಾ ಜ್ಞಾತಸದಾಗಮಾ |
ಯತಃ ಕಿಂಚಿತ್ಫಲಂ(ಕ್ಷುದ್ರ) ಧನಧಾನ್ಯಾಂಬರಾದಿಕಂ || ೧೫ ||

ನಶ್ವರಂ ಭಯದಂ ನಾಸ್ತಿ ತ್ವತ್ತೋ ಭಕ್ತವಿಮುಕ್ತಿದಾತ್ |
ಕಿಂತು ಸರ್ವಜನಪ್ರಾರ್ಥ್ಯಂ ಮುಕ್ತ್ಯಾಖ್ಯಮಕುತೋಭಯಂ ||

ನಿತ್ಯಾನ್ನಪಾನಚಿತ್ಸೌಖ್ಯವಸ್ತ್ರಭೂಷಣದಾಯಕಂ ।
ಬಂಧನಿರ್ಬಂಧವಿಧುರಂ ಮಂದಮಾರುತಸೇವಿತಂ ॥ ೧೭ ॥

ಚಂದನೇನ ಸ್ರಜಾ ಚಂದ್ರಮುಖೀಭಿಶ್ಚ ಸುಖಪ್ರದಂ ।
ಇಹಾಪಿ ಕಲ್ಪಪರ್ಯಂತಸ್ಥಾಯಿಭಾಗ್ಯಮಕಂಟಕಂ ॥ ೧೮ ॥

ಈದೃಶಂ ಮಹದೇವಾಸ್ತಿ ಫಲಂ ನಾಶವಿವರ್ಜಿತಂ ।
ಅತೋ ನಿಷ್ಕಿಂಚನೋಽಸಿ ತ್ವಂ ನ ತು ದಾರಿದ್ರ್ಯತಃ ಕ್ವಚಿತ್ ॥೧೯॥

ಹೀಗೆ ಕೃಷ್ಣಪರಮಾತ್ಮನು ಏಕಾಂತದಲ್ಲಿ ಹೇಳಿದರೂ ಭ್ರಮ-ರಹಿತಳಾದ, ಅತ್ಯಂತ ಮನೋಹರಳಾದ, ಶುದ್ಧವಾದ ಆಗಮಾರ್ಥವನ್ನು ತಿಳಿದ ರಮಾದೇವಿಯು ಶ್ರೀಕೃಷ್ಣನ ವಾಕ್ಯಕ್ಕೆ ಉತ್ತರವಾದ ಅರ್ಥವನ್ನು ಈಪ್ರಕಾರ ಮಾಡುತ್ತಾಳೆ:—ಭಕ್ತರಿಗೆ ಮೋಕ್ಷವನ್ನು ಕೊಡುವ ನಿನ್ನಿಂದ ಕ್ಷುದ್ರವಾದ ಮತ್ತು ನಾಶವನ್ನು ಹೊಂದುವ, ಭಯವನ್ನು ಕೊಡುವ, ಧನ ಧಾನ್ಯ ವಸ್ತ್ರ ಮೊದಲಾದ ಅಲ್ಪ ಫಲವು ನಿನ್ನ ಭಕ್ತರಿಗಿಲ್ಲ, ಆದರೆ ಅತ್ಯುತ್ತಮ ಫಲವೇ ನಿನ್ನ ಭಕ್ತರಿಗಾಗುವುದು. ಈ ಮಹತ್ಫಲ ಯಾವುದೆಂದರೆ—ಯಾವುದರಿಂದಲೂ ಭಯವಿಲ್ಲದಹಾಗೆ ಮಾಡುವ, ಸರ್ವರಿಂದಲೂ ಪ್ರಾರ್ಥ್ಯವಾದ ಮುಕ್ತಿಯೆಂಬ ಫಲ. ಮುಕ್ತಿಯಲ್ಲಿ ಏನುಂಟೆಂದರೆ ಹೇಳುತ್ತಾರೆ. ನಿತ್ಯವಾದ ಅನ್ನ ಪಾನಗಳು, ಚೈತನ್ಯರೂಪವಾದ ಆನಂದ, ವಸ್ತ್ರಭೂಷಣಾದಿಗಳು ಇವು ಮುಕ್ತಿಯಲ್ಲುಂಟು. ಇಷ್ಟೇ ಅಲ್ಲ, ಯಾವ ವಿಧವಾದ ಬಂಧವೇ ಆಗಲೀ ನಿರ್ಬಂಧವೇ ಆಗಲೀ ಆ ಮುಕ್ತಿಯಲ್ಲಿಲ್ಲ. ಮಂದಮಾರುತದಿಂದ ವ್ಯಾಪ್ತವಾದ ಸ್ಥಳದಲ್ಲಿ ಗಂಧ, ಹುವ್ವಿನಹಾರ, ಕಮಲದಂತೆ ಮುಖವುಳ್ಳ ಸ್ತ್ರೀಯರು ಇವರಿಂದ ಬರುವ ಸುಖ ಆ ಮುಕ್ತಿಯಲ್ಲಿ ಉಂಟು. ಸಂಸಾರಾವಸ್ಥೆಯಲ್ಲಿಯೂ ಕೂಡ ನಿನ್ನ ಭಕ್ತರಿಗೆ ಕಲ್ಪಪರ್ಯಂತವಾಗಿ ನಿಶ್ಚಲವಾದ, ಅಕಂಟಕವಾದ ಭಾಗ್ಯವುಂಟು. ಈ ಪ್ರಕಾರವಾದ ದೊಡ್ಡದಾದ ನಾಶರಹಿತವಾದ ಫಲವೇ ನಿನ್ನ ಭಕ್ತರಿಗೆ ನಿನ್ನಿಂದ ಇರುವುದರಿಂದ ನೀನು ನಿಷ್ಕಿಂಚನನೆಂದು ಕರೆಯಲ್ಪಟ್ಟಿರುತ್ತಿ. ದರಿದ್ರನಾದ್ದರಿಂದ ಅಲ್ಲ.

ಯಾವನಿಂದ ಸ್ವಲ್ಪವಿಲ್ಲವೋ ಅವನು ನಿಷ್ಕಿಂಚನ. ಅಂದರೆ ಅಭಿಪ್ರಾಯ ಇದು—ಪರಮಾತ್ಮನು ಅಲ್ಪಫಲ ಕೊಡತಕ್ಕವನಲ್ಲ, ಬಹುಫಲ ಕೊಡುವವನು. ಆದ್ದರಿಂದ ನಿಷ್ಕಿಂಚನ ಎಂದು ಕರೆಸಿಕೊಳ್ಳುತ್ತಾನೆ. ||೧೮-೧೯||

ದರಿದ್ರನೇ ಎಂದು ಏಕೆ ಅರ್ಥಮಾಡಬಾರದು? ಎಂದರೆ ಅದಕ್ಕೆ ಬಾಧಕವನ್ನು ಹೇಳುತ್ತಾರೆ.

ಅನರ್ಘ್ಯಹಾರಕೇಯೂರಕುಂಡಲಾಂಗದನೂಪುರೈಃ ।
ರತ್ನಕಾಂಚೀಕಂಕಣಾದ್ಯೈಃ ಕೌಸ್ತುಭೇನ ಚ ಭಾಸ್ವತಾ ॥ ೨೦ ॥

ಅಲಂಕೃತತನೋರ್ನಿತ್ಯಂ ರತ್ನಮಂಟಪವಾಸಿನಃ ।
ರಮಾಧರಾಲಿಂಗಿತಸ್ಯ ದಿಕ್ಷು ದಿಕ್ಷು ಸುರರ್ಷಿಭಿಃ ॥ ೨೧ ॥

ನರೈಶ್ಚ ನಾನಾವಿಭವೈಃ ಪೂಜ್ಯಮಾನಸ್ಯ ನಿತ್ಯದಾ ।
ಸತಾಂ ಮತೇ ದರಿದ್ರತ್ವಂ ಕಥಂ ದೇವ ಭವೇತ್ತ್ವವ ॥ ೨೨ ॥

ಯತಶ್ಚ ಬ್ರಹ್ಮರುದ್ರಾದ್ಯಾ ದೇವಾಃ ಸರ್ವೇ ದಿಗೀಶ್ವರಾಃ ।
ಕೃತಾಸ್ತ್ವಯಾ ನಿಜಜನಾಃ ಸರ್ವಯಜ್ಞಭುಜೋಽಪಿ ಚ ॥೨೩॥

ಯಸ್ಮಾದೇಷಾಂ ಮಹಾಭಾಗ್ಯವತಾಂ ಕಿಂಚಿದ್ಧನಂ ಚ ನ ।
ಅತೋ ನಿಷ್ಕಿಂಚನಜನಪ್ರಿಯಶ್ಚಾಸಿ ತ್ವಮಚ್ಯುತ ॥ ೨೪ ॥

ದರಿದ್ರಪ್ರಿಯತಾ ದೇವ ಕಥಂ ಸ್ಯಾದೀದೃಶಸ್ಯ ತೇ ।

ಅಮೌಲ್ಯವಾದ ಹಾರ, ತೋಳುಬಂದಿಗಳು, ಕುಂಡಲ, ಬಾಹುಪುರಿ, ಕಾಲುಕಡಗ, ರತ್ನಮಯವಾದ ಉಡಿದಾರ, ಕೈಕಡಗ ಮತ್ತು ಪ್ರಕಾಶಿಸುವ ಕೌಸ್ತುಭ ಇವುಗಳಿಂದ ಅಲಂಕೃತವಾದ ದೇಹವನ್ನು ತಾಳಿದ, ಶ್ರೀ-ಭೂದೇವಿಯರಿಂದ ಆಲಿಂಗಿತನಾಗಿ ಸರ್ವದಾ ರತ್ನಮಯಮಂಟಪದಲ್ಲಿ ಶೋಭಿಸುತ್ತಿರುವ, ಸರ್ವದಿಕ್ಕಿನಲ್ಲಿಯೂ ನೆಲಸಿರುವ ದೇವತೆಗಳೂ, ಋಷಿಗಳೂ, ಮನುಷ್ಯರೂ ಇವರಿಂದ ನಾನಾಪ್ರಕಾರವಾದ ಉತ್ತಮ ಪೂಜಾ ದ್ರವ್ಯಗಳಿಂದ ಪೂಜಿತನಾಗಿ ವಿರಾಜಿಸುತ್ತಿರುವ ಎಲೈ ದೇವ! ಇಂತಹ ನಿನಗೆ ಸಜ್ಜನರ ಮತದಲ್ಲಿ ದಾರಿದ್ರ್ಯವು ಹೇಗೆ ಆದೀತು?

ಇಲ್ಲಿ ವಾದಿರಾಜರು ವೇದವನ್ನು ವ್ಯಾಖ್ಯಾನಮಾಡುವ ಸಂದರ್ಭದಲ್ಲಿ ಯಾವುದಾದರೂ ಒಂದು ಪದಕ್ಕೆ ಆಪಾತತಃ, ಬೇರೆ ನಿಶ್ಚಿತವಾದ ಪ್ರಮಾಣಕ್ಕೆ ವಿರೋಧವಾಗಿ ಅರ್ಥತೋರಿದರೆ, ಆ ನಿಶ್ಚಿತವಾದ ಪ್ರಮಾಣಕ್ಕೆ ವಿರೋಧವಿಲ್ಲದಂತೆ ಪದಕ್ಕೆ ಅರ್ಥಮಾಡಬೇಕು ಎಂಬ ನ್ಯಾಯವನ್ನು ಸೂಚಿಸಿದ್ದಾರೆ. ಪ್ರಕೃತ 'ನಿಷ್ಕಿಂಚನ' ಎಂದರೆ ದರಿದ್ರನು ಎಂದು ಅರ್ಥ ತೋರುತ್ತದೆ. ಆದರೆ ಈ ಅರ್ಥವು ಪರಮಾತ್ಮನಿಗೆ ಯೋಗ್ಯವಾದದ್ದಲ್ಲ. ಆದ್ದರಿಂದ ಪರಮೈಶ್ವರ್ಯರೂಪನಾದ ಪರಮಾತ್ಮನಿಗೆ ಯೋಗ್ಯವಾದ ಅಲ್ಪವಲ್ಲದ ಉತ್ತಮ ಮುಕ್ತಿರೂಪವಾದ ಫಲವನ್ನು ಕೊಡುವವನು ಎಂದು 'ನಿಷ್ಕಿಂಚನ' ಪದಕ್ಕೆ ಅರ್ಥಮಾಡಬೇಕೆಂಬುದನ್ನು ತೋರಿಸಿದ್ದಾರೆ.

ಈಗ "ನಿಷ್ಕಿಂಚನ ಜನಪ್ರಿಯಃ" ಎಂಬುವುದಕ್ಕೆ ವ್ಯಾಖ್ಯಾನ ಮಾಡುತ್ತಾಳೆ. ನಿನ್ನಿಂದ ನಿನ್ನ ಭಕ್ತರಾದ ಬ್ರಹ್ಮರುದ್ರಾದಿದೇವತೆಗಳು ದಿಗೀಶ್ವರರಾಗಿಯೂ ಸರ್ವಯಜ್ಞಭೋಕ್ತೃಗಳಾಗಿಯೂ ಮಾಡಲ್ಪಟ್ಟವರಾಗಿದ್ದಾರೆ. ಆದ್ದರಿಂದ ಮಹಾಭಾಗ್ಯವಂತರಿವರು. ಅಲ್ಪಭಾಗ್ಯವುಳ್ಳವರಲ್ಲ. ಅದಕ್ಕಾಗಿಯೇ ಎಲೈ ಅಚ್ಯುತ! ನೀನು ನಿಷ್ಕಿಂಚನ ಜನಪ್ರಿಯನಾಗಿದ್ದೀಯೆ. ದರಿದ್ರರ ಪ್ರಿಯನಲ್ಲ. ॥ ೩೭-೩೮ ॥ ಈ ರೀತಿಯಲ್ಲಿ ಮಹದೈಶ್ವರ್ಯವಂತರಾದ ಬ್ರಹ್ಮಾದಿದೇವತೆಗಳಿಗೆ ಪ್ರಿಯನಾದ ನೀನು ಹೇಗೆ ದರಿದ್ರಜನರ ಪ್ರಿಯನು ಆಗುವಿ?

ಧನವಂತಶ್ಚ ಕಾಂತಾ ಯೇ ತೇಷ್ವಾಢ್ಯಾ ಹಿ ಸತಾಂ ಮತಾಃ ॥೩೫॥

ಧನವಂತೋ ಮದಾಂಧಾ ಯೇ ತೇ ಚಾಢ್ಯಾ ಇತಿ ಕೀರ್ತಿತಾಃ ।
ಬ್ರಹ್ಮಾದಿಸುರಸೇವ್ಯಸ್ಯ ತವಾಢ್ಯೋಕ್ತಿರ್ನ ಶೋಭತೇ ॥ ೩೬ ॥

ಈಗ "ತಸ್ಮಾತ್ಪ್ರಾಯೇಣ ನೋ ಹ್ಯಾಢ್ಯಾ ನ ಭಜಂತಿ ಸುಮಧ್ಯಮೇ" ಇದಕ್ಕೆ ಮೇಲೆ ತೋರುವ ಅರ್ಥ ಹೀಗೆ—ಆದ್ದರಿಂದಲೇ ಎಲೈ ಸುಂದರಿಯೇ, ಆಢ್ಯರು ನಮ್ಮನ್ನು ಸೇವಿಸುವದಿಲ್ಲ. ರುಕ್ಮಿಣೀದೇವಿಯು ಇದಕ್ಕೆ ಯೋಗ್ಯವಾದ ಅರ್ಥವನ್ನು ಹೇಳುತ್ತಾಳೆ. ಏನೆಂದರೆ:—ಸಜ್ಜನರ ಅಭಿಪ್ರಾಯದಲ್ಲಿ

ಧನವಂತರೂ, ಶಾಂತರೂ ಯಾರೋ ಅವರು ಆಢ್ಯರು. ಅಲ್ಲದೆ ಧನ-ವಂತರೂ, ಮದಾಂಧರೂ ಯಾರೋ ಅವರೂಕೂಡ ಆಢ್ಯರೆಂದು ಕರೆಸಿಕೊಳ್ಳುತ್ತಾರೆ. ಬ್ರಹ್ಮಾದಿಸುರರಿಂದ ಸೇವ್ಯನಾದ ನಿನಗೆ ಆಢ್ಯರು ಸೇವಿಸುವುದಿಲ್ಲವೆಂಬ ನಿನ್ನ ಮಾತಿನಲ್ಲಿ ಆಢ್ಯಶಬ್ದಕ್ಕೆ ಧನವಂತರೂ ಮತ್ತು ಶಾಂತರಾದವರೂ ಎಂಬ ಅರ್ಥವು ಯೋಗ್ಯವಾಗುವದಿಲ್ಲ. ಏಕೆಂದರೆ– ಬ್ರಹ್ಮಾದಿಗಳಿಂದ ಸೇವ್ಯನಾದ ನಿನಗೆ ಬ್ರಹ್ಮಾದಿಗಳಿಂದ ಸೇವ್ಯನಲ್ಲ ಎಂಬುದು ಪ್ರಮಾಣಬಾಧಿತ. || ೨೫-೨೬ ||

ದ್ವಿತೀಯಸ್ತು ದಶಾಸ್ಯಾದ್ಯೈರಸೇವ್ಯಸ್ಯ ತವೋಚಿತಃ |
ಈದೃಶಾಢ್ಯಾ ಸೇವ್ಯತಾ ಚ ಗುಣ ಏವಾಭವತ್ತವ || ೨೭ ||

ದಶಾಸ್ಯನೇ ಮೊದಲಾದವರಿಂದ ಸೇವಿಸಲ್ಪಡದೇ ಇರತಕ್ಕ ನಿನಗೆ ಆಢ್ಯಸೇವಿತನಲ್ಲ ಎಂಬಲ್ಲಿ ಧನವಂತರೂ ಮತ್ತು ಮದಾಂಧರೂ ಎಂಬರ್ಥವು ಆಢ್ಯಶಬ್ದಕ್ಕೆ ಯೋಗ್ಯವಾದದ್ದು. ಇಂತಹ ಆಢ್ಯರಿಂದ ಸೇವಿಸಲ್ಪಡದೇ ಇರುವುದು ನಿನಗೆ ಗುಣವೇ ಆಯಿತು. || ೨೭ ||

ಕಿಂಚ ದೋಷಾಢ್ಯ ಇತ್ಯಾಹುರ್ಯಸ್ಯ ದೋಷೋ ಮಹಾನ್ ಭುವಿ |
ಈದೃಶಾಢ್ಯಾಸೇವ್ಯತಾ ಚ ನಿರ್ದೋಷಸ್ಯ ಗುಣಸ್ತವ || ೨೮ ||

ಅಲ್ಲದೆ ಲೋಕದಲ್ಲಿ ಯಾವನ ದೋಷವು ಹೆಚ್ಚಾದ್ದೋ ಅವನನ್ನು ದೋಷಾಢ್ಯನೆಂದು ಕರೆಯುತ್ತಾರೆ. ಇಂತಹ ದೋಷಿಗಳಿಂದ ಸೇವಿಸ-ಲ್ಪಡದೇ ಇರುವದು ನಿರ್ದೋಷನಾದ ನಿನಗೆ ಒಂದು ಗುಣವೇ ಆಯಿತು. ದೋಷವಲ್ಲ. || ೨೮ ||

ಇತೋಽಪಿ ನೋಽಸ್ಮಾನ್ನ ಭಜಂತ್ಯಾಢ್ಯಾ ಇತಿ ವಚಸ್ತವ |
ಯುಕ್ತಮೇವಾಭವೇದ್ದೇವ ಯಚ್ಛಬ್ದಃ ಕಾಮಧುಗ್ವಿದಾಂ ||೨೯||

ನಿರವದ್ಯಭವತ್ಪಾದಸಂಗಿಗಂಗಾಂಬುಸಂಗತಂ |
ಕ್ಷುದ್ರಾಂಬುಚ ನೃಣಾಂ ದೋಷವಿದ್ರಾವಣಕರಂ ಯಥಾ || ೩೦ ||

ತಥಾ ನಿರ್ದೋಷಸುಗುಣಪಾತ್ರೀಭೂತೇ ಮಹಾಪ್ರಭೌ ।
ದೋಷಶಬ್ದಾಶ್ಚ ಸುಗುಣವಾಚಕಾ ಸ್ಯುರಹೋ ತ್ವಯಿ ॥ ೩೧ ॥

ಈಕಾರಣದಿಂದಲೂ ಆಢ್ಯರು ನಮ್ಮನ್ನು ಭಜಿಸುವದಿಲ್ಲವೆಂಬ ನಿನ್ನ ವಾಕ್ಯವು ನಿನ್ನ ವಿಷಯದಲ್ಲಿ ಯೋಗ್ಯವೇ ಆಯಿತು. ಏಕೆಂದರೆ ಜ್ಞಾನಿಗಳಿಗೆ ಅವರ ಇಚ್ಛಾನುಸಾರವಾಗಿ ಅರ್ಥವನ್ನು ಶಬ್ದಗಳು ಕೊಡುವವು. ದೋಷ ವಿಲ್ಲದ ನಿನ್ನ ಪಾದಸಂಬಂಧದಿಂದ ಪವಿತ್ರವಾದ ಗಂಗೋದಕದ ಸಂಬಂಧ ವುಳ್ಳ ಕ್ಷುದ್ರವಾದ ನೀರೂಕೂಡ ಜನರ ದೋಷವನ್ನು ದೂರಮಾಡುತ್ತದೆ ಎಂಬುದು ಹೇಗೋ ಹಾಗೆ ನಿರ್ದೋಷವಾದ ಸುಗುಣಗಳಿಂದ ಪೂರ್ಣನಾದ ಮಹಾ ಪ್ರಭುವಾದ ನಿನ್ನಲ್ಲಿ ಲೋಕದೃಷ್ಟಿಯಿಂದ ದೋಷಶಬ್ದಗಳು ಎಂದು ತೋರುವ ಶಬ್ದಗಳೂ ಕೂಡ ನಿನ್ನಲ್ಲಿ ಉಪಯೋಗಿಸಿದಾಗ ಉತ್ತಮ ಗುಣಗಳನ್ನು ಹೇಳುವವೇ ಆಗುತ್ತವೆ. ಅಹೋ ಏನಾಶ್ಚರ್ಯ ! ॥೨೯-೩೧॥

ಇತ್ಯಾದ್ಯಪ್ರಿಯವಾಕ್ಯಂ ಚ ಪ್ರಿಯಾರ್ಥಂ ಕುರ್ವತೀ ರಮಾ ।
ನಿರವದ್ಯಾಭವದ್ದೇವೀ ಸೇಯಂ ಮಂಗಳದೇವತಾ ॥ ೩೨ ॥

ಇವೇಮೊದಲಾದ ಆಪಾತತಃ ಅಪ್ರಿಯವಾದ ವಾಕ್ಯಗಳಿಗೆ ಪ್ರಿಯವಾದ ಅರ್ಥವನ್ನು ಮಾಡುವ ರಮಾದೇವಿಯು ದೋಷರಹಿತಳೇ ಆದಳು. ಆದ್ದರಿಂದಲೇ ಈಕೆಯು ಮಂಗಳದೇವತಾ ಎಂದು ಲೋಕದಲ್ಲಿ ಪ್ರಸಿದ್ಧಿ.

ವೈದರ್ಭೀತದವಿಜ್ಞಾಯ ತ್ವಯಾ ದೀರ್ಘಸಮೀಕ್ಷಯಾ ।
ವೃತಾ ವಯಂ ಗುಣೈರ್ಹೀನಾ ಭಿಕ್ಷುಭಿಃ ಶ್ಲಾಘಿತಾ ಮುಧಾ ॥

ಇತಿ ಕೃಷ್ಣೇನ ಕಥಿತಾ ಪ್ರತ್ಯಾಹ ಕಿಲ ರುಗ್ಮಿಣೀ ।
ವಿಜ್ಞಾನ್ಯೇವಾರ್ಥಕೋ ಯತ್ರ ವಿದರ್ಭಾಖ್ಯಂ ಹಿ ತತ್ಕುಲಂ ॥

ಅತೋ ವೈದರ್ಭೀತಿ ಸಂಬುಧ್ಯಾಪಿ ಮಾಮೀಶ ಶಂಸಸಿ ।
ಏತದಜ್ಞೈರ್ದುಷ್ಪ್ರದೃಷ್ಟ್ವಾ ದೃಶ್ಯಮಾನಮಭೂಂ ನಹಿ ॥ ೩೩ ॥

ಮಯಾಪ್ಯಾಪಾತತಃ ಶಕ್ಯಮಾನಂ ಮತ್ಕ್ಯಾನುಕಾರಿಣಾ ।
ನಿತ್ಯಶುದ್ಧೇನ ಮನಸಾ ತ್ವಮಭಿಜ್ಞಾಯ ಸರ್ವದಾ ॥ ೩೪ ॥

ಧ್ಯಾಯಂತೀ ಮದ್ಗುಣಾನೇವ ವೃತವತ್ಯಸಿ ಮಾಂ ಪತಿಂ ।
ಇತಿ ಭಾವಾದೇವದೇವಾವಿಜ್ಞಾಯೇತ್ಯುದಿತಂ ತ್ವಯಾ ॥೩೭॥

ಅತಸ್ತದಪಿ ವಾಕ್ಯಂ ಮಾಮಭ್ರಮೇತ್ಯೇವ ಶಂಸತಿ ।
ಯದ್ದೀರ್ಘಕಾಲಜೀವಿತ್ವಂ ದೀರ್ಘೋಽಪಿ ವಿದುಷಾಂಮತೇ ॥

ಯತಶ್ಚ ದೀರ್ಘೋ ಭರ್ತಾ ಮೇ ತ್ವಮಸೀತಿ ಸಮೀಕ್ಷಯಾ ।
ವೃತೋ ಮಯಾ ತತೋದೀರ್ಘಸಮೀಕ್ಷಾ ಚಾಸ್ಮಿ ತೇ ಪ್ರಿಯಾ ॥

ಈ ಶ್ಲೋಕಕ್ಕೆ ಯೋಗ್ಯವಾದ ಅರ್ಥವನ್ನು ರಮಾದೇವಿಯು ಮಾಡುತ್ತಾಳೆ. ಇದಕ್ಕೆ ಮೇಲೆ ತೋರುವ ಅರ್ಥವು ಹೀಗೆ–"ಎಲೈ ವೈದರ್ಭಿಯೇ! ಇದು ತಿಳಿಯದೇ ದೀರ್ಘಾಲೋಚನೆಯಿಲ್ಲದ ನಿನ್ನಿಂದ, ಗುಣಹೀನರೂ, ಭಿಕ್ಷುಗಳಿಂದ ವೃಥಾ ಶ್ಲಾಘಿಸಲ್ಪಟ್ಟವರೂ ಆದ ನಾವು ವರಿಸಲ್ಪಟ್ಟೆವು." ಈಪ್ರಕಾರವಾಗಿ ಕೃಷ್ಣನಿಂದ ಹೇಳಿಸಿಕೊಂಡ ರುಕ್ಮಿಣಿಯು ಮುಂದೆ ತೋರಿಸುವಂತೆ ಹೇಳಿದಳಷ್ಟೆ. "ವೈದರ್ಭೀ" ಎಂದರೆ ವಿದರ್ಭಾಖ್ಯ ಕುಲದಲ್ಲಿ ಹುಟ್ಟಿದವಳೆಂದು ಅರ್ಥ. "ವಿದರ್ಭಂ" ಎಂದರೆ ಜ್ಞಾನಿಗಳೇ ಆದ ಮಕ್ಕಳು ಯಾವ ಕುಲದಲ್ಲಿಯೋ ಆ ಕುಲವು 'ವಿದರ್ಭಂ' ಎಂದು ಅನಿಸಿಕೊಳ್ಳುತ್ತದೆ. "ವೈದರ್ಭಿ" ಎಂದು ನನ್ನನ್ನು ಕರೆದದ್ದರಿಂದ ನಾನು ಉತ್ತಮಜ್ಞಾನವುಳ್ಳವಳೆಂದು ನನ್ನನ್ನು ಹೊಗಳಿದಹಾಗಾಯಿತು. ನನ್ನ ವಿಷಯದಲ್ಲಿ ನೀನು 'ಅವಿಜ್ಞಾಯ' ಎಂಬುದಾಗಿ ಹೇಳಿದೆಯಷ್ಟೆ. ಅದಕ್ಕೆ ಹೀಗೆ ಅಭಿಪ್ರಾಯ. ಇದರಲ್ಲಿ ಅಜ್ಞರ ದುಷ್ಟದೃಷ್ಟಿಗೆ ತೋರುವ ದೋಷವು (ನನ್ನಲ್ಲಿ) ಇಲ್ಲವೇ ಇಲ್ಲ. ಹಾಗಾದರೆ ನನ್ನ ನಿಜವಾದ ಅಭಿಪ್ರಾಯವೇನೆಂದು ನೀನು ತಿಳಿದಿದ್ದಿ ಎಂದು ಕೇಳುವಿಯಾ? ಆ ಅಭಿಪ್ರಾಯವು ಹೀಗೆ:— "ಮನುಷ್ಯರ ಸರಣಿಯನ್ನು ಅನುಸರಿಸುವ ನನ್ನಿಂದ ಹೇಳಲ್ಪಟ್ಟ ಆಪಾತತಃ ದೋಷಾಪಾದಕವಾದ ಮಾತನ್ನು ನಿತ್ಯವಾದ ಶುದ್ಧವಾದ ಮನಸ್ಸಿನಿಂದ ಯಾವಾಗಲೂ (ಅಭಿಜ್ಞಾಯ) ಚನ್ನಾಗಿ ತಿಳಿದು ನನ್ನ ಗುಣಗಳನ್ನೇ ಧ್ಯಾನಮಾಡತಕ್ಕವಳಾಗಿ ನನ್ನನ್ನು ಪತಿಯಾಗಿ ವರಿಸುವವಳಾಗಿದ್ದಿ" ಎಂಬ ಅಭಿಪ್ರಾಯದಿಂದಲೇ ಎಲೈ ದೇವ,

"ಅವಿಜ್ಞಾಯ" ಎಂದು ಹೇಳಿದಿ. ಆದ್ದರಿಂದ "ಅವಿಜ್ಞಾಯ" ಎಂಬ ಪದವೂ ಕೂಡ ನನ್ನನ್ನು ಭ್ರಮರಹಿತಳೆಂದು ಹೊಗಳುತ್ತದೆ. ಈಗ "ತ್ವಯಾ ದೀರ್ಘಸಮೀಕ್ಷಯಾ" ಎಂಬುದಕ್ಕೆ ಯೋಗ್ಯವಾದ ಅರ್ಥವನ್ನು ದೇವಿಯು ಮಾಡುತ್ತಾಳೆ. ಇದರ ಪದವಿಭಾಗವು ಎರಡುವಿಧ–

೧. ತ್ವಯಾ + ದೀರ್ಘಸಮೀಕ್ಷಯಾ ಅಥವಾ
೨. ತ್ವಯಾ + ಅದೀರ್ಘಸಮೀಕ್ಷಯಾ

ಮೊದಲನೇ ಪದವಿಭಾಗ ಮನಸ್ಸಿನಲ್ಲಿಟ್ಟು "ದೀರ್ಘಸಮೀಕ್ಷಯಾ" ಎಂಬುದಕ್ಕೆ ಕೆಳಗೆ ಕಂಡಂತೆ ಅರ್ಥ. ಎಲೈ ದೇವ! ನೀನು ದೀರ್ಘಕಾಲ ಜೀವಿಸುವನಾದುದರಿಂದ (ನಿತ್ಯನಾದ್ದರಿಂದ) ನೀನು ದೀರ್ಘನೆಂದು ಜ್ಞಾನಿಗಳ ಮತ. ದೀರ್ಘನಾದ ಅಂದರೆ ಸರ್ವದಾ ಜೀವಿತನಾದ ಪತಿಯು ನನಗೆ ಆಗುವೆ ಎಂಬೀ ಉತ್ತಮವಾದ ವಿಚಾರದಿಂದ (ಸಮೀಕ್ಷಯಾ) ನನ್ನಿಂದ ನೀನು ವರಿಸಲ್ಪಟ್ಟೆ. ಆದ್ದರಿಂದ ನಿನ್ನ ಪ್ರಿಯಳಾದ ನಾನು ದೀರ್ಘಸಮೀಕ್ಷಳು ಆಗಿದ್ದೇನೆ ಎಂಬ ಅಭಿಪ್ರಾಯದಿಂದ ನೀನು "ತ್ವಯಾ ದೀರ್ಘಸಮೀಕ್ಷಯಾ ವೃತಾವಯಂ" ಎಂದು ಹೇಳಿರುವಿ. ‖೩೩-೩೯‖

ಯತಶ್ಚ ಬ್ರಹ್ಮರುದ್ರಾದ್ಯಾಃ ಕಲ್ಪಾಂತಪರಮಾಯುಷಃ ।
ತತಃ ಸೌಮಂಗಲ್ಯಭಂಗಭೀತ್ಯಾ ತ್ಯಕ್ತಾ ಇಮೇ ಮಯಾ ‖ ೪೦ ‖

ತದದೀರ್ಘಸಮೀಕ್ಷಾ ಚ ಭವಾಮ್ಯಚ್ಯುತ ತೇ ಪ್ರಿಯಾ ।
ತಸ್ಮಾದುಭಯಥಾಪೀತ ತ್ವದುಕ್ತಿರ್ಘಟತೇ ಮಯಿ ‖ ೪೧ ‖

"ತ್ವಯಾ + ಅದೀರ್ಘಸಮೀಕ್ಷಯಾ" ಬ್ರಹ್ಮಾದಿಗಳಿಗೆ ಜೀವಿತಕಾಲವು ಒಂದು ಬ್ರಹ್ಮಕಲ್ಪಕ್ಕೆ ಮೇಲಿಲ್ಲ. ಆದ್ದರಿಂದ ನಿನ್ನ ಅಪೇಕ್ಷಯಾ ಅವರು ಅದೀರ್ಘರು. ಆದ್ದರಿಂದ ಸೌಮಂಗಲ್ಯವು ಭಂಗವಾದೀತೆಂಬ ಭಯದಿಂದ ನನ್ನಿಂದ ಇವರು ಬಿಡಲ್ಪಟ್ಟರು. ಈ ಕಾರಣದಿಂದ ನಿನ್ನ ಪ್ರಿಯಳಾದ ನಾನು ಎಲೈ ಅಚ್ಯುತನೇ! ಅದೀರ್ಘಸಮೀಕ್ಷೆಯು ಆದೆನು. ಆದ್ದರಿಂದ "ತ್ವಯಾ ದೀರ್ಘಸಮೀಕ್ಷಯಾ" ಹೀಗೆ ಪದವಿಭಾಗಮಾಡಿದರೂ "ತ್ವಯಾ

ಅದೀರ್ಘಸಮೀಕ್ಷಯಾ" ಎಂದು ಪದವಿಭಾಗಮಾಡಿದರೂ, ಎರಡು ಪ್ರಕಾರವಾಗಿಯೂ, ಎಲೈ ಈಶನೇ! ನಿನ್ನ ಮಾತು ನನ್ನಲ್ಲಿ ಸರಿ ಹೋಗುತ್ತದೆ. ಈ ವಿಷಯದಲ್ಲಿ ಸಮಾಖ್ಯಾ:—

ನಿತ್ಯಾನಂದಚಿದಾಕೃತಿಂ ಯದುಪತೇ ತ್ವಾಮೇವ ಮನ್ಯೇ ಪತಿಂ |
ಯತ್ರತ್ರೇಚ್ಯುತ ನಾಮ ವಿಶ್ವವಿದಿತಂ ವೀರಾಗ್ರಗಾನನ್ಯಗಂ ||
ಶಬ್ದಸ್ಯಾತ್ರ ಸಮೀಕ್ಷಯಾ ಯದಿ ತದಾ ಸರ್ವೇಪಿ ಕಿಂನಾಚ್ಯುತಾಃ |
ಯದ್ಯೇತಚ್ಚಿರಕಾಲಸಂಸ್ಥಿತಿಕೃತಂ ಪುತ್ರೇ ತವ ಸ್ಯಾತ್ತದಾ ||
ರು || ವಿ || ಸರ್ಗ ೧೪ ಶ್ಲೋ ೪೪.

ಓ ಅಚ್ಯುತ! ಯದುಪತಿಯೇ! ನಿತ್ಯವಾದ ಜ್ಞಾನಾನಂದಾತ್ಮಕವಾದ ಆಕೃತಿಯುಳ್ಳ ನಿನ್ನನ್ನೇ ನನ್ನ ಪತಿಯೆಂದು ತಿಳಿಯುತ್ತೇನೆ. ಇದಕ್ಕೆ ಏನು ಕಾರಣವೆನ್ನುವಿಯಾ? ಎಲೈ ವೀರಾಗ್ರೇಸರನೇ, ಅಚ್ಯುತ ಎಂಬ ನಾಮವು ನಿನ್ನದೇ ಹೊರ್ತು ಬೇರೆ ಯಾರದೂ ಅಲ್ಲ ಎಂದು ಎಲ್ಲರಿಗೂ ತಿಳಿದಿದೆ. ಇದು ಕಾರಣ:— 'ಅಚ್ಯುತ'ಎಂದರೆ ಚ್ಯುತಿರಹಿತನು. ಯಾವ ವಿಧವಾದ ನಾಶವೂ ಇಲ್ಲದವನು, ಅಂದರೆ ದೇಹತೋಪಿ ನಿತ್ಯನು. 'ಅಚ್ಯುತ ಎಂಬ ಹೆಸರು ಚಿದಾತ್ಮಕವಾದ ಸ್ವರೂಪವು ನಿತ್ಯವಾದ್ದರಿಂದ ನನ್ನಲ್ಲಿ (ಕೃಷ್ಣ) ಉಪಯೋಗಿಸುತ್ತಾರೆ ಎಂಬುದು ಏಕೆ ಆಗಬಾರದು' ಎನ್ನುವಿಯಾ? ಹಾಗಾದಲ್ಲಿ ಎಲ್ಲ ಜೀವರೂ ಅಚ್ಯುತರು ಏಕೆ ಅಲ್ಲ? ಅವರನ್ನು ಅಚ್ಯುತ ರೆಂದು ಕರೆಯುವರೇನು? 'ಬಹುಕಾಲ ಇರುವದರಿಂದ ಅಚ್ಯುತನೆಂದು ಕರೆಯುವರು' ಅನ್ನುವಿಯಾ? ಹಾಗಾದರೆ ಒಂದು ಬ್ರಹ್ಮಕಲ್ಪ ಇರುವ ನಿನ್ನ ಮಗನಾದ ಚತುರ್ಮುಖನಿಗೆ ಅಚ್ಯುತನೆಂದು ಹೆಸರಿರಬೇಕಾಗಿತ್ತು; ಹಾಗಿಲ್ಲವಷ್ಟೆ. || ೪೦-೪೧ ||

ಇತ್ಥಂ ತ್ರಿಭಿಃ ಪದ್ಯೈರೇತೈರ್ಮಾಂ ಪ್ರತಸ್ಯ ತವ ಪ್ರಿಯಾಂ |
ಪದಾಭ್ಯಾಮುತ್ತರಾಭ್ಯಾಂ ತ್ವಂ ತ್ವಾಂ ಚ ಸ್ತೌಷೀತಿ ಮೇ ಮತಿಃ ||

ಈರೀತಿಯಲ್ಲಿ ಮೂರು ಮಾತುಗಳಿಂದ ನಿನ್ನ ಪ್ರಿಯಳಾದ ನನ್ನನ್ನು

ಹೊಗಳಿ ಮುಂದಿನ ಎರಡು ಮಾತುಗಳಿಂದ ನೀನು ನಿನ್ನನ್ನೂ ಸ್ತೋತ್ರ ಮಾಡಿಕೊಳ್ಳುತ್ತಿ ಎಂಬ ನನ್ನ ಅಭಿಪ್ರಾಯ.

ರುಕ್ಮಿಣಿಯು ಸ್ತೋತ್ರರೂಪವಾದ ಮೂರು ಮಾತುಗಳು–"ವೈದರ್ಭಿ", "ಅಭಿಜ್ಞಾ" ಮತ್ತು "ದೀರ್ಘಸಮೀಕ್ಷಾ" ಪರಮಾತ್ಮನ ಗುಣವರ್ಣನ ರೂಪವಾದ ಎರಡು ಪದಗಳು – ಗುಣೈಃ ಹೀನಾಃ, ಮತ್ತು ಭಿಕ್ಷುಭಿಃ ಶ್ಲಾಘಿತಾಃ ಮುಧಾ, ಅಥವಾ "ಗುಣಹೀನಾಃ" ಮತ್ತು "ಭಿಕ್ಷು-ಶ್ಲಾಘಿತಾಃ" || ೪೨ ||

ತತ್ತೇ ಪದತ್ರಯಂ ಪೂಜ್ಯಂ ಪೂಜ್ಯಮೇತತ್ಪದದ್ವಯಂ |
ತತ್ಸಹಸ್ರಪದಂ ಚೇಡ್ಯಂ ತಥಾನಂತಪದಂ ವಚಃ || ೪೩ ||

ಈ ಕಾರಣದಿಂದ ನೀನು ಉಪಯೋಗಿಸಿದ ಮೂರುಪದವೂ ಮಾನ್ಯ ವಾಯಿತು. ಎರಡು ಪದವೂ ಮಾನ್ಯವಾಯಿತು. ನಿನ್ನ ಸಹಸ್ರಪದವೂ (ಸಹಸ್ರನಾಮವೂ) ಅದೇಕೆ ನಿನ್ನ ಅನಂತಪದಗಳೂ ಮಾನ್ಯವಾದವು ಎಂದರೆ ಪರಮಾತ್ಮನು ಸರ್ವಶಬ್ದವಾಚ್ಯನು. ಪ್ರತಿಯೊಂದು ಪದವೂ ಪರಮಾತ್ಮನ ಮಹಾಮಹಿಮೆಯನ್ನೇ ಪ್ರತಿಪಾದಿಸುತ್ತದೆ. ಯಾವ ಪದವೂ ದೋಷವನ್ನು ಹೇಳುವದಿಲ್ಲ ಎಂದು ಅಭಿಪ್ರಾಯ.

ಇಲ್ಲಿ ಪದ ಎಂಬ ಶಬ್ದವು ಶ್ಲೇಷಾರ್ಥವುಳ್ಳದ್ದು. "ಪದ" ವೆಂದರೆ "ಶಬ್ದ" ವೆಂದು ಒಂದರ್ಥ. ಮತ್ತೊಂದು "ಪಾದ" ವೆಂದು ಅರ್ಥ. "ಪಾದ" ವೆಂದು ಅರ್ಥಮಾಡಿದಾಗ ಇದು ಅಭಿಪ್ರಾಯ. ಕೃಷ್ಣರೂಪಿ ಯಾದ ನಿನ್ನ ಎರಡುಪಾದಗಳೂ ಪೂಜಾರ್ಹವಾದವುಗಳು. ತ್ರಿವಿಕ್ರಮ ರೂಪಿಯಾದ ನಿನ್ನ ಮೂರು ಪಾದಗಳೂ ಪೂಜ್ಯವು. "ಸಹಸ್ರಾಕ್ಷಸ್ಸಹಸ್ರ-ಪಾತ್" ಎಂಬ ಪುರುಷಸೂಕ್ತದಲ್ಲಿ ಹೇಳಿರುವ ಸಾವಿರಪಾದಗಳೂ ಪೂಜ್ಯ ವಾದವು. ಅಷ್ಟೇಕೆ? ಅನಂತರೂಪಿಯಾದ ನಿನ್ನ ಅನಂತಪಾದಗಳೂ ಪೂಜ್ಯವೇ. || ೪೩ ||

ರೂಪಂ ಚ ಸಕಲೈಃ ಶ್ಲಾಘ್ಯಂ ನ ತೇ ದೋಷಾಸ್ಪದಂ ಪದಂ |
ಏವಂ ಚ ದೋಷವಾಕ್ಯಾರ್ಥಮಪಿ ಭೂಷಾಂಚಕಾರ ಯಾ ||೪೪||

ನಿರವದ್ಯಾ ಕಥಂ ನಾಭೂಸ್ತ್ವೇಯಂ ಮಂಗಲದೇವತಾ ।

ನಿನ್ನ ರೂಪವು ಎಲ್ಲರಿಂದಲೂ ಶ್ಲಾಘ್ಯವಾಗಿ ದೋಷಲೇಶವಿಲ್ಲದ್ದಾದ್ದರಿಂದ ನಿನ್ನಲ್ಲಿ ದೋಷವನ್ನು ಪ್ರತಿಪಾದಿಸುವ ಪದವಿಲ್ಲ. 'ಪದ' ಶಬ್ದಕ್ಕೆ 'ಪಾದ'ವೆಂದು ಅರ್ಥಮಾಡಿದಾಗ ನಿನ್ನ ಪಾದವು ಅಂದರೆ ನಿನ್ನ ರೂಪವು ದೋಷರಹಿತವಾದದ್ದೆಂದು ಅಭಿಪ್ರಾಯ.

ಉತ್ತಮಾನಾಂ ಸ್ವರೂಪಂ ತು ಪಾದಶಬ್ದೇನ ಭಣ್ಯತೇ ॥ ಭಾಗ-ತಾ ॥

ಪದವೆಂದರೆ ಶಬ್ದವೆಂದು ಅರ್ಥಮಾಡಿದಲ್ಲಿ ನಿನ್ನಲ್ಲಿ ದೋಷವನ್ನು ಹೇಳುವ ಶಬ್ದವೇ ಇಲ್ಲವೆಂದು ಅಭಿಪ್ರಾಯ. ಈ ಪ್ರಕಾರವಾಗಿ ಮೇಲೆ ಮೇಲೆ ದೋಷಹೇಳುವಂತೆ ತೋರುವ ಪದ ಮತ್ತು ವಾಕ್ಯಗಳನ್ನೂ ಕೂಡ ಪರಮಾತ್ಮನಲ್ಲಿ ಉತ್ತಮ ಗುಣಗಳು ಬರುವಂತೆ ಅರ್ಥಮಾಡಿದ ಈ ಮಂಗಳದೇವತೆಯಾದ ರುಕ್ಮಿಣಿಯು ನಿರ್ದೋಷಳು ಹೇಗೆ ಆಗದೇ ಹೋದಾಳು ? ಅಂದರೆ ಹೀಗೆ ಅರ್ಥಮಾಡಿದ್ದರಿಂದ ರುಕ್ಮಿಣೀಸ್ವರೂಪಳಾದ ರಮಾದೇವಿಗೆ ಮಂಗಳದೇವತಾ ಎಂಬ ನಾಮವು ಅನ್ವರ್ಥವಾಯಿತು.

ಗುಣೈರ್ಜ್ಞಾನಾನಂದಪೂರ್ಣೈರಿನೋಽಸಿ ತ್ವಂ ಚರಾಚರಾತ್ ॥೪೫॥
ಹಿಶಬ್ದಶ್ಚ ಪ್ರಸಿದ್ಧತ್ವಮಸ್ಯಾರ್ಥಸ್ಯಾಹ ಮಧ್ಯಗಃ ।
ಅತೋಽಗುಣೈರ್ಹೀನತಾಚ ಗುಣ ಏವಾಭವತ್ತವ ॥ ೪೬ ॥

"ಗುಣೈರ್ಹೀನಾಃ" ಎಂಬ ಮಾತನ್ನು ರಮಾದೇವಿಯು ಟೀಕಿಸುತ್ತಾಳೆ: "ಗುಣೈರ್ಹೀನಾಃ" ಎಂಬುದಕ್ಕೆ ಹೀಗೆ ವಿಭಾಗ-ಗುಣೈಃ+ಹಿ+ಇನಾಃ= ಗುಣೈರ್ಹೀನಾಃ. ಜ್ಞಾನಾನಂದಾದಿಗುಣಗಳಿಂದ ನೀನು ಪೂರ್ಣನಾದ್ದರಿಂದ ನೀನು ನನಗೆ ಚರಾಚರಾತ್ಮಕವಾದ ಪ್ರಪಂಚಕ್ಕಿಂತಲೂ ಅತಿಶಯವಾಗಿ ಪ್ರಿಯನು. 'ಗುಣೈಃ' ಮತ್ತು 'ಇನಾಃ' ಪದಗಳ ಮಧ್ಯದಲ್ಲಿರುವ 'ಹಿ' ಶಬ್ದವು, ಈ ಅರ್ಥವು ಪ್ರಸಿದ್ಧವಾದದ್ದೆಂದು ತೋರಿಸುತ್ತದೆ. ಆದ್ದರಿಂದ 'ಗುಣೈರ್ಹೀನಾಃ' ಎಂದು ನೀನು ಹೇಳಿದ್ದು ನಿನ್ನಲ್ಲಿ ಉತ್ತಮಗುಣವನ್ನೇ ಹೇಳುವುದಾಯಿತು. ಆ ಅರ್ಥವೇನೆಂದರೆ-ನೀನು ಅನಂತಕಲ್ಯಾಣಗುಣ-ಪರಿಪೂರ್ಣನಾದ್ದರಿಂದ ಚರಾಚರಾತ್ಮಕವಾದ ಎಲ್ಲಾ ಪ್ರಪಂಚಕ್ಕಿಂತಲೂ

ಅತಿಶಯವಾಗಿ ಲಕ್ಷ್ಮೀಸ್ವರೂಪಳಾದ ನನಗೆ ಪ್ರಿಯನಾಗಿರುವೆ ಎಂಬ ಪ್ರಮೇಯವು ವೇದಪುರಾಣಾದಿಗಳಲ್ಲಿ ಸುಪ್ರಸಿದ್ಧವು. || ೪೬ ||

ಮಯ್ಯನಂತಗುಣೇನಂತ ಇತಿ ಯಸ್ತ್ವಂ ಸ್ಥಳಾಂತರೇ |
ಉಕ್ತವಾನಸಿ ತತ್ರೇದ್ಯ ಕಥಂ ಸ್ಯಾದ್ಗುಣಹೀನತಾ || ೪೭ ||

ಎಲೈ ಸ್ವಾಮಿ, ನೀನೇನೇ ಸ್ಥಳಾಂತರದಲ್ಲಿ (ಭಾಗವತ ಆರನೆಯ ಸ್ಕಂಧದಲ್ಲಿ) "ಪ್ರತಿಯೊಂದು ಗುಣವೂ ಅನಂತವಾದ ಅನಂತಗುಣಗಳುಳ್ಳ ನನ್ನಲ್ಲಿ" ಎಂಬುದಾಗಿ ಹೇಳಿರುವಿಯಾದ್ದರಿಂದ ಯಾವಗುಣವೂ ಇಲ್ಲ ದವನು ಎಂಬ ಅರ್ಥವು ಪ್ರಕೃತದಲ್ಲಿ ಹೇಗೆ ಸರಿಹೋದೀತು? ಸರಿ ಹೋಗುವದೇ ಇಲ್ಲ.

"ಮಯ್ಯನಂತಗುಣೇಽನಂತೇ ಗುಣತೋಽನಂತವಿಗ್ರಹೇ |
ಯದಾಸೀತ್ತತಏವಾದ್ಯಃ ಸ್ವಯಂಭೂಃ ಸಮಭೂದಜಃ ||

ಸ್ಕಂ. ೬, ಅ. ೫, ಶ್ಲೋ. ೪೮.

ಪ್ರತಿಯೊಂದು ಗುಣವೂ ಅನಂತವಾದ ಅನಂತಗುಣಗಳುಳ್ಳ ನನ್ನ ನಾಭಿಯಲ್ಲಿ ಉತ್ಪನ್ನವಾದ ಯಾವ ಕಮಲವೋ ಅಲ್ಲಿ ಅಜನೆಂಬ ಸ್ವಯಂಭುವು ಹುಟ್ಟಿದನು. ಅಜಃ=ಅಕಾರವಾಚ್ಯಾತ್ ವಿಷ್ಣೋಸ್ಸಕಾಶಾತ್ ಜಾತತ್ವಾತ್ ಅಜಃ ಅಂದರೆ ಅಕಾರವಾಚ್ಯನಾದ ವಿಷ್ಣುವಿನಿಂದ ಹುಟ್ಟಿ ದವನಾದ್ದರಿಂದ ಚತುರ್ಮುಖನಿಗೆ ಅಜನೆಂದು ಹೆಸರು. || ೪೭ ||

ತ್ರೈಗುಣ್ಯವರ್ಜಿತತ್ವಾರ್ಥಸ್ಯೋಕ್ತಾವಪಿ ಗುಣಸ್ತವ |
ಯತಸ್ತೇಬಂಧಕಗುಣಾಸ್ತ್ವಂ ಚ ಬಂಧವಿವರ್ಜಿತಃ || ೪೮ ||

ಸತ್ವರಜಸ್ತಮೋಗುಣಗಳಿಂದ ವರ್ಜಿತನಾದವನು ನೀನು ಎಂದು ಅರ್ಥಮಾಡಿದರೂ ನಿನ್ನಲ್ಲಿ ಈ ಪದವು ಶುಭಗುಣವನ್ನೇ ಹೇಳಿದಹಾಗಾ ಯಿತು. ಏಕೆಂದರೆ ನೀನು ನಿತ್ಯಮುಕ್ತನಾದವನು. ಆದ್ದರಿಂದ ಬಂಧವಿಲ್ಲ ದವನು. ತ್ರಿಗುಣಗಳಾದರೋ ಬಂಧಿಸತಕ್ಕ ಗುಣಗಳು. ಆದ್ದರಿಂದ ನಿನಗೆ ನಿರ್ಗುಣನೆಂದು ಹೆಸರು. || ೪೮ ||

ಹರಿಸ್ತು ನಿರ್ಗುಣಸ್ಸಾಕ್ಷಾತ್ಪುರುಷಃ ಪ್ರಕೃತೇಃ ಪರಃ |
ಸ ಸರ್ವದೃಗುಪದ್ರಷ್ಟಾ ತಂ ಭಜನ್ನಿರ್ಗುಣೋ ಭವೇತ್ ||

ಭಾಗವತ ೧೦ನೇ ಸ್ಕಂಧ, ಅ. ೯೨. ಶ್ಲೋ. ೫.

ಇದರ ಅಭಿಪ್ರಾಯ:-ಹರಿಯು ಸತ್ವರಜಸ್ತಮೋಗುಣಗಳಿಂದ ವರ್ಜಿತನಾದ್ದರಿಂದ ನಿರ್ಗುಣನೆಂದು ಕರೆಯಲ್ಪಡುತ್ತಾನೆ. ಅಂತಹ ಹರಿಯನ್ನು ಭಜಿಸುವವನು ನಿರ್ಗುಣನಾಗುತ್ತಾನೆ. ಅಂದರೆ ಮುಕ್ತನಾಗುತ್ತಾನೆ.

ಸರ್ವಥಾ ಗುಣಶೂನ್ಯತ್ವಂ ಸೌಂದರ್ಯಾದಿಗುಣಾಕರೇ |
ಸಾಕಾರೇ ಚ ಹರೇ ನ ಹ್ಯಸ್ತಿ ತೇನ ಮತಂ ನ ತತ್ || ೪೯ ||

ಎಲೈ ಹರಿಯೇ, ಸೌಂದರ್ಯಾದಿ ಗುಣಗಳಿಗೆ ಗಣಿಯಂತಿರುವ ಮತ್ತು ದಿವ್ಯವಾದ ಆಕಾರವುಳ್ಳ ನಿನ್ನಲ್ಲಿ ಸರ್ವಥಾ ಯಾವ ಧರ್ಮವೂ ಇಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ ಅಭಿಪ್ರಾಯವು-ಎಂದರೆ ನೀನು ನಿರ್ಧರ್ಮಕನು-ಎಂಬ ಮತವು ಸರ್ವಥಾ ಸಂಮತವಾದದ್ದಲ್ಲ. || ೪೯ ||

ಭಿಕ್ಷುಭಿಃ ಶ್ಲಾಘಿತತ್ವಂ ಚ ಮಹಾನೀಶಗುಣಸ್ತವ |
ಸಾಶೇನ ರಚಿತಂ ಸ್ತೋತ್ರಂ ಮಿಥ್ಯಾರ್ಥಂ ಚ ಭವೇದ್ಧ್ರುವಿ ||೫೦||

ನಿರಾಶಭಿಕ್ಷುಶ್ಲಾಘ್ಯತ್ವಾದ್ಧ್ರುವಾ ಸತ್ಯಗುಣೋಽಭವತ್ |
ಮುಧಾಪದಸ್ಯ ಶಕ್ತ್ಯಾ ಚ ಪ್ರಕೃತಾರ್ಥಃ ಸ್ಥಿರೋಽಭವತ್ ||೫೧||

ಈಗ "ಭಿಕ್ಷುಭಿಃ ಶ್ಲಾಘಿತಾ ಮುಧಾ" ಎಂಬುದರ ಅರ್ಥವನ್ನು ರುಕ್ಮಿಣೀದೇವಿಯು ವಿವರಿಸುತ್ತಾಳೆ- ಎಲೈ ಹರಿಯೇ! ಭಿಕ್ಷುಗಳಿಂದ ನಾನು ಸುಮ್ಮನೆ ಶ್ಲಾಘಿತನಾದವನು ಎಂದು ನೀನು ಹೇಳಿಕೊಂಡೆಯಷ್ಟೆ. ಇದು ನಿನ್ನಲ್ಲಿ ಬಹಳ ದೊಡ್ಡ ಗುಣವನ್ನು ಹೇಳಿಕೊಂಡಂತಾಯಿತು. ಭಿಕ್ಷುಗಳು ಅಂದರೆ ಸಂನ್ಯಾಸಿಗಳು. ಇವರು ಎಲ್ಲಾ ಆಶೆಯನ್ನೂ ಬಿಟ್ಟವರು. ಲೋಕದಲ್ಲಿ ಆಶೆಯುಳ್ಳವನಿಂದ ಮಾಡಲ್ಪಟ್ಟ ಸ್ತೋತ್ರವು ಮಿಥ್ಯಾಸ್ತೋತ್ರವಾದೀತು. ನೀನಾದರೊ ಆಶಾರಹಿತರಾದ ಸನಕಾದಿಗಳೇ ಮೊದಲಾದ

ಪರಮಹಂಸಶ್ರೇಷ್ಠರಿಂದ ಶ್ಲಾಘಿಸಲ್ಪಟ್ಟವನು. ಅವರು ನಿನ್ನಲ್ಲಿ ಹೇಳುವ ಗುಣಗಳು ಸತ್ಯವೇ ಆಗಿರಬೇಕು. ಮುಧಾ ಅಂದರೆ ಯಾವ ಪ್ರಯೋಜನ ವನ್ನೂ ಅಪೇಕ್ಷಿಸದೆ ಕೇವಲ ಭಕ್ತ್ಯುದ್ರೇಕದಿಂದ ಈ ಮಹಾನುಭಾವರುಗಳು ನಿನ್ನನ್ನು ಸ್ತುತಿಸುತ್ತಾರಾದ್ದರಿಂದ ಅವರು ಹೊಗಳುವ ನಿನ್ನ ಎಲ್ಲಾ ಗುಣಗಳೂ ನಿಜವಾಗಿ ನಿನ್ನಲ್ಲಿವೆ ಎಂದು ಸ್ಥಿರವಾಗುತ್ತದೆ. || ೫೦-೫೧ ||

ಏವಂ ಶ್ರೀರ್ದೋಷಶಬ್ದಾಂಶ್ಚ ಪೋಷಯಂತೀ ಸ್ವಭರ್ತರಿ |
ಕಥಂ ವಾ ಭಾವಯೇದ್ದೋಷಂ ಮನಸಾ ಚ ಮನೋರಮೇ ||

ಈ ರೀತಿಯಲ್ಲಿ ದೋಷಶಬ್ದಗಳನ್ನೂ ಕೂಡ ತನ್ನ ಪತಿಯಾದ ಹರಿಯಲ್ಲಿ ಮಹಾಗುಣಗಳು ಬರುವಂತೆ ಪೋಷಿಸುವ ಅಂದರೆ ವ್ಯಾಖ್ಯಾನ ಮಾಡುವ ರಮಾದೇವಿಯು ಮನಸ್ಸಿನಿಂದಲಾದರೂ ದೋಷವನ್ನು ಮನೋಹರನೂ ಸ್ವರಮಣನೂ ಆದ ತನ್ನ ಪತಿಯ ವಿಷಯದಲ್ಲಿ ಹೇಗೆ ತಾನೇ ತಿಳಿವಾಳು? || ೫೨ ||

ರಮಾ ಸ್ವರಮಣೇ ಕೇನ ಭ್ರಮಸ್ಯಾವಸರಃ ಕದಾ |
ದೋಷಾನ್ವೇಷಣಧೀರ್ಯಾ ನ ಸಾ ಸಾಸೂಯಾ ಕದಾ ವದ ||

ಆದ್ದರಿಂದ ಆಕೆಗೆ ಸ್ವರಮಣನಾದ ಹರಿಯ ವಿಷಯದಲ್ಲಿ ಭ್ರಾಂತಿಗೆ ಯಾವಾಗ ಅವಕಾಶ? ಯಾವಾಗಲೂ ಇಲ್ಲ. ಯಾವ ರಮಾದೇವಿಯು ದೋಷವನ್ನು ಹುಡುಕುವ ಬುದ್ಧಿಯುಳ್ಳವಳಲ್ಲವೋ ಅಂತಹವಳು ಯಾವಾಗತಾನೇ ಪರಮಾತ್ಮನ ವಿಷಯದಲ್ಲಿ ಅಸೂಯಾ ಉಳ್ಳವಳಾದಾಳು, ಹೇಳು? ಸಾಸೂಯಾ = ಅಸೂಯಾ ಸಹಿತಾ. || ೫೩ ||

ಗುಣೇಷು ದೋಷಾವಿಷ್ಕಾರಂ ಯದಸೂಯಾಂ ವಿದುರ್ಬುಧಾಃ |
ಅದೋಷತಾಮೇವ ಸದಾ ಧ್ಯಾಯಂತೀ ಕೇನ ಹೇತುನಾ || ೫೪ ||

ಕುಪ್ಯೇತ್ಸ್ವಭರ್ತರಿ ರಮಾ ತಚ್ಛುದ್ಧ್ಯೈವಾಭವತ್ಸದಾ |
ಅತಃ ಪರೇ ಶುಕ್ಲತಮ್ಯೈವಾಸೀನ್ಮಂಗಲದೇವತಾ || ೫೫ ||

ಗುಣದಲ್ಲಿ ದೋಷವನ್ನು ಪ್ರಕಟಿಸುವುದು ಯಾವುದೋ ಅದನ್ನು

ಅಸೂಯಾ ಎಂದು ಜ್ಞಾನಿಗಳು ತಿಳಿದಿದ್ದಾರೆ. ಪರಮಾತ್ಮನು ದೋಷ-ದೂರನೆಂದು ಯಾವಾಗಲೂ ಧ್ಯಾನಿಸುತ್ತಿರುವ ರಮಾದೇವಿಯು ಯಾವ ಕಾರಣದಿಂದ ತನ್ನ ಭರ್ತನಲ್ಲಿ ಕೋಪಗೊಂಡಾಳು? ಇಲ್ಲವೇ ಇಲ್ಲ. ಆದ್ದರಿಂದ ರಮಾದೇವಿಯು ಯಾವಾಗಲೂ ಶುದ್ಧಳು. ಈ ಕಾರಣದಿಂದ ಮಂಗಳದೇವತೆಯಾದ ಶ್ರೀದೇವಿಯು ಪರದೇವತೆಯಾದ ಶ್ರೀಹರಿಯ ವಿಷಯದಲ್ಲಿ ಶುದ್ಧತಮಳು. || ೫೪-೫೫ ||

ಆಪಾತತೋಽಪ್ರಿಯಂ ವಾಕ್ಯಂ ವದನ್ ಕೃಷ್ಣೋ ಯತೋಽಂತತಃ |
ಮಯೋದಿತಂ ಯದನ್ವರ್ಥಂ ಸರ್ವಂ ತತ್ಸತ್ಯಮೇವ ಹಿ || ೫೬ ||

ಇತಿ ಪ್ರಿಯಾಂ ಪ್ರತಿ ಪ್ರಾಹ ತತಃ ಸತ್ಯವ್ರತತ್ವತಃ |
ನಿರ್ದೋಷಗುಣಪೂರ್ಣತ್ವಾಚ್ಚಾಪಿ ತತ್ಪರಮಮಂಗಲಃ || ೫೭ ||

ಮೇಲೆ ಅಪ್ರಿಯವಾಗಿ ತೋರುವ ವಾಕ್ಯವನ್ನು ಹೇಳಿ ಕೃಷ್ಣನು ಕೊನೆಯಲ್ಲಿ ಹೀಗೆ ತನ್ನ ಪ್ರಿಯಳನ್ನು ಕುರಿತು ಹೇಳಿದನು—"ನಾನು ಹೇಳಿದ ಎಲ್ಲಾ ಮಾತುಗಳಿಗೂ ಯೋಗ್ಯವಾದ ಅರ್ಥವನ್ನು ಯಾವುದು ನೀನು ಮಾಡಿದಿಯೋ ಅದು ಸರ್ವವೂ ಸತ್ಯವಾದದ್ದೇ, ಸಂಶಯವಿಲ್ಲ." ಆದ್ದರಿಂದ ಪರಮಾತ್ಮನು ಸತ್ಯಸಂಕಲ್ಪನೂ, ನಿರ್ದೋಷನೂ, ಗುಣ-ಪೂರ್ಣನೂ, ಪರಮಮಂಗಳನೂ ಆದನು. || ೫೬-೫೭ ||

ವಾದಿರಾಜಕೃತೇ ಕಾವ್ಯೇ ಶ್ರಾವ್ಯೇ ಭವ್ಯೇ ಸುಬುದ್ಧಿಭಿಃ |
ಸೇವ್ಯೇ ಸರಸಭಾರತ್ಯಾಂ ವಿಲಾಸೋಭೂಚ್ಚತುರ್ಥಃ ಪ್ರಿಯಃ ||೫೮||

ವಾದಿರಾಜರು ರಚಿಸಿದ, ಕೇಳಲು ಇಂಪಾದ, ಸುಂದರವಾದ, ಉತ್ತಮ ಬುದ್ಧಿಯುಳ್ಳವರಿಂದ ಸೇವಿಸಲ್ಪಡಲು ಯೋಗ್ಯವಾದ ಸರಸಭಾರತೀಕಾವ್ಯದಲ್ಲಿ ನಾಲ್ಕನೆಯ ವಿಲಾಸವು ಲಕ್ಷ್ಮೀದೇವಿಗೆ ಪ್ರಿಯವಾಯಿತು. || ೫೮ ||

ಸರಸಭಾರತೀವಿಲಾಸಕಾವ್ಯದಲ್ಲಿ ನಾಲ್ಕನೆಯ ವಿಲಾಸವು ಪೂರ್ಣವಾಯಿತು.

ಪಂಚಮೋ ವಿಲಾಸಃ

|| ಶ್ರೀಗುರುಭ್ಯೋ ನಮಃ ಹರಿಃ ಓಂ ||

[ವಾಯುದೇವರು ಮೂಲರೂಪದಲ್ಲಿಯೂ, ಅವತಾರಗಳಲ್ಲಿಯೂ ಪರಮಾತ್ಮನ ವಿಷಯದಲ್ಲಿ ಸರ್ವದಾ ಶುದ್ಧಮನಸ್ಕರೆಂಬುದನ್ನೂ, ಇತರ ದೇವತೆಗಳಿಗಿಂತ ಶ್ರೇಷ್ಠರೆಂಬುದನ್ನೂ ಸ್ಥಾಪಿಸಲು ಛಾಂದೋಗ್ಯ ಉಪನಿಷತ್ತಿನ ಆದಿಭಾಗದಲ್ಲಿ ಉಕ್ತವಾದ ಆಖ್ಯಾಯಿಕೆಯನ್ನು ಅನುವಾದಮಾಡಿ ವಾಯುದೇವರು ಪರಮಾತ್ಮನ ಪೂಜೆಗೆ ನಿರ್ದುಷ್ಟವಾದ ಪ್ರತಿಮೆಯೆಂದು ಸ್ಥಾಪಿಸುತ್ತಾರೆ. ಹಾಗೆಯೇ ಹನುಮಂತನು ಮಾಡಿದ ರಾಮದೇವರ ಸೇವೆಯನ್ನು ವಿಚಾರಮಾಡಿ ಅತನ ಶುಕ್ಲತ್ವವನ್ನು ವರ್ಣಿಸುತ್ತಾರೆ.]

ಅವತಾರಿಕಾ :– ಛಾಂದೋಗ್ಯ ಉಪನಿಷತ್ತಿನ ಒಂದನೇ ಅಧ್ಯಾಯದ ಆದಿಭಾಗದಲ್ಲಿ ಹೇಳಿರುವ ರೀತಿಯಲ್ಲಿ ಈ ವಿಲಾಸದಲ್ಲಿ ಮುಖ್ಯಪ್ರಾಣದೇವರು ಶುದ್ಧರು ಅಂದರೆ ಪರಶುಕ್ಲತ್ರಯರಲ್ಲೊಬ್ಬರು ಎಂಬುದನ್ನು ಸಮರ್ಥಿಸುತ್ತಾರೆ.

ಅಸುರೇಭ್ಯಃ ಪರಾಭೂತಾಃ ಪುರಾ ದೇವಾಃ ಸಹೇಶ್ವರಾಃ |
ಜೇತುಕಾಮಾಃ ಪುನರ್ದೈತ್ಯಾನ್ಭಕ್ತ್ಯಾ ಪರಮಯಾ ಯುತಾಃ ||

ಉಪಾಸಾಂಚಕ್ರಿರೇ ವಿಷ್ಣುಂ ಜಿಷ್ಣುಂ ತ್ರಿಭುವನೇಶ್ವರಂ |
ಘ್ರಾಣಾಭಿಮಾನ್ಯಶ್ವಿನೋಕ್ಷ್ಣ ತಥಾ ವಾಗಭಿಮಾನಿನಃ || ೨ ||

ಅಗ್ನೇರ್ಹೃದಿ ತಥಾ ಚಕ್ಷುರ್ಮಾನಿನಃ ಸವಿತುರ್ಹೃದಿ |
ಶ್ರೋತ್ರಾಭಿಮಾನಿಚಂದ್ರಸ್ಯ ಮನೋಮಾನಿಶಿವಸ್ಯ ಚ || ೩ ||

ಉಚ್ಚಸ್ತ್ವಾದುದಿತಿ ಪ್ರೋಕ್ತೋ ಗೀತೋಽಸೌ ಗೀತನಾಮಕಃ |
ತೃತೀಯೋಽತಿಶಯೋ ಯಸ್ಮಾತ್ತಸ್ಮಾದತಿಶಯೋಽನಘಃ || ೪ ||

ಶ್ರುತಿಭಿಃ ಸ್ಮೃತಿಭಿಶ್ಚೈವ ಗೀತೋಽಸೌ ಗೀಥನಾಮಕಃ |
ಅಥವೋಚ್ಚೈರ್ಗೀಯಮಾನಃ ಸರ್ವಾಧಾರೋ ಯತೋ ಹರಿಃ ||

ತತೋಽಪ್ಯುದ್ಗೀಥನಾಮಾಸೌ ಭವೇತ್ಪ್ರಾಣನಿರಿಕ್ಷಯಾ ।
ಯೋಽಸೌ ಗತಿನಿವೃತ್ತ್ಯರ್ಥೋಽರ್ಥೇಽಸ್ಮಾದ್ಧಾತುಮುಚೇಕ್ಲೃ ಪಕ್ ॥

ಕಪ್ರತ್ಯಯಬಲಾದಾಕಾರಸ್ಯ ಲೋಪೇ ಕೃತೇ ಸತಿ ।
ತಕಾರಸ್ಯ ಥಕಾರೇ ಚ ಸ್ಥತ್ವಂ ಧಾತೋರ್ಭವೇತ್ಕಿಲ ॥ ೭ ॥

ನಿರುಕ್ತತ್ವಾತ್ಸಕಾರಸ್ಯ ನಾಶೇ ಥತ್ವಂ ಚ ವಿಂದತಿ ।
ಶ್ವೋ ನ ತಿಷ್ಠತಿ ಯೋ ವೃಕ್ಷಃ ಸೋಽಶ್ವತ್ಥಃ ಕಥಮನ್ಯಥಾ ॥ ೮ ॥

ಏವಂ ಚ ಯಸ್ಮಿನ್ ಸರ್ವಂ ಚ ತಿಷ್ಠತ್ಯೇಷ ಥನಾಮವಾನ್ ।
ಸ್ಥಿರತ್ವಾದ್ವಾ ಥಶಬ್ದೇನ ಪ್ರೋಚ್ಯತೇ ಪುರುಷೋತ್ತಮಃ ॥ ೯ ॥

ಇತ್ಥಮುದ್ಗೀಥನಾಮ್ನಾ ಯಃ ಪ್ರೋಕ್ತಃ ಸರ್ವೋತ್ತಮೋ ಹರಿಃ ।
ತಂ ವಾಸುದೇವಂ ದೇವಾಸ್ತು ಪ್ರತೀಕೇಷ್ವೇಷು ಪಂಚಸು ॥ ೧೦ ॥

ಸನ್ನಿಧಾಯಾರ್ಚಯಾಂಚಕ್ರುಸ್ತದಾ ದೈತ್ಯಾಶ್ಚ ಪಾಪ್ಮನಾ ।
ಅದೂಷಯನ್ಪ್ರತೀಕಾಂಸ್ತಾನ್ಪೂಜಾವಿಚ್ಛೇದಕಾರಿಣಃ ॥ ೧೧ ॥

ಅಶುದ್ಧ ಪ್ರತಿಮಾಂ ಯಸ್ಮಾತ್ಪೂಜಾನರ್ಹಾಂ ವಿದುರ್ಬುಧಾಃ ।
ಶುನಾಸ್ಪೃಷ್ಟಸ್ತ್ವೇಷ್ಟದೇವಪ್ರತಿಮಾ ಯನ್ನ ಪೂಜ್ಯತೇ ॥ ೧೨ ॥

ಅಸುರೈಃ ಪಾಪ್ಮನಾ ವಿದ್ಧಾಸ್ತದಶುದ್ಧಾಃ ಸುರಾ ಇಮೇ ।
ಪೂಜಾರ್ಹಾ ನಾಭವನ್ವಿಷ್ಣೋಃ ಶುದ್ಧಾಚ್ಛುದ್ಧತರಸ್ಯ ಹಿ ॥ ೧೩ ॥

ಪೂರ್ವದಲ್ಲಿ ತಮ್ಮ ಪ್ರಭುಗಳಾದ ಇಂದ್ರಾದಿಗಳಿಂದ ಸಹಿತರಾದ ದೇವತೆಗಳು ಅಸುರರಿಂದ ಅಪಜಯಹೊಂದಿದವರಾಗಿ ಪುನಃ ದೈತ್ಯರನ್ನು ಜಯಿಸಲು ಅಪೇಕ್ಷಿಸಿ ಮೂರುಲೋಕಕ್ಕೊಡೆಯನಾದ, ಸರ್ವದಾ ಜಯಶೀಲನಾದ ವಿಷ್ಣುವನ್ನು ಉತ್ತಮವಾದ ಭಕ್ತಿಯಿಂದ ಕೂಡಿದವರಾಗಿ ಉಪಾಸನಾ ಮಾಡಿದರು. ಪ್ರತಿಮಾರೂಪವಾದ ಯಾವ ಅಧಿಷ್ಠಾನದಲ್ಲಿ ಉಪಾಸನಾಮಾಡಿದರು ಎಂದರೆ:– ಮೊದಲು ಘ್ರಾಣಾಭಿಮಾನಿಗಳಾದ

*ಅಶ್ವಿನೀದೇವತೆಗಳಲ್ಲಿ, ನಂತರ ವಾಗಭಿಮಾನಿಯಾದ ಅಗ್ನಿಯಲ್ಲಿ, ನಂತರ ಚಕ್ಷುರಭಿಮಾನಿಯಾದ ಸೂರ್ಯನಲ್ಲಿ, ಆಮೇಲೆ ಶ್ರೋತ್ರಾಭಿಮಾನಿಯಾದ ಚಂದ್ರನಲ್ಲಿ, ಕೊನೆಗೆ ಮನೋಭಿಮಾನಿಯಾದ ರುದ್ರನಲ್ಲಿ ಉಪಾಸನಾ ಮಾಡಿದರು.

ಎಂತಹ ಗುಣವಿಶಿಷ್ಟನನ್ನಾಗಿ ಪರಮಾತ್ಮನನ್ನು ಉಪಾಸನಾಮಾಡಿದರೆಂದರೆ–ಇದನ್ನು ಪ್ರತಿಪಾದಿಸುವ ಅಭಿಪ್ರಾಯದಿಂದ "ಉದ್ಗೀಥ" ಶಬ್ದವನ್ನು ಮೊದಲು ನಿರ್ವಚನಮಾಡಿ ತಲ್ಲಬ್ಧವಾದ ಪರಮಾತ್ಮನ ಗುಣವನ್ನು ಹೇಳುತ್ತಾರೆ.

ಉಚ್ಚನಾದ್ದರಿಂದ 'ಉತ್' ಎಂದು ಕರೆಯಲ್ಪಡುತ್ತಾನೆ. ಗಾನ ಮಾಡಲ್ಪಟ್ಟವನಾದ್ದರಿಂದ 'ಗೀತಃ' ಎಂದು ಅವನಿಗೆ ಹೆಸರು. ಅಂತು ಉಚ್ಚನೂ, ಗೀತನೂ ಯಾರೋ ಅವನು "ಉದ್ಗೀತಃ". ಈಗ "ತೃತೀಯೋಽತಿಶಯೇ" ಎಂಬ ಸೂತ್ರದಿಂದ ಅತಿಶಯವಾಗಿ ಯಾವನು ಶ್ರುತಿಗಳಿಂದಲೂ, ಸ್ಮೃತಿಗಳಿಂದಲೂ ಗಾನಮಾಡಲ್ಪಟ್ಟವನೋ ಅವನು "ಗೀಥಃ" ಎಂದು ಹೆಸರುಳ್ಳವನು. "ಗೀತಃ" ಎಂಬುವಲ್ಲಿ 'ತ' ವರ್ಣವು 'ಥ' ಎಂದು ವಿಕಾರವಾಗಿರುವದು ಅತಿಶಯದ್ಯೋತಕವಾಗಿದೆ. ಅಂತು 'ಉದ್ಗೀಥಃ' ಎಂದರೆ ಸರ್ವೋತ್ತಮನೂ ಮತ್ತು ಶ್ರುತಿ ಸ್ಮೃತಿಗಳಲ್ಲಿ ಅತಿಶಯವಾಗಿ ಸ್ತುತಿಸಲ್ಪಟ್ಟವನೂ ಆದವನು ವಿಷ್ಣುವು ಎಂದರ್ಥ. ಅಥವಾ ಉತ್ತಮರಾದ ರಮಾಬ್ರಹ್ಮಾದಿಗಳಿಂದ ಗೀಯಮಾನನಾದ್ದರಿಂದಲೂ, ಸರ್ವಕ್ಕೂ ಆಧಾರನಾದ್ದರಿಂದಲೂ, ಹರಿಯು ಪಾಣಿನಿಯ ವ್ಯಾಕರಣಾನುಸಾರವಾಗಿ 'ಉದ್ಗೀಥ' ಎಂಬ ನಾಮವುಳ್ಳವನಾಗುತ್ತಾನೆ.

ಉಚ್ಚೈಃ ಗೀಯಮಾನತ್ವಾತ್ ಉದ್ಗೀಃ ಸರ್ವಾಧಾರತ್ವಾತ್ "ಥಃ".

ಈಗ 'ಥಃ' ಎಂದರೆ ಸರ್ವಾಶ್ರಯನು ಎಂಬ ಅರ್ಥಬರುವಹಾಗೆ ಶಬ್ದ ನಿಷ್ಪತ್ತಿಯನ್ನು ತೋರಿಸುತ್ತಾರೆ. ವ್ಯಾಕರಣಸೂತ್ರಗಳನ್ನು ಮಾಡಿದ

*ಛಾಂದೋಗ್ಯ ಉಪನಿಷತ್ತಿನ ಭಾಷ್ಯದಲ್ಲಿ ಘ್ರಾಣಾಭಿಮಾನಿಯಾದ ನಾಸಿಕ್ಯ ಪ್ರಾಣನಲ್ಲಿ (ನಾಸಿಕ್ಯ ವಾಯುವಿನಲ್ಲಿ) ದೇವತೆಗಳು ಪರಮಾತ್ಮನನ್ನು ಮೊದಲು ಉಪಾಸನಾ ಮಾಡಿದರೆಂದು ಇದೆ.

ಪಾಣಿನಿಯು 'ಷ್ಠಾ' ಧಾತುವಿಗೆ ಗತಿನಿವೃತ್ತಿಃ ಎಂದರೆ ಚಲನವಿಲ್ಲದೇ ನಿಂತಿರುವುದು ಎಂಬ ಅರ್ಥವನ್ನು ಹೇಳಿರುತ್ತಾನೆ. ಈಗ "ಷ್ಠಾ" ಧಾತುವಿಗೆ 'ಕ' ಪ್ರತ್ಯಯ ಬಂದರೆ ಆ 'ಕ್' ಲೋಪವಾಗುವಾಗ 'ಷ್ಠಾ'ದಲ್ಲಿನ 'ಆ' ಕಾರವನ್ನು ಲೋಪಮಾಡುತ್ತದೆ. ಆಗ್ಯೆ 'ಷ್ಠಾ' ಹೋಗಿ 'ಷ್ಠ' ಎಂದು ರೂಪವಾಯಿತು. 'ಷ' ಎಂಬುದು 'ಸ' ಆಗಿ 'ಠ' ಎಂಬುದು 'ಥ' ಆದರೆ 'ಷ್ಠ' ಎಂಬುದು 'ಸ್ಥ' ಆಯಿತು. ಪುನಃ ಇದರಲ್ಲಿನ 'ಸ್' ಎಂಬುದು ನಿರುಕ್ತದ ಪ್ರಕಾರ ಲೋಪವಾದರೆ 'ಥ' ಎಂಬುದು ಉಳಿಯಿತು. ಏವಂಚ ಯಾವನ ಆಧಾರದಲ್ಲಿ ಸರ್ವವೂ ಇದೆಯೋ ಅವನು 'ಥ' ಎಂದು ಹೆಸರುಳ್ಳವನು. ಏವಂಚ " ಉದ್ಗೀಶ್ಚಾಸೌ ಥಶ್ಚ ಇತಿ ಉದ್ಗೀಥಃ " ಎಂದು ರೂಪವಾಯಿತು. ಅಂತೂ ವಿಷ್ಣುವು ಉತ್ತಮರಿಂದ ಸ್ತುತ್ಯನೂ ಸರ್ವಾಶ್ರಯನೂ ಎಂಬ ಅರ್ಥವು ಲಬ್ಧವಾಗುತ್ತದೆ.

ಪ್ರಪಂಚಕ್ಕೆ 'ಅಶ್ವತ್ಥ' ಎಂದು ಭಗವದ್ಗೀತೆಯ ಹದಿನೈದನೆಯ ಅಧ್ಯಾಯ ದಲ್ಲಿ ಹೇಳಿದೆ. ಇದಕ್ಕೆ ಆಚಾರ್ಯರು ಜಗತ್ತು ಒಂದೇರೀತಿಯಲ್ಲಿಲ್ಲದೆ ಬದಲಾವಣೆಯನ್ನು ಹೊಂದುವದರಿಂದ 'ಅಶ್ವತ್ಥ' ಎಂದು ಕರೆಯು ಲ್ಪಡುತ್ತದೆ ಎಂದು ಹೇಳಿದ್ದಾರೆ. 'ಅಶ್ವತ್ಥ' ಎಂದರೆ ಜಗತ್ತು ಇವತ್ತು ಇದ್ದಂತೆ ನಾಳೆಯದಿನ ಇರುವದಿಲ್ಲವಾದುದರಿಂದ 'ಅಶ್ವತ್ಥ' ಎಂದು ಹೆಸರು.

ನಾವು ಮೇಲೆ ಹೇಳಿದಂತೆ 'ಥ' ಶಬ್ದದ ರೂಪನಿಷ್ಪತ್ತಿಯನ್ನು ಮಾಡದಿದ್ದಲ್ಲಿ 'ಅಶ್ವತ್ಥ' ಶಬ್ದಕ್ಕೆ ಆಚಾರ್ಯರು ಗೀತಾಭಾಷ್ಯದಲ್ಲಿ ಹೇಳಿರುವ ಅರ್ಥ ಹೇಗೆ ಆದೀತು? ಆಗುವದಿಲ್ಲ. ಆದ್ದರಿಂದ ನಾವು ಹೇಳಿದಂತೆಯೇ ರೂಪನಿಷ್ಪತ್ತಿ ಮಾಡಬೇಕು. ಅಂತು ಎಲ್ಲವೂ ಪರಮಾತ್ಮನ ಆಧಾರದಿಂದ ಇದೆ ಎಂದು 'ಥ' ಶಬ್ದಕ್ಕೆ ಅರ್ಥವಾಯಿತು. ಅಥವಾ ಪರಮಾತ್ಮನು ನಿರ್ವಿಕಾರನಾಗಿ ಸ್ಥಿರನಾಗಿರುವನಾದ್ದರಿಂದ 'ಥ' ಎಂದು ಕರೆಯಲ್ಪಡು ತ್ತಾನೆ.

ಇಂತಹ ಗುಣವಿಶಿಷ್ಟನಾದ ಆ ವಾಸುದೇವನನ್ನು ದೇವತೆಗಳು ಈ ಐದು ಪ್ರತೀಕಗಳಲ್ಲಿ ಆವಾಹಿಸಿ ಪೂಜೆಯನ್ನು ಮಾಡಿದರು. ಆಗ ಪೂಜಾ-

ವಿಚ್ಛೇದಮಾಡುವ ಅಭಿಪ್ರಾಯದಿಂದ ದೈತ್ಯರು ಆ ಪ್ರತೀಕಗಳನ್ನು ಪಾಪದಿಂದ ಅಶುದ್ಧವನ್ನಾಗಿ ಮಾಡಿದರು. ಅಶುದ್ಧವಾದ ಪ್ರತಿಮೆಯು ಪೂಜಾರ್ಹವಲ್ಲವೆಂದು ಜ್ಞಾನಿಗಳು ಹೇಳುವುದರಿಂದ ಲೋಕದಲ್ಲಿ ನಾಯಿಯ ಸ್ಪರ್ಶವಾದ ಸ್ವೇಷ್ಟದೇವತಾಪ್ರತಿಮೆಯು ಹೇಗೆ ಪೂಜಾರ್ಹವಲ್ಲವೋ ಹಾಗೆ ಅಸುರರಿಂದ ಪಾಪವುಳ್ಳದ್ದಾಗಿ ಮಾಡಲ್ಪಟ್ಟ ಈ ಐದು ಪ್ರತಿಮೆಗಳು ಅಶುದ್ಧವಾಗಿ, ಎಲ್ಲ ಶುದ್ಧಪದಾರ್ಥಗಳಿಗಿಂತಲೂ ಅತಿಶುದ್ಧನಾದ ಈ ವಿಷ್ಣುವಿನ ಪೂಜೆಗೆ ಯೋಗ್ಯವಾಗಲಿಲ್ಲ. || ೧–೧೩ ||

ಅದ್ಯಾಪ್ಯಶುದ್ಧತೈತೇಷು ಪ್ರಸಿದ್ಧಾ ಸರ್ವದೇಹಿನಾಂ |
ಅತ ಏವಾಶುಭೇಚಾಪಿ ಶುಭೇ ಚ ಕರಣಾನಿ ತೇ || ೧೪ ||

ಪ್ರವರ್ತಯಂತಿ ಸರ್ವತ್ರ ಸ್ವಾಧೀನಾನಿ ಪದೇಪದೇ |
ಯತಃ ಸೌರಭದುರ್ಗಂಧಜ್ಞಾನಂ ಘ್ರಾಣೇನ ಜಾಯತೇ || ೧೫ ||

ಸತ್ಯಾನೃತೇ ವದೇದ್ವಾಚಾ ದೃಶ್ಯಾದೃಶ್ಯೇ ಚ ಚಕ್ಷುಷಾ |
ಪಶ್ಯೇಚ್ಛ್ರೋತ್ರೇಣ ಚ ಶ್ರಾವ್ಯಮಶ್ರಾವ್ಯಂಚ ಶೃಣೋತಿ ಯತ್ ||

ಯೋಗ್ಯಾಯೋಗ್ಯೇ ಸ್ನಾನಮದ್ಯಪಾನೇ ಯನ್ಮನಸಾ ಜನಃ |
ಸಂಕಲ್ಪಯತಿ ತತ್ಪಾಪವಿದ್ಧಾಃ ಸಿದ್ಧಾಃ ಸುರಾ ಇಮೇ || ೧೭ ||

ಈಗಲೂಕೂಡ ಈ ಇಂದ್ರಿಯಾಭಿಮಾನಿದೇವತೆಗಳಲ್ಲಿ ಅಶುದ್ಧತೆಯು ಸರ್ವಪ್ರಾಣಿಗಳಿಗೂ ಅನುಭವಸಿದ್ಧ. ಅದ್ದರಿಂದಲೇ ಅವರು ತಮ್ಮ ಅಧೀನದಲ್ಲಿರತಕ್ಕಂಥಾ ಇಂದ್ರಿಯಗಳನ್ನು ಎಲ್ಲಕಡೆಯಲ್ಲಿಯೂ ಪದೇ ಪದೇ ಶುಭವಿಷಯದಲ್ಲಿಯೂ ಅಶುಭವಿಷಯದಲ್ಲಿಯೂ ಪ್ರೇರಿಸುತ್ತಾರೆ. ಘ್ರಾಣೇಂದ್ರಿಯದಿಂದ ಸುಗಂಧದುರ್ಗಂಧಗಳ ಜ್ಞಾನವು ಹುಟ್ಟುತ್ತದೆ. ವಾಗಿಂದ್ರಿಯದಿಂದ ಸತ್ಯಅನೃತ ಇವೆರಡನ್ನೂ ಮನುಷ್ಯನು ಹೇಳಿಯಾನು. ಕಣ್ಣಿನಿಂದ ಸುಂದರವಾದ ಮತ್ತು ಅಸಹ್ಯವಾದ ವಸ್ತುವನ್ನು ನೋಡಿ ಯಾನು. ಶ್ರಾವ್ಯವಾದ ಮತ್ತು ಅಶ್ರಾವ್ಯವಾದ ಶಬ್ದವನ್ನು ಕೇಳುತ್ತಾನೆ. ಅಲ್ಲದೆ ಯೋಗ್ಯವಾದ ಸ್ನಾನಾದಿಗಳಲ್ಲಿಯೂ ಅಯೋಗ್ಯವಾದ ಮದ್ಯ-

ಪಾನಾದಿಗಳಲ್ಲಿಯೂ ಜನಗಳು ಮನಸ್ಸಿನಿಂದ ಸಂಕಲ್ಪವಮಾಡುತ್ತಾರೆ. ಹೀಗಿರುವದರಿಂದ ದೇವತೆಗಳು ಪಾಪದಿಂದ ಬಾಧಿತರಾಗಿದ್ದಾರೆ. ಅಂದರೆ ಪಾಪದಿಂದ ದೂಷಿತರಾಗಿದ್ದಾರೆ ಎಂಬುದು ಸಿದ್ಧವಾಯಿತು. ಈಗಲೂ ಇಂದ್ರಿಯಗಳಿಂದ ಒಳ್ಳೆಯ ವಿಷಯಗಳ ಅನುಭವವು ಹೇಗೋ ಹಾಗೆಯೇ ಅಶುದ್ಧದುರ್ವಾಸನೆಯೇ ಮೊದಲಾದ ವಿಷಯಾನುಭವವು ಇರುವದು ಎಲ್ಲರಿಗೂ ತಿಳಿದ ವಿಷಯ. ಈ ಅಶುದ್ಧವಿಷಯಸಾಕ್ಷಾತ್ಕಾರಕ್ಕೆ ಕಾರಣವು ಅಶ್ವಿನ್ಯಾದಿ ಇಂದ್ರಿಯಾಭಿಮಾನಿದೇವತೆಗಳಲ್ಲಿ ಕಲ್ಯಾದಿದೈತ್ಯರ ಪ್ರವೇಶವೇ. ದೇವತೆಗಳು ಸ್ವರೂಪದಲ್ಲಿ ಶುದ್ಧರು. || ೧೪–೧೭ ||

ದೋಷಾನೇತಾನ್ ಸದೃಷ್ಟಾಂತಾನ್ ಸ್ಪಷ್ಟೀಚಕ್ರೇ ಯತಃ ಶ್ರುತಿಃ |
ತತಃ ಪೂಜಾನರ್ಹತೈಷಾಂ ಸರ್ವೇಷಾಂ ಸಂಮತಾಭವತ್ ||೧೮||

ಶ್ರುತಿಯು ದೃಷ್ಟಾಂತಪೂರ್ವಕವಾಗಿ ಈ ದೋಷಗಳನ್ನು ಸ್ಪಷ್ಟಮಾಡಿ ದುವದರಿಂದ ಈ ಎಲ್ಲಾ ದೇವತೆಗಳೂ (ಸಾಕ್ಷಾತ್ತಾಗಿ) ಪರಮಾತ್ಮನ ಪ್ರತೀಕತಯಾ ಪೂಜೆಗೆ ಅರ್ಹರಲ್ಲವೆಂಬುದು ಸಿದ್ಧವಾಯಿತು. || ೧೮ ||

ಅನವದ್ಯಾ ಯಸ್ಯ ವಧೂಃ ಸ್ವಯಂ ಚಾಪ್ಯವೃಜಿನಃ(ವದ್ಯವರ್ಜಿತಃ)
ಪ್ರಭುಃ |
ಸೋಽಶುದ್ಧಪ್ರತಿಮಾಮಧ್ಯೇ ಕಥಂ ಸಂಪೂಜ್ಯತೇ ವಿಭುಃ ||೧೯||

ಯಾವನ ಪತ್ನಿಯು ದೋಷರಹಿತಳೋ ಮತ್ತು ಯಾವನು ಸ್ವತಃ ಪಾಪದೂರನೋ ಅಥವಾ ದೋಷವರ್ಜಿತನೋ ಅಂತಹ ಸಮರ್ಥನಾದ ಸ್ವಾಮಿಯು ಅಶುದ್ಧವಾದ ಪ್ರತಿಮೆಯಲ್ಲಿ ಹೇಗೆತಾನೇ ಪೂಜಾರ್ಹನಾಗು ತ್ತಾನೆ? || ೧೯ ||

ಏಷು ಸ್ಥಾನೇಷು ಪೂಜಾಯಾಂ ವಿಚ್ಛಿನ್ನಾಯಾಂ ಪುನಃ ಸುರಾಃ |
ಆಲೋಚ್ಯ ಮುಖ್ಯಪ್ರಾಣಾಖ್ಯಪ್ರತಿಮಾಯಾಂ ಜಗದ್ಗುರುಂ ||

ಆರಾಧಯನ್ ಕಿಲ ಹರಿಂ ತತ್ರ ಗತ್ವಾಽಸುರಾಃ ಸ್ವಯಂ |
ಚೂರ್ಣೀಬಭೂವುಃ ಸರ್ವೇ ಚ ಮುಖ್ಯಪ್ರಾಣೋಗ್ರತೇಜಸಾ ||

ಈ ಪ್ರತಿಮೆಗಳಲ್ಲಿ ಪೂಜೆಯು ವಿಚ್ಛಿನ್ನವಾಗಲು ಪುನಃ ದೇವತೆಗಳು ಆಲೋಚಿಸಿ ಮುಖ್ಯಪ್ರಾಣನಾಮಕ ಪ್ರತಿಮೆಯಲ್ಲಿ ಜಗದ್ಗುರುವಾದ ಹರಿಯನ್ನು ಆರಾಧಿಸುತ್ತಿರಲು ಅಲ್ಲಿಗೆ ಅಸುರರು ಹೋಗಿ ಮುಖ್ಯಪ್ರಾಣನ ಉಗ್ರವಾದ ಪ್ರತಾಪದಿಂದ ತಾವೆಲ್ಲರೂ ಪುಡಿಪುಡಿಯಾಗಿಹೋದರು.

ಯಥಾಖಣಾಶ್ಮಸಂಯೋಗೇ ಮೃತ್ಪಿಂಡಃ ಸ್ವಯಮೇವ ಹಿ ।
ಚೂರ್ಣೀಭವೇತ್ತಥಾ ಸರ್ವೇ ನಾಶಮೀಯುರ್ದಿತೇಃ ಸುತಾಃ ॥

ಹೇಗೆ ಗಟ್ಟಿಯಾದ ಕಲ್ಲಿನಮೇಲೆ ಬಿದ್ದ ಮಣ್ಣಿನ ಹೆಂಟೆಯು ತಾನೇ ಚೂರ್ಣವಾಗಿಹೋಗುತ್ತದೆಯೋ ಹಾಗೆಯೇ ಎಲ್ಲಾ ದೈತ್ಯರೂ ಮುಖ್ಯ-ಪ್ರಾಣನ ಮೇಲೆ ಬಿದ್ದಾಗ ತಾವೇ ನಾಶವಾದರು. ॥ ೨೨ ॥

ಸರ್ವಥಾ ಖನನಾಯೋಗ್ಯೋ ಯೋಽಶ್ಮಾ ದೃಢತರೋ ಭುವಿ ।
ತಮಾಹುರಾಖಣಾಶ್ಮಾನಂ ಶಬ್ದತತ್ವವಿದೋ ಜನಾಃ ॥ ೨೩ ॥

ಯಾವ ಕಲ್ಲು ಸರ್ವಥಾ ಅಗೆಯುವದಕ್ಕೆ ಯೋಗ್ಯವಲ್ಲವೋ ಅಂತಹ ದೃಢತರವಾದ ಕಲ್ಲನ್ನು "ಆಖಣಾಶ್ಮ" ಎಂದು ಶಬ್ದತತ್ವವನ್ನು ತಿಳಿದ ಜನರು ಹೇಳುತ್ತಾರೆ. ॥ ೨೩ ॥

ಯದ್ವೈಕ್ಯಂ ನಣಯೋಃ ಪ್ರಾಹುಸ್ತಸ್ಮಾದಾಹುಃ ಖನಂ ಖಣಂ ।
ಏವಂ ಚ ಖನನೇ ಯೋಗ್ಯಃ ಖಣ ಇತ್ಯುಚ್ಯತೇ ಬುಧೈಃ ॥ ೨೪ ॥

'ನ' ಕ್ಕೂ 'ಣ' ಕ್ಕೂ ಐಕ್ಯವಿರುವದರಿಂದ (ಭೇದವಿಲ್ಲದ್ದರಿಂದ) 'ಖನಂ' ಎಂಬುವಲ್ಲಿ 'ಖಣಂ' ಎಂದು ಉಚ್ಚರಿಸುತ್ತಾರೆ. ಏವಂಚ ಖನನ (ಅಗೆಯುವದಕ್ಕೆ) ಯೋಗ್ಯವಾದದ್ದು 'ಖಣ' ಎಂದು ಕರೆಯಲ್ಪಡುತ್ತೆ.

ಅಖಣಸ್ತದಯೋಗ್ಯೋಽಭೂದಾಸಮ್ಯಕ್ ಖನನೇ ತು ಯಃ ।
ಅಯೋಗ್ಯಸ್ತಂ ದೃಢಾಶ್ಮಾನಂ ಆಖಣಂ ಕೋವಿದಾ ವಿದುಃ ॥೨೫॥

ಅಖಣಃ ಎಂದರೆ ಖನನಕ್ಕೆ (ಅಗೆಯುವದಕ್ಕೆ) ಯೋಗ್ಯವಲ್ಲದ್ದು ಎಂಬ ಅರ್ಥವುಳ್ಳದ್ದಾಯಿತು. ಈಗ ಆ + ಅಖಣಃ = ಆಖಣಃ ಹೀಗಿರು

ವುದರಿಂದ ಸಮ್ಯಕ್ = ಚೆನ್ನಾಗಿ ಅಂದರೆ, ಯಾವ ಪ್ರಕಾರದಲ್ಲಿಯೂ ಅಗೆಯುವದಕ್ಕೆ ಯೋಗ್ಯವಲ್ಲದ್ದು ಯಾವುದೋ ಅಂತಹ ದೃಢವಾದ ಕಲ್ಲನ್ನು 'ಅಖಣ'ವೆಂದು ಜ್ಞಾನಿಗಳು ತಿಳಿಯುತ್ತಾರೆ. || ೩೫ ||

ಇತಿ ಛಂದೋಗಾಯಕಾನಾಂ ಮಹೋಪನಿಷದೇವ ಹಿ ।
ಯದ್ವಾಯೋರಿತರೇ ದೇವಾಃ ಪೂರ್ವದೇವೈರ್ವಶೀಕೃತಾಃ ||೩೬||

ತಚ್ಛುಕ್ಲತಾ ಕಥಂ ತೇಷಾಂ ದೋಷಾವಿಷ್ಟಧಿಯಾಂ ವದ ।
ಅವಮಂ ದೇವಮಾರಭ್ಯ ಕ್ರಮೇಣೈವೋತ್ತರೋತ್ತರಾನ್ ||೩೭||

ದೇವಾನ್ ಪ್ರದರ್ಶ್ಯೋಪನಿಷತ್ಪೂರ್ವದೇವ ವಶೀಕೃತಾನ್ ।
ಅಂತೇಂತರಾಯರಹಿತಂ ಪ್ರಾಣಂ ಚಕ್ರೇ ಗುಣಾಧಿಕಂ || ೩೮ ||

ಹೀಗೆ ಸಾಮವೇದದಲ್ಲಿನ ದೊಡ್ಡದಾದ ಛಾಂದೋಗ್ಯ ಉಪನಿಷತ್ಪ್ರಮಾಣದಿಂದಲೇ, ಪೂರ್ವದೇವೈಃ = ದೈತ್ಯರಿಂದ, ವಾಯುವಿನಿಂದ ಇತರರಾದ ದೇವತೆಗಳು, ವಶಮಾಡಿಕೊಳ್ಳಲ್ಪಟ್ಟವರೆಂದು ತಿಳಿದುಬರುವದರಿಂದ, ದೋಷದಿಂದ ಆವಿಷ್ಟವಾದ ಬುದ್ಧಿಯುಳ್ಳ ಆ ದೇವತೆಗಳಿಗೆ ಶುಕ್ಲತ್ವವು ಅಂದರೆ ಶುದ್ಧತ್ವವು ಹೇಗೆ ಆದೀತು? ಹೇಳು. ಉಪನಿಷತ್ತು ಕೆಳಗಿನ ದೇವತೆಯನ್ನು ಮೊದಲುಮಾಡಿಕೊಂಡು ಕ್ರಮವಾಗಿ ಮೇಲು ಮೇಲಿನ ದೇವತೆಗಳನ್ನು ಅಸುರರಿಂದ ವಶಮಾಡಿಕೊಳ್ಳಲ್ಪಟ್ಟವರನ್ನಾಗಿ ತೋರಿಸಿ ಕೊನೆಯಲ್ಲಿ ವಿಘ್ನರಹಿತನಾದ ಮುಖ್ಯಪ್ರಾಣನನ್ನು ಗುಣಾಧಿಕನನ್ನಾಗಿ ಮಾಡಿ ತೋರಿಸಿತು; ಅಂದರೆ ಗುಣಾಧಿಕನೆಂದು ಪ್ರಕಟಿಸಿತು. || ೩೬-೩೮ ||

ಅಸುರಾವೇಶರಹಿತವಾಯೋರೇವ ಹಿ ಶುಕ್ಲತಾ ।
ಉಚಿತಾತೋ ಮುಖ್ಯವಾಯುರಾಖಣಾಶ್ಮಸಮಃ ಕಿಲ || ೩೯ ||

ಅಸುರಾವೇಶರಹಿತನಾದ ವಾಯುದೇವಂಗೇನೇ ಶುಕ್ಲತ್ವವು ಉಚಿತವಾದದ್ದು. ಆದ್ದರಿಂದ ಮುಖ್ಯಪ್ರಾಣನು ಆಖಣಾಶ್ಮಕ್ಕೆ ಸಮನಷ್ಟೆ. || ೩೯ ||

ಯನ್ಮುಖ್ಯವಾಯುಪ್ರತಿಮಾ ಪೂಜಾವಿಚ್ಛೇದಕಾಸುರಾನ್ ।
ಚೂರ್ಣೀಕರೋತಿ ತೇನಾಸಾವವಿಚ್ಛಿನ್ನಾರ್ಹಣೋಚಿತಾ ||೪೦||

ಮುಖ್ಯ ವಾಯುಪ್ರತಿಮೆಯು ಪೂಜೆಗೆ ಪ್ರತಿಬಂಧಕಮಾಡುವ ಅಸುರರನ್ನು ಪುಡಿಮಾಡುತ್ತದೆ. ಅದ್ದರಿಂದ ಮುಖ್ಯಪ್ರಾಣನು ಅಡ್ಡಿಯಿಲ್ಲದ ಹರಿಯ ಪೂಜೆಗೆ ಉಚಿತವಾದ ಪ್ರತಿಮಾ. || ೩೮ ||

ಇತಿ ಮತ್ವಾ ತತ್ವವಿದೋ ಮಧ್ವಸ್ಯ ಸ್ವೋಪಕಾರಿಣಃ ।
ವಾಯೋಸ್ತೃತೀಯರೂಪಸ್ಯ ಹೃದ್ಯರ್ಚಾಂ ಕುರ್ವತೇ ಹರೇಃ ||

ಹೀಗೆ ತಿಳಿದು ತತ್ವಜ್ಞರು ತಮಗೆ ಉಪಕಾರವನ್ನು ಮಾಡಿದ ವಾಯುದೇವರ ಮೂರನೆಯ ಅವತಾರರಾದ ಮಧ್ವಾಚಾರ್ಯರ ಹೃದಯ ಕಮಲದಲ್ಲಿ ಹರಿಯ ಪೂಜೆಯನ್ನು ಮಾಡುತ್ತಾರೆ. || ೩೯ ||

ವಾಯುರೇವ ಯತೋ ಬ್ರಹ್ಮಾ ಸೋಽಪಿ ಶುಕ್ಲೋಽಭವತ್ತತಃ ।
ವಾತಾದ್ಭೀತಾಸುರಾ ವಾಯೋಃ ಪತ್ನೀಂ ಪತ್ಯಂಕಗಾಂ ಸದಾ ||

ಯದ್ದ್ರಷ್ಟುಮಪಿ ಶಕ್ತಾ ನೋ ಸಾಪಿ ಶುಕ್ಲಾಭವತ್ತತಃ ।
ಸ್ವಸ್ಪರ್ಶಾಸಹಮಾನೋಽಪಿ ಪತ್ನೀಸ್ಪರ್ಶಂ ಸಹೇತ ಕಃ || ೪೩ ||

ವಾಯುದೇವರೇ ಬ್ರಹ್ಮದೇವರಾದ್ದರಿಂದ ಅಂದರೆ ಇಬ್ಬರೂ ಸಮರಾದ್ದರಿಂದ ಬ್ರಹ್ಮದೇವರೂಕೂಡ ಶುಕ್ಲರು ಆದರು. ವಾಯುದೇವರಿಂದ ಭಯಪಟ್ಟವರಾಗಿ ಅಸುರರು, ಪತಿಯ ತೊಡೆಯಮೇಲೆ ಯಾವಾಗಲೂ ಕೂತಿರುವ ವಾಯುಪತ್ನಿಯನ್ನು ನೋಡಲುಕೂಡ ಶಕ್ತರಾಗುವದಿಲ್ಲ. ಅಂದಮೇಲೆ ಆಕೆಯೂಕೂಡ ಶುಕ್ಲಳು ಆದಳು. ತನ್ನನ್ನು ಇತರರು ಸ್ಪರ್ಶಮಾಡುವುದನ್ನೇ ಯಾವಾತನು ಸಹಿಸುವದಿಲ್ಲವೋ ಆತನು ತನ್ನ ಪತ್ನಿಯನ್ನು ಇತರರು ಸ್ಪರ್ಶಮಾಡುವದನ್ನು ಸಹಿಸಿಯಾನೇನು?

ಅತೋಽಭೂದ್ಭಾರತೀ ಶುಕ್ಲೇತಮಾ ವೇದ(ಯುಕ್ತಿ)ವಿದಾಂ ಮತೇ
ಯತಃ ಸರಸ್ವತೀದೇವೀ ಭಾರತೀ ಪೂರ್ವಜನ್ಮನಿ || ೪೪ ||

ತತಸ್ತಸ್ಯಾಶ್ಚ ಶುಕ್ಲತ್ವಂ ತತ್ವಮೇವೇತಿ ಮೇ ಮತಿಃ ।
ಅತಃ ಶ್ರೌತಂ ಚ ಯೌಕ್ತಂ ಚ ಪರೇಶುಕ್ಲಮಿದಂ ತ್ರಯಂ ||೪೫||

ಆದುದರಿಂದ ವೇದಜ್ಞರ ಮತದಲ್ಲಿ (ಯುಕ್ತಿಯನ್ನು ಬಲ್ಲವರ ಮತದಲ್ಲಿ) ಭಾರತೀದೇವಿಯು ಶುಕ್ಲತಮಳಾದಳು. ಪೂರ್ವಜನ್ಮದಲ್ಲಿ ಸರಸ್ವತೀದೇವಿಯು ಭಾರತಿಯಾಗಿದ್ದಳಾದ್ದರಿಂದ ಆ ಸರಸ್ವತೀದೇವಿಯ ಶುಕ್ಲತ್ವವೂ ಕೂಡ ಯಥಾರ್ಥವೇ ಎಂದು ನನ್ನ ನಿರ್ಣೀತವಾದ ಅಭಿಪ್ರಾಯ. ಈ ಕಾರಣದಿಂದ ಈ ಮೂವರೂ ಶ್ರುತಿಯಿಂದಲೂ ಯುಕ್ತಿಯಿಂದಲೂ ಪರನಾದ ಶ್ರೀಹರಿಯ ವಿಷಯದಲ್ಲಿ ಶುಕ್ಲರು ಆವರು. || ೩೪-೩೫ ||

ಶಾಸ್ತ್ರದಲ್ಲಿ ಈ ಐವರನ್ನೂ ಪರಶುಕ್ಲತ್ರಯರೆಂದು ಶ್ರೀವಾದಿರಾಜರು ಹೇಳಲು ಇದೇ ಕಾರಣ.

ಏವಂ ಚ ವಾಯೋರವಮಾ ದೇವಾಃ ಶರ್ವಪುರೋಗಮಾಃ |
ವಾಯೋರಪೀಶಸ್ಯ ಹರೇರ್ದಾಸನ್ಕಿಂಕರಕಿಂಕರಾಃ || ೩೬ ||

ಹೀಗಿರುವುದರಿಂದ ರುದ್ರನೇ ಮೊದಲಾದ ದೇವತೆಗಳು ವಾಯುದೇವರಿಗೆ ಕೆಳಗಿನವರು. ಆದ್ದರಿಂದ ವಾಯುದೇವರಿಗೂ ಕೂಡ ಸ್ವಾಮಿಯಾದ ಹರಿಗೆ ಈ ಕೆಳಗಿನ ದೇವತೆಗಳು ದಾಸಾನುದಾಸರಾದರು. || ೩೬ ||

ಅತಃ ಶ್ರೀಹರಿಣೈಕ್ಯಂ ನಾ ಸಾಮ್ಯಂ ವಾ ಕಸ್ಯ ಸಂಭವೇತ್ |
ತಸ್ಮಾದಪ್ಯುತ್ತಮತ್ವಂ ಯತ್ತದಷ್ಟಮರಸೋಪಮಂ || ೩೭ ||

ಈ ಕಾರಣದಿಂದ ಯಾವದೇವತೆಗೆತಾನೇ ಹರಿಯಿಂದ ಐಕ್ಯವೇ ಆಗಲೀ ಸಾಮ್ಯವೇಆಗಲೀ ಸಂಭವವಾದೀತು? ಈ ಹರಿಗಿಂತ ಇವರಿಗೆ ಉತ್ತಮತ್ವವು ಯಾವುದೋ ಅದು ಎಂಟನೇರಸಕ್ಕೆ ಸಮವಾಯಿತು. ಅಂದರೆ ಹೇಗೆ ಏಳನೇರಸವೇ ಇಲ್ಲದಿರುವಾಗ ಎಂಟನೇರಸವಿರುವದು ಅತ್ಯಂತ ಅಸಂಭಾವಿತವೋ ಹಾಗೆಯೇ ಯಾವದೇವತೆಗಾಗಲೀ ಹರಿಯ ಸಮತ್ವವೇ ಇಲ್ಲವೆಂದಮೇಲೆ ಹರಿಗಿಂತ ಉತ್ತಮತ್ವವು ಅತ್ಯಂತ ಅಸಂಭಾವಿತ. || ೩೭ ||

ಕಿಂಚ ವಾಯೋಃ ಶುಕ್ಲತಾಯಾಂ ತಸ್ಯ ಪುತ್ರಾಸ್ತು ತೇ ತ್ರಯಃ |
ಹನುಮದ್ಭೀಮಮಧ್ವಾಖ್ಯಾ ಮನೋಮಾಲಿನ್ಯವರ್ಜಿತಾಃ ||

ದುಷ್ಟಾನಿಷ್ಟಪ್ರದಾಸ್ತ್ರೀ ಚ ಸ್ಪಷ್ಟಂ ಸ್ಯುರ್ಹಿ ನಿದರ್ಶನಂ ||೪೯-(೧)||

ಮನೋಮಾಲಿನ್ಯವಿಲ್ಲದ ಮತ್ತು ದುಷ್ಟರಿಗೆ ಅನಿಷ್ಟವನ್ನು ಕೊಡತಕ್ಕ ವಾಯುದೇವರ ಪುತ್ರರಾದ (ಅಂಶಭೂತರಾದ) ಹನುಮದ್ಭೀಮಮಧ್ವ ರೆಂಬ ಹೆಸರುಳ್ಳ ಮೂವರು ವಾಯುದೇವರ ಮುಕ್ಯತ್ವದಲ್ಲಿ ಸ್ಪಷ್ಟವಾಗಿ ದೃಷ್ಟಾಂತರಾಗುವರು. ಹೇಗೆಂದರೆ—

ಶತಯೋಜನವಿಸ್ತೀರ್ಣಂ ಪುಪ್ಲುವೇ ಯಃ ಪಯೋನಿಧಿಂ ||೪೯||

ಸೀತಾಕೃತೇ ಶತ್ರುಪುರೀಂ ಯೋದಹತ್ಪುಚ್ಛವಹ್ನಿನಾ |
ಬಭಂಜ ಯೋಂಜನಾಸೂನುಃ ಕುಂಜರಃ ಕದಳೀಮಿವ || ೮೦ ||

ರಾವಣಸ್ಯ ಪ್ರಿಯವನಂ ರಾಮವಿಪ್ರಿಯಕಾರಿಣಃ |
ಚಮೂಸಮೂಹಸ್ಯ ಚಾಸೂ ಯೋಮೂಮುಚದಸೂಂಸ್ತತಃ||

ಹಸ್ತೇನೈಕೇನ ಶಸ್ತ್ರೋರುಕಟಕಾಂಗದಧಾರಿಣಾ |
ಸುವರ್ಣವರ್ಣಕೌಪೀನಧಾರೀ ಹಾರೀ ಹರೀಶ್ವರಃ || ೮೨ ||

ದತ್ವಾಂಗುಲೀಯಕಂ ದೇವ್ಯೈ ಪ್ರೋಕ್ತ್ವಾ ತಾಂ ಪ್ರಿಯಭಾಷಣಂ
ಚೂಡಾಮಣಿಂ ತಯಾ ದತ್ತಂ ಗೃಹೀತ್ವಾ ಕರಪಲ್ಲವೇ || ೮೩ ||

ಲೀಲಯೋಲ್ಲಂಘ್ಯ ಜಲಧಿಂ ಲಾಲಿತಃ ಸುರಪುಂಗವೈಃ |
ಬಾಲಭಾನುಸಮಃ ಶ್ರೀಮಾನ್ಹನೂಮಾನ್ ರಾಮಕಿಂಕರಃ ||೮೪||

ಸ್ವಭಕ್ತಶರಣೌ ದಿವ್ಯಕಿರಣೌ ಚರಣೌ ಹರೇಃ |
ಧರಣೀಚಾರಿಣೌ ಮುಕ್ತಿಕಾರಿಣೌ ಭವವೈರಿಣೌ || ೮೫ ||

ರಾಮಸ್ಯ ರಣಭೀಮಸ್ಯ ಶ್ಯಾಮಸ್ಯ ಸ ದದರ್ಶ ಹ || ೮೬-(೧) ||

ರಾಮಾವತಾರದಲ್ಲಿ ಹನುಮಂತದೇವರು ನೂರುಯೋಜನವಿಸ್ತೀರ್ಣ ವುಳ್ಳ ಸಮುದ್ರವನ್ನು ದಾಟಿದರು. ಸೀತಾದೇವಿಗೋಸುಗ ರಾಮದೇವರ ಶತ್ರುವಾದ ರಾವಣನ ಲಂಕಾಪಟ್ಟಣವನ್ನು ತನ್ನ ಬಾಲದ ಬೆಂಕಿಯಿಂದ

ಸುಟ್ಟರು. ಅಲ್ಲದೆ ಆನೆಯು ಬಾಳೆಯಗಿಡವನ್ನು ಮುರಿಯುವಂತೆ ಅಂಜನಾಪುತ್ರರಾದ ಹನುಮಂತದೇವರು ರಾಮದೇವರಿಗೆ ಅಪ್ರಿಯವನ್ನು ಮಾಡಿದ ರಾವಣನ ವನವನ್ನು ಧ್ವಂಸಮಾಡಿದರು. ಮತ್ತು ಶ್ಲಾಘ್ಯವೂ ಉತ್ತಮವೂ ಆದ ಕೈಕಡಗಗಳನ್ನು ಧರಿಸಿದ ಒಂದೇ ಹಸ್ತದಿಂದ ರಾವಣನ ಸೈನ್ಯಸಮೂಹದ ಪ್ರಾಣಗಳನ್ನು ತೆಗೆದುಬಿಟ್ಟರು. ಇದೆಲ್ಲವನ್ನೂ ಮಾಡಿ ಭಂಗಾರದ ಬಣ್ಣವುಳ್ಳ ಕೌಪೀನವನ್ನೂ ಹಾರವನ್ನೂ ಧಾರಣೆಮಾಡಿದ ಕಪೀಶ್ವರರೆನಿಸಿದ ಹನುಮಂತದೇವರು ದೇವಿಗೆ ರಾಮದೇವರ ಅಂಗುಲೀಯಕವನ್ನು ಕೊಟ್ಟು ಆಕೆಗೆ ಪ್ರಿಯವಾದ ಮಾತನ್ನು ಹೇಳಿ ಆಕೆಯು ಕೊಟ್ಟ ಚೂಡಾಮಣಿಯನ್ನು ತಮ್ಮ ಕರಪಲ್ಲವದಿಂದ ತೆಗೆದುಕೊಂಡು ಲೀಲಾಮಾತ್ರದಿಂದ ಸಮುದ್ರವನ್ನು ದಾಟಿ ದೇವತೆಗಳಿಂದ ಶ್ಲಾಘಿಸಲ್ಪಟ್ಟವರಾಗಿ ಬಾಲಸೂರ್ಯನಂತೆ ಹೊಳೆಯುವ ರಾಮಕಿಂಕರರೂ ವಾಯುಪುತ್ರರೂ ಎನಿಸಿದ ಶ್ರೀಮಾನ್ ಹನುಮಂತದೇವರು ಸ್ವಭಕ್ತರಿಗೆ ಆಶ್ರಯವಾದ, ಪ್ರಕಾಶಿಸುವ ಕಿರಣಗಳಿಂದ ಹೊಳೆಯುವ, ಭೂಮಿಯಲ್ಲಿ ಓಡಾಡುವ, ಮುಕ್ತಿಗೆ ಕಾರಣವಾದ, ಸಂಸಾರಕ್ಕೆ ವೈರಿಯಾದ, ರಣಭಯಂಕರನೂ ನೀಲವರ್ಣನೂ ಆದ ಹರಿರೂಪೀರಾಮನ ಚರಣದ್ವಯವನ್ನು ನೋಡಿದರು. || ೩೯(೧)–೪೬(೧) ||

ಅದ್ರೀನಾನೀಯ ಬಹುಶಃ ಕ್ಷುದ್ರೀಕೃತ್ಯ ಚ ಸಾಗರಂ || ೪೬-(೨) ||

ಮುದ್ರೀಕೃತ್ಯಾರಿವದನಮುದ್ಧಾ ಸೇತುಮಥಾಕರೋತ್ ।
ಸೇನಾಂ ಸ್ವಸೇನಾಮಾನೀಯ ದಾನವಾನಾಮನೀಕಿನೀಂ || ೪೭ ||

ಧನುರ್ವಿದ್ಯಾಪಾರಗೇಣ ರಾಮೇಣ ಶರವರ್ಷಿಣಾ ।
ಘಾತಯಿತ್ವಾ ಸ್ವಯಂ ಹತ್ವಾ ಪಾತಯಿತ್ವಾ ರಿಪೋಃ ಶಿರಃ ||೪೮||

ಸೀತಾಪತೇಃ ಪ್ರಿಯಂ ಕೃತ್ವಾ ನತ್ವಾ ತತ್ಪಾದಪಂಕಜಂ(ಪಲ್ಲವಂ) ।
ಶ್ರುತ್ವಾ ತನ್ಮುಖತಸ್ತತ್ವಂ ಸ್ತುತ್ವಾ ರಾಮಾಯಣೀಂ ಕಥಾಂ ||೪೯||

ಅದ್ಯಾಪ್ಯಾಸ್ತೇ ಸ ರಾಮೇಣ ಸಾರ್ಧಂ ಕಿಂಪುರುಷೇ ಕಿಲ ।
ರಥೀಭೂಯ ರಣೇರಾಮಂ ಕೃತೀ ಯಃ ಪರ್ಯತೋಷಯತ್ ||

ಆನೀಯ ಯೋ ಮಹಾಶೈಲಂ ಸೇನಾಂ ಸ್ವಾಂ ಸಮಜೀವಯತ್ ।
ಸ್ಥಾನಂ ಚ ಸತ್ಯಲೋಕಾಖ್ಯಂ ರಾಮೋಽಸ್ಮೈ ಪ್ರಾದಿಶತ್ಕಿಲ ॥೫೧॥

ಬೆಟ್ಟಗಳನ್ನು ಬಹುವಾಗಿ ತಂದು ಸಮುದ್ರವನ್ನು ಅಲ್ಪವನ್ನಾಗಿಮಾಡಿ ಅಂದರೆ ಲಕ್ಷ್ಯಮಾಡದೆ ಶತ್ರುಗಳ ಬಾಯಿಯನ್ನು ಮುಚ್ಚಿ ಅಂದರೆ ಶತ್ರುಗಳನ್ನು ಆಶ್ಚರ್ಯದಿಂದ ಸ್ತಬ್ಧರನ್ನಾಗಿಮಾಡಿ ಸಮುದ್ರದಲ್ಲಿ ಸೇತುವೆಯನ್ನು ಹನುಮಂತದೇವರು ಮಾಡಿದರು. ತಮ್ಮ ಸ್ವಾಮಿಯಾದ ರಾಮನಿಂದ ಸಹಿತವಾಗಿ ತಮ್ಮ ಸೇನೆಯನ್ನು ಲಂಕಾಪಟ್ಟಣಕ್ಕೆ ತಂದು ಧನುರ್ವಿದ್ಯಾಪಾರಂಗತನಾದ ಶತ್ರುಸೈನ್ಯದಮೇಲೆ ಬಾಣದ ಮಳೆಯನ್ನು ಕರೆಯುವ ರಾಮನಿಂದ ದಾನವಸೈನ್ಯವನ್ನು ನಾಶಮಾಡಿಸಿ, ತಾವೂಕೂಡ ಸಂಹರಿಸಿ, ಶತ್ರುವಿನ ಶಿರವನ್ನು ಕೆಳಗೆ ಕೆಡವಿ, ಸೀತಾಪತಿಗೆ ಪ್ರಿಯವನ್ನು ಮಾಡಿ, ಅವನ ಪಾದಕಮಲವನ್ನು ನಮಸ್ಕರಿಸಿ, ತತ್ತ್ವವನ್ನು ಅವನ ಮುಖದಿಂದ ಕೇಳಿ, ಕಿಂಪುರುಷಖಂಡದಲ್ಲಿ ರಾಮಾಯಣದ ಕಥೆಯನ್ನು ಗಾನಮಾಡಿಕೊಂಡು, ರಾಮನಸಹಿತವಾಗಿ ಈಗಲೂಕೂಡ ಇರುತ್ತಾರೆ. ರಣಭೂಮಿಯಲ್ಲಿ ರಾಮನಿಗೆ ರಥದಂತೆ ವಾಹನವಾಗಿ ಅವನನ್ನು ಸಂತೋಷಪಡಿಸಿದ ಮತ್ತು ದೊಡ್ಡದಾದ ಸಂಜೀವಿನೀಪರ್ವತವನ್ನು ತಂದು ತಮ್ಮ ಸೈನ್ಯವನ್ನು ಬದುಕಿಸಿದ ಸಮರ್ಥರಾದ ಹನುಮಂತದೇವರಿಗೆ ಸತ್ಯಲೋಕವೆಂಬ ಸ್ಥಾನವನ್ನು ರಾಮನು ಕೊಟ್ಟನಷ್ಟೆ. ॥ ೪೬ (೨)–೫೧ ॥

ಜೀವೈರನಂತೈಶ್ಚ ಕೃತಸುಕೃತಾನಾಂ ಫಲಂ ಸುಖಂ ।
ಸಹಭುಂಕ್ತೇ ಕಿಲ ಶ್ರೀಕೋ ಬ್ರಹ್ಮಭೂತಹನೂಮತಾ ॥ ೫೨ ॥

ಅನಂತಜೀವರುಗಳಿಂದ ಮಾಡಲ್ಪಟ್ಟ ಪುಣ್ಯದಫಲವಾದ ಸುಖವನ್ನು ರಮಾಕಾಂತನು ಬ್ರಹ್ಮಪದವಿಯನ್ನು ಹೊಂದಿದ ಹನುಮಂತನ ಜೊತೆಯಲ್ಲಿ ಅನುಭವಿಸುತ್ತಾನಲ್ಲವೆ! ॥ ೫೨ ॥

ಭೋಗಾಶ್ಚ ಯೇ ಯಾನಿ ಚ ಕರ್ಮಜಾತಾ-
ನ್ಯನಾದ್ಯನಂತಾನಿ ಮಮೇಹ ಸಂತಿ ।

ಮದಾಜ್ಞಯಾ ತಾನ್ಯಖಿಲಾನಿ ಸಂತಿ
ಧಾತುಃ ಪದೇ ತತ್ಸಹಭೋಗನಾಮ ||

ಮ. ಭಾ. ತಾ. ನಿ. ೮-೮. ಶ್ಲೋ-೨೪೨.

ವಾದಿರಾಜರ ಮಹಾಭಾರತತಾತ್ಪರ್ಯನಿರ್ಣಯದ ವ್ಯಾಖ್ಯಾನ-ರೂಪವಾದ ಶ್ರೀಭಾವಪ್ರಕಾಶಿಕಾ ಎಂಬ ಗ್ರಂಥದಲ್ಲಿ ಉಕ್ತವಾದ ಈ ಶ್ಲೋಕದ ಅಭಿಪ್ರಾಯವು ಹೀಗೆ:-

ಈ ಲೋಕದಲ್ಲಿ ಪ್ರಾಣಿಗಳು ಮಾಡುವ ಪುಣ್ಯರೂಪವಾದ ಕರ್ಮ ಸಮೂಹವು ಯಾವುದು ಉಂಟೋ ಅದು ನನ್ನ ವಶದಲ್ಲಿದೆ. ಕರ್ಮಗಳು ಬಂಧಕವಾದ್ದರಿಂದ ಜೀವರಿಗೆ ಹೇಗೆ ಕರ್ಮಸಂಬಂಧವೋ ಹಾಗೆ ನನಗಿಲ್ಲ. ಆದರೆ ಸ್ವಾಮಿ ಸ್ವಾಮ್ಯರೂಪ ಸಂಬಂಧಮಾತ್ರಗೆ ಉಂಟು. ಆ ಕರ್ಮಗಳು ಕಲ್ಪಕಲ್ಪದಲ್ಲಿ ಬಂದ ಚತುರ್ಮುಖಬ್ರಹ್ಮರ ವಶದಲ್ಲಿಯೂ ಇವೆ. ಆದ್ದರಿಂದ ಆ ಕರ್ಮಫಲವಾದ ಯಾವ ಸುಖಾನುಭವಗಳೋ ಅವೆಲ್ಲವೂ ನನಗೆ ಉಂಟು. ಲೀಲೆಯಿಂದ ಭೋಗಿಸುವೆನು, ಆದಕಾರಣ ಅದು ನನಗೆ ಬಂಧಕ ವಾಗುವುದಿಲ್ಲ. ಇದು ಬ್ರಹ್ಮಪದವಿಗೆ ಬಂದವರಿಗೂ ಉಂಟು. ಆ ಭೋಗ ಗಳನ್ನು ಬ್ರಹ್ಮದೇವರ ಅಂತರ್ಯಾಮಿಯಾಗಿದ್ದು, ಬ್ರಹ್ಮದೇವರಸಹಿತವಾಗಿ ಸಮಸ್ತ ಪ್ರಾಣಿಗಳೂ ನಮ್ಮ ಪ್ರೇರಣೆಯಿಂದ ಮಾಡುವ ಪುಣ್ಯಕರ್ಮದ ಫಲವಾದ ಸುಖದ ಸಾರವನ್ನು ಸ್ವೀಕರಿಸುತ್ತೇನೆ. ಈ ಕಾರಣದಿಂದ ಬ್ರಹ್ಮ-ಪದಕ್ಕೆ ಸಹಭೋಗವೆಂದು ಹೆಸರು.

ವಾದಿರಾಜಕೃತೇ ಶ್ರಾವ್ಯೇ ಕಾವ್ಯೇ ಭವ್ಯೇ ಸುಬುದ್ಧಿಭಿಃ |
ಸೇವ್ಯೇ ಸರಸಭಾರತ್ಯಾಂ ವಿಲಾಸೋ ಭೂನ್ಮರುತ್ಪ್ರಿಯಃ || ೫೩ ||

ವಾದಿರಾಜರು ರಚಿಸಿದ, ಕೇಳಲು ಇಂಪಾದ, ಸುಂದರವಾದ, ಉತ್ತಮ ಬುದ್ಧಿಯುಳ್ಳವರಿಂದ ಸೇವಿಸಲ್ಪಡಲು ಯೋಗ್ಯವಾದ ಸರಸಭಾರತೀಕಾವ್ಯ ದಲ್ಲಿ ಐದನೆಯ ವಿಲಾಸವು ವಾಯುದೇವರಿಗೆ ಪ್ರಿಯವಾಯಿತು. || ೫೩ ||

ಸರಸಭಾರತೀವಿಲಾಸಕಾವ್ಯದಲ್ಲಿ ಐದನೆಯ ವಿಲಾಸವು ಪೂರ್ಣವಾಯಿತು.

ಷಷ್ಠೋ ವಿಲಾಸಃ

|| ಶ್ರೀಗುರುಭ್ಯೋ ನಮಃ ಹರಿಃ ಓಂ ||

[ಈ ವಿಲಾಸದಲ್ಲಿ ಹನುಮಂತನ ಮತ್ತು ಭೀಮಸೇನನ ಬುದ್ಧಿಶುದ್ಧತ್ವವನ್ನು ಸಯುಕ್ತಿಕವಾಗಿ ಪ್ರತಿಪಾದಿಸುತ್ತಾರೆ.]

ಏಕಾಕೀ ಯೋಽವಿಶದ್ರಕ್ಷಃಪುರೀಂ ರಾಕ್ಷಸಪೂರಿತಾಮ್ |
ಪುಚ್ಛಸ್ಥಜ್ವಾಗ್ನಿನಾ ಯೋಽಸೌ ಲಂಕಾಲಂಕಾರಭಸ್ಮಕೃತ್ || ೧ ||

ಯಸ್ಯೇಂದ್ರಜಿನ್ಮಹಾಸ್ತ್ರೇಣ ಕಪೀನಾಂ ಕ್ಲೇಶಕಾರಿಣಾ |
ನ ಸ್ಪರ್ಶೋಽಭೂನ್ನಾಪಿ ಮೂರ್ಚ್ಛಾ ತಂ ಸ್ಪೃಶೇತ್ಕಃ ಖಲೋ ವದ ||

ಯಾವ ಹನುಮಂತನು ರಾಕ್ಷಸರಿಂದ ತುಂಬಿದ ಲಂಕಾಪಟ್ಟಣವನ್ನು ಏಕಾಕಿಯಾಗಿ ಪ್ರವೇಶಿಸಿದನೋ, ಬಾಲದಲ್ಲಿ ಜ್ವಲಿತವಾದ ಅಗ್ನಿಯಿಂದ ಲಂಕಾಪಟ್ಟಣದ ಅಲಂಕಾರವನ್ನು ಚೆನ್ನಾಗಿ ಭಸ್ಮಮಾಡಿದನೋ, ಕಪಿಗಳಿಗೆ ಕ್ಲೇಶವನ್ನುಂಟುಮಾಡಿದ ಇಂದ್ರಜಿತ್ತಿನ ಬ್ರಹ್ಮಾಸ್ತ್ರದಿಂದ ಸ್ಪರ್ಶವೇ ಆಗಲೀ ಮೂರ್ಛೆಯೇ ಆಗಲೀ ಯಾವನಿಗೆ ಆಗಲಿಲ್ಲವೋ ಅಂತಹ ಹನುಮಂತನನ್ನು ಯಾವ ದುಷ್ಟನು ಮುಟ್ಟಿಯಾನು? ಹೇಳು. || ೧-೨ ||

ವಕ್ಷಸ್ಥಲೇ ತಾಡಿತೋಽಪಿ ರಕ್ಷಸಾ ರೂಕ್ಷಕರ್ಮಣಾ |
ನ ಚಚಾಲ ಪದಾದ್ಯೋಽಸೌ ಹನೂಮಾನ್ಮಾರುತಾತ್ಮಜಃ || ೩ ||

ಕ್ರೂರಕರ್ಮವನ್ನು ಮಾಡುವ ರಾಕ್ಷಸನಾದ ರಾವಣನಿಂದ ಎದೆಯಲ್ಲಿ ಹೊಡೆಯಲ್ಪಟ್ಟವನಾದರೂ ತಾನಿದ್ದ ಸ್ಥಳದಿಂದ ಯಾವ ಹನುಮಂತನು ಚಲಿಸಲಿಲ್ಲವೋ ಅಂತಹ ಹನುಮಂತನೇ ವಾಯುಪುತ್ರನು. || ೩ ||

ಕಲಿರೂಪಧರಂ ಭೀಮನಾಮಾ ಯೋ ಮರ್ದಯಿಷ್ಯತಿ |
ದುರ್ವಾದಿರೂಪದೈತ್ಯಾನಾಂ ಗರ್ವಂ ಖರ್ವೀಕರಿಷ್ಯತಿ || ೪ ||

ಗುರ್ವಗ್ರೇಸರರೂಪೋ ಯಶ್ಚಾರ್ವಪೂರ್ವಕರೋಕ್ತಿಮರ್ದನಃ ।
ತಸ್ಯ ರಾಕ್ಷಸತೋ ಭೀತಿಂ ಪ್ರೇಕ್ಷಾವಾನ್ ವಕ್ಷ್ಯತೀಹ ಕಃ ॥ ೫ ॥

ಯಾವ ಭೀಮನಾಮಕ ವಾಯುದೇವನು ಕಲಿರೂಪಿಯಾದ ದುರ್ಯೋಧನನನ್ನು ಮರ್ದಿಸುವರೋ ಮತ್ತು ದುರ್ವಾದಿಗಳಾದ ದೈತ್ಯರ ಗರ್ವವನ್ನು ಉಡುಗಿಸುವ ಗುರುಶ್ರೇಷ್ಠರಾದ ಯಾವ ಆನಂದತೀರ್ಥರೂಪಿ ವಾಯುದೇವರು ಅಪಸ್ವೃಶವಾದ ವಾಕ್ಚಾತುರ್ಯವುಳ್ಳವರೋ ಅಂಥವರಿಗೆ ಯಾವ ಪ್ರೇಕ್ಷಾವಂತನು ರಾಕ್ಷಸರಿಂದ ಭೀತಿಯನ್ನು ಹೇಳುವನು?

ಯಸ್ತು ಹಸ್ತತಲೇನೈವ ತಥಾ ಪಾದತಲೇನ ಚ ।
ಮುಷ್ಟಿನಾ ಚಾಸುರಮದಚ್ಛೇತ್ತಾ ತಂ ಕೋಽಸುರಃ ಸ್ಪೃಶೇತ್ ॥

ಯಾವ ಭೀಮಸೇನನು ಅಂಗೈಯಿಂದಲೇ ಹಾಗೆಯೇ ಪಾದತಲದಿಂದಲೂ ಮತ್ತು ಮುಷ್ಟಿಯಿಂದಲೂ ಅಸುರರ ಮದವನ್ನು ನಾಶಮಾಡುವನೋ ಅಂಥವನನ್ನು ಯಾವ ಅಸುರನು ಮುಟ್ಟಿಯಾನು? ॥ ೬ ॥

ಯಸ್ಯ ದೃಷ್ಟಿಶ್ಚ ಮುಷ್ಟಿಶ್ಚ ಗದಾಚಾರಿವಿದಾರಿಣೀ ।
ಅನೇಕಕೋಟಿಸಂಖ್ಯಾತಾನೇಕಲಃ ಸಕಲಾನ್ ಖಲಾನ್ ॥ ೭ ॥

ಚೂರ್ಣೀಚಕಾರ ಗದಯಾ ಸೌಗಂಧಿಕವನೇ ಕಿಲ ।
ಬಲವಂತಂ ಭೀಮಸೇನಂ ರಕ್ಷೋವಿಕ್ಷೋಭಕಾರಿಣಂ ॥ ೮ ॥
ನ ದ್ರಷ್ಟುಮಪಿ ಶಕ್ತೋಽಸ್ತಿ ಸ್ಪ್ರಷ್ಟುಂ ಶಕ್ಷ್ಯತಿ ಕೋಽಸುರಃ ॥೯(೧)॥

ಯಾವ ಭೀಮಸೇನನ ನೋಟವೂ, ಮುಷ್ಟಿಯೂ ಮತ್ತು ಗದೆಯೂ ಶತ್ರುಗಳನ್ನು ನಾಶಮಾಡುವುವೋ ಅಂತಹ ಭೀಮಸೇನನು ಸೌಗಂಧಿಕ ವನದಲ್ಲಿ ಏಕಾಕಿಯಾಗಿ ಅನೇಕಕೋಟಿಸಂಖ್ಯಾತರಾದ ದುಷ್ಟರನ್ನು ಗದೆಯಿಂದ ಪುಡಿಪುಡಿಮಾಡಿದನಷ್ಟೆ. ಇಂತಹ ಬಲಿಷ್ಠನೂ, ರಾಕ್ಷಸರನ್ನು ಬಹುವಾಗಿ ನಡುಗಿಸುವವನೂ ಆದ ಭೀಮಸೇನನನ್ನು ನೋಡುವದಕ್ಕೆ ಕೂಡಾ ಶಕ್ತನಲ್ಲವೆಂದಮೇಲೆ ಯಾವ ಅಸುರನು ಅವನನ್ನು ಮುಟ್ಟುವದಕ್ಕೆ ಸಮರ್ಥನಾದಾನು? ॥ ೭-೮-೯(೧) ॥

ಪ್ರಮಾಣಗಣಬಾಣೌಘೈರಾಸೇತೋರಾಹಿಮಾಚಲಾತ್ ॥೯(೨)॥

ವ್ಯದ್ರಾವಯತ್ಪುರಾ ಕ್ಷುದ್ರಸಿದ್ಧಾಂತಸ್ಯ ಪ್ರವರ್ತಕಾನ್ ।
ತಸ್ಯ ಮಧ್ವಮುನೇಃ ಶುದ್ಧಾಂ ಬುದ್ಧಿಂ ಕೋವಾಸುರೋ ವಿಶೇತ್॥

ಪ್ರಮಾಣಗಳ ಸಮೂಹವೆಂಬ ಬಾಣಗಳ ಪುಂಜದಿಂದ ಆಸೇತು ಹಿಮಾಚಲದವರೆಗೆ (ಸಂಚಾರಮಾಡಿ) ಕ್ಷುದ್ರಸಿದ್ಧಾಂತಪ್ರವರ್ತಕರಾದ ದುಷ್ಟರನ್ನು ಚದುರಿಸಿದ ಮಧ್ವಮುನಿಯ ಶುದ್ಧವಾದ ಮನಸ್ಸನ್ನು ಯಾವ ಅಸುರನುತಾನೇ ಪ್ರವೇಶಮಾಡಿಯಾನು? ॥ ೯(೨)-೧೦ ॥

ಮಾನುಷಾನ್ನೋಪಭೋಗೇಪಿ ಸೂನೂನಾಂ ಯಸ್ಯ ಧೀಮತಾಂ ।
ಹೀನತಾ ಮಾನಸೇ ನಾಸ್ತಿ ತಸ್ಯ ವಾಯೋಃ ಕುತೋಸ್ತಿ ಸಾ ॥೧೧॥

ಬುದ್ಧಿವಂತರಾದ ವಾಯುಪುತ್ರರಿಗೆ ಮಾನುಷಾನ್ನಉಪಭೋಗ ಮಾಡಿದರೂ ಕೂಡ ಮನಸ್ಸು ಕೆಡೋಣವು ಇಲ್ಲವೆಂದಮೇಲೆ ಆ ಮೂಲ-ವಾಯುದೇವರಿಗೆ (ಮನಸ್ಸು ಕೆಡೋಣವು) ಎಲ್ಲಿ ಬಂತು? ॥ ೧೧ ॥

ಬುದ್ಧಿಸ್ತಸ್ಯ ಪರೇತತ್ವೇ ಶುದ್ಧಾಭೂತ್ತದ್ಧನೂಮತಃ ।
ಶುದ್ಧಸ್ಯ ಭೀಮಸೇನಸ್ಯ ಮಧ್ವಸ್ಯ ಚ ಮಹಾತ್ಮನಃ ॥ ೧೨ ॥

ಆದ್ದರಿಂದ ಪರತತ್ವನಾದ ನಾರಾಯಣನಲ್ಲಿ ಹನುಮಂತನ, ಶುದ್ಧ ನಾದ ಭೀಮಸೇನನ, ಹಾಗೆಯೇ ಮಹಾತ್ಮರಾದ ಮಧ್ವಾಚಾರ್ಯರ ಬುದ್ಧಿಯು ಶುದ್ಧವಾದದ್ದೆಂದು ನಿಶ್ಚಯವಾಯಿತು. ॥ ೧೨ ॥

ಭೀಮೋ ಜಿತಾರಿಸ್ತೋಮೋ ಯಃ ಸೋಮಾನ್ವಯಸಮುದ್ಭವಃ
ನಾಮ್ನೈವ ಯಸ್ಯ ಭಯದಂ ಧೀಮಾಂಶ್ಚ್ರೀಮಾನ್ಸ ಭಣ್ಯತೇ॥

ಶತ್ರುಸಮೂಹವನ್ನು ಜಯಿಸಿದ, ಚಂದ್ರವಂಶದಲ್ಲಿ ಜನಿಸಿದ, ಯಾರ ಹೆಸರೇ ಭಯವನ್ನುಂಟುಮಾಡುವುದೋ ಅಂತಹ ಭೀಮಸೇನನು ಜ್ಞಾನ ವಂತನೂ, ಐಶ್ವರ್ಯವಂತನೂ ಎಂದು ಎಲ್ಲ ಕಡೆಯಲ್ಲಿಯೂ ಹೇಳಲ್ಪಡು ತ್ತಾನೆ. ॥ ೧೩ ॥

ಯತೋ ರಾಮಾಕೃತೌ ಭಕ್ತಮಪಿ ತ್ಯಕ್ತ್ವಾ ರವೇಃ ಸುತಂ ।
ಭೀಮಾರ್ಥಂ ಪಾರ್ಥಮೇವಾಂಗೀ ಚಕ್ರೇ ಚಕ್ರಧರಃ ಪ್ರಭುಃ ॥

ಚಕ್ರಧಾರಿಯಾದ ಶ್ರೀಕೃಷ್ಣಪ್ರಭುವು ರವಿಸುತನು (ಸುಗ್ರೀವನು) ರಾಮಾವತಾರದಲ್ಲಿ ತನ್ನ ಭಕ್ತನಾಗಿದ್ದರೂ ಅವನನ್ನು ಬಿಟ್ಟು ಭೀಮಸೇನನ ಪ್ರೀತ್ಯರ್ಥವಾಗಿ ಅರ್ಜುನನನ್ನು ಸ್ವೀಕಾರಮಾಡಿದನು. ॥ ೧೪ ॥

ಭೀಮೋಽಪಿ ಕೃಷ್ಣಪ್ರೀತ್ಯರ್ಥಂ ಪಾರ್ಥಂ ತ್ರೈಲೋಕ್ಯವಿಶ್ರುತಂ ।
ಕರ್ತುಂ ಮಾರ್ತಾಂಡತನಯಂ ಪ್ರಾಙ್ಮಿತ್ರಮಪಿ ತತ್ಯಜೇ ॥೧೫॥

ಹಾಗೆಯೇ ಭೀಮಸೇನನೂ ಕೂಡ ಕೃಷ್ಣನ ಪ್ರೀತ್ಯರ್ಥವಾಗಿ ಅರ್ಜುನನನ್ನು ತ್ರೈಲೋಕ್ಯವೀರನನ್ನಾಗಿ ಪ್ರಸಿದ್ಧಗೊಳಿಸಲು ಹಿಂದೆ ರಾಮಾವತಾರದಲ್ಲಿ ತನಗೆ ಮಿತ್ರನಾಗಿದ್ದರೂ ಕೂಡ ಸೂರ್ಯನಂದನನಾದ ಕರ್ಣನನ್ನು ತ್ಯಜಿಸಿದನು. ॥ ೧೫ ॥

ಅಂದರೆ ವಾಯುದೇವರು ಮೂಲರೂಪದಲ್ಲಿಯೂ, ಅವತಾರರೂಪಗಳಲ್ಲಿಯೂ ಪರಮಾತ್ಮನ ಇಚ್ಛಾನುಸಾರವಾಗಿ ನಡೆಯುವರು. ಅದಕ್ಕೇನೇ ಪುರಂದರದಾಸರು "ಹರಿಯ ಮತವೇ ಹನುಮನ ಮತವು, ಹನುಮನ ಮತವೇ ಹರಿಯ ಮತವು" ಎಂದು ಹೇಳಿರುವರು.

ಕಿಂಚ ಜ್ಯೇಷ್ಠಮಪಿ ಜ್ಯೇಷ್ಠಾಪತಿಂ ಕಲ್ಯಾತ್ಮಕಂ ನೃಪಂ ।
ಕೃಷ್ಣದೂಷಕಮಾಬಾಲ್ಯಾದ್ಬಬಾಧೇ ವಿಬುಧಪ್ರಿಯಃ ॥ ೧೬ ॥

ಅಲ್ಲದೆ ಜ್ಯೇಷ್ಠಾಪತಿಯೂ, ಕಲಿಸ್ವರೂಪಿಯೂ ಆದ ದುರ್ಯೋಧನ ರಾಜನು ತನಗಿಂತ ಜ್ಯೇಷ್ಠನಾದರೂ ಬಾಲ್ಯಪ್ರಭೃತಿ ಕೃಷ್ಣದೂಷಕನಾದ ಅವನನ್ನು ದೇವತೆಗಳಿಗೆ ಪ್ರಿಯನಾದ ಭೀಮಸೇನನು ಬಾಧಿಸಿದನು. ॥೧೬॥

ರಾಮಾದ್ಗದಾಭ್ಯಾಸಕಾಲೇ ಯಃ ಕೃಷ್ಣಂ ವೃಷ್ಣಿವಲ್ಲಭಂ ।
ಕ್ಷಣೇಕ್ಷಣೇ ಪ್ರಣಮತಿ ಮನುತೇ ಚ ಹರಿಂ ಗುರುಂ ॥ ೧೭ ॥

ಬಲರಾಮದೇವರಲ್ಲಿ ಗದಾಭ್ಯಾಸಮಾಡತಕ್ಕ ಕಾಲದಲ್ಲಿ ವೃಷ್ಣಿಗಳಿಗೆ

ಸ್ವಾಮಿಯಾದ ಕೃಷ್ಣನನ್ನು ಪದೇಪದೇ ನಮಸ್ಕಾರಮಾಡುತ್ತಾನೆ. ಶ್ರೀ ಹರಿಯನ್ನೇ ಗುರುವೆಂದು ಭೀಮಸೇನನು ತಿಳಿಯುತ್ತಾನೆ. || ೧೭ ||

ಕೃಷ್ಣಸಂಕಲ್ಪಸಿದ್ಧ್ಯರ್ಥಂ ಕೃಷ್ಣಾಯೈ ದ್ರೋಹಕಾರಿಣಃ |
ನ ಜಘಾನಾಕ್ಷಕಿತವಾನ್ ಮತಂ ಜಾನನ್ ರಮಾಪತೇಃ || ೧೮ ||

ರಮಾಕಾಂತನ ಅಭಿಪ್ರಾಯ ತಿಳಿದು ಕೃಷ್ಣನ ಸಂಕಲ್ಪವು ಸಿದ್ಧಿಸ ಲೋಸುಗ ದ್ರೌಪದೀದೇವಿಗೆ ದ್ರೋಹವನ್ನು ಮಾಡಿದ, ಪಗಡೆಯಾಟದಲ್ಲಿ ಮೋಸಮಾಡಿದ ದುರ್ಯೋಧನನೇ ಮೊದಲಾದವರನ್ನು ಸಂಹರಿಸಲಿಲ್ಲ.

ಇದಂ ತು ಮಹದಾಶ್ಚರ್ಯಂ ಸಭಾಮಧ್ಯೇ ವೃಕೋದರಃ |
ಸ್ವಭಾರ್ಯಾಯೈ ದ್ರುಹ್ಯತೋಽಪಿ ಸೇಹೇ ಸ್ನೇಹೇನ ಕೇಶವೇ ||

ತನ್ನ ಪತ್ನಿಯಾದ ದ್ರೌಪದೀದೇವಿಗೆ ಸಭಾಮಧ್ಯದಲ್ಲಿ ದ್ರೋಹವನ್ನು ದುಷ್ಟರು ಮಾಡುತ್ತಿದ್ದರೂ ಕೇಶವನಲ್ಲಿ ತನಗಿರುವ ಸ್ನೇಹದಿಂದ ಅವನ ಸಂಕಲ್ಪಕ್ಕೆ ಅಡ್ಡಿಬರಲು ಇಷ್ಟವಿಲ್ಲದೆ ವೃಕೋದರನು ಸಹಿಸಿದನು. ಇದಲ್ಲವೇ ಮಹದಾಶ್ಚರ್ಯ! || ೧೯ ||

ಸಸೈನ್ಯಸ್ಯ ಕುರುಕ್ಷೇತ್ರೇ ವಧೋ ಭೂಭಾರಹಾರಿಣಃ |
ಯತೋ ಮತೋ ಹರೇಃ ತಸ್ಮಾದಿದಾನೀಮನುಭವತ್ ಕ್ಷಮಾ ||

ಕುರುಕ್ಷೇತ್ರದಲ್ಲಿ ಸೈನ್ಯಸಹಿತವಾಗಿ ದುಷ್ಟರ ಸಂಹಾರವು, ಭೂಭಾರ ಇಳಿಸುವುದಕ್ಕಾಗಿ ಅವತಾರಮಾಡಿದ ಶ್ರೀಕೃಷ್ಣನ ಇಚ್ಛೆಯಾದ್ದರಿಂದ ಇಂತಹ ವಿಷಮಕಾಲದಲ್ಲಿಯೂ ಕೂಡ ಭೀಮಸೇನನು ಕ್ಷಮಾವನ್ನು ತಾಳಿದನು.

ಈದೃಶ್ಯಾಮಪ್ಯವಸ್ಥಾಯಾಂ ಯೋಽಪ್ರಿಯಂ ನಾ ಕರೋದ್ಧರೌ |
ಸ ತಸ್ಮಿಂಚ್ಛುದ್ಧಧೀಃ ಸಿದ್ಧೋ ಭೀಮಃ ಸರ್ವತ್ರ ಸರ್ವದಾ ||೨೦||

ಇಂತಹ ದುರವಸ್ಥೆಯ ಸಮಯದಲ್ಲಿಯೂ ಕೂಡ ಹರಿ ವಿಷಯದಲ್ಲಿ ಅಪ್ರಿಯವನ್ನು ಮಾಡಲಿಲ್ಲವೆಂದಮೇಲೆ ಆ ಭೀಮಸೇನನು ಸರ್ವಸ್ಥಳ

ದಲ್ಲಿಯೂ, ಸರ್ವಕಾಲದಲ್ಲಿಯೂ ಪರಮಾತ್ಮನ ವಿಷಯದಲ್ಲಿ ಶುದ್ಧವಾದ ಮನಸ್ಸುಳ್ಳವನೆಂದು ಸಿದ್ಧವಾಯಿತು. || ೨೧ ||

ಹರಿಶ್ಚ ಭೀಮಸೇನಸ್ಯ ದೃಷ್ಟ್ವಾ ಭಕ್ತಿಮಚಂಚಲಾಂ ।
ಅಕಾರ್ಷೀತ್ತಸ್ಯ ಮಹಿಷೀಂ ದ್ರೌಪದೀಮಕ್ಷಯಾಂಬರಾಂ || ೨೨ ||

ಈ ರೀತಿಯಲ್ಲಿ ಭೀಮಸೇನನಿಗೆ ತನ್ನಲ್ಲಿರುವ ಅಚಂಚಲವಾದ ಭಕ್ತಿಯನ್ನು ಮನಗೊಂಡು ಶ್ರೀಹರಿಯು ಆತನ ಪತ್ನಿಯಾದ ದ್ರೌಪದೀದೇವಿಯ ವಸ್ತ್ರವನ್ನು (ಸಭಾಮಧ್ಯದಲ್ಲಿ) ಅಕ್ಷಯವನ್ನಾಗಿ ಮಾಡಿದನು. || ೨೨ ||

ಅನ್ಯೋನ್ಯಸ್ನಿಗ್ಧಯೋರೇವಂ ಶುದ್ಧಯೋಃ ಕೃಷ್ಣಭೀಮಯೋಃ
ಕೋನ್ಯಥಾ ಕುರುತೇ ಚಿತ್ತಂ ದೇವೋ ವಾ ದಾನವೋಽಪಿ ವಾ ||

ಈ ರೀತಿಯಾಗಿ ಅನ್ಯೋನ್ಯವಾಗಿ ಸ್ನೇಹವುಳ್ಳ, ಶುದ್ಧರಾದ, ಕೃಷ್ಣ-ಭೀಮರ ಮನಸ್ಸನ್ನು ಯಾವ ದೇವನೇ ಆಗಲೀ, ದಾನವನೇ ಆಗಲೀ ಯಾರುತಾನೇ ಬೇರೆಮಾಡಿಯಾನು? || ೨೩ ||

ಕೃಷ್ಣಭಕ್ತಸ್ಯ ಪಾರ್ಥಸ್ಯ ಕೀರ್ತ್ಯರ್ಥಂ ದ್ರುಪದಾಲಯೇ ।
ಶಕ್ತೋಽಪಿ ತದ್ಧನುರ್ಧರ್ತುಂ (ನೋದತಿಷ್ಠದ್ವೃಕೋದರಃ)
ನೋತ್ತಿಷ್ಠದ್ಧಿ ವೃಕೋದರಃ || ೨೪ ||

ದ್ರುಪದರಾಜನ ಮನೆಯಲ್ಲಿ ಆ ಧನುಸ್ಸನ್ನು ಧರಿಸಲು ಶಕ್ತನಾದರೂ ಕೃಷ್ಣಭಕ್ತನಾದ ಪಾರ್ಥನ ಕೀರ್ತಿಗೋಸ್ಕರ ವೃಕೋದರನು ಕೂತಿದ್ದ ಸ್ಥಳದಿಂದ ಏಳಲಿಲ್ಲ. || ೨೪ ||

ಅತಃ ಕೃಷ್ಣಮತಾಭಿಜ್ಞೋ ಭೀಮ ಏವ ನ ಸಂಶಯಃ ।
ಭೀಮಸ್ಯ ಹಿತಕಾರೀ ಚ ಕೃಷ್ಣ ಏವ ನ ಸಂಶಯಃ || ೨೫ ||

ಆದುದರಿಂದ ಭೀಮಸೇನನೇ ಕೃಷ್ಣನ ಅಭಿಪ್ರಾಯವನ್ನು ತಿಳಿದವನು ಎಂಬುವದರಲ್ಲಿ ಸಂಶಯವಿಲ್ಲ. ಹಾಗೆಯೇ ಭೀಮನಿಗೆ ಹಿತವನ್ನು ಮಾಡುವವನು ಕೃಷ್ಣನೇ ಎಂಬುವುದರಲ್ಲಿಯೂ ಸಂಶಯವಿಲ್ಲ. || ೨೫ ||

ಪಶ್ಯ ಶ್ರೀಭೀಮಸೇನಸ್ಯ ಕೃಷ್ಣೇ ಭಕ್ತಿಮಚಂಚಲಾಂ |
ನಾವಧೀದ್ವೈಷ್ಣವಂ ಯೋಽಸೌ ನಾಶೇಷಯದವೈಷ್ಣವಂ || ೨೬ ||

ಯಾವ ಭೀಮಸೇನನು ವಿಷ್ಣುಭಕ್ತನನ್ನು ಸಂಹರಿಸಲಿಲ್ಲವೋ ಮತ್ತು ವಿಷ್ಣುದ್ವೇಷಿಯನ್ನು ಉಳಿಸಲಿಲ್ಲವೋ ಆ ಭೀಮಸೇನನಿಗೆ ಕೃಷ್ಣನಲ್ಲಿರುವ ನಿಶ್ಚಲವಾದ ಭಕ್ತಿಯನ್ನು ನೋಡು. || ೨೬ ||

ವಿಷ್ಣುಪಾದೋದಕಂ ಮತ್ವಾ ಯಃ ಸ್ನಾತುಂ ಶಂಕತೇ ಕುಧೀಃ |
ಅಮಜ್ಜಯಜ್ಜರಾಸಂಧಂ ಬಲಾತ್ತಂ ಜಾಹ್ನವೀಜಲೇ || ೨೭ ||

ದುಷ್ಟಬುದ್ಧಿಯುಳ್ಳ ಜರಾಸಂಧನು ವಿಷ್ಣುಪಾದೋದಕವೆಂದು ತಿಳಿದು ಗಂಗೆಯಲ್ಲಿ ಸ್ನಾನಮಾಡಲು ಹಿಂತೆಗೆದಾಗ ಅಂತಹ ಜರಾಸಂಧನನ್ನು ಬಲಾತ್ಕಾರದಿಂದ ಜಾಹ್ನವೀಜಲದಲ್ಲಿ ಭೀಮನು ಮುಳುಗಿಸಿದನು. || ೨೭ ||

ಮಣಿಮಂತಂ ಮಹಾಭ್ರಾಂತಂ ಹರೌ ದ್ವೇಷಕರಂ ಖಲಂ |
ವಾಚಾ ವಿಜಿತ್ಯ ಗದಯಾ ನೀಚಂ ಪಶ್ಚಾಜ್ಜಘಾನ ಯಃ || ೨೮ ||

ಹರಿಯಲ್ಲಿ ದ್ವೇಷವನ್ನು ಮಾಡುವ, ದುಷ್ಟನಾದ ಮತ್ತು ಮಹಾಭ್ರಾಂತನಾದ ಮಣಿಮಂತನನ್ನು ಮೊದಲು ವಾದದಲ್ಲಿ ಜಯಿಸಿ ಅನಂತರ ಗದೆಯಿಂದ ಆ ನೀಚನನ್ನು ಸಂಹರಿಸಿದನು. || ೨೮ ||

ದ್ರಷ್ಟುಕಾಮಾನ್ ಕೃಷ್ಣಪಾದೌ ಯಷ್ಟುಕಾಮಂ ಶಿವಾಧ್ವರೇ |
ತುಷ್ಟಯೇ ವೈಷ್ಣವಾನಾಂ ಯೋ ಭ್ರಷ್ಟಂ ಮುಷ್ಟಿಭಿರರ್ದಯತ್ |

ಕೃಷ್ಣನ ಪಾದಯುಗಳವನ್ನು ನೋಡಲು ಕುತೂಹಲರಾದ ರಾಜರನ್ನು ಪಶುಪತಿಯ ಯಜ್ಞದಲ್ಲಿ ಆಹುತಿ ಕೊಡಬೇಕೆಂದಿದ್ದ ಭ್ರಷ್ಟನಾದ ಜರಾಸಂಧನನ್ನು ವಿಷ್ಣುಭಕ್ತರಿಗೆ ಸಂತೋಷವಾಗಲೆಂದು ಮುಷ್ಟಿಪ್ರಹಾರದಿಂದ ಸಂಹರಿಸಿದನು. || ೨೯ ||

ಅಜರಂ ಯೋ ಜರಾಸಂಧಂ ಜಘಾನಾಚ್ಯುತದೂಷಕಂ |
ದುರ್ಯೋಧನಸ್ಯ ನಿಧನಂ ಯಶ್ಚಕ್ರೇ ಕೃಷ್ಣವೈರಿಣಃ || ೩೦ ||

ಅಚ್ಯುತನ ದೂಷಕನಾದ, ಮುದಿತನವಿಲ್ಲದ ಜರಾಸಂಧನನ್ನು ಸಂಹರಿಸಿದನು. ಕೃಷ್ಣವೈರಿಯಾದ ದುರ್ಯೋಧನನನ್ನು ಕೊಂದನು. || ೩೦ ||

ಭೂಭಾರಹರಣೋದ್ಯುಕ್ತಶ್ರೀಭರ್ತುಃ ಪ್ರೀತಯೇ ಚಮೂಂ ।
ಮೃಧೇ ಶುಗದಯಾ ಯೋಸಾವಜೇಘ್ನದನೇಕಶಃ || ೩೧ ||

ಭೂಭಾರವನ್ನು ಇಳಿಸಬೇಕೆಂದು ಉದ್ಯುಕ್ತನಾದ ರಮೇಶನ ಪ್ರೀತಿಗಾಗಿ, ಯುದ್ಧದಲ್ಲಿ ತನ್ನ ಉತ್ತಮವಾದ ಗದೆಯಿಂದ ಅನೇಕಾವರ್ತಿ ಸೈನ್ಯವನ್ನು ನಾಶಮಾಡಿದನು. || ೩೧ ||

ಕ್ರತುನಾ ರಾಜಸೂಯೇನ ಕ್ರತೋರ್ಭೋಕ್ತಾರಮಚ್ಯುತಂ ।
ಅತರ್ಪಯದ್ಧಿಯೋ ಭೀಮಃ ಸ ತಸ್ಯ ಪ್ರಿಯಕೃನ್ನ ಕಿಂ || ೩೨ ||

ರಾಜಸೂಯಯಜ್ಞದಿಂದ ಯಜ್ಞಭೋಕ್ತೃವಾದ ಅಚ್ಯುತನನ್ನು ಪ್ರೀತಿಗೊಳಿಸಿದನು. ಹೀಗೆ ವಿಷ್ಣುದ್ವೇಷಿಗಳನ್ನು ಸಂಹರಿಸಿದ ಮತ್ತು ವಿಷ್ಣು-ಭಕ್ತರಿಗೆ ಉಪಕಾರಿಯಾದ ಭೀಮಸೇನನು ಆ ಕೃಷ್ಣನಿಗೆ ಯಾವಾಗಲೂ ಪ್ರಿಯವನ್ನು ಮಾಡುವ ಸ್ವಭಾವವುಳ್ಳವನಲ್ಲವೇನು? || ೩೨ ||

ತಸ್ಮಾದ್ಭೀಮಃ ಪರೇತತ್ವೇ ಶುದ್ಧೋಭೂದ್ಬುದ್ಧಿಶುದ್ಧಿಮಾನ್ ।
ವಾದಿರಾಜಕೃತೇ ಶ್ರಾವ್ಯೇ ಕಾವ್ಯೇ ಭವ್ಯೇ ಸುಬುದ್ಧಿಭಿಃ ।
ಸೇವ್ಯೇ ಸರಸಭಾರತ್ಯಾಂ ವಿಲಾಸೋಭೂನ್ಮರುತ್ಪ್ರಿಯಃ || ೩೩ ||

ಈ ಕಾರಣಗಳಿಂದ ಶುದ್ಧವಾದ ಬುದ್ಧಿಯುಳ್ಳ ಭೀಮನು ಪರತತ್ವನಾದ ಹರಿಯಲ್ಲಿ ಶುದ್ಧನು (ಶುಕ್ಲನು) ಆದನು.

ವಾದಿರಾಜರು ರಚಿಸಿದ, ಕೇಳಲು ಇಂಪಾದ, ಸುಂದರವಾದ, ಉತ್ತಮ ಬುದ್ಧಿಯುಳ್ಳವರಿಂದ ಸೇವಿಸಲ್ಪಡಲು ಯೋಗ್ಯವಾದ ಸರಸಭಾರತೀಕಾವ್ಯದಲ್ಲಿ ಆರನೆಯ ವಿಲಾಸವು ವಾಯುಪ್ರಿಯವಾಯಿತು. || ೩೩ ||

ಸರಸಭಾರತೀವಿಲಾಸಕಾವ್ಯದಲ್ಲಿ ಆರನೆಯ ವಿಲಾಸವು
ಪೂರ್ಣವಾಯಿತು.

ಸಪ್ತಮೋ ವಿಲಾಸಃ

|| ಶ್ರೀಗುರುಭ್ಯೋ ನಮಃ ಹರಿಃ ಓಂ ||

[ಈ ವಿಲಾಸದಲ್ಲಿ ವಾಯ್ವವತಾರರಾದ ಶ್ರೀಮಧ್ವಾಚಾರ್ಯರ ಬುದ್ಧಿಯು ಪರಮಾತ್ಮನ ವಿಷಯದಲ್ಲಿ ಶುದ್ಧವಾದುದೆಂದು ತೋರಿಸಲು, ಪರಮತಖಂಡನ, ಸೂತ್ರಭಾಷ್ಯಾದಿರಚನ ಇವುಗಳಿಂದ ಅವರು ಮಾಡಿದ ವಿಷ್ಣುಸರ್ವೋತ್ತಮತ್ವ-ಸ್ಥಾಪನೆಯನ್ನು ವರ್ಣಿಸಿರುತ್ತಾರೆ. ಅಲ್ಲದೆ ಶಾಂತಿಪಾಠದಲ್ಲಿ ಸರ್ವರಿಂದ ಪಠಿತವಾದ "ನಮಸ್ತೇ ವಾಯೋ ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ" ಎಂಬ ವಾಕ್ಯವನ್ನು ವಿಚಾರ ಮಾಡಿ ವಾಯುದೇವರ ಜುಕ್ತ್ವವನ್ನು ನಿರ್ಣಯಿಸಿರುತ್ತಾರೆ.]

ಮಧ್ವಸ್ತು ಬ್ರಹ್ಮಸೂತ್ರಾಣಾಂ ಶುದ್ಧಭಾಷ್ಯಚಿಕೀರ್ಷಯಾ |
ಬುದ್ಧಿಭ್ರಮಕರಂ ವಿದ್ವದ್ದ್ವಿಷ್ಯಂ ದುರ್ಭಾಷ್ಯಕಾನನಂ || ೧ ||

ವನಾನಲ ಇವಾನೇಕಪ್ರಮಾಣಶಿಖಯೋಗ್ರಯಾ |
ದಗ್ಧ್ವಾ ದುರ್ದರ್ಶನಧ್ವಾಂತಮುದ್ಯನ್ನರ್ಕ ಇವೌಜಸಾ || ೨ ||

ವಿದ್ರಾವ್ಯ ವಾದಯುದ್ಧೇನ ವಿದ್ವನ್ಮನ್ಯಾನ್ವಿಜಿತ್ಯ ಚ |
ಚಕ್ರೇ ಭಾಷ್ಯಂ ಜಗತ್ತೋಷ್ಯಂ ಪೋಷ್ಯಂ ಕೋವಿದಸಂಸದಿ ||

ಮಧ್ವಾಚಾರ್ಯರು ಬ್ರಹ್ಮಸೂತ್ರಗಳಿಗೆ ಶುದ್ಧವಾದ ಭಾಷ್ಯವನ್ನು ಮಾಡುವ ಇಚ್ಛೆಯಿಂದ ಕಾಡ್ಗಿಚ್ಚನ್ನನುಕರಿಸಿ ಅನೇಕ ಪ್ರಮಾಣಗಳೆಂಬ ಉಗ್ರವಾದ ಜ್ವಾಲೆಗಳಿಂದ, ಬುದ್ಧಿಗೆ ಭ್ರಮೆಯನ್ನುಂಟುಮಾಡುವ ಮತ್ತು ವಿದ್ವಾಂಸರಿಂದ ದ್ವೇಷ್ಯವಾದ ದುರ್ಭಾಷ್ಯಗಳೆಂಬ ಅಡವಿಯನ್ನು ಸುಟ್ಟು, ಉದಯಿಸುವ ಸೂರ್ಯನಂತೆ ದುಷ್ಟಶಾಸ್ತ್ರಗಳೆಂಬ ಕತ್ತಲನ್ನು ಓಡಿಸಿ ಮತ್ತು ವಾದಯುದ್ಧದಲ್ಲಿ ತಾವೇ ಪಂಡಿತರೆಂದು ತಿಳಿದಿದ್ದ ಜನರನ್ನು ಜಯಿಸಿ, ಸಜ್ಜನಸಮೂಹಕ್ಕೆ ಸಂತೋಷವನ್ನುಂಟುಮಾಡುವ ಮತ್ತು ಪಂಡಿತರ ಸಭೆಯಲ್ಲಿ ಮಾನಾರ್ಹವಾದ ಅಥವಾ ಪಂಡಿತರ ಸಭೆಯನ್ನು ತೃಪ್ತಿಗೊಳಿಸುವ ಭಾಷ್ಯವನ್ನು ರಚಿಸಿದರು. || ೧-೨-೩ ||

ಶಿಷ್ಯಾದೇಃ ಸುಖದಂ ಶಿಷ್ಯಹೃಚ್ಛಿಕ್ತ್ಯಾರ್ತಿನಾಶನಂ ।
ತೋಷ್ಯಂ ಸದ್ಯುಕ್ತಿರತ್ನಾಢ್ಯೈರ್ಘೋಷ್ಯಂ ಚ ಭುವನತ್ರಯೇ ||೪||

ಶಿಷ್ಯರೇ ಮೊದಲಾದವರಿಗೆ ಸುಖ ಕೊಡುವ, ಮನಸ್ಸಿನ ದುಃಖವನ್ನು ನಾಶಮಾಡುವುದರಮೂಲಕ ಶಿಷ್ಯರನ್ನು ಆನಂದಗೊಳಿಸುವ, ಸಮೀಚೀನ ವಾದ ಯುಕ್ತಿಗಳೆಂಬ ರತ್ನಗಳಿಂದ ಮನಸ್ಸಿಗೆ ಸಮಾಧಾನವನ್ನುಂಟು ಮಾಡಿ, ಅವರಿಗೆ ಸಂತೋಷವನ್ನು ಕೊಡುವ (ಅದ್ದರಿಂದಲೇ) ಮೂರು ಲೋಕಗಳಲ್ಲಿಯೂ ಪ್ರಸಿದ್ಧಿಪಡಿಸಲು ಯೋಗ್ಯವಾದ (ಸೂತ್ರ) ಭಾಷ್ಯವನ್ನು ಮಾಡಿದರು. || ೪ ||

ಇತ್ಥಂ ವ್ಯಾಸಂ ಗುಣಾವಾಸಂ ತೋಷಯಿತ್ವಾ ಸತಾಂ ವಶಂ ।
ವೇದಾಂತಮಾನಿನೀಂ ಲಕ್ಷ್ಮೀಂ ಮೋದಯಿಷ್ಯಂಸ್ತತಃಪರಂ || ೫ ||
ದಶೋಪನಿಷದಾಂ ಭಾಷ್ಯಾಣ್ಯಚೀಕ್ಲೃಪದುದಾರಧೀಃ ||

ಈ ರೀತಿಯಲ್ಲಿ ಅಂದರೆ ಭಾಷ್ಯವನ್ನುಮಾಡಿ, ಸಜ್ಜನರಿಗೆ ವಶನಾದ ಸದ್ಗುಣಗಳಿಗೆ ಆಶ್ರಯನಾದ ಶ್ರೀವೇದವ್ಯಾಸನನ್ನು ಸಂತೋಷಗೊಳಿಸಿ ಅನಂತರದಲ್ಲಿ ಉಪನಿಷತ್ತಿಗೆ ಅಭಿಮಾನಿಯಾದ ಲಕ್ಷ್ಮೀದೇವಿಯನ್ನು ಸಂತೋಷಪಡಿಸುವುದಕ್ಕಾಗಿ ಉತ್ಕೃಷ್ಟವಾದ ಬುದ್ಧಿಯುಳ್ಳ ಮಧ್ವಾ-ಚಾರ್ಯರು ಹತ್ತು ಉಪನಿಷತ್ತುಗಳ ಭಾಷ್ಯವನ್ನು ಮಾಡಿದರು.

ಶಾಸ್ತ್ರಭಾರಂ ಸಮಾನೀಯ ವ್ಯಾಸದತ್ತಮನುತ್ತಮಂ || ೬ ||

ಬೋಧಯಾಮಾಸ ಸುಜನಾನ್ ಬಾಧಯಾಮಾಸ ದುರ್ಜನಾನ್ ।
ವೇದಯಾಮಾಸ ತತ್ವಾನಿ ಸಾಧಯಾಮಾಸ ಸದ್ವ್ರತಃ || ೭ ||

ಭಾರತೀಪತಿಪುತ್ರೋऽಸೌ ಭಾರತಾರ್ಥವಿನಿರ್ಣಯಂ ।
ವಿರಚಯ್ಯಾಹಿತಯ್ಯಸ್ಯ ವ್ಯಾಸಸ್ಯಾತೋಷಯನ್ಮನಃ || ೮ ||

ಭಾರತೀಪತಿಯಾದ ವಾಯುದೇವರ ಪುತ್ರರಾದ ಆನಂದತೀರ್ಥರು ವ್ಯಾಸರಿಂದ ಕೊಡಲ್ಪಟ್ಟ ಭಂಗಾರದ ಗಟ್ಟಿಯಂತೆ ಸರ್ವೋತ್ತಮವಾದ

ಶಾಸ್ತ್ರವನ್ನು ತಂದು ಸಜ್ಜನರನ್ನು ಬೋಧಿಸಿದರು. ದುರ್ಜನರಿಗೆ ಬಾಧೆ-ಯನ್ನುಂಟುಮಾಡಿದರು. ಉತ್ತಮವಾದ ತತ್ತ್ವವನ್ನು (ಸಜ್ಜನರಿಗೆ) ತಿಳಿಸಿ ಕೊಟ್ಟರು. ಮತ್ತು ಶ್ರೇಷ್ಠವಾದ ಯಶಸ್ಸನ್ನು ಸಂಪಾದಿಸಿದರು. ಅಲ್ಲದೆ ಮಹಾಭಾರತತಾತ್ಪರ್ಯನಿರ್ಣಯವನ್ನು ಮಾಡಿ ಶೇಷಶಾಯಿನಾರಾಯಣ-ಸ್ವರೂಪರಾದ ವೇದವ್ಯಾಸರ ಮನಸ್ಸನ್ನು ಸಂತೋಷಪಡಿಸಿದರು. || ೬-೮ ||

ಸ ಹಿ ಭಾರತವಂಶಸ್ಯ ಮೂಲಭೂತೋ ಜಗದ್ಗುರುಃ |
ಅತಸ್ತತ್ಪ್ರೀತಯೇ ಮಧ್ವೋ ಭಾರತಂ ಧೀರತಂ ವ್ಯಧಾತ್ || ೯ ||

ಜಗದ್ಗುರುಗಳಾದ ವೇದವ್ಯಾಸರು ಭಾರತವಂಶಕ್ಕೆ ಮೂಲಪುರುಷ ರೆಂದು ಪ್ರಸಿದ್ಧರಷ್ಟೆ. ಆದ್ದರಿಂದ ಅವರ ಪ್ರೀತ್ಯರ್ಥವಾಗಿ ಮಧ್ವಾಚಾರ್ಯರು ಪಂಡಿತರ ಬುದ್ಧಿಯ ವ್ಯಾಪಾರಕ್ಕೆ ಯೋಗ್ಯವಾದ ಯಮಕಭಾರತವನ್ನು ಮಾಡಿದರು. || ೯ ||

ಅದ್ಯಾಪಿ ಬದರೀಶೈಲೇ ಬದರೀಷಂಡಮಂಡಿತೇ |
ಮಧ್ಯೇ ಮುನೀನಾಮಧ್ಯಾಸ್ತೇ ವಿದ್ವಾನ್ ವ್ಯಾಸಸ್ಯ ಸನ್ನಿಧೌ ||೧೦||

ಈಗಲೂಕೂಡ ಬೋರೇಗಿಡಗಳ ಗುಂಪುಗಳಿಂದ ಅಲಂಕೃತವಾದ ಹಿಮವತ್ಪರ್ವತದ ಮೇಲಿರುವ ದೊಡ್ಡ ಬದರಿಯಲ್ಲಿ ಮುನಿಗಳ ಮಧ್ಯದಲ್ಲಿ ಪಂಡಿತರಾದ ಶ್ರೀಮದಾಚಾರ್ಯರು ವ್ಯಾಸರ ಸನ್ನಿಧಾನದಲ್ಲಿ ಇದ್ದಾರೆ.

ಕಿಂಚ ಮಧ್ವಾತ್ಮನಾ ಸೂತ್ರಭಾಷ್ಯಕಾರೀ ಪರೇ ಹರೌ |
ವಿರುದ್ಧಸರ್ವಸಿದ್ಧಾಂತಾನದ್ಧಾ ವಿಧ್ವಂಸ್ಯ ಯುಕ್ತಿಭಿಃ || ೧೧ ||

ಹರಿಂ ಪರತರಂ ಮುಕ್ತಿಕರಂ ಸ್ವಪಿತರಂ ಪ್ರಭುಂ |
ತ್ರಿಲೋಕ್ಯಾಂ ಯಃ ಸ್ಥಿರೀಚಕ್ರೇ ಸ ಚ ವೇದೋದಿತೋ ಗುರುಃ ||

ಅಲ್ಲದೆ ಮಧ್ವರೂಪದಿಂದ ಸೂತ್ರಭಾಷ್ಯವನ್ನು ಮಾಡಿ ಹರಿಯೇ ಸರ್ವೋತ್ತಮನೆಂಬ ತತ್ತ್ವಕ್ಕೆ ವಿರುದ್ಧವಾದ ಸರ್ವಸಿದ್ಧಾಂತಗಳನ್ನೂ ಯುಕ್ತಿಗಳಿಂದ ಚೆನ್ನಾಗಿ ನಿರಾಕರಿಸಿ ತನ್ನ ತಂದೆಯೂ ಸರ್ವರಿಗೂ ಪ್ರಭುವಾದ

ಹರಿಯನ್ನು ಸರ್ವೋತ್ತಮನೆಂದೂ, ಮುಕ್ತಿದಾಯಕನೆಂದೂ, ಮೂರು ಲೋಕಗಳಲ್ಲಿಯೂ ಸ್ಥಿರಪಡಿಸಿದರು. ಆದ್ದರಿಂದ ಅವರೇ ವೇದದಲ್ಲಿ ಹೇಳಲ್ಪಟ್ಟ ಗುರುಗಳು. || ೧೧-೧೨ ||

ಯೋ ಮಧ್ವೋ ಮಾತರಿಶ್ವೇತಿ ವಿಸ್ಪಷ್ಟಂ ಶ್ರೂಯತೇ ಶ್ರುತೌ |
ಈಶಾನಾಸೋಽಸ್ಯ ಕೃಪಯಾಽಕ್ರಿಯಂತ ಕಿಲ ಸೂರಯಃ || ೧೩ ||

ಯೋಽಪಸೋ ಜನಯಂತಾಮುಂ ದಶಪ್ರಮತಿನಾಮಕಂ |
ಸಪ್ತಸ್ವಸ್ವಾರುಜ್ಜಹಾರ ವಿದ್ವಾನ್ಮಧ್ವೋ ದೃಶೇ ಹರೇಃ || ೧೪ ||

ವೇದದಲ್ಲಿ ಮಧ್ವಾಚಾರ್ಯರೇ ಗುರುಗಳೆಂದು ಎಲ್ಲಿ ಹೇಳಿದೆ? ಎಂಬ ಪ್ರಶ್ನೆಗೆ ಉತ್ತರವಾಗಿ ಬಳಿತ್ಥಾ ಸೂಕ್ತವನ್ನು ಪ್ರಮಾಣವಾಗಿ ತೋರಿಸುತ್ತಾರೆ.

ಯೋ ಮಧ್ವೋ ಮಾತರಿಶ್ವೇತಿ ವಿಸ್ಪಷ್ಟಂ ಶ್ರೂಯತೇ ಶ್ರುತೌ ||

ಬಳಿತ್ಥಾ ಸೂಕ್ತದಲ್ಲಿ ಯಾರು ಮಧ್ವನೋ ಅವನು 'ಮಾತರಿಶ್ವಾ' ಅಂದರೆ ಮುಖ್ಯಪ್ರಾಣನು ಎಂದು ಸ್ಪಷ್ಟವಾಗಿ ಶ್ರುತವಾಗಿದೆ.

ಪ್ರಮಾಣ :–

ಯದೀಮನು ಪ್ರದಿವೋ ಮಧ್ವ ಆಧವೇ
ಗುಹಾ ಸಂತಂ ಮಾತರಿಶ್ವಾ ಮಥಾಯತಿ || ೩ ||

ಈ ಉತ್ತಮಪ್ರಕಾಶರೂಪರಾದ ಮಧ್ವನೆಂದು ಹೆಸರುಳ್ಳ ವಾಯುದೇವರು ಜೀವೇಶ್ವರರಿಗೆ ಐಕ್ಯವನ್ನು ಹೇಳುವುದರಿಂದ ಮುಚ್ಚಲ್ಪಟ್ಟ ಹರಿಯನ್ನು ಸರ್ವೋತ್ತಮನನ್ನಾಗಿಯೂ, ಸರ್ವಸ್ವಾಮಿಯನ್ನಾಗಿಯೂ, ಶಾಸ್ತ್ರಗಳನ್ನು ವಿಚಾರಮಾಡಿ ನಿಶ್ಚಯಿಸಿ ವಿಷ್ಣುವೇ ಸರ್ವೋತ್ತಮನೆಂದು ಶಿಷ್ಯರಲ್ಲಿ ಪ್ರಚಾರಮಾಡಿದರು.

ಈಶಾನಾಸೋಽಸ್ಯ ಕೃಪಯಾಽಕ್ರಿಯಂತ ಕಿಲ ಸೂರಯಃ |

ಈ ಮಧ್ವಾಚಾರ್ಯರ ಕೃಪೆಯಿಂದ ರುದ್ರನೇಮೊದಲಾದ ಅಧಿಕಾರಿಗಳು ಜ್ಞಾನಿಗಳಾಗಿ ಮಾಡಲ್ಪಟ್ಟರು.

ಪ್ರಮಾಣ :—

ನಿಯ್ರ್ದೀಂ ಬುಧ್ನಾನ್ಮಹಿಷಸ್ಯ ವರ್ಪಸ

ಈಶಾನಾಸಃಶವಸಾ ಕ್ರಂತ ಸೂರಯಃ ||

ಪೂಜ್ಯನೂ, ಷಡ್ಗುಣಸಂಪನ್ನನೂ ಆದ ಹರಿಯ ಗುಣಗಳನ್ನು ರುದ್ರಾದಿದೇವತೆಗಳೂ ಮತ್ತು ಇತರ ಜ್ಞಾನಿಗಳೂ ಸುಖದಿಂದ ಯಾರಿಂದ ತಿಳಿದವರಾದರೋ ಆ ಜ್ಞಾನರೂಪರಾದ ವಾಯುದೇವರ ಮೂರನೇ ಅವತಾರರೇ ಮಧ್ವಾಚಾರ್ಯರು.

ಯೋಷಣೋ ಜನಯಂತಾಮುಂ ದಶಪ್ರಮತಿನಾಮಕಂ |

ಮಧ್ಯಗೇಹಭಟ್ಟರ ಪತ್ನಿಯರು ಈ ಪೂರ್ಣಪ್ರಜ್ಞನಾಮಕರಾದ ಮಧ್ವಾಚಾರ್ಯರನ್ನು ಹಡೆದರು.

ಪ್ರಮಾಣ :—

ತೃತೀಯಮಸ್ಯ ವೃಷಭಸ್ಯ ದೋಹಸೇ

ದಶಪ್ರಮತಿಂ ಜನಯಂತ ಯೋಷಣಃ || ೨ ||

ಈ ಶ್ರೇಷ್ಠರಾದ ವಾಯುದೇವರ ಮೂರನೇ ರೂಪವನ್ನು ಜ್ಞಾನ-ದೋಹನಕ್ಕಾಗಿ ಅಂದರೆ ಸಜ್ಜನರಿಗೆ ಜ್ಞಾನವನ್ನು ಸಂಪಾದಿಸಿಕೊಡುವುದಕ್ಕಾಗಿ ಪೂರ್ಣಪ್ರಜ್ಞನಾಮಕರಾದ ಮಧ್ವಾಚಾರ್ಯರನ್ನು ಮಧ್ಯಗೇಹ ಭಟ್ಟಾಚಾರ್ಯರ ಪತ್ನಿಯರು ಹಡೆದರು. ಗುರುಮಾತೆಯರಾದ್ದರಿಂದ ಬಹುವಚನಪ್ರಯೋಗಮಾಡಿದೆ.

ಸಪ್ತಸ್ವಸ್ಯಾರುಜ್ಜಹಾರ ವಿದ್ವಾನ್ ಮಧ್ವೋ ದೃಶೇ ಹರೇಃ |

ಪರಮಾತ್ಮನ ಜ್ಞಾನ ಉಂಟಾಗುವದಕ್ಕಾಗಿ "ಸಪ್ತಸ್ವಸ್ಯಾಃ" ಅಂದರೆ ನಾಲ್ಕುವೇದಗಳು, ಪಂಚರಾತ್ರ, ಪುರಾಣ ಮತ್ತು ಭಾರತ ಇವುಗಳ ಅರ್ಥವನ್ನು ಸರ್ವಜ್ಞರಾದ ಮಧ್ವಾಚಾರ್ಯರು ಉದ್ಧರಿಸಿದರು.

ಪ್ರಮಾಣ :–

ಸಪ್ತ ಸ್ವಸ್ರೂರರುಷೀರ್ವಾವಶಾನೋ

ವಿದ್ವಾನ್ ಮಧ್ವ ಉಜ್ಜಭಾರಾದೃಶೇ ಕಂ ||

[ಋಗ್ವೇದಸಂಹಿತಾ–ಮಂ ೧೦-೫-೫]

ಅತಿಶಯವಾಗಿ ಪ್ರಕಾಶಮಾನರಾದ, ಅಕಾರವಾಚ್ಯನಾದ ಪರಮಾತ್ಮನನ್ನು ಬಿಟ್ಟು ಬೇರೇ ಗುರುಗಳಿಲ್ಲದ ಮತ್ತು ಸರ್ವಜ್ಞರಾದ ಮಧ್ವಾಚಾರ್ಯರು ಆನಂದರೂಪನಾದ ಪರಮಾತ್ಮನನ್ನು ಸಾಕ್ಷಾತ್ತಾಗಿ ನೋಡಿ, ಸಕಲವೇದತಾತ್ಪರ್ಯಭೂತನಾದವನೆಂದು ತಿಳಿದು ಸ್ವತಃ ಪ್ರಮಾಣಭೂತವಾದ, ಅಪೌರುಷೇಯವಾದ, ಭಗವಂತನ ಮುಖದಿಂದ ಹೊರಟುಬಂದ ನಾಲ್ಕು ವೇದಗಳೂ, ಪಂಚರಾತ್ರ, ಪುರಾಣ ಮತ್ತು ಭಾರತ ಇವುಗಳ ಅರ್ಥವನ್ನು ತಮ್ಮ ಜ್ಞಾನದಿಂದ ಉದ್ಧರಿಸಿದರು. ಅಂದರೆ ಅವುಗಳ ಅರ್ಥವನ್ನು ತಮ್ಮ ಗ್ರಂಥದಲ್ಲಿ ಚೆನ್ನಾಗಿ ಪ್ರತಿಪಾದಿಸಿದರು ಎಂದಭಿಪ್ರಾಯ. ಈ ಋಕ್ಕುಗಳ ವ್ಯಾಖ್ಯಾನವು ಯುಕ್ತಿಮಲ್ಲಿಕಾಫಲಸೌರಭವಲ್ಲಿ (೫೪೫ ನೇ ಶ್ಲೋಕದಲ್ಲಿ ಉಕ್ತವಾಗಿದೆ.)

ಇತ್ಯಾದಿವೇದವಾಕ್ಯೇಷು ಶ್ರೂಯತೇ ಯಃ ಸ್ಥಲೇಸ್ಥಲೇ |
ಅತಸ್ತದುದಿತಂ ಮಾನಂ ವೇದಮಾನವತಾಂ ಸತಾಂ || ೧೫ ||

ಮರುದಾತ್ಮಕತಾಪ್ಯಸ್ಯ ತತಏವ ಸ್ಥಿರಾಭವತ್ |
ಏವಂ ಗೃಣಂತೀ ಶ್ರೀಮಧ್ವಂ ಶ್ರುತಿರೇಷಾ ಗುರೋರ್ಮಮ ||

ಬುದ್ಧಿಶುದ್ಧಿಮಭಿಪ್ರೈತಿ ತಸ್ಮಾದ್ವಾಯೋಸ್ತು ಶುಕ್ಲತಾ |
ಋಗ್ವೇದಸಂಹಿತಾವಾಕ್ಯಾದಪಿ ಸಿದ್ಧಾ ಮಹಾತ್ಮನಃ || ೧೭ ||

ಇವೇಮೊದಲಾದ ವೇದವಾಕ್ಯಗಳಲ್ಲಿ ಮಧ್ವಾಚಾರ್ಯರು ಅನೇಕ ಸ್ಥಳಗಳಲ್ಲಿ ಪ್ರತಿಪಾದ್ಯರಾಗಿದ್ದಾರೆ. ಆದ್ದರಿಂದ ವೇದಪ್ರಮಾಣವನ್ನು ಒಪ್ಪುವ ಸಜ್ಜನರಿಗೆ ಅವರಿಂದ ಹೇಳಲ್ಪಟ್ಟ ಶಾಸ್ತ್ರವು ಪ್ರಮಾಣವು. ಇದರಿಂದಲೇ ಮಧ್ವಾಚಾರ್ಯರು ವಾಯುದೇವರ ಸ್ವರೂಪಭೂತರಾದವ

ರೆಂಬುದೂಕೂಡ ಸ್ಥಿರವಾಯಿತು. ಈ ರೀತಿಯಲ್ಲಿ ನನ್ನ ಗುರುಗಳಾದ ಶ್ರೀಮಧ್ವಾಚಾರ್ಯರನ್ನು ಹೊಗಳುವ ಈ ಕೃತಿಯು ಅವರ ಬುದ್ಧಿಯು ಶುದ್ಧವೆಂದು ಅಭಿಪ್ರಾಯವುಳ್ಳದ್ದಾಗಿದೆ. ಆದ್ದರಿಂದ ಋಗ್ವೇದಸಂಹಿತೆಯ ವಾಕ್ಯದಿಂದಲೂಕೂಡ ಮಹಾತ್ಮರಾದ ಮಧ್ವಾಚಾರ್ಯರ ಶುಕ್ಲತ್ವವು ಸಿದ್ಧವಾಯಿತು. ॥ ೧೫-೧೭ ॥

ಮರುದ್ರೂಪೇ ಗುರೌ ಪ್ರೇಮ್ಣಾ ಹರಿರ್ದ್ವಾರಾವತೀಪುರಾತ್ ।
ನಾವಾ ಸೇವಾತುರಂ ದ್ರಷ್ಟುಕಾಮೋ ದಾಮೋದರಪ್ರಭುಃ ॥೧೮॥

ಆಯಾದಾಯಾಸಹೃತ್ಸ್ವಾನಾಮಿತಿ ಸರ್ವಸ್ಯ ಸಂಮತಂ ।
ಏವಂ ಚಾಚ್ಛಿನ್ನಭಕ್ತಿತ್ವಂ ತತ್ವಂ ಪ್ರತ್ಯಕ್ಷಮಾನತಃ ॥ ೧೯ ॥

ಸಿದ್ಧಮಾಸೀದ್ಬುದ್ಧಿಶುದ್ಧಿರಪಿಸಿದ್ಧಾ ಗುರೋರ್ಮಮ ।
ಹರಿಶ್ಚ ತತ್ಪೂಜ್ಯಪಾದೋಽಭವತ್ಸರ್ವಸುರಾಗ್ರಣೀಃ ॥ ೨೦ ॥

ವಾಯುರೂಪಿಯಾದ ಗುರುವಿನಲ್ಲಿ ತನಗಿರುವ ಪ್ರೀತಿಯಿಂದ ಸೇವೆಯನ್ನು ಮಾಡಬೇಕೆಂದು ಆತುರರಾಗಿದ್ದ ಮಧ್ವಾಚಾರ್ಯರನ್ನು ನೋಡಲಿಚ್ಛೆಯುಳ್ಳವನಾಗಿ ತನ್ನ ಭಕ್ತರ ಆಯಾಸವನ್ನು ಹೋಗಲಾಡಿಸುವ ಪ್ರಭುವಾದ ದಾಮೋದರನು ತಾನಾಗಿಯೇ ದ್ವಾರಾವತಿಯಿಂದ ಹಡಗಿನಲ್ಲಿ ಬಂದನೆಂಬುದು ಸರ್ವಸಂಮತವಾದದ್ದು. ಈರೀತಿಯಲ್ಲಿ ಮಧ್ವಾಚಾರ್ಯರ ನಿರಂತರವಾದ ಭಕ್ತಿಯು ಶ್ರೀಹರಿಯಲ್ಲಿ ಇದೆ ಎಂಬ ತತ್ವವು ಪ್ರತ್ಯಕ್ಷಪ್ರಮಾಣದಿಂದ ಸಿದ್ಧವಾಯಿತು. ನಮ್ಮ ಗುರುಗಳಿಗೆ ಇದರಿಂದಲೇ ಬುದ್ಧಿಶುದ್ಧತ್ವವೂ ಸಿದ್ಧವಾಯಿತು. ಅಲ್ಲದೆ ಸರ್ವದೇವೋತ್ತಮನಾದ ಹರಿಯು ಅವರಿಂದ ಪೂಜಿಸಲ್ಪಟ್ಟ ಪಾದವುಳ್ಳವನೂ ಆದನು. ॥ ೧೮-೨೦ ॥

ಉರರೀಕುರುತೇ ಚಾರ್ವಾಕೋಽಪಿ ಪ್ರತ್ಯಕ್ಷಮಾನತಾಂ ।
ತತ್ಪ್ರತ್ಯಕ್ಷಂ ಸರ್ವಬುಧ್ಯೈರಕ್ಷ್ಯಂ ಮಾನಂ ನ ಸಂಶಯಃ ॥ ೨೧ ॥
ನ ಚೇಚ್ಚಾರ್ವಾಕತೋಽಪ್ಯರ್ವಾಚೀನಃ ಸ್ಯಾದ್ವಿದುಷಾಂ ಬಹಿಃ ।

ಚಾರ್ವಾಕನೂಕೂಡ ಪ್ರತ್ಯಕ್ಷವನ್ನು ಪ್ರಮಾಣವಾಗಿ ಒಪ್ಪಿರುವದರಿಂದ

ಪ್ರತ್ಯಕ್ಷದಲ್ಲಿ ಪ್ರಾಮಾಣ್ಯವು ಬುಧರಿಂದ ರಕ್ಷಿಸಲ್ಪಡಬೇಕು. ಇದರಲ್ಲಿ ಸಂಶಯ ವಿಲ್ಲ. ಅಂದರೆ ಚಾರ್ವಾಕನೇ ಒಪ್ಪಿರುವ ಪ್ರತ್ಯಕ್ಷಪ್ರಮಾಣವನ್ನು ಬುಧರು ಒಪ್ಪಲೇ ಒಪ್ಪುತ್ತಾರೆ. ಇಂತಹ ಸರ್ವಸಮ್ಮತವಾದ ಪ್ರತ್ಯಕ್ಷಪ್ರಮಾಣ ದಿಂದ ಮಧ್ವಾಚಾರ್ಯರು ಪರತತ್ವನಾದ ಪರಮಾತ್ಮನ ವಿಷಯದಲ್ಲಿ ಪಟ್ಟರು ಎಂಬುದು ಸರ್ವಸಮ್ಮತ. ಇದನ್ನು ಯಾವನು ಒಪ್ಪುವದಿಲ್ಲವೋ ಅವನು ಜ್ಞಾನಿಗಳಲ್ಲದ ಜನರಲ್ಲಿ ಚಾರ್ವಾಕನಿಗಿಂತಲೂ ಕಡೆಯಾದಾನು.

ಕೃಷ್ಣಪ್ರತಿಷ್ಠಾಂ ಯಶ್ಚಕ್ರೇ ಚಕ್ರೇ ಶಿಷ್ಯಾನ್ನವಾನ್ನವ ॥ ೨೨ ॥

ವಿಸ್ತಾರಯಾಮಾಸ ಭೂಮೌ ತತ್ವಂ ತತ್ವವಿದಗ್ರಣೀಃ ।
ಹೃದ್ಗಮಧ್ವಸ್ಯ ಕೃಪಯಾ ತಚ್ಛಿಷ್ಯಾಣಾಂ ಪರಂಪರಾ ॥ ೨೩ ॥

ಪರಾಭಾವ್ಯ ಪರಾನ್ ಸರ್ವಾನ್ ದೂರೀಕೃತ್ಯ ದುರಾಗಮಾನ್ ।
ಅದ್ಯಾಪಿ ಶಾಸ್ತಿ ಸತ್ತತ್ವಂ ಮಧ್ವೋಽಸೌ ಜಯತೇತರಾಂ ॥ ೨೪ ॥

ಯಾವ ಮಧ್ವಾಚಾರ್ಯರು ಉಡುಪಿಯಲ್ಲಿ ಕೃಷ್ಣಪ್ರತಿಷ್ಠೆಯನ್ನು ಮಾಡಿದರೋ ಮತ್ತು ಹೊಸದಾಗಿ ಒಂಭತ್ತು (ಸಂನ್ಯಾಸಿ) ಶಿಷ್ಯರನ್ನು ಮಾಡಿಕೊಂಡರೋ, ತತ್ವವನ್ನು ತಿಳಿದವರಲ್ಲಿ ಅಗ್ರೇಸರರಾದ ಆ ಆಚಾರ್ಯರು ಸತ್ತತ್ವವನ್ನು ಭೂಮಿಯಲ್ಲಿ ವಿಸ್ತಾರಮಾಡಿದರು. ಅವರ ಶಿಷ್ಯಪರಂಪರೆಯು ಹೃದಯನಿವಾಸಿಯಾದ ಮಧ್ವಾಚಾರ್ಯರ ಕೃಪೆಯಿಂದ ದುರ್ವಾದಿಗಳನ್ನು ವಾದದಲ್ಲಿ ಜಯಿಸಿ ದುರಾಗಮಗಳನ್ನು ಖಂಡಿಸಿ ಈಗಲೂ ಕೂಡ ಸತ್ತತ್ವವನ್ನು ಬೋಧಿಸುತ್ತದೆ. ಆದ್ದರಿಂದಲೇ ಆಚಾರ್ಯರು ಈಗಲೂಕೂಡ ಲೋಕದಲ್ಲಿ ಅತ್ಯಂತ ಜಯಶೀಲರಾಗಿ ಬೆಳಗುತ್ತಿದ್ದಾರೆ.

ಶರಚ್ಛತೇ ವ್ಯತೀತೇತು ದೇವಾನಾಮಾಜ್ಞಯಾ ಪ್ರಭೋಃ ।
ಐಕತಾಂ ಮೂಲರೂಪೇಣ ಲೋಕೇ ಸ್ವೀಯೇ ಗಮಿಷ್ಯತಿ ॥೨೫॥

ದೇವತೆಗಳ ನೂರುವರ್ಷಗಳನಂತರದಲ್ಲಿ, ಪ್ರಭುವಾದ ಪರಮಾತ್ಮನ ಆಜ್ಞೆಯಿಂದ ತನ್ನ ಲೋಕದಲ್ಲಿರುವ ಮೂಲರೂಪದಿಂದ ಐಕ್ಯವನ್ನು ಹೊಂದುತ್ತಾರೆ. ॥ ೨೫ ॥

ಸ್ವಾನುಜಂ ವಿಷ್ಣುತೀರ್ಥಂ ಚ ತಪಸಾ ಧೂತಕಲ್ಮಷಂ ।
ಪ್ರೇಷಯಿಷ್ಯತಿ ಸತ್ತತ್ವಕಥನಾಯ ಕಲೌ ಕಿಲ ॥ ೨೬ ॥

ತಪಸ್ಸುಮಾಡುವುದರಿಂದ ದೋಷದೂರರಾದ, ತಮ್ಮ ತಮ್ಮಂದಿರಾದ ವಿಷ್ಣುತೀರ್ಥರನ್ನು, ಸತ್ತತ್ತ್ವವನ್ನು ಕಲಿಯುಗದಲ್ಲಿ ಬೋಧಿಸುವುದಕ್ಕಾಗಿ ಮಧ್ವಾಚಾರ್ಯರು ಮುಂದೆ ಕಳುಹಿಸಿಕೊಡುವವರಷ್ಟೆ. ॥ ೨೬ ॥

ಸ್ವಚ್ಛಂದಮೃತ್ಯುತಾ ವ್ಯಾಸಕೃಪಯಾಸ್ತ್ಯುಭಯೋಸ್ತ್ರಯೋಃ ।
ಏವಂ ಹರಿಕೃಪಾಪಾತ್ರೀಭೂತಃ ಸೋಽಯಂ ಗುರುರ್ಮಮ ॥೨೭॥

ಮರುದೇವ ನ ಸಂದೇಹಃ ಪರೇತತ್ತ್ವೇ ಹರೌ ಸದಾ ।
ಶುದ್ಧಬುದ್ಧಿತ್ವತಃ ಶುಕ್ಲೋಽಪ್ಯಾಸೀದ್ದಾಸೀಕೃತಾಮರಃ ॥ ೨೮ ॥

ತಮ್ಮ ಇಚ್ಛಾನುಸಾರವಾಗಿ ಮೃತಿಯು ಅಂದರೆ ಸ್ಥೂಲದೇಹ-ತ್ಯಾಗವು ಅವರಿಬ್ಬರಿಗೂ ವ್ಯಾಸರ ಕೃಪೆಯಿಂದ ಇದೆ. ಈರೀತಿಯಲ್ಲಿ ಹರಿಯ ಕೃಪಾಕ್ಕೆ ಪಾತ್ರರಾದ ಈ ನಮ್ಮ ಗುರುಗಳು ವಾಯುದೇವರೇ ಎಂಬುವುದರಲ್ಲಿ ಸಂದೇಹವಿಲ್ಲ. ಮತ್ತು ಪರತತ್ತ್ವನಾದ ಹರಿಯಲ್ಲಿ ಯಾವಾಗಲೂ ಶುದ್ಧಬುದ್ಧಿಯುಳ್ಳವರಾದ್ದರಿಂದ ದೇವತೆಗಳೇ ದಾಸರಾಗಿ ಉಳ್ಳ ಇವರು ಶುಕ್ಲರೂ ಆದರು. ॥ ೨೭-೨೮ ॥

ಅತೋ ಮಧ್ವಮುನೇರಧ್ವಾ ಶುದ್ಧೋಽಭೂಚ್ಚ ವಿಚಾರಣೇ ।
ಸಿದ್ಧೋಽನ್ಯವಾದಿನಾಮಧ್ವಾ ಕದಧ್ವಾಭೂನ್ನ ಸಂಶಯಃ ॥ ೨೯ ॥

ಆದ್ದರಿಂದ ವಿಚಾರಮಾಡಿದಲ್ಲಿ ಮಧ್ವಮುನಿಗಳ ಮಾರ್ಗವು ಶುದ್ಧವಾದುದೆಂದು ಸಿದ್ಧವಾಯಿತು. ಅಲ್ಲದೆ ಇತರವಾದಿಗಳ ಮಾರ್ಗವು ದುಷ್ಟ-ಮಾರ್ಗವೆಂಬುದು ಸಂಶಯವಿಲ್ಲದೇ ಸಿದ್ಧವಾಯಿತು. ॥ ೨೯ ॥

ಯಸ್ಮಾದಾಸ್ಮಾಕಗುರುಣಾ ಸೂತ್ರೇ ಸೂತ್ರೇ ಹರೇರ್ಗುಣಾಃ ।
ಪ್ರಸ್ತೂಯ ಸರ್ವೋತ್ತಮತಾ ಹರೇರೇವ ಪ್ರಸಾಧಿತಾ ॥ ೩೦ ॥

ಪರೋಽಸಿ ಮಾತ್ರಯಾ ತಸ್ಮಾವ್ಯಧಾನ ನ ತು ತೇಜಸಾ ।

ನ ತೇ ಮಹಿತ್ವಂ ಕೇಪ್ಯತ್ರಾನ್ವಶ್ನುವಂತಿ ಮಹಾಪ್ರಭೋ ॥ ೩೧ ॥

ವಿಷ್ಣೋರ್ನುಕಂ ನ ತೇ ವಿಷ್ಣೋ ವಿಷ್ಣುಃ ಪರಮ ಇತ್ಯಪಿ ।
ಶ್ರುತೀರುಕ್ತ್ವಾ ತಥಾ ಬ್ರಹ್ಮರುದ್ರಾದ್ಯುತ್ಕೃಷ್ಟಚೇತನಃ ॥ ೩೨ ॥

ಶಂಭೋಃ ಪಿತಾಮಹೋ ಬ್ರಹ್ಮಪಿತಾ ಶಕ್ರಾದ್ಯಧೀಶ್ವರಃ ।
ಬ್ರಹ್ಮೇಶಾದ್ಯಾ ನ ತೇಷಾಂ ಚ ಇತ್ಯಾದ್ಯಗಣಿತಸ್ಮೃತೀಃ ॥ ೩೩ ॥

ದರ್ಶಯಿತ್ವಾ ಹರೇಸ್ತತ್ವಮಾಸೇತೋರಾಹಿಮಾಚಲಾತ್ ।
ಸರ್ವದೇವೋತ್ತಮತ್ವಾಖ್ಯಂ ಪ್ರಖ್ಯಾತಮಕರೋದ್ಭುವಿ ॥ ೩೪ ॥

ತಸ್ಮಾತ್ತತ್ವವಿದಾಮಾದ್ಯಾ ತೃತೀಯಾ ಮಾರುತೀತನುಃ ।
ತಸ್ಮಾತ್ಸರ್ವೋತ್ತಮೋ ವಿಷ್ಣುರ್ವಾಯುಶ್ಚ ತದನಂತರಂ ॥ ೩೫ ॥

ಉತ್ತಮೋಽಪರದೇವೇಭ್ಯಃ ಶುದ್ಧಧೀಶ್ಚ ಪರೇ ಹರೌ ।

ನಮ್ಮ ಗುರುಗಳಿಂದ ಸೂತ್ರಸೂತ್ರಗಳಲ್ಲಿ ಹರಿಯ ಗುಣಗಳನ್ನು ಚೆನ್ನಾಗಿ ಪ್ರತಿಪಾದಿಸಿ ಹರಿಯ ಸರ್ವೋತ್ತಮತ್ವವು ಸಾಧಿಸಲ್ಪಟ್ಟಿದ್ದರಿಂದಲೂ ಮತ್ತು "ಪರೋಮಾತ್ರಯಾ", "ನತೇಮಹಿತ್ವಮನ್ವಶ್ನುವಂತಿ", "ವಿಷ್ಣೋರ್ನುಕಂವೀರ್ಯಾಣಿ", "ನತೇವಿಷ್ಣೋಜಾಯಮಾನಃ" ಮತ್ತು "ಅಗ್ನಿರ್ವೈದೇವಾನಾಂ ಅವಮಃ ವಿಷ್ಣುಃಪರಮಃ" ಈ ಶ್ರುತಿಗಳನ್ನು ಹೇಳಿ ಅಲ್ಲದೆ "ಯಸ್ಮಾತ್ ಕ್ಷರಮತೀತೋಽಹಂ", "ಶಂಭೋಃ ಪಿತಾಮಹೋ ಬ್ರಹ್ಮಪಿತಾ ಶಕ್ರಾದ್ಯಧೀಶ್ವರಃ" ಮತ್ತು "ಬ್ರಹ್ಮೇಶಾನಾದಿಭಿರ್ದೇವೈಃ ಯತ್ಪ್ರಾಪ್ತುಂ ನೈವ ಶಕ್ಯತೇ । ತದ್ಯತ್ಸ್ವಭಾವಕೈವಲ್ಯಂ ಸ ಭವಾನ್ ಕೇವಲೋ ಹರೇ ॥" ಇವೇ ಮೊದಲಾದ ಅನೇಕ ಸ್ಮೃತಿಗಳನ್ನೂ ತೋರಿಸಿ ಕೊಟ್ಟು ತತ್ವವನ್ನು ತಿಳಿದವರಲ್ಲಿ ಮುಖ್ಯರಾದ, ವಾಯುದೇವರ ಮೂರನೇ ಅವತಾರಭೂತರಾದ ಮಧ್ವಾಚಾರ್ಯರು ಹರಿಯು ಸರ್ವೋತ್ತಮದೇವತೆ ಯೆಂಬ ತತ್ವವನ್ನು ಆಸೇತುಹಿಮಾಚಲಪರ್ಯಂತ ಭೂಮಿಯಲ್ಲಿ ಚೆನ್ನಾಗಿ ಪ್ರಸಿದ್ಧಿಪಡಿಸಿದ್ದರಿಂದಲೂ, ವಿಷ್ಣುವು ಸರ್ವೋತ್ತಮನೆಂದೂ, ತದನಂತರ

ವಾಯುವು ಇತರ ದೇವತೆಗಳಿಗಿಂತ ಉತ್ತಮನೆಂದೂ, ಸರ್ವೋತ್ತಮನಾದ ಹರಿಯಲ್ಲಿ ಶುದ್ಧಬುದ್ಧಿಯುಳ್ಳವನೆಂದೂ ಸಿದ್ಧವಾಯಿತು. ‖ ೩೦-೩೬(೧) ‖

ಯತಶ್ಚ ಶ್ರುತಿಷೂಕ್ತೋಽಯಂ ಮರುದ್ರೂಪೋ ಗುರುರ್ಮಮ ‖

ಇದಂ ಪ್ರಮೇಯಂ ಸ್ವಗ್ರಂಥೇ ಪ್ರಸ್ತಾವ್ಯ ನಿರಣೀನಯತ್
ತತೋಽಪಿ ಪರಶುಕ್ಲಾಖ್ಯಮುಕ್ತಂ ತ್ರಿತಯಮೇವ ಹಿ ‖ ೩೭ ‖

ಯಾವ ಕಾರಣದಿಂದ ಶ್ರುತಿಪ್ರತಿಪಾದ್ಯರಾದ, ಮರುದಂಶರಾದ ನಮ್ಮ ಗುರುಗಳು ಈ ಪ್ರಮೇಯವನ್ನು ತಮ್ಮ ಗ್ರಂಥದಲ್ಲಿ ಪ್ರಸ್ತಾಪಿಸಿ ನಿರ್ಣಯ ಮಾಡಿದರೋ ಆ ಕಾರಣದಿಂದಲೂ "ಪರಶುಕ್ಲ" ಎಂದು ಹೆಸರುಳ್ಳದ್ದು ಹಿಂದೆ ಹೇಳಿದ ಮೂವರ ಗುಂಪೇ ಸರಿ ‖ ೩೬(೨)-೩೭ ‖

ಏತದುಕ್ತಾರ್ಥದಾರ್ಢ್ಯಾರ್ಥಮೇವಂ ಶ್ರುತ್ಯಾದಿಚರ್ಚಿತಂ ।
ಏವಂ ಚ ಪ್ರಾಣರೂಪೇಣ ಗುರುಣಾ ಕರುಣಾವತಾ ‖ ೩೮ ‖

ಯದುಕ್ತಂ ತದ್ಧಿ ಸಚ್ಛಾಸ್ತ್ರಮಸಚ್ಛಾಸ್ತ್ರಂ ತತಃ ಪರಂ ।
ತತಃ ಪರೇ ಬುದ್ಧಿಶುದ್ಧಿಃ ಕಿಂವಾಚ್ಯಾಸ್ಯ ಜಗದ್ಗುರೋಃ ‖ ೩೯ ‖

ಈ ಅರ್ಥವನ್ನು ದೃಢವಾಗಿ ತಿಳಿಸುವುದಕ್ಕೋಸ್ಕರಲೇ ಶ್ರುತಿಮೊದಲಾದವುಗಳು ನಮ್ಮಿಂದ ವಿಚಾರಮಾಡಲ್ಪಟ್ಟವು. ಏವಂಚ ಮುಖ್ಯಪ್ರಾಣರೂಪರಾದ, ಕರುಣಾವಂತರಾದ ನಮ್ಮ ಗುರುಗಳಿಂದ ಯಾವದು ಹೇಳಲ್ಪಟ್ಟಿದೆಯೋ ಅದೇನೇ ಸಚ್ಛಾಸ್ತ್ರವು. ಅದರಿಂದ ಬೇರೆಯಾದದ್ದು ಅಸಚ್ಛಾಸ್ತ್ರವು. ಆದ್ದರಿಂದ ಪರತತ್ವನಾದ ಹರಿಯಲ್ಲಿ ಈ ಜಗದ್ಗುರುಗಳಿಗೆ ಶುದ್ಧವಾದ ಬುದ್ಧಿ ಇದೆ ಎಂದು ಹೇಳತಕ್ಕದ್ದೇನು ? ‖ ೩೮-೩೯ ‖

ಯಸ್ಯೇದೃಶಾನಸದೃಶಾನವತಾರಾನ್ವಿಪಶ್ಚಿತಃ ।
ಗೃಣಂತಿ ತಸ್ಯ ವಾಯೋಶ್ಚ ಕಿಂ ವಾಚ್ಯಾಶುದ್ಧಬುದ್ಧಿತಾ ‖ ೪೦ ‖

ಯಾರ ಈ ವಿಧವಾದ ಅಸಮಾನವಾದ ಅವತಾರಗಳನ್ನು ಪಂಡಿತರು ಹೊಗಳುತ್ತಾರೋ ಅಂತಹ ವಾಯುದೇವರಿಗೆ ಶುದ್ಧಬುದ್ಧಿತ್ವವನ್ನು ಹೇಳ

ಬೇಕಾಗಿದೆಯೇನು? ಅದಾಗಿಯೇ ಸಿದ್ಧವಾಯಿತು. ಹೇಳಬೇಕಾದ್ದಿಲ್ಲವೆಂಬ ಅಭಿಪ್ರಾಯ. ॥ ೪೦ ॥

ಕಿಂಚ ಸರ್ವೈರಪಿ ಗ್ರಂಥಸ್ಯಾರಂಭೇ ಪಠ್ಯತೇ ತು ಯಾ ।
ಸಾ ಶಾಂತಿರಂತೇ ಪಠಿತಮುರುಕ್ರಮಪದೋದಿತಂ ॥ ೪೧ ॥

ಸರ್ವೋತ್ತಮಂ ಪುನರ್ನಂತುಂ ಜಿಜ್ಞಾಸ್ಯ ಬ್ರಹ್ಮಸಂಜ್ಞಯಾ ।
ಸಮಾಹೂಯ ನಮಸ್ಕೃತ್ಯ ಪುನಸ್ತತ್ಪ್ರಿಯಕಿಂಕರಂ ॥ ೪೨ ॥

ಪ್ರಾಣಂ ಚ ತದ್ವತ್ ಗ್ರಂಥಾದೌ ನಮಸ್ಕರ್ತುಂ ದಿನೇದಿನೇ ।
ಬಲಜ್ಞಾನಸ್ವರೂಪತ್ವಾತ್ಸರ್ವಾಸುರವಿಮರ್ದನೇ ॥ ೪೩ ॥

ಸಮರ್ಥಂ ವಾಯುಶಬ್ದೇನ ಸಮಾಹೂಯ ನನಾಮ ಚ ।

ಅಧ್ಯಯನದ ಆದಿಯಲ್ಲಿನ ಶಾಂತಿವಾಕ್ಯವನ್ನು ವಿಚಾರವಮಾಡಿ ವಾಯುದೇವರ ಶುದ್ಧತ್ವವನ್ನು ಸ್ಥಾಪಿಸುತ್ತಾರೆ– ಈ ವಾಕ್ಯವು ಇದು.

"ಓಂ ಓಂ ಶನ್ನೋ ಮಿತ್ರಃ ಶಂ ವರುಣಃ ಶನ್ನೋ ಭವತ್ವರ್ಯಮಾ ।
ಶನ್ನ ಇಂದ್ರೋ ಬೃಹಸ್ಪತಿಃ ಶನ್ನೋ ವಿಷ್ಣುರುರುಕ್ರಮಃ । ನಮೋ ಬ್ರಹ್ಮಣೇ
ನಮಸ್ತೇ ವಾಯೋ ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ ತ್ವಮೇವ ಪ್ರತ್ಯಕ್ಷಂ
ಬ್ರಹ್ಮ ವದಿಷ್ಯಾಮಿ । ಋತಂ ವದಿಷ್ಯಾಮಿ ಸತ್ಯಂ ವದಿಷ್ಯಾಮಿ ತನ್ಮಾಮ-
ವತು ತದ್ವಕ್ತಾರಮವತು ಅವತು ಮಾಂ ಅವತು ವಕ್ತಾರಂ ಓಂ ಶಾಂತಿಃ
ಶಾಂತಿಃ ಶಾಂತಿಃ ॥ ೧ ॥"

ಅಲ್ಲದೆ ಶಾಸ್ತ್ರಾರಂಭಕಾಲದಲ್ಲಿ ಸರ್ವರಿಂದಲೂ ಪಠಿಸಲ್ಪಡುವ "ಶನ್ನೋ ಮಿತ್ರಃ" ಎಂಬ ಶಾಂತಿವಾಕ್ಯವು ಕೊನೆಯಲ್ಲಿ ಪಠಿತವಾದ "ಉರುಕ್ರಮ" ಎಂಬ ಪದದಿಂದ ಹೇಳಲ್ಪಟ್ಟ ಸರ್ವೋತ್ತಮನಾದ ವಿಷ್ಣುವನ್ನು

"ಅಥಾತೋ ಬ್ರಹ್ಮಜಿಜ್ಞಾಸಾ" ಎಂಬ ಸೂತ್ರದಲ್ಲಿ ವಿಚಾರಕ್ಕೆ ವಿಷಯವಾದ ಯಾವ ಬ್ರಹ್ಮವೋ ಆ 'ಬ್ರಹ್ಮ' ಶಬ್ದದಿಂದ ಕರೆದು ಆತನಿಗೆ ನಮಸ್ಕಾರ ಮಾಡಿ ಪುನಃ ಆವಿಷ್ಣುವಿಗೆ ಪ್ರಿಯದೂತರಾದ ಪ್ರಾಣದೇವರನ್ನು ಪ್ರತಿದಿನ ದಲ್ಲಿಯೂ ನಮಸ್ಕರಿಸುವುದಕ್ಕಾಗಿ ಬಲಜ್ಞಾನಸ್ವರೂಪವುಳ್ಳವರಾದ್ದರಿಂದ ಸರ್ವಅಸುರರನ್ನೂ ಮರ್ದಿಸುವುವರಲ್ಲಿ ಸಮರ್ಥರಾದ ಪ್ರಾಣದೇವರನ್ನು "ವಾಯು" ಶಬ್ದದಿಂದ ಕರೆದು ನಮಸ್ಕಾರಮಾಡುತ್ತದೆ. ಅಂದರೆ ಶಾಂತಿ ಯನ್ನು ಹೇಳುವವರು ನಮಸ್ತೇ ವಾಯೋ ಎಂದು ವಾಯುದೇವರಿಗೆ ನಮಸ್ಕಾರ ಮಾಡುತ್ತಾರೆಂದು ಅಭಿಪ್ರಾಯ. ‖ ೪೧-೪೪(೧) ‖

ಯಸ್ಮಾದಯಿರ್ಜ್ಞಾನವಾಚೀ ವಕಾರೋ ಬಲವಾಚಕಃ ‖ ೪೪ ‖

ತದ್ಬಲಜ್ಞಾನಶೀಲೋ ಯಃ ಸ ವಾಯುರಿತಿ ಕಥ್ಯತೇ ।
ಸದಾ ವಿಷ್ಣ್ವರ್ಚನೇ ಮುಖ್ಯಪ್ರತಿಮಾತ್ವಮನನ್ಯಗಂ ‖ ೪೫ ‖

ತಸ್ಯೈವಾಸ್ತೀತಿ ಸರ್ವೇಷಾಂ ದರ್ಶಯಂತೀ ಪುನಃ ಶ್ರುತಿಃ ।
ಅಸಿ ತ್ವಮೇವ ಬ್ರಹ್ಮೇತಿ ತಮೇವ ಚ ಪ್ರಶಂಸತಿ ‖ ೪೬ ‖

ವ + ಅಯ್ + ಉ = ವಾಯು. ವ = ಬಲ. ಅಯ್ = ಜ್ಞಾನ.

'ಉ' ಕ್ಕೆ ತಾಚ್ಛೀಲ್ಯಾರ್ಥ. ಅಂತು ವಾಯುಃ ಎಂದರೆ ಬಲಜ್ಞಾನ-ಸ್ವಭಾವನು ಎಂದು ಅರ್ಥ. ಆದ್ದರಿಂದ ಸದಾ ವಾಯುವಿಗೇನೇ ವಿಷ್ಣು-ಪೂಜೆಯಲ್ಲಿ ಮುಖ್ಯಪ್ರತಿಮಾತ್ವವು ಉಂಟು ಇತರರಿಗಿಲ್ಲ ಎಂಬುದನ್ನು ಎಲ್ಲರಿಗೂ ತೋರಿಸಿಕೊಡುವದಕ್ಕಾಗಿ ಶ್ರುತಿಯು ಪುನಃ ನೀನೇ ಬ್ರಹ್ಮ ನಾಗಿದ್ದೀ ಎಂದು ಆ ವಾಯುವನ್ನೇ ಪ್ರಶಂಸನೆಮಾಡುತ್ತದೆ. ‖ ೪೪-೪೬ ‖

ಅದೃಶ್ಯದೇವತಾಮುಖ್ಯಸನ್ನಿಧಾನವತೀ ತು ಯಾ ।
ದೇವಾಲಯಸ್ಥಪ್ರತಿಮಾ ತಾಂ ಚ ಸರ್ವೇಽಪಿ ಪಂಡಿತಾಃ ‖ ೪೭ ‖

ಪ್ರತ್ಯಕ್ಷದೇವಸ್ತ್ವಮಿತಿ ಪೂಜಯಂತಿ ದಿನೇ ದಿನೇ ।
ಮಾಲಾಕುಂಡಲಹಾರಾದ್ಯೈರಲಂಕುರ್ವಂತಿ ಸರ್ವದಾ ‖ ೪೮ ‖

ಅದೃಶ್ಯದೇವತೆಯ ಮುಖ್ಯಸನ್ನಿಧಾನವುಳ್ಳ ದೇವಾಲಯದಲ್ಲಿರುವ ಯಾವ ಪ್ರತಿಮೆಯೋ ಅದನ್ನು ಸರ್ವಪಂಡಿತರೂ "ನೀನು ಪ್ರತ್ಯಕ್ಷದೇವತೆ" ಎಂದು ದಿನೇದಿನೇ ಪೂಜಿಸುತ್ತಾರೆ. ಅಲ್ಲದೆ ಪುಷ್ಪಮಾಲಾ, ಕುಂಡಲ, ರತ್ನಹಾರಾದಿಗಳಿಂದ ಆ ಪ್ರತಿಮೆಯನ್ನು ಸರ್ವದಾ ಅಲಂಕರಿಸುತ್ತಾರೆ.

ಯದಿ ಸಾಕ್ಷಾದ್ಬ್ರಹ್ಮಣೈಕ್ಯಂ ಶ್ರುತೇರನುಮತಂ ಭವೇತ್ ।
ತರ್ಹಿ ಪ್ರತ್ಯಕ್ಷಶಬ್ದೇನ ವಿಶಿನಷ್ಟಿ ಚ ತಂ ಕುತಃ ॥ ೪೯ ॥

"ನಮೋ ಬ್ರಹ್ಮಣೇ ನಮಸ್ತೇ ವಾಯೋ ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ." ಇಲ್ಲಿ ವಾಯುವಿಗೆ ಬ್ರಹ್ಮನಿಂದ ಸಾಕ್ಷಾದೈಕ್ಯವು ಶ್ರುತಿಗೆ ಅಭಿಪ್ರೇತವಾಗಿದ್ದಲ್ಲಿ ಶ್ರುತಿಯು "ಪ್ರತ್ಯಕ್ಷಂ ಬ್ರಹ್ಮಾಸಿ" ಎಂದು ಏಕೆ "ಪ್ರತ್ಯಕ್ಷಂ" ಎಂಬ ವಿಶೇಷಣವನ್ನು ಬ್ರಹ್ಮನಿಗೆ ಕೊಡುತ್ತಿತ್ತು ? ॥ ೪೯ ॥

ದೇವಾಲಯದಲ್ಲಿನ ಪ್ರತಿಮೆಗೇನೇ ಮಾಲಾರ್ಪಣಾದಿ ಸರ್ವಪೂಜೆಯನ್ನೂ ಮಾಡುತ್ತೇವೆ. ಆ ಪ್ರತಿಮೆಯು ಪ್ರತ್ಯಕ್ಷ (ಕಣ್ಣಿಗೆಕಾಣುವ) ದೇವತೆಯೆಂದು ವ್ಯವಹಾರವಿದೆ. ಪ್ರತಿಮಾಂತರ್ಗತದೇವತೆಯು ಪ್ರತ್ಯಕ್ಷವಲ್ಲವಾದರೂ ಅದಕ್ಕೇನೇ ಪೂಜೆಯೆಂದು ವಿವೇಕಿಯಾದ ಅರ್ಚಕನು ಭಾವಿಸುತ್ತಾನೆ. ಇದರಂತೆ ವಾಯುದೇವನು ಪರಬ್ರಹ್ಮನ ಪೂಜೆಗೆ ಪ್ರತಿಮಾಸ್ಥಾನನಾದ್ದರಿಂದ "ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ" ಎಂದು ಶ್ರುತಿಯು ಹೇಳುತ್ತದೆ. ಹೀಗೆಂದು ವಾದಿರಾಜರ ಅಭಿಪ್ರಾಯ.

ನಮೋ ಬ್ರಹ್ಮಣ ಇತ್ಯಸ್ಮಿನ್ ಪೂರ್ವವಾಕ್ಯೇ ಯತಃ ಶ್ರುತಿಃ ।
ನೋವಾಚೇದಂ ಪದಂ ತೇನಾಽಪ್ರತ್ಯಕ್ಷಂ ಬ್ರಹ್ಮ ತನ್ಮತಂ ॥ ೫೦ ॥

ಯತಶ್ಚ ವಾಯೋರ್ಬ್ರಹ್ಮತ್ವಂ ಪ್ರತ್ಯಕ್ಷಪದಪೂರ್ವಕಂ ।
ಪ್ರಾಯುಂಕ್ತ ಚಾವ್ಯವಹಿತೋತ್ತರವಾಕ್ಯೇ ತತಃ ಶ್ರುತೇಃ ॥

ಭಾವಃ ಸೋಽಯಮಿತಿ ಪ್ರೇಕ್ಷಾವತಾಂ ಸಂಮತಮೇವ ಹಿ ।
ಯದಕ್ಷೇಣೇಕ್ಷ್ಯತೇ ವಸ್ತು ತದೇವಾಹುಸ್ತ ಇತ್ಯಪಿ ॥ ೫೧ ॥

'ನಮೋ ಬ್ರಹ್ಮಣೇ' ಎಂಬ ಪೂರ್ವವಾಕ್ಯದಲ್ಲಿ ಶ್ರುತಿಯು ಈ ಪ್ರತ್ಯಕ್ಷ ಶಬ್ದವನ್ನು ಹೇಳಲಿಲ್ಲವಾದ್ದರಿಂದ ಅದಕ್ಕೆ ಬ್ರಹ್ಮನು ಅಪ್ರತ್ಯಕ್ಷನೆಂದು ಅಭಿಪ್ರಾಯ. 'ನಮಸ್ತೇವಾಯೋ' ಎಂದು ಹೇಳಿ ಅವ್ಯವಹಿತವಾದ ಮುಂದಿನ ವಾಕ್ಯದಲ್ಲಿ "ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ" ಎಂದು ಹೇಳಿರುವದರಿಂದ ಶ್ರುತಿಗೆ ಇದೇ ಅಭಿಪ್ರಾಯನೆಂಬುದು ಪ್ರೇಕ್ಷಾವಂತರ ಮತವೇ ಸರಿ. ಯಾವಕಾರಣದಿಂದ ಪ್ರೇಕ್ಷಾವಂತರು 'ಅಕ್ಷ್ಣೇಣ' ಅಂದರೆ ಇಂದ್ರಿಯದಿಂದ, ಯತ್ = ಯಾವವಸ್ತು, ಈಕ್ಷ್ಯತೇ = ತಿಳಿಯಲ್ಪಡುತ್ತದೆಯೋ ಅದನ್ನೇ "ತೇ" (ನಿನಗೆ) ಎಂದು ಕರೆಯುತ್ತಾರಾದ್ದರಿಂದ ಈ ಪ್ರಮೇಯವು ನಿಶ್ಚಯವಾಯಿತು. ‖ ೫೦-೫೨ ‖

"ನಮೋ ಬ್ರಹ್ಮಣೇ" "ನಮಸ್ತೇ ವಾಯೋ"

ಇಲ್ಲಿ ವಾಯುದೇವನಿಗೆ ನಮಸ್ಕಾರಮಾಡುವಾಗ "ತೇ" "ನಿನಗೆ" ಎಂದು ಹೇಳಿದೆ. ಸಂಬೋಧನೆಗೆ ವಿಷಯವಾದ ವಸ್ತು ಇಂದ್ರಿಯಕ್ಕೆ ಗೋಚರವಾಗಿರಬೇಕು, ಎಂದು ಅಭಿಪ್ರಾಯ. ಇದನ್ನೇ ಮುಂದೆ ವಿಶದಮಾಡುತ್ತಾರೆ.

ನಮಸ್ತೇ ವಾಯುವಿತ್ಯೇವ ಯಾ ವಾಯುಂ ವಕ್ತಿ ಸಾ ಶ್ರುತಿಃ ।
ಯತೋ ಬ್ರಹ್ಮತಯಾ ನಾಹ ತತ್ಪರೋಕ್ಷಮುಭೂದ್ಧಿ ಯತ್ ‖

ಯಾವ ಶ್ರುತಿಯು "ನಮಸ್ತೇ ವಾಯೋ" ಎಂದು ವಾಯುವನ್ನು ಸಂಬೋಧಿಸಿದೆಯೋ ಆ ಶ್ರುತಿಯು ಬ್ರಹ್ಮನನ್ನು ಸಂಬೋಧಿಸಿಲ್ಲ. "ನಮೋ ಬ್ರಹ್ಮಣೇ" ಎಂದು ಮಟ್ಟಿಗೆ ಇದೆ. ಆದುದರಿಂದ ಬ್ರಹ್ಮನು ಪರೋಕ್ಷನೆಂದು ಸಿದ್ಧವಾಯಿತು. ‖ ೫೩ ‖

ಏವಂ ವಿರುದ್ಧಯೋರ್ಕೈಕ್ಯವಾಕ್ ಚ ತತ್ರಶಿಮಾತ್ರವಾಕ್ ।
ಸರ್ವೈರದೃಶ್ಯಸ್ಯ ಹರೇರ್ಯಸ್ಮಾದಚ್ಛಿನ್ನಸನ್ನಿಧಿಃ ‖ ೫೪ ‖

ದೃಶ್ಯೇ ಪ್ರಾಣೇಸ್ತಿ ತತ್ಪ್ರಾಣಃ ಪ್ರತ್ಯಕ್ಷಬ್ರಹ್ಮಶಬ್ದಿತಃ ।
ಇತ್ಯೇವ ವಾಚ್ಯಂ ಸುಧಿಯಾ ನೋಚೇತ್ಸುಕ್ಷ್ಮತಿ ತತ್ಪದಂ ‖ ೫೫ ‖

ಈ ರೀತಿಯಲ್ಲಿ ವಿರುದ್ಧ ಧರ್ಮಗಳುಳ್ಳವಂಗೆ ಐಕ್ಯಹೇಳತಕ್ಕ ವೇದವಾಕ್ಯ ಬ್ರಹ್ಮನಿಗೆ ವಾಯುವು ಪ್ರತಿಮಾಸ್ಥಾನನು ಎಂದು ಹೇಳುವದ ರಲ್ಲಿ ಅಭಿಪ್ರಾಯವು. ಸರ್ವರಿಗೂ ಅದೃಶ್ಯನಾದ ಹರಿಗೆ ನಿರಂತರವಾದ ಸನ್ನಿಧಾನವು ಗೋಚರನಾದ ಪ್ರಾಣನಲ್ಲಿ ಇರುವದರಿಂದ ಅವನು ಪ್ರತ್ಯಕ್ಷ-ಬ್ರಹ್ಮನೆಂದು ಹೇಳಲ್ಪಟ್ಟಿದ್ದಾನೆ. ಹೀಗೆಂದೇ ಉತ್ತಮಬುದ್ಧಿಯುಳ್ಳವನಿಂದ ಹೇಳಲ್ಪಡಬೇಕು. ಇಲ್ಲವಲ್ಲಿ ಆ ಶ್ರುತಿಯು ಅಂದರೆ ಶ್ರುತ್ಯಭಿಮಾನಿ ದೇವತೆಯು ಕೋಪಮಾಡುವಳು. || ೫೪-೫೫ ||

ಅತಃ ಶುದ್ಧತರೋ ವಾಯುಃ ಹರೇಶ್ಚ ಪ್ರಿಯಕಿಂಕರಃ ।
ಅನ್ಯದೇವೋತ್ತಮಶ್ಚೇತಿ ಕಿಂ ನ ವಾಚ್ಯಂ ವಿವೇಕಿನಾ || ೫೬ ||

ಆದ್ದರಿಂದ ವಾಯುದೇವರು ಅತಿ ಶುದ್ಧರಾದವರು. ಪರಮಾತ್ಮನ ಕಿಂಕರರು. ಇತರ ದೇವತೆಗಳಿಗಿಂತ ಉತ್ತಮರು ಎಂಬುದಾಗಿ ವಿವೇಕಿಯಿಂದ ಹೇಳಲ್ಪಡತಕೂಡದೇನು? ಹೇಳಲ್ಪಡಲೇಬೇಕು. || ೫೬ ||

ಮನಸ್ಯನ್ಯದ್ವಚಸ್ಯನ್ಯದ್ಭವೇನ್ನೋಚೇದ್ವಿಚಾರಯ ।
ಹರಿಶ್ಚ ವಾಯೋಃ ಪರಮಃ ಸರ್ವದೇವೋತ್ತಮೋತ್ತಮಃ ||

ಹೀಗಿಲ್ಲದಿದ್ದಲ್ಲಿ ಮನಸ್ಸಿನಲ್ಲೊಂದು ಬಾಯಿಯಲ್ಲಿ ಹೇಳುವದೊಂದು ಆಗುವುದಿಲ್ಲವೆ? ವಿಚಾರಮಾಡು. ವಾಯುದೇವರಿಗಿಂತ ಉತ್ತಮನಾದ ಹರಿಯು ಸರ್ವದೇವೋತ್ತಮೋತ್ತಮನಾದನು ಎಂದು ಸಿದ್ಧವಾಯಿತು.

ಇತಿ ಸಿದ್ಧಮಭೂದ್ದೇವಾಃ ಸರ್ವೇ ಶರ್ವಪುರೋಗಮಾಃ ।
ವಾಯೋರಪ್ಯವಮಾ ವಿಷ್ಣೋರಾಸನ್ ಕಿಂಕರಕಿಂಕರಾಃ || ೫೮ ||

ಇತರ ರುದ್ರಾದಿ ದೇವತೆಗಳೆಲ್ಲರೂ ವಾಯುದೇವಂಗೆ ಕೆಳಗಿನವರಾಗಿ ವಿಷ್ಣುವಿನ ಕಿಂಕರರ ಕಿಂಕರರಾದರು. || ೫೮ ||

ತಸ್ಮಾದಸ್ಮಾಭಿರುಕ್ತಂ ಯತ್ಸಮಸ್ತಂ ತತ್ಸಮೇವ ತತ್ ।
ವಾದಿರಾಜಕೃತೇ ಶ್ರಾವ್ಯೇ ಕಾವ್ಯೇ ಭವ್ಯೇ ಸುಬುದ್ಧಿಭಿಃ ।
ಸೇವ್ಯೇ ಸರಸಭಾರತ್ಯಾಂ ವಿಲಾಸೋಭೂನ್ಮರುತ್ಪ್ರಿಯಃ || ೫೯ ||

ಅನ್ದರಿಂದ ನಾವು ಹೇಳಿದ್ದು ಸರ್ವವೂ ಯಥಾರ್ಥವೇ ಆಯಿತು. ವಾದಿರಾಜರು ರಚಿಸಿದ, ಕೇಳಲು ಇಂಪಾದ, ಸುಂದರವಾದ ಉತ್ತಮ ಬುದ್ಧಿಯುಳ್ಳವರಿಂದ ಸೇವಿಸಲ್ಪಡಲು ಯೋಗ್ಯವಾದ ಸರಸಭಾರತೀಕಾವ್ಯ ದಲ್ಲಿ ಏಳನೆಯ ವಿಲಾಸವು ವಾಯುದೇವರಿಗೆ ಪ್ರಿಯವಾಯಿತು. || ೫೯ ||

ಪರಶುಕ್ಲತ್ರಯವಲ್ಲಿ ಸೇರಿದವರು: ೧ ರಮಾ, ೨ ಬ್ರಹ್ಮ-ವಾಯು, ೩ ಸರಸ್ವತೀ-ಭಾರತೀ, ಈ ಐವರು ಎಂಬ ಪ್ರಮೇಯವನ್ನು ಶ್ರೀಮದಾಚಾರ್ಯರು ಮುಂದಿನ ಶ್ಲೋಕದಲ್ಲಿ ಹೇಳಿರುತ್ತಾರೆ:

ತಸ್ಮಾದೇಕೋ ವಾಯುರೇವ ಧರ್ಮೋ ಭಾಗವತೇ ಸ್ಥಿತಃ(ರಃ) |
ಲಕ್ಷ್ಮೀಃ ಸರಸ್ವತೀ ಚೇತಿ ಪರಶುಕ್ಲತ್ರಯಂ ಸ್ಮೃ(ಶ್ರು)ತಂ ||
ಮ. ಭಾ. ತಾ. ನಿ. ಅ. ೧೮. ಶ್ಲೋ. ೨೮.

ಸರಸಭಾರತೀವಿಲಾಸಕಾವ್ಯದಲ್ಲಿ ಏಳನೆಯ ವಿಲಾಸವು ಪೂರ್ಣವಾಯಿತು.

ಅಷ್ಟಮೋ ವಿಲಾಸಃ

|| ಶ್ರೀಗುರುಭ್ಯೋ ನಮಃ ಹರಿಃ ಓಂ ||

[ತಲವಕಾರ, ಛಾಂದೋಗ್ಯ, ಷಟ್ಪ್ರಶ್ನ, ಬೃಹದಾರಣ್ಯಕ, ಐತರೇಯ, ಈ ಐದು ಉಪನಿಷತ್ತುಗಳಲ್ಲಿನ ಆಖ್ಯಾಯಿಕಾಗಳನ್ನನುವಾದಮಾಡಿ ವಾಯುದೇವರು ಮೂಲರೂಪದಲ್ಲಿಯೂ ಅವತಾರರೂಪಗಳಲ್ಲಿಯೂ ಶುದ್ಧರೆಂದೂ ರುದ್ರಾದಿದೇವತೆಗಳಿಗಿಂತ ಉತ್ತಮರೆಂದೂ ವಾದಿರಾಜರು ಸಮರ್ಥಿಸಿರುತ್ತಾರೆ.]

ಕಿಂ ಚ ಪಂಚೋಪನಿಷದಾಂ ಭಾವಂ ತ್ವಂ ಚ ವಿಚಾರಯ |
ಸುರೇಷು ವಾಯೋಃ ಸದೃಶಂ ಸಂಚಿಂತಯ ನ ಕಂಚನ || ೧ ||

ಅಲ್ಲದೆ ಐದು ಉಪನಿಷತ್ತುಗಳ ಅಭಿಪ್ರಾಯವನ್ನು ವಿಚಾರಮಾಡು. (ಆಮೇಲೆ) ದೇವತೆಗಳಲ್ಲಿ ಯಾರನ್ನೂ ವಾಯುದೇವರಿಗೆ ಸದೃಶನೆಂದು ತಿಳಿಯಬೇಡ. || ೧ ||

ಬಲಿನಾ ಕಲಿನಾ ತೇಷಾಂ ವಿಪರೀತಾ ಕ್ವಚಿತ್ಕೃತಿಃ |
ಸುರಾಣಾಂ ಚ ಭವೇದ್ವೃದ್ಧಿರ್ನತು ವಾಯೋರ್ಮಹಾತ್ಮನಃ ||೨||

ಪ್ರಬಲನಾದ ಕಲಿಯಿಂದ ಆ ದೇವತೆಗಳಿಗೆ ಆಗಾಗ ವಿಪರೀತ-ಬುದ್ಧಿಯು ಆದೀತು. ಮಹಾತ್ಮರಾದ ವಾಯುದೇವರಿಗಾದರೋ ಹೀಗೆ ಎಂದಿಗೂ ಆಗಲಾರದು. || ೨ ||

ವಿಜಿತೇ ದಾನವಕುಲೇ ಹೃದಿಸ್ಥಹರಿತೇಜಸಾ |
ನಿಜಾನುಭಾವಂ ತಂ ಮತ್ವಾ ಶಕ್ರಾದ್ಯಾ ದಿಗಧೀಶ್ವರಾಃ || ೩ ||
ಅಸ್ಮಾಕೋ ವಿಜಯಃ ಸೋಽಯಮಿತ್ಯಹಂ ಚಕ್ರಿರೇ ಕಿಲ ||೪(೧)||

(ಹಿಂದೆ ಒಂದಾನೊಂದು ಕಾಲದಲ್ಲಿ) ದೇವತೆಗಳ ಹೃದಯದಲ್ಲಿ ನೆಲಸಿದ ಹರಿಯ ತೇಜಸ್ಸಿನಿಂದ ದಾನವಕುಲವು ಜಯಿಸಲ್ಪಡುತ್ತಿರಲು (ಅಂದರೆ ಜಯಿಸಲ್ಪಟ್ಟಾಗ) ದಿಗಭಿಮಾನಿಗಳಾದ ಇಂದ್ರಾದಿದೇವತೆಗಳು ಆ ಜಯವು ತಮ್ಮ ಮಹಿಮೆಯಿಂದ ಆದದ್ದೆಂದು ತಿಳಿದು ಈ ವಿಜಯವು ನಮ್ಮದು ಎಂಬುದಾಗಿ ಅಹಂಕಾರಪಟ್ಟರಷ್ಟೆ. || ೩-೪(೧) ||

ಅಸಮರ್ಥಾ ಬಹಿರ್ಯುದ್ಧೇ ಕ್ರೂರಾಸ್ತೇ ತಸ್ಕರಾ ಇವ ||೪(೨)||
ಬುದ್ಧಿಂ ಪ್ರವಿಶ್ಯ ದೇವಾನಾಂ ಚಕ್ರುರ್ವಿಷ್ಣುಪರಾಙ್ಮುಖೀಂ |

ಹೊರಗೆ ಯುದ್ಧಮಾಡಿ ಜಯಿಸಲು ಅಸಮರ್ಥರಾದ ಕ್ರೂರರಾದ ಆ ದೈತ್ಯರು ಕಳ್ಳರಂತೆ ದೇವತೆಗಳ ಬುದ್ಧಿಯನ್ನು ಪ್ರವೇಶಮಾಡಿ ಅದನ್ನು ವಿಷ್ಣುವಿನಿಂದ ವಿಮುಖವಾಗಿ ಮಾಡಿದರು. (ಅಂದರೆ ಸರ್ವಕರ್ತನಾದ ಪರಮಾತ್ಮನು ನಮ್ಮಲ್ಲಿ ನಿಂತು ಈ ಜಯವನ್ನು ನಮಗೆ ತಂದು ಕೊಟ್ಟಿದ್ದಾನೆ, ಎಂಬುದನ್ನು ಮರೆತು ತಾವೇ ಸ್ವತಂತ್ರವಾಗಿ ಜಯಿಸಿದ ವೆಂಬ ಬುದ್ಧಿಯನ್ನುಂಟುಮಾಡಿದರು, ಎಂದಭಿಪ್ರಾಯ. || ೪-೫(೧) ||

ತದಾ ಮಹಾಕಾರುಣಿಕೋ ಹರಿರ್ಯಕ್ಷವಪುರ್ಧರಃ || ೫ ||
ನಿಜಾಂ ತನುಂ ಸಮಾಚ್ಛಾದ್ಯ ಪ್ರಾದುರಾಸೀತ್ಕಿಲಾಂತಿಕೇ |
ತಂ ಜ್ಞಾತುಂ ಪ್ರೇಷಯಾಮಾಸುರಗ್ನಿಂ ತಂ ಚ ಪುರೈವ ಸಃ ||೬||

ಕೋಽಸಿ ತ್ವಮಿತಿ ಪಪ್ರಚ್ಛ ಸ ಚಾಹಂಕಾರತೋಽಬ್ರವೀತ್ |
ಅಹಮಗ್ನಿರ್ಮಹಾನಸ್ಮಿ ದಹೇಯಮಖಿಲಂ ಜಗತ್ || ೭ ||

ಆಗ ಮಹಾಕರುಣಾಶಾಲಿಯಾದ ಹರಿಯು ತನ್ನ ನಿಜವಾದ ರೂಪವನ್ನು ಮರೆಮಾಡಿಕೊಂಡು ಯಕ್ಷರೂಪವನ್ನು ತಾಳಿ ಆ ದೇವತೆಗಳ ಸಮೀಪದಲ್ಲಿ ಪ್ರಾದುರ್ಭವಿಸಿದನಷ್ಟೆ. ಆ ಯಕ್ಷನು ಯಾತೆಂದು ತಿಳಿಯಲು ದೇವತೆಗಳು ಯಕ್ಷನ ಬಳಿಗೆ ಅಗ್ನಿಯನ್ನು ಮೊದಲು ಕಳುಹಿಸಿದರು. ಆ ಯಕ್ಷನಾದರೋ (ಅಗ್ನಿಯು ಪ್ರಶ್ನೆಮಾಡುವುದಕ್ಕೆ ಮೊದಲೇ) ನೀನು ಯಾರೆಂದು ಅಗ್ನಿಯನ್ನು ಕೇಳಿದನು. ಆಗ ಅಗ್ನಿಯು ಅಹಂಕಾರದಿಂದ ನಾನು ಮಹಿಮಾವಂತನಾದ ಅಗ್ನಿಯು. ಈ ಸಮಸ್ತ ಜಗತ್ತನ್ನೂ ಸುಟ್ಟೇನು ಅಂದನು. || ೫(೨) ೬-೭ ||

ಇತಿ ತಸ್ಯ ವಚಃ ಶ್ರುತ್ವಾ ಹರ್ಸ ಶುಷ್ಕತೃಣಂ ತದಾ |
ನಿಧಾಯ ಪುರತೋ ಯಕ್ಷೋ ದಹೇದಮಿತಿ ಚಾಬ್ರವೀತ್ || ೮ ||

ಹೀಗೆಂದ ಮಾತನ್ನು ಕೇಳಿ ಸ್ವಲ್ಪನಗುತ್ತಾ ಒಣಗಿದ ಒಂದು ಹುಲ್ಲು ಕಡ್ಡಿಯನ್ನು ಎದುರಿಗಿಟ್ಟು ಇದನ್ನು ಸುಡು ಎಂದು ಯಕ್ಷನು ಹೇಳಿದನು.

ಅಗ್ನಿಶ್ಚ ಪ್ರಜ್ವಲನ್ ವೇಗಾದಭ್ಯೇತ್ಯ ನ ಶಶಾಕ ತತ್ |
ದಗ್ಧುಂ ಕೃತಪ್ರಯತ್ನೋಽಪಿ ತತೋ ನಿವವೃತೇ ಭಿಯಾ || ೯ ||

ಅಗ್ನಿಯು ಪ್ರಜ್ವಲಿಸುತ್ತಾ ವೇಗದಿಂದ ಹುಲ್ಲುಕಡ್ಡಿಯ ಸಮೀಪಕ್ಕೆ ಹೋಗಿ ಅದನ್ನು ಸುಡಲು ಪ್ರಯತ್ನಪಟ್ಟನಾದರೂ ಸಮರ್ಥನಾಗಲಿಲ್ಲ. ನಂತರ ಭಯದಿಂದ ಹಿಂತಿರುಗಿದನು. || ೯ ||

ಕೋಣವಾಯುಂ ತತೋದೇವಾಸ್ತ್ವಂ ಯಾಹೀತ್ಯವದನ್ ಕಿಲ |
ತಂಚ ಪಪ್ರಚ್ಛ ಯಕ್ಷೋಽಸೌ ಕಾ ಶಕ್ತಿಸ್ತ್ವಯಿ ವರ್ತತೇ ||೧೦||

ಆಮೇಲೆ ದೇವತೆಗಳು ಕೋಣವಾಯುವನ್ನು "ನೀನು ಹೋಗಿ ಯಕ್ಷನು ಯಾರೆಂದು ತಿಳಿದು ಬಾ" ಎಂದು ಹೇಳಿ ಯಕ್ಷನ ಬಳಿಗೆ ಕಳುಹಿಸಿಕೊಟ್ಟರು. ಆ ವಾಯುವನ್ನೂ ಕೂಡ ಯಕ್ಷನು ನಿನ್ನಲ್ಲಿ ಏನು ಶಕ್ತಿ ಇದೆ? ಎಂದು ಪ್ರಶ್ನೆಮಾಡಿದನು. (ಕೋಣವಾಯು = ದಿಕ್ಪಾಲಕ ವಾಯು) || ೧೦ ||

ತದಾ ವಾಯುರಹಂಕಾರಾಚ್ಚಾಲಯೇಯಂ ಗಿರೀನಿತಿ ।
ಉವಾಚ ಕಿಲ ತಸ್ಯಾಗ್ರೇಽಸ್ಯಾಧಾಯ ತೃಣಮೇವ ತತ್ ॥ ೧೧ ॥

ಚಾಲಯೇದಮಿತಿ ಪ್ರೋಕ್ತೋ ವೇಗಾದಾವೃತ್ಯ ಸರ್ವತಃ ।
ವಾಯುಃ ಪ್ರಯತಮಾನೋಽಪಿ ನಾಶಕ್ನೋತ್ತಸ್ಯ ಚಾಲನೇ ॥೧೨॥

ಆಗ ಕೋಣವಾಯುವು ಅಹಂಕಾರದಿಂದ ಬೆಟ್ಟಗಳನ್ನಾದರೂ ಅಲ್ಲಾಡಿಸೇನು ಅಂದನು. ಅವನೆದುರಿಗೂ ಕೂಡ ಅದೇ ಹುಲ್ಲುಕಡ್ಡಿಯನ್ನಿಟ್ಟು ಇದನ್ನು ಚಲಿಸು ಎಂದು ಯಕ್ಷನು ನುಡಿದಾಗ ಕೋಣ-ವಾಯುವು ಬಹುವೇಗದಿಂದ ಸುತ್ತಲೂ ಆವರಿಸಿಕೊಂಡು ಬಹುಪ್ರಯತ್ನ ಮಾಡಿದರೂ ಅದನ್ನು ಚಲಿಸುವದರಲ್ಲಿ ಸಮರ್ಥನಾಗಲಿಲ್ಲ. ॥ ೧೧-೧೨ ॥

ಸೋಽಪ್ಯಗ್ನಿವಲ್ಲಜ್ಜಿತಃ ಸನ್ ತತೋ ನಿವವೃತೇ ಕಿಲ ।
ತತಃ ಸರ್ವೇ ಸುರಾಃ ಶಕ್ರಂ ಯಾಹೀತ್ಯೂಚುಸ್ತದಂತಿಕಂ ॥೧೩॥

ತಸ್ಯಾಗಮನತಃ ಪೂರ್ವಂ ಕುಶಲೋಽಸೌ ವಿಚಾರಯೇತ್ ।
ಮಾಮೇವ ಚ ನ ಮತ್ತೋಽಯಂ ಶ್ರೋತುಂ ಯೋಗ್ಯೋ
ಮದಾಂಧಧೀಃ ॥ ೧೪ ॥

ಇತಿ ಮತ್ವಾ ಸ ಯಕ್ಷೋಽಪಿ ಸಾಕ್ಷಾಚ್ಛಕ್ರಸ್ಯ ಮಾತರಂ ।
ಗುರುಂ ಚ ಪಾರ್ವತೀಂ ತತ್ರ ನಿಧಾಯಾಂತರ್ದಧೇ ಕಿಲ ॥ ೧೫ ॥

ಅವನೂ ಕೂಡ ನಾಚಿಕೆಗೊಂಡು ಅಗ್ನಿಯಂತೆ ಹಿಂತಿರುಗಿದನಷ್ಟೆ. ನಂತರ ದೇವತೆಗಳೆಲ್ಲಾ ಸೇರಿ ಇಂದ್ರನನ್ನು "ನೀನು ಯಕ್ಷನ ಬಳಿಗೆ ಹೋಗು" ಎಂದು ಹೇಳಿದರು. ಆಗ ಇಂದ್ರನು ಕುಶಲನಾದ್ದರಿಂದ ನೀನು ಯಾರೆಂದು ನನ್ನನ್ನೇ ಪ್ರಶ್ನೆಮಾಡಿಯಾನು. ಆದರೆ ಮದದಿಂದ ಬುದ್ಧಿ ಕೆಟ್ಟ ಈ ಉನ್ಮತ್ತನು ನನ್ನಿಂದ ಸಾಕ್ಷಾತ್ತಾಗಿ ತತ್ವವನ್ನು ತಿಳಿಯಲು ಯೋಗ್ಯನಲ್ಲವೆಂದು ತಿಳಿದು, ಆ ಯಕ್ಷರೂಪಿಯಾದ ಪರಮಾತ್ಮನು ಇಂದ್ರನ ಸದ್ಯತಾಯಿಯೂ ಗುರುವೂ ಆದ ಪಾರ್ವತೀದೇವಿಯನ್ನು ಅಲ್ಲಿ ಇಟ್ಟು ಅಂತರ್ಧಾನನಾದನಷ್ಟೆ. ॥ ೧೩-೧೫ ॥

ಮಾತಾ ಸಾ ಪಂಕಿಲಂ ಪುತ್ರಮಿವ ವಿದ್ರಾವ್ಯ ತನ್ಮದಂ ।
ಸಾಕ್ಷಾತ್ತಚ್ಛಿಷ್ಯಸ್ಯೇಂದ್ರಸ್ಯ ವಿಜ್ಞಾನಂ ದಾತುಮರ್ಹತಿ ॥ ೧೬ ॥

ಇತ್ಯುಮಾಂ ತತ್ರ ಸಂಸ್ಥಾಪ್ಯ ಯಕ್ಷೋಽಲಕ್ಷ್ಯೋಽಭವತ್ಕಿಲ ।
ಸಾ ಚ ಯೂಯಂ ಹೃದಿಸ್ಥಸ್ಯ ಹರೇರಸುರವೈರಿಣಃ ॥ ೧೭ ॥

ತೇಜಸೈವಾಸುರಾನ್ ಸರ್ವಾನ್ ಯುದ್ಧೇ ಜಯಥ ದುರ್ಜಯಾನ್ ।
ನ ತು ಸ್ವಶಕ್ತ್ಯಾ ಯಚ್ಛಕ್ರ ಹರಿಣೋಪೇಕ್ಷಿತೇ ಸತಿ ॥ ೧೮ ॥

ತೃಣಚಾಲನಶಕ್ತಿಶ್ಚ ಯತೋ ನಾಸೀದ್ದಿಗೀಶಯೋಃ ।
ಅತೋ ಯೂಯಮಹಂಕಾರಂ ತ್ಯಕ್ತ್ವಾ ಭಜತ ತಂ ಪ್ರಭುಂ ॥

ತಾಯಿಯಾದ ಉಮಾದೇವಿಯು ಕೆಸರಿನಿಂದ ಮಲಿನನಾದ ಪುತ್ರನನ್ನು ಹೇಗೋಹಾಗೆ ಇಂದ್ರನ ಆ ಮದವನ್ನು ಹೋಗಲಾಡಿಸಿ, ಶಿಷ್ಯನಾದ ಅವನಿಗೆ ಸಮೀಚೀನವಾದ ಜ್ಞಾನವನ್ನು ಉಪದೇಶಿಸಲು ಅರ್ಹಳು. ಎಂಬೀ ಅಭಿಪ್ರಾಯದಿಂದ ಆ ಉಮಾದೇವಿಯನ್ನು ಅಲ್ಲಿ ನಿಲ್ಲಿಸಿ ಯಕ್ಷನು ಅದೃಶ್ಯನಾದನಲ್ಲವೇ. ಆಕೆಯಾದರೋ ಹೀಗೆ ಉಪದೇಶಮಾಡಿದಳು. "ಎಲೈ ದೇವತೆಗಳಿರಾ, ಜಯಿಸಲಸಾಧ್ಯರಾದ ಎಲ್ಲಾ ಅಸುರರನ್ನೂ (ನಿಮ್ಮ ಹೃದಯದಲ್ಲಿ ನೆಲಸಿದ) ದೈತ್ಯಾರಿಯಾದ ಹರಿಯ ಪರಾಕ್ರಮದಿಂದಲೇ ನೀವು ಜಯಿಸಿದ್ದೀರಿ. ನಿಮ್ಮ ಸ್ವಶಕ್ತಿಯಿಂದಲ್ಲ. ಏಕೆಂದರೆ– ಹರಿಯು ಉಪೇಕ್ಷಿಸಿದ್ದರಿಂದ ಹುಲ್ಲುಕಡ್ಡಿಯನ್ನು ಸುಡಲು ಮತ್ತು ಚಲಿಸಲು ಕೂಡ ದಿಕ್ಪಾಲಕರಿಬ್ಬರಿಗೆ ಶಕ್ತಿ ಇಲ್ಲದೇಹೋಯಿತು. ಆದ್ದರಿಂದ ನೀವು ಅಹಂಕಾರವನ್ನು ಬಿಟ್ಟು ಆ ಪ್ರಭುವನ್ನು ಭಜಿಸಿರಿ. ॥ ೧೬-೧೯ ॥

ಇತ್ಯುಕ್ತ್ವಾ ಪಾರ್ವತೀ ಸಾ ಚ ತತ್ರೈವಾಂತರ್ದಧೇ ಕಿಲ ।
ಶಕ್ರೋಽಪ್ಯಾಗತ್ಯ ದೇವಾನಾಮುಕ್ತ್ವಾ ಬೋಧಮುಮೋದಿತಂ ॥

ಶಮಯಾಮಾಸ ದೇವಾನಾಮಹಂಕಾರಂ ಮಹಾಮತಿಃ ।
ತದಾ ಬ್ರಹ್ಮಾ ಚ ವಾಯುಶ್ಚ ಶಾಂತೌ ಹರಿಸಮೀಪಗೌ ॥ ೨೧ ॥

ಅಸುರಾಪಾದಿತಮದಾತ್ ಬಹಿರ್ಭೂತೌ ಕಿಲ ಪ್ರಭೋ ।
ಏವಂ ಚಾಸುರತೋ ಬಾಧಃ ಕಥಂ ಸ್ಯಾದನಯೋರ್ವದ ॥ ೨೨ ॥

ಈಪ್ರಕಾರವಾಗಿ ಉಪದೇಶಮಾಡಿ ಆ ಪಾರ್ವತಿಯೂ ಕೂಡ ಅಲ್ಲಿಯೇ ಅದೃಶ್ಯಳಾದಳು. ಬಹುಬುದ್ಧಿಯುಳ್ಳ ಶಕ್ರನಾದರೋ ಅಲ್ಲಿಂದ ಹಿಂತಿರುಗಿ ಬಂದು ಉಮಾದೇವಿಯಿಂದ ಉಪದಿಷ್ಟವಾದ ತತ್ತ್ವಜ್ಞಾನವನ್ನು ದೇವತೆಗಳಿಗೆ ಬೋಧಿಸಿ ಆ ದೇವತೆಗಳ ಅಹಂಕಾರವನ್ನು ಶಮನಮಾಡಿದನು. ಆಗ ಬ್ರಹ್ಮನೂ ವಾಯುವೂ ಇವರಿಬ್ಬರೂ ಹರಿಯ ಸಮೀಪದಲ್ಲಿ ಮನಸ್ಸಮಾಧಾನವುಳ್ಳವರಾಗಿದ್ದರು. ಅಸುರರಿಂದ ಉಂಟಾದ ಅಹಂಕಾರದಿಂದ ದೂರರಾಗಿದ್ದರು. (ಅಂದರೆ ಇತರದೇವತೆಗಳಲ್ಲಿ ಹೇಗೆ ಅಸುರರು ಪ್ರವೇಶಮಾಡಿದರೋ ಹಾಗೆ ಹರಿಯ ಪೂರ್ಣಾನುಗ್ರಹವುಳ್ಳ ಈ ಇಬ್ಬರಲ್ಲಿ ಪ್ರವೇಶಮಾಡಲು ಅವರಿಗೆ ಸಾಧ್ಯವಾಗಲಿಲ್ಲವೆಂದಭಿಪ್ರಾಯ. ॥ ೨೦-೨೨ ॥

ರುದ್ರೋ ಬಹಿಸ್ಥರೂಪೇಣೈವಾಜಿತೋಽಪ್ಯಸುರೌಜಸಾ ।
ಸುರಾಣಾಂ ಹೃದ್ಗರೂಪೇಣ ತ್ವಾಸೀದ್ದೈತ್ಯಪರಾಜಿತಃ ॥ ೨೩ ॥

ರುದ್ರನು ಹೊರಗಿನ ರೂಪದಿಂದ ಅಸುರರ ಪರಾಕ್ರಮದಿಂದ ಜಯಿಸಲ್ಪಡದೇ ಇದ್ದರೂ ದೇವತೆಗಳ ಮನಸ್ಸಿನಲ್ಲಿರುವ ತನ್ನರೂಪದಿಂದ ದೈತ್ಯರಿಂದ ಪರಾಜಿತನಾದನು. ಇದರ ಅಭಿಪ್ರಾಯ: ರುದ್ರನು ಮನಸ್ಸಿಗೆ ಅಭಿಮಾನಿ. ಅಸುರರು ದೇವತೆಗಳ ಮನಸ್ಸನ್ನು ಪ್ರವೇಶಿಸಿದಾಗ ಅವರನ್ನು ಮನಸ್ಸಿನೊಳಗೆ ಬರದಂತೆ ತಡೆದು ದೇವತೆಗಳ ಮನಸ್ಸು ಕೆಡದಂತೆ ಮಾಡಲು ಶಕ್ತನಾಗಲಿಲ್ಲ. ಆದ್ದರಿಂದ ಅಸುರರು ದೇವತೆಗಳ ಮನಸ್ಸಿನಲ್ಲಿರುವ ಮನೋನಿಯಾಮಕನಾದ ರುದ್ರನನ್ನು ಜಯಿಸಿ ಒಳಗೆ ಪ್ರವೇಶಮಾಡಿ ದೇವತೆಗಳ ಬುದ್ಧಿಯನ್ನು ಕೆಡಿಸಿದರು. ॥ ೨೩ ॥

ಇತ್ಥಂ (ಸರ್ವೋತ್ತಮೋ)ಸರ್ವೇಶ್ವರೋ ವಿಷ್ಣುರ್ದುರಹಂಕಾರಿಣಃ ಸುರಾನ್ ।
ತೃಣೇನೈವ ತೃಣೀಕೃತ್ಯ ಚಕ್ರೇ ಭಗ್ನಮನೋರಥಾನ್ ॥ ೨೪ ॥

ಈರೀತಿಯಲ್ಲಿ ಸರ್ವೇಶ್ವರನಾದ (ಸರ್ವೋತ್ತಮನಾದ) ವಿಷ್ಣುವು ದುರಹಂಕಾರಿಗಳಾದ ದೇವತೆಗಳನ್ನು ಒಂದು ಕ್ಷಣದಿಂದಲೇ ತೃಣೀಕರಿಸಿ (ಅಲ್ಪರನ್ನಾಗಿಮಾಡಿ) ಅವರನ್ನು ಭಗ್ನಮನೋರಥರನ್ನಾಗಿ ಮಾಡಿದನು.

ಉಮಾಮುಖೇನ ಸತ್ತತ್ತ್ವಂ ಪ್ರಬೋಧ್ಯ ವಿಬುಧರ್ಷಭಾನ್ ।
ಅಖಂಡಯದ್ಗರ್ವಮೇಷಾಮಿತ್ಯಾಹೋಪನಿಷಚ್ಛ್ರುತಾ ॥ ೨೫ ॥

ಸ್ಪಷ್ಟಂ ತಲವಕಾರಾಖ್ಯಾ ತಸ್ಮಾತ್ಸರ್ವಸುರಾ ಅಪಿ ।
ಮುಖ್ಯಪ್ರಾಣಸ್ಯ ನ ಸಮಾಃ ಕಥಂ ತತ್ಸ್ವಾಮಿನೋ ಹರೇಃ ॥೨೬॥
ಸಮಾಸ್ಯುರುತ್ತಮತ್ವಂ ತು ದೂರಾಪಾಸ್ತಂ ದಿವೌಕಸಾಂ ।

ಉಮಾಮುಖದಿಂದ ಆ ದೇವಶ್ರೇಷ್ಠರಿಗೆ ಜ್ಞಾನೋಪದೇಶವನ್ನು ಮಾಡಿಸಿ ಇವರ ಗರ್ವವೆಲ್ಲವನ್ನೂ ಖಂಡಿಸಿದನು ಎಂದು ಮಂಗಳಕರವಾದ ತಲವಕಾರ ಉಪನಿಷತ್ತು ಸ್ಪಷ್ಟವಾಗಿ ಹೇಳುತ್ತದೆ. ಆದ್ದರಿಂದ ಸರ್ವ ದೇವತೆಗಳೂ ಕೂಡ ಮುಖ್ಯಪ್ರಾಣನಿಗೇ ಸಮರಲ್ಲವೆಂದಮೇಲೆ ಆತನ ಸ್ವಾಮಿಯಾದ ಹರಿಗೆ ಹೇಗೆ ಸಮರಾದಾರು? ಆ ದೇವತೆಗಳು ಹರಿಗಿಂತ ಉತ್ತಮರೆಂಬುದು ಸುತರಾಂ ದೂರವಾಯಿತು. ॥ ೨೫-೨೬(೧) ॥

ಬಹಿರ್ಜಯಸ್ತು ಕೃಷ್ಣಸ್ಯ ಯೇಷಾಮಾಭೂದ್ರಣಾಂಗಣೇ ॥
ಅಂತಸ್ತ್ವಸುರಸಂಘೇನ ತೇಽಪಿ ದೇವಾಃ ಪರಾಜಿತಾಃ ।
ತಸ್ಮಾದಸುರಸಂಘಸ್ಯ ವಿಜಯೋ ಕ್ವ ಜಯೈಷಿಣಾಂ ॥ ೨೭ ॥
ಅಪಿಶಕ್ತಿರ್ಮುಖ್ಯವಾಯೋರಿತರೇಷಾಂ ದಿವೌಕಸಾಂ ।

ಯಾವ ದೇವತೆಗಳಿಗೆ ಕೃಷ್ಣನ ತೇಜಸ್ಸಿನಿಂದ ರಣರಂಗದಲ್ಲಿ ಹೊರಗೆ ಚೆನ್ನಾಗಿ ಜಯವಾಯಿತೋ ಆ ದೇವತೆಗಳೂ ಕೂಡ ಮನಸ್ಸಿನಲ್ಲಿ ಅಸುರ-ಸಮೂಹದಿಂದ ಪರಾಜಿತರಾದರು. ಆದ್ದರಿಂದ ಮುಖ್ಯವಾಯುವಿನಿಂದ ಭಿನ್ನರಾದ, ಜಯವನ್ನು ಅಪೇಕ್ಷಿಸುವ ಆ ದೇವತೆಗಳಿಗೆ ಅಸುರಸಂಘವನ್ನು ಸ್ವತಂತ್ರವಾಗಿ ಜಯಿಸುವ ಸಾಮರ್ಥ್ಯವು ಎಲ್ಲಿಯದು?

ಮನಆದೀಂದ್ರಿಯಾಧೀಶಾಃ ಪುರಾ ದೇವಾಃ ಶಿವಾದಯಃ ॥೨೮॥

ಅಹಂ ಶ್ರೇಯಾನಹಂ ಶ್ರೇಯಾನಿತ್ಯಹಂ ಚಕ್ರಿರೇ ಕಿಲ ।
ಬ್ರಹ್ಮಾಪರೋಕ್ಷಿಣಾಮೇಷಾಂ ಸರ್ವಜ್ಞಾನಾಂ ಮಹಾತ್ಮನಾಂ ॥

ಕಥಂ ಸ್ವಭಾವಶುದ್ಧಾನಾಮಹಂಕಾರೋ ಭವೇದಯಂ ।
ವಿನಾ ಸ್ವಹೃದಿ ಸಂವಿಷ್ಟಂ ಕಲಿಂ ಕಲಹಕಾರಿಣಂ ॥ ೩೧ ॥

ಮನಸ್ಸೇ ಮೊದಲಾದ ಇಂದ್ರಿಯಗಳಿಗೆ ನಾಥರಾದ ಶಿವನೇ ಮೊದಲಾದ ದೇವತೆಗಳು ಹಿಂದೆ ಒಂದಾನೊಂದು ಕಾಲದಲ್ಲಿ ನಾನು ಶ್ರೇಷ್ಠನು, ನಾನು ಶ್ರೇಷ್ಠನು ಎಂದೀಪ್ರಕಾರವಾಗಿ ಅಹಂಕಾರಪಟ್ಟರಷ್ಟೆ. ಬ್ರಹ್ಮಾ-ಪರೋಕ್ಷಿಗಳಾದ, ಸರ್ವಜ್ಞರಾದ, ಸ್ವಭಾವಶುದ್ಧರೂ ಆದ ಈ ಮಹಾತ್ಮರಿಗೆ ಹೃದಯದಲ್ಲಿ ಪ್ರವೇಶಿಸಿದ ಕಲಹಕಾರಕನಾದ ಕಲಿಯ ವ್ಯಾಪಾರವಿಲ್ಲದೆ ಇದು ಹೇಗೆ ಆದೀತು? ॥ ೨೯-೩೧ ॥

ಬಲಿನಾ ಕಲಿನಾ ತಸ್ಮಾನ್ಮತಿರನ್ಯಾದೃಶೀಕೃತಾ ।
ಇತಿ ವಾಕ್ಯಂ ಯಸ್ತು ವೇದ ತತೋಭಕ್ತಿಯುತೋ ಭವೇತ್ ॥
(ಗತೇದೇವಾಸ್ತತೋ ಭಕ್ತಿಯುತೋಃಭವನ್) ॥ ೩೨ ॥

ಅದ್ಯಾಪಿ ಭೂತಾವಿಷ್ಟೋ ಯಃ ಸ ದ್ವೇಷ್ಟಿ ಪಿತರಂ ಕಿಲ ।
ತದಾ ಪ್ರಾಣಃ ಸುರಗುರುಃ ಸ್ವೀಯಾನಾಂ ಬುದ್ಧಿಶುದ್ಧಯೇ ॥

ಕಲೇಶ್ಚ ಕಾಲನೇ ಶಕ್ತಸ್ತತ್ರೋಪಾಯಮಚೀಕರತ್ ।
ಸ್ವೇನೈವ ಸ್ವಮಹಿಮ್ನ್ಯುಕ್ತೇ ಸ್ಯಾದಹಂಕಾರಿತಾ ಮಮ ॥ ೩೪ ॥

ಚತುರ್ಮುಖಮುಖೇನೈವ ವಾಚಯಿಷ್ಯಾಮಿ ಮೇ ಬಲಂ ।
ಯಃ ಪೂರ್ವಜನ್ಮನಿ ಪ್ರಾಣಃ ಸ ಹಿ ವೇತ್ತಿ ಬಲಂ ಮಮ ॥೩೫॥

ಶ್ರದ್ಧಾಮುದ್ಧಾ ಕರಿಷ್ಯಂತಿ ತದ್ವಾಕ್ಯೇ ಚ ಸುರಾ ಇಮೇ ।
ಇತಿ ಮತ್ವಾ ಸುರೈಃ ಸಾಕಂ ಯಯೌ ಲೋಕಂ ಪ್ರಜಾಪತೇಃ ॥

ಆದ್ದರಿಂದ ಬಲಿಷ್ಠನಾದ ಕಲಿಯಿಂದ ಇವರ ಬುದ್ಧಿಯು ಬೇರೆವಿಧ ವಾಗಿ ಮಾಡಲ್ಪಟ್ಟಿತು ಎಂದು ಹೇಳಬೇಕು. ಹೀಗೆ ಯಾವನು ತಿಳಿಯು ವನೋ, ಆ ತಿಳಿವಳಿಕೆಯಿಂದ ವಾಯುದೇವರಲ್ಲಿ ಭಕ್ತಿಯುಳ್ಳವನಾದಾನು. ಅಥವಾ ಕಲಿಯು ಹೋದಮೇಲೆ ಮನಆದಿಇಂದ್ರಿಯಾಭಿಮಾನಿದೇವತೆ ಗಳು ಮುಖ್ಯಪ್ರಾಣನಲ್ಲಿ ಭಕ್ತಿಯುಳ್ಳವರಾದರು. ಈಗಲೂ ಪಿಶಾಚದಿಂದ ಆವಿಷ್ಟನಾದವನು ತಂದೆಯನ್ನು ಕೂಡ ದ್ವೇಷಿಸುತ್ತಾನಲ್ಲವೇ ? ಈ ರೀತಿ ಯಲ್ಲಿ "ನಾನು ಶ್ರೇಷ್ಠನು, ನಾನು ಶ್ರೇಷ್ಠನು" ಎಂದು ದೇವತೆಗಳು ಅಹಂಕಾರಪಟ್ಟಾಗ, ತನ್ನವರಾದ ದೇವತೆಗಳ ಬುದ್ಧಿಯನ್ನು ಶುದ್ಧಿಗೊಳಿಸು ವದಕ್ಕೆ ಸುರಗುರುವಾದ ಮುಖ್ಯಪ್ರಾಣನು ಕಲಿಯನ್ನು ನಿಗ್ರಹಿಸಲು ತಾನು ಶಕ್ತನಾಗಿದ್ದರೂ ಈ ಮುಂದೆ ಹೇಳುವ ಉಪಾಯವನ್ನು ಮಾಡಿದನು. "ನಾನೇ ನನ್ನ ಮಹಿಮೆಯನ್ನು ಹೇಳಿಕೊಂಡರೆ ನನಗೆ ಅಹಂಕಾರ ವಾದೀತು. ಚತುರ್ಮುಖಬ್ರಹ್ಮನಿಂದ ನನ್ನ ಬಲವನ್ನು ಹೇಳಿಸುತ್ತೇನೆ. ಪೂರ್ವಜನ್ಮದಲ್ಲಿ ಅಂದರೆ ಪೂರ್ವಬ್ರಹ್ಮಕಲ್ಪದಲ್ಲಿ ಮುಖ್ಯಪ್ರಾಣನಾಗಿದ್ದ ಆ ಚತುರ್ಮುಖಬ್ರಹ್ಮನು ನನ್ನ ಬಲವನ್ನು ಬಲ್ಲನು. ಆತನ ಮಾತಿನಲ್ಲಿ ಈ ದೇವತೆಗಳು ಚನ್ನಾಗಿ ಶ್ರದ್ಧೆಮಾಡುವರು" ಎಂದು ತಿಳಿದು ಅವರ ಸಹಿತವಾಗಿ ಬ್ರಹ್ಮಲೋಕಕ್ಕೆ ಹೋದನು. || ೩೨-೩೬ ||

ಸ ಚ ಪೃಷ್ಟಃ ಸುರೈಃ ಸರ್ವೈಃ ಪ್ರೋವಾಚ ಪ್ರಹಸನ್ ಕಿಲ |
ಯಸ್ಮೋತ್ಕ್ರಾಂತೇ ಪ್ರವೇಶೇ ಚ ದೇಹಃ ಪತತಿ ತಿಷ್ಠತಿ || ೩೭ ||

ಸ ಏವ ಸರ್ವದೇವಾನಾಂ ಗುಣೈಃ ಶ್ರೇಷ್ಠೋ ಭವಿಷ್ಯತಿ |
ವಯಸಾ ಚ ಸ ಏವೈಕಃ ಸರ್ವಜ್ಯೇಷ್ಠೋ ಭವಿಷ್ಯತಿ || ೩೮ ||

ಆ ಬ್ರಹ್ಮದೇವರು ಎಲ್ಲಾ ದೇವತೆಗಳಿಂದಲೂ "ನಮ್ಮಲ್ಲಿ ಯಾರು ಶ್ರೇಷ್ಠರು ಎಂದು" ಪ್ರಶ್ನೆಮಾಡಿಸಿಕೊಳ್ಳಲ್ಪಟ್ಟಾಗ ಮಂದಹಾಸದಿಂದ ಹೀಗೆ ನುಡಿದರಲ್ಲವೇ. "ಯಾರು ಎದ್ದುಹೋದರೆ ದೇಹವು ಬೀಳುತ್ತದೆಯೋ ಯಾರು ಪ್ರವೇಶಮಾಡಿದರೆ ಅದು ನಿಲ್ಲುತ್ತದೆಯೋ ಆ ದೇವನು ದೇವತೆ

ಗಳೆಲ್ಲೆಲ್ಲಾ ಗುಣದಿಂದಲೂ ವಯಸ್ಸಿನಿಂದಲೂ ಸರ್ವಶ್ರೇಷ್ಠನಾಗುತ್ತಾನೆ." ಅಂದರೆ ಅವನನ್ನು ಸರ್ವಶ್ರೇಷ್ಠನೆಂದು ತಿಳಿಯಿರಿ, ಎಂದಭಿಪ್ರಾಯ.

ಇತ್ಥಮುಕ್ತಾಃ ಶರೀರಾತ್ತೇ ನಿರೀಯುಃ ಕ್ರಮಶಃ ಸುರಾಃ ।
ತದಾ ಪ್ರಾಣಸ್ಯ ಬಲತೋ ದೇಹೋಽಸೌ ನಾಪತತ್ಕಿಲ ॥ ೩೯ ॥

ಈ ಪ್ರಕಾರವಾಗಿ ಹೇಳಿಸಿಕೊಂಡ ದೇವತೆಗಳು ಕ್ರಮವಾಗಿ ದೇಹದಿಂದ ಹೊರಗೆ ಬಂದರು. ಆಗ ಮುಖ್ಯಪ್ರಾಣನ ಬಲದಿಂದ ದೇಹವು ಬೀಳಲಿಲ್ಲವಷ್ಟೆ. ॥ ೩೯ ॥

ಚಕ್ಷುರ್ಮಾತ್ರಂ ನೇಕ್ಷತೇರ್ಥಂ ಚಕ್ಷುರ್ದೇವೇ ಗತೇ ಸತಿ ।
ದೇಹೋಽಂಧದೇಹವಜ್ಜೀವನ್ನೇವ ಪ್ರಾಣಬಲಾದಭೂತ್ ॥ ೪೦ ॥

ಚಕ್ಷುರಭಿಮಾನಿದೇವತೆಯು ಹೊರಗೆ ಬಂದಾಗ ಕಣ್ಣುಮಟ್ಟಿಗೆ ಪದಾರ್ಥವನ್ನು ನೋಡದೆ ಕುರುಡನ ದೇಹದಂತೆ ಪ್ರಾಣನ ಬಲದಿಂದ ಬದುಕಿರುವದೇ ಆಯಿತು. ॥ ೪೦ ॥

ಏವಂ ಮನಃ ಶ್ರೋತ್ರಮುಖ್ಯದೇವಾನಾಂ ಚ ಕ್ರಮಾದ್ಗತೌ ।
ದೇಹೋಽಸೌ ನಾ ಪತದ್ವಾಯೋಃ ಸತ್ವೇನಾತಿಬಲೀಯಸಃ ॥ ೪೧ ॥

ಈರೀತಿಯಲ್ಲಿ ಮನಸ್ಸು ಕಿವಿ ಇವೇ ಮೊದಲಾದ ಇಂದ್ರಿಯಗಳ ಅಭಿಮಾನಿದೇವತೆಗಳು ಕ್ರಮವಾಗಿ ಹೊರಗೆ ಹೋದಾಗ ಅತಿಬಲಿಷ್ಠನಾದ ಮುಖ್ಯಪ್ರಾಣನ ಬಲದಿಂದ ದೇಹವು ಬೀಳಲಿಲ್ಲ. ॥ ೪೧ ॥

ಜೀವನ್ನೇವಾಭವನ್ಮೂಕಬಧಿರಾದಿಶರೀರವತ್ ।
ಏವಂ ಸಂವತ್ಸರಂ ಪ್ರೋಷ್ಯ ಕ್ರಮೇಣಾಂತೇ ಪ್ರವಿಶ್ಯ ಚ ॥ ೪೨ ॥

ಊಷುಃ ಕಿಲೇಷಚ್ಛ್ರಾಂತಾಸ್ತೇ ತತ್ತದಿಂದ್ರಿಯಗೋಲಕೇ ।
ಉಚ್ಚಕ್ರಾಮತತಃ ಪ್ರಾಣಸ್ತಸ್ಮಿನ್ನುತ್ಕ್ರಾಮತಿ ಪ್ರಭೌ ॥ ೪೩ ॥

ಬಲಾದುತ್ತಿಷ್ಠತಿ ಹಯೇ ಯಥಾ ಪಡ್ವೀಶಶಂಕವಃ ।
ಅನುವ್ರಜಂತಿ ತಚ್ಛಕ್ತ್ಯಾಕೃಷ್ಟಾಸ್ತದ್ವದಿಮೇ ಸುರಾಃ ॥ ೪೪ ॥

ಅನುಜಗ್ಮುಃ ಪ್ರಾಣಮೇವ ದೇಹೋಽಸೌ ತತ್ ಕ್ಷಣೇಽಪತತ್ ।

ಮೂಢನ, ಕಿವುಡನ ಮತ್ತು ಇತರ ಅಂಗವಿಕಲರ ಶರೀರದಂತೆ ಬದುಕಿಯೇ ಇತ್ತು. ಹೀಗೆ ಒಂದು ವರ್ಷ ಹೊರಗಿದ್ದು ಕ್ರಮವಾಗಿ ಅವರು ದೇಹವನ್ನು ಪ್ರವೇಶಮಾಡಿ ಸ್ವಲ್ಪ ಶಾಂತರಾಗಿ ದೇಹದಲ್ಲಿ ತಮ್ಮ ತಮ್ಮಿಂದ ಅಭಿಮನ್ಯಮಾನವಾದ ಇಂದ್ರಿಯಗೋಲಕದಲ್ಲಿದ್ದರು. ಆಮೇಲೆ ಮುಖ್ಯಪ್ರಾಣನು ಹೊರಗೆ ಬರಲು ಯತ್ನಿಸಿದಾಗ ಯಾವರೀತಿ ಬಲಿಷ್ಠವಾದ ಕುದುರೆಯು ಹೋಗಲು ಬಲಾತ್ಕಾರದಿಂದ ಎದ್ದು ಪ್ರಯತ್ನಿಸಿದರೆ ಹಗ್ಗಗಳು ಕಟ್ಟಿದ್ದ ಗೂಟಗಳು ಹೇಗೆ ಕಿತ್ತುಬಂದುಬಿಡುತ್ತವೆಯೋ ಹಾಗೆ ಇಂದ್ರಿಯಾಭಿಮಾನಿದೇವತೆಗಳು ತಮ್ಮ ತಮ್ಮ ಸ್ಥಾನದಿಂದ ಎಳೆಯಲ್ಪಟ್ಟವರಾಗಿ ಪ್ರಾಣನ ಹಿಂದೆಯೇ ಹೊರಟರು. ದೇಹವು ಬಿದ್ದಿತು. || ೪೩-೪೫ (೧) ||

ಪುನಃ ಪ್ರಾಣಃ ಸ್ವಾನುಗತಾನ್ವಿಹಾಯ ವಿಬುಧಾನಿಮಾನ್ || ೪೫ ||

ಸ್ವಸ್ಯೈವ ಶಕ್ತಿಮತುಲಾಂ ವಿಖ್ಯಾಪಯನ್ಪ್ರಭುಃ ।
ನಾನ್ಯಪ್ರವೇಶಾದ್ದೇಹೋಽಯಮುತ್ಥಿತಸ್ತ್ವಿತಿಬೋಧಯನ್ ||೪೬||

ಸ್ವಯಮೇವಾವಿಶದ್ಬ್ರಹ್ಮಂ ದೇಹಂ ನ ತು ಸುರೈಸ್ಸಹ ।
ಕಸ್ಯ ಶಕ್ತ್ಯೋತ್ಥಿತೋ ದೇಹಃ ಇತಿ ಶಂಕಾಪನುತ್ತಯೇ || ೪೭ ||

ತೈಃ ಸಹೈವ ಪ್ರವೇಶೇತು ಸಾಪಿ ಶಂಕಾ ಭವೇದ್ಧ್ರುವಂ ।
ಮಾಮೃತೇಸ್ಥಾತುಮಪ್ಯೇಷಾಂ ಶಕ್ತಿರ್ನಾಸ್ತೀತಿ ಬೋಧಯನ್ ||

ನಿರ್ಯಾಣಕಾಲೇ ದೇವೈಶ್ಚ ಸಹೈವ ಪ್ರಾಗ್ವಿನಿರ್ಯಯೌ ।
ಪಟ್ವೀಶಶಂಕುವತ್ತೇಷಾಂ ಸ್ಥಾತುಂ ಶಕ್ತಿಶ್ಚ ನಾಭವತ್ || ೪೮ ||

ಪುನಃ ಪ್ರಾಣನು ತನ್ನ ಜೊತೆಯಲ್ಲಿ ದೇಹದಿಂದ ಹೊರಗೆ ಬಂದ ದೇವತೆಗಳನ್ನು ಬಟ್ಟು, ತನ್ನ ಅಪಾರವಾದ ಶಕ್ತಿಯನ್ನು ಎಲ್ಲ ಕಡೆಯಲ್ಲಿಯೂ ಪ್ರಖ್ಯಾತಿಗೊಳಿಸುವದಕ್ಕೂ ಇನ್ನು ಯಾವ ದೇವತೆಯ ಪ್ರವೇಶದಿಂದಲೂ ದೇಹವು ಏಳಲಿಲ್ಲವೆಂಬುವದನ್ನು ತಿಳಿಸಿಕೊಡುವದಕ್ಕೂ ದೇವತೆಗಳ ಸಹಿತವಲ್ಲದೆ ತಾನೇ ಬ್ರಹ್ಮದೇಹವನ್ನು ಪ್ರವೇಶಮಾಡಿದನು. ಹೀಗೆ

ಏಕೆ ಮಾಡಿದನೆಂದರೆ:- ಯಾರು ಒಳಗೆ ಪ್ರವೇಶ ಮಾಡುವುದರಿಂದ ದೇಹವು ಎದ್ದಿತು ಎಂಬ ವಿಷಯದಲ್ಲಿ ಸಂಶಯವನ್ನು ಹೋಗಲಾಡಿಸುವುದಕ್ಕೆ. ಅವರ ಜೊತೆಯಲ್ಲಿಯೇ ಪ್ರವೇಶಮಾಡಿದ್ದ ಪಕ್ಷದಲ್ಲಿ ಈ ಶಂಕಾ ಬರುತ್ತಲೇ ಇತ್ತು. ನನ್ನನ್ನು ಬಿಟ್ಟು ಈ ದೇವತೆಗಳಿಗೆ ದೇಹದಲ್ಲಿ ಇರುವುದಕ್ಕೇ ಶಕ್ತಿಯಿಲ್ಲವೆಂಬುದನ್ನು ತೋರಿಸುವದಕ್ಕೆ ಗೂಟಗಳನ್ನು ಕಿತ್ತುಕೊಂಡು ಓಡುವ ಕುದುರೆಯಂತೆ ದೇಹದಿಂದ ತಾನು ಮೊದಲು ಹೊರಗೆ ಬಂದ ಕಾಲದಲ್ಲಿ ದೇವತೆಗಳ ಸಹಿತವೇ ತಾನು ಹೊರಗೆ ಬಂದನು. || ೭೫-೭೯ ||

ಸುರೇಷ್ವೇಕೈಕಸ್ಯ ಪುರಾಗಮನೇ ಚ ಸ್ವಯಂ ಸ್ಥಿತೇಃ ।
ದೇಹಸ್ಯಾಪತನಾದ್ದೇವೈಃ ಸಹೈವ ಗಮನೇಽಸ್ಯಯಂ ॥ ೫೦ ॥

ದೇಹೋ ಮದ್ಗಮನಾದೇವ ಪತಿತೋ ನಾನ್ಯನಿರ್ಗಮಾತ್ ।
ಇತ್ಥಂ ಪ್ರೇಕ್ಷಾವತಾಂ ಜ್ಞಾತುಂ ಶಕ್ಯಂ ತೇನ ಸಹೈವತೈಃ ॥ ೫೧ ॥

ನಿರ್ಗತೋಽಭೂತ್ಸತು ಪ್ರಾಣಃ ಪ್ರವೇಶೇ ತ್ವೇಕಲೋಽವಿಶತ್ ।
ಪ್ರಾಣೇ ಪ್ರವಿಷ್ಟೇ ದೇಹೋಽಸೌ ತತ್ ಕ್ಷಣಾದುತ್ಥಿತಃ ಕಿಲ ॥ ೫೨ ॥

ಮೊದಲು ದೇವತೆಗಳು ಒಬ್ಬೊಬ್ಬರಾಗಿ ಹೊರಗೆ ಹೋದರೂ ಕೂಡ ಮುಖ್ಯಪ್ರಾಣನು ದೇಹದಲ್ಲಿದ್ದುದರಿಂದ ದೇಹವು ಬೀಳದೇ ಇದ್ದಿತಾದ್ದರಿಂದ ಎರಡನೇ ಆವರ್ತಿ ದೇವತೆಗಳ ಸಹಿತವಾಗಿ ಹೊರಗೆ ಹೋದರೂ ತಾನು ಹೊರಗೆ ಹೋದದ್ದರಿಂದಲೇ ದೇಹವು ಬಿತ್ತು. ಇತರರು ಹೋದದ್ದರಿಂದಲ್ಲ. ಹೀಗೆ ಪ್ರೇಕ್ಷಾವಂತನು ತಿಳಿಯಲು ಸಾಧ್ಯ. ಎಂದು ತಿಳಿದು ಅವರ ಜೊತೆಯಲ್ಲಿ ಹೊರಗೆ ಬಂದನು. ದೇಹವನ್ನು ಪ್ರವೇಶಮಾಡುವ ಕಾಲದಲ್ಲಿ ಯಾದರೋ ಪ್ರಾಣನೊಬ್ಬನೇ ಪ್ರವೇಶಮಾಡಿದ್ದರಿಂದಲೇ ದೇಹವು ತತ್‌ಕ್ಷಣ ಎದ್ದಿತು ಎಂದು ಸ್ಪಷ್ಟವಾಯಿತು. (ಇಂದ್ರಿಯಾಭಿಮಾನಿ ದೇವತೆಗಳು ಒಬ್ಬೊಬ್ಬರಾಗಿ ಪ್ರವೇಶಮಾಡಿದರೂ ಬ್ರಹ್ಮನ ದೇಹವು ಏಳಲಿಲ್ಲ. ವಾಯುದೇವರು ಪ್ರವೇಶಮಾಡಿದ ಕೂಡಲೇ ಅದು ಎದ್ದಿತು. ಇದರಿಂದ ಏನು ನಿಶ್ಚಯವಾಯಿತೆಂದರೆ ಇಂದ್ರಿಯಾಭಿಮಾನಿದೇವತೆಗಳಲ್ಲಿ ಒಬ್ಬರೇ ಆಗಲೀ ಎಲ್ಲರೇ ಆಗಲೀ ದೇಹದಲ್ಲಿದ್ದರೂ ಅದು ಏಳಲಾರದು.

ವಾಯುದೇವರ ಪ್ರವೇಶವು ಅವಶ್ಯಕ. ಆದ್ದರಿಂದ ವಾಯುದೇವರು ದೇಹವಲ್ಲಿ ಇದ್ದರೇನೇ ಆ ದೇಹವು ಎದ್ದು ನಿಲ್ಲಲು ಸಾಧ್ಯ.) || ೫೦-೫೨ ||

ಭಿನ್ನಗರ್ವಾಸ್ತತಃ ಸರ್ವೇ ಗೀರ್ವಾಣಾಃ ಶರ್ವಪೂರ್ವಕಾಃ ।
ವಾತಾದ್ಭೀತೇ ಕಲೌ ಯಾತೇ ಪುನಃ ಶುದ್ಧಧಿಯೋಽವಿಶನ್ ||೫೩||
ತಮೇವ ದೇಹಂ ರಾಜ್ಞಿ ಸ್ವಂ ಪುರಂ ವಿಷ್ಟೇ ಭಟಾ ಇವ ।

ಅನಂತರ ರುದ್ರದೇವರೇ ಮೊದಲಾದ ಸರ್ವದೇವತೆಗಳೂ ವಾಯು-ದೇವರಿಂದ ಭಯಪಟ್ಟ ಕಲಿಯು ಹೋಗಲು, ಪುನಃ ಶುದ್ಧಬುದ್ಧಿಯುಳ್ಳವರಾಗಿ ರಾಜನು ತನ್ನ ಪಟ್ಟಣವನ್ನು ಪ್ರವೇಶಿಸಲು ರಾಜಭಟರು ಅವನ ಜೊತೆಯಲ್ಲಿ ಪ್ರವೇಶಿಸುವಂತೆ ದೇಹವನ್ನು ಪ್ರವೇಶಿಸಿದರು. || ೫೩ ||

ಇತ್ಥಂ ದೇಹೇ ವಾಯುಗತೌ ಪತಿತೇ ತಸ್ಯ ಚಾಗತೇ || ೫೪ ||

ಉತ್ಥಿತೇ ಸತಿ ಸರ್ವೇ ಚ ದೇವಾ ವಿಸ್ಮಿತಮಾನಸಾಃ ।
ಅನ್ವಯವ್ಯತಿರೇಕಾಭ್ಯಾಂ ವಾಯೋರುತ್ತಮತಾಂ ಹೃದಿ || ೫೫ ||

ನಿಶ್ಚಿತ್ಯ ತುಷ್ಟಮನಸಸ್ತುಷ್ಟುವುಸ್ತಂ ಸುರೋತ್ತಮಂ ।
ತ್ವಮೇವ ವಾಯೋ ಜ್ಯೇಷ್ಠೋಽಸಿ ಶ್ರೇಷ್ಠಶ್ಚಾಸಿ ದಿವೌಕಸಾಂ ||
ಅಸ್ಮಾಕಮಿತಿ ತಂ ಸ್ತುತ್ವಾ ತಸ್ಥುರ್ದೇಹೇ ತದಾಜ್ಞಯಾ ।

ಈ ರೀತಿಯಲ್ಲಿ ದೇಹವನ್ನು ಬಿಟ್ಟು ಮುಖ್ಯಪ್ರಾಣನು ಹೋಗಲು ದೇಹವು ಬೀಳುವದನ್ನೂ ಅವನು ಪ್ರವೇಶಿಸಲು ದೇಹವು ಏಳುವದನ್ನೂ ನೋಡಿ ಆಶ್ಚರ್ಯಮನಸ್ಸುಳ್ಳ ದೇವತೆಗಳು ಅನ್ವಯವ್ಯತಿರೇಕದಿಂದ ಮುಖ್ಯಪ್ರಾಣನ ಉತ್ತಮತ್ವವನ್ನು ಮನಸ್ಸಿನಲ್ಲಿ ನಿಶ್ಚಯಿಸಿ ಸಂತುಷ್ಟಮನಸ್ಕರಾಗಿ ದೇವಶ್ರೇಷ್ಠನಾದ ವಾಯುವನ್ನು ಎಲೈ ವಾಯುವೇ, ದೇವತೆಗಳಾದ ನಮ್ಮಲ್ಲಿ ನೀನೇ ಜ್ಯೇಷ್ಠನೂ ಶ್ರೇಷ್ಠನೂ ಆಗಿದ್ದಿ ಎಂದು ಸ್ತೋತ್ರ ಮಾಡಿ ಆ ವಾಯುವಿನ ಆಜ್ಞೆಯಿಂದ ದೇಹದಲ್ಲಿ ನಿಂತರು. ||೫೪-೫೭(೧)||

ಬ್ರಹ್ಮಾ ತದಾ ಸ್ವೀಯದೇಹಮುಪೇಕ್ಷ್ಯ ಹರಿಣಾ ಸಹ || ೫೭ ||

ಪರೀಕ್ಷಾಯೈ ಕಿಲ ದದೌ ತೇ ಚ ದೇವಾಸ್ತದಾಜ್ಞಯಾ ।
ದೇಹೇ ತಸ್ಮಿನ್ವಿಚಾರ್ಯೇತ್ಥಂ ಸಾಮರ್ಥ್ಯಂ ಮಾತರಿಶ್ವನಃ ॥೫೮॥
ತನೋವ ವಾಯುಂ ಸರ್ವೇಶಂ ಮತ್ವಾ ಗರ್ವಂ ಜಹುಃ ಕಿಲ ।

ಆ ಕಾಲದಲ್ಲಿ ಚತುರ್ಮುಖಬ್ರಹ್ಮದೇವರು ಹರಿಯಸಹಿತವಾಗಿ ದೇಹವನ್ನು ಉಪೇಕ್ಷೆಮಾಡಿ ದೇವತೆಗಳಲ್ಲಿ ಯಾರು ಶ್ರೇಷ್ಠರೆಂಬುವುದನ್ನು ಪರೀಕ್ಷಿಸುವದಕ್ಕಾಗಿ ಆ ದೇಹವನ್ನು ದೇವತೆಗಳ ವಶಮಾಡಿದರು. ದೇವತೆಗಳಾದವರೋ ಬ್ರಹ್ಮದೇವರ ಆಜ್ಞೆಯಿಂದ ಮೇಲೆಹೇಳಿದ ರೀತಿಯಲ್ಲಿ ದೇಹದಲ್ಲಿ ವಾಯುವಿನ ಸಾಮರ್ಥ್ಯವನ್ನು ವಿಚಾರಮಾಡಿ ಆ ವಾಯುವೇ ಶ್ರೇಷ್ಠನೆಂದು ತಿಳಿದು ತಮ್ಮ ಗರ್ವವನ್ನು ಬಿಟ್ಟರಷ್ಟೇ. ॥ ೫೮-೫೯ (೧) ॥

ಇತಿ ಛಂದೋಗಾಯಕಾನಾಂ ಮಹೋಪನಿಷದೇವ ಸಾ ॥ ೫೯ ॥

ಏವಮೇವ ಚ ಷಟ್ಪ್ರಶ್ನೇ ಬೃಹದಾರಣ್ಯಕೇ ತಥಾ ।
ಕಥೇಯಮೈತರೇಯೇ ಚ ಶ್ರುತಾ ಸಕಲಸಂಮತಾ ॥ ೬೦ ॥

ಸಾಮವೇದದ ಶ್ರೇಷ್ಠವಾದ ಛಾಂದೋಗ್ಯೋಪನಿಷತ್ತೇ ಹೀಗೆ ಹೇಳುತ್ತೆ. ಹಾಗೆಯೇ ಷಟ್‌ಪ್ರಶ್ನ, ಬೃಹದಾರಣ್ಯಕ ಮತ್ತು ಐತರೇಯ ಉಪನಿಷತ್ತುಗಳಲ್ಲಿಯೂ ಸರ್ವಸಮ್ಮತವಾದಪ್ರಮೇಯವುಳ್ಳ ಈ ಕಥೆಯು ಶ್ರುತವಾಗಿದೆ. ॥ ೫೯(೨)-೬೦ ॥

ಛಾಂದೋಗ್ಯ– ೫–೧–೬ ರಿಂದ ೧೫ ರವರಿವಿಗೆ ಮಂತ್ರಗಳು.
ಷಟ್‌ಪ್ರಶ್ನ– ೨-೧-೨-೩ ಮಂತ್ರಗಳು.
ಬೃಹದಾರಣ್ಯಕ– ೮-೧ ರಿಂದ ೧೪ ಮಂತ್ರಗಳು.
ಐತರೇಯ– ೨-೧-೪ ಮಂತ್ರಗಳು.

(ಈ ಆಧಾರಗಳಮೇಲೆ ಮೇಲ್ಕಂಡ ಆಖ್ಯಾಯಿಕೆಯು ಹೇಳಲ್ಪಟ್ಟಿರುತ್ತೆ.)

ಯದ್ಯೈವೋತ್ಕ್ರಮಣೋದ್ಯೋಗಂ ವಾಯುಶ್ಚಕ್ರೇ ಶರೀರತಃ ।
ತದಾತಿಸಂಕಟಂ ಪ್ರಾಪ್ತಾಶ್ಚಕ್ಷುರಾದ್ಯಭಿಮಾನಿನಃ ॥ ೬೧ ॥

ದೇವಾಃ ಸರ್ವೇ ಪ್ರಾಣಮೇವ ತ್ವನ್ನಃ ಶ್ರೇಯಾನಿತೀಡಿರೇ |
ನೋಚ್ಚಕ್ರಾಮ ತದಾ ಪ್ರಾಣಃ ಪ್ರಜಾಪತ್ಯುಕ್ತಮಾರ್ಗತಃ ||೬೨||

ತಾವತಾಪಿ ಸ್ವಸಾಮರ್ಥ್ಯಸಿದ್ಧಿಃ ಸರ್ವದಿವೌಕಸಾಂ |
ಯತೋ ಬಭೂವ ತೇನಾಸೌ ಹೃದ್ಗುಹಾತೋ ನ ನಿರ್ಗತಃ ||೬೩||

ಯಾವಾಗ ವಾಯುದೇವನು ಶರೀರದಿಂದ ಹೊರಗೆ ಬರಲು ಪ್ರಯತ್ನ ಮಾಡಿದನೋ ಆಗ ಚಕ್ಷುರಾದ್ಯಭಿಮಾನಿ ದೇವತೆಗಳು ಅತಿಶಯವಾದ ಸಂಕಟವನ್ನು ಹೊಂದಿದರು. ಸರ್ವದೇವತೆಗಳೂ ಸೇರಿ ಪ್ರಾಣನನ್ನು ಕುರಿತು ನಮ್ಮಗಳ ಮಧ್ಯದಲ್ಲಿ ನೀನು ಶ್ರೇಷ್ಠನೆಂದು ಸ್ತುತಿಸಿದರು. ಆಗ ಪ್ರಾಣನು ಬ್ರಹ್ಮನು ಹೇಳಿದಂತೆ ಹೊರಗೆ ಬರಲಿಲ್ಲ. ಏಕೆಂದರೆ ತಾನು ಶ್ರೇಷ್ಠನೆಂಬುದೂ ಮತ್ತು ಸಾಮರ್ಥ್ಯವುಳ್ಳವನೆಂಬುದೂ ದೇವತೆಗಳಿಗೆ ಇಷ್ಟುಮಾತ್ರದಿಂದಲೇ ತಿಳಿದುಬಂದದ್ದರಿಂದ ಹೃದಯಗುಹಾದಿಂದ ಹೊರಗೆ ಬರಲಿಲ್ಲ. || ೬೧-೬೩ ||

ಛಾಂದೋಗ್ಯಉಪನಿಷತ್ತಿನ ಕಥಾ ಹೀಗೆ:— ಚಕ್ಷುರಾದ್ಯಭಿಮಾನಿ ದೇವತೆಗಳು ನಮ್ಮಲ್ಲಿ ಯಾರು ಶ್ರೇಷ್ಠರೆಂದು ಬ್ರಹ್ಮದೇವರನ್ನು ಪ್ರಶ್ನಿಸಿದಾಗ, ಅವರು "ಯಾರು ದೇಹದಿಂದ ಹೊರಗೆ ಬಂದರೆ ಅದು ಶವ ದಂತೆ ಅಮಂಗಳವಾಗುತ್ತದೆಯೋ ಆ ದೇವತೆಯು ನಿಮ್ಮಗಳಲ್ಲಿ ಶ್ರೇಷ್ಠನು" ಎಂದು ಹೇಳಿದರು. ಪ್ರಾಣದೇವರು ಹೊರಗೆ ಬರಲು ಪ್ರಯತ್ನಮಾಡಿದ್ದ ರಿಂದಲೇನೇ ಇತರದೇವತೆಗಳಿಗೆ ಸಂಕಟವಾಗಿ ಅವರಿಗೆ ವಾಯುದೇವರ ಮಹಿಮೆಯು ತಿಳಿಯಬಂತು. ಬ್ರಹ್ಮದೇವರು ನುಡಿದಂತೆ ಅವರು ದೇಹ ದಿಂದ ಹೊರಗೆ ಬಂದೇ ತಮ್ಮ ಉತ್ತಮತ್ವವನ್ನು ತೋರಿಸಬೇಕಾದ ಅವಶ್ಯ ಕತೆಯು ಇರಲಿಲ್ಲ. ಬೃಹದಾರಣ್ಯಕ ಉಪನಿಷತ್ತಿನಲ್ಲಿಯೂ ಹೀಗೆಯೇ ಉಕ್ತವಾಗಿದೆ.

ಇತಿ ಕಲ್ಪಾಂತರಗತಾಚ್ಛಾಂದೋಗೋಪನಿಷತ್ ಶ್ರುತಾ |
ಕಥಾಪ್ಯತ್ರಾನುಸಂಧೇಯಾ ಯತೋ ಗ್ರಂಥಕೃತೋ ಮಮ ||

ಅನ್ವಯವ್ಯತಿರೇಕಾಭ್ಯಾಂ ಸ್ಪಷ್ಟೀಕರ್ತುಂ ಮರುದ್ಬಲಂ ।
ಐತರೇಯೋಪನಿಷದಃ ಕಥಾಸ್ಯತ್ರಾನುವರ್ಣಿತಾ ॥ ೬೫ ॥

ಯಾ ಸಾ ಕಲ್ಪಾಂತರೇ ದೇವೈರ್ವಿಸ್ತೃತ್ಯೈವ ಪ್ರದರ್ಶಿತಾ ।
ತತ್ರ ಪ್ರಾಣಸ್ಯೋತ್ಕ್ರಮಣೇ ದೇಹಪಾತೋಽಪ್ಯುದೀರಿತಃ ॥ ೬೬ ॥

ತತ್ಪ್ರವೇಶೇ ಚ ದೇಹಸ್ಯ ತದ್ವೈವೋತ್ಥಿತಿರೀರಿತಾ ।
ಅತೋ ವಿರೋಧಶಂಕಾ ವಾ ತಥಾಗ್ರಂಥಕೃತೋ ಮಮ ॥ ೬೭ ॥

ಅನುಕ್ತಕಥನಾ ಶಂಕಾ ವಾತ್ರ ನಾಸ್ತಿ ವಿಚಾರಣೇ ।
ಅರ್ಥಸ್ಯ ಗೌರವಂ ಲಾಘವಂ ಚ ಗ್ರಂಥಸ್ಯ ದರ್ಶನಾತ್ ॥ ೬೮ ॥

ಕಥಾದ್ವಯಂ ಸಂಕಲಯ್ಯ ಶ್ರೋತೄಣಾಂ ಬುದ್ಧಿಶುದ್ಧಯೇ ।
ಕೃತಿನಾ ವಾದಿರಾಜೇನ ಯತಃ ಕೃತಿರಿಯಂ ಕೃತಾ ॥ ೬೯ ॥

ಈ ಸಂದರ್ಭದಲ್ಲಿ ಕಲ್ಪಾಂತರದಲ್ಲಿ ನಡೆದ ಛಾಂದೋಗ್ಯಉಪನಿಷತ್ತಿನಲ್ಲಿ ಶ್ರುತವಾಗಿರುವ ಈ ಕಥೆಯನ್ನು ನೆನಪಿನಲ್ಲಿಡಬೇಕು. ಗ್ರಂಥಕರ್ತನಾದ ನನಗೆ ಅನ್ವಯವ್ಯತಿರೇಕದಿಂದ ವಾಯುಬಲವನ್ನು ಸ್ಪಷ್ಟಮಾಡುವುದು ಗುರಿಯಾದ್ದರಿಂದ ಕಲ್ಪಾಂತರದಲ್ಲಿ ಯಾವ ವಾಯುವಿನ ಉತ್ತಮತ್ವರೂಪ ಪ್ರಮೇಯವು ದೇವತೆಗಳಿಂದ ಸ್ಪಷ್ಟಮಾಡಲ್ಪಟ್ಟಿತೋ ಅಂತಹ ಐತರೇಯ-ಉಪನಿಷತ್ಕಥೆಯು ನನ್ನಿಂದ ಇಲ್ಲಿ ವರ್ಣಿಸಲ್ಪಟ್ಟಿದೆ. ಐತರೇಯ-ಉಪನಿಷತ್ತಿನಲ್ಲಿ ಪ್ರಾಣನು ಹೊರಗೆ ಬಂದರೆ ದೇಹವು ಬೀಳೋಣವು ಹೇಳಲ್ಪಟ್ಟಿತು. ಹಾಗೆಯೇ ಅವನು ಪ್ರವೇಶಮಾಡುವುದರಿಂದ ದೇಹವು ಏಳೋಣವು ಹೇಳಲ್ಪಟ್ಟಿತು. ಆದ್ದರಿಂದ ಉಪನಿಷತ್ತುಗಳಲ್ಲಿ ಹೇಳಿರುವುದು ಒಂದಕ್ಕೊಂದು ವಿರೋಧವೆಂಬ ಶಂಕೆಯಾಗಲೀ ಗ್ರಂಥವನ್ನು ಮಾಡಿದ ನನ್ನ ವಿಷಯದಲ್ಲಿ ಉಪನಿಷತ್ತಿನಲ್ಲಿ ಹೇಳದ್ದನ್ನು ಹೇಳಿದ್ದಾನೆಂಬ ಶಂಕೆಯಾಗಲೀ ವಿಚಾರಮಾಡಿದರೆ ಇಲ್ಲ. ಅರ್ಥಗೌರವವನ್ನೂ ಅರ್ಥಲಾಘವವನ್ನೂ ಈ ಗ್ರಂಥದಲ್ಲಿ ತೋರಿಸತಕ್ಕವನಾಗಿ ಹೇಳುವವರ ಬುದ್ಧಿಯು ಶುದ್ಧಿಯಾಗಲೋ ಸುಗ ಸಮರ್ಥನಾದ ವಾದಿರಾಜನಿಂದ ಎರಡು ಕಥೆಗಳನ್ನೂ ಒಟ್ಟು

ಗೂಡಿಸಿ ಈ ಗ್ರಂಥವು ಮಾಡಲ್ಪಟ್ಟಿತು. ಆದ್ದರಿಂದ ಮೇಲಿನ ಶಂಕಾಕ್ಕೆ ಅವಕಾಶವಿಲ್ಲ. || ೬೮-೬೯ ||

ಅರ್ಥಗೌರವ ಅರ್ಥಲಾಘವವೆಂದರೆ, ಒಂದು ಕಲ್ಪದಲ್ಲಿ ಅಭಿಪ್ರಾಯವನ್ನು ಸ್ಪಷ್ಟಪಡಿಸುವವಕ್ಕೆ ಅರ್ಥವನ್ನು ವಿಸ್ತಾರಮಾಡುವುದೂ ಬೇರೇಕಲ್ಪದಲ್ಲಿ ಅದೇ ಅರ್ಥವನ್ನು ಸಂಕ್ಷೇಪವಾಗಿ ಹೇಳುವುದೂ ವೇದದಲ್ಲಿ ಕಂಡುಬರುತ್ತೆ. ಇದಕ್ಕೆ ಕಾರಣ ಶ್ರೋತೃಗಳಲ್ಲಿನ ಅಧಿಕಾರಭೇದವೂ ಎಂದು ಹೇಳಬಹುದು.

ಏವಂ ಚ ಮುಖ್ಯಪ್ರಾಣಸ್ಯ ಕಃ ಸುರೇಷು ಸಮೋಭವೇತ್ ।
ಬುದ್ಧಿಶುದ್ಧಿಶ್ಚ ಕಸ್ಯ ಸ್ಯಾದ್ಯಥಾಸ್ಯ ಜಗತಾಂ ಗುರೋಃ || ೭೦ ||

ಈ ರೀತಿಯಲ್ಲಿ ವೇದದಲ್ಲಿ ಉಕ್ತವಾಗಿರುವುದರಿಂದ ಮುಖ್ಯಪ್ರಾಣನಿಗೆ ದೇವತೆಗಳಲ್ಲಿ ಯಾವನು ತಾನೇ ಸಮನಾದಾನು? ಹಾಗೆಯೇ ಜಗದ್ಗುರುವಾದ ಮುಖ್ಯಪ್ರಾಣನ ಬುದ್ಧಿಯು ಹೇಗೆ ಶುದ್ಧವಾದದ್ದೋ ಹಾಗೆ ಯಾವ ದೇವತೆಯ ಬುದ್ಧಿಯು ಶುದ್ಧವಾಗಿದ್ದೀತು ? || ೭೦ ||

ಅತಃ ಸರ್ವಸುರೇಭ್ಯೋಽಪಿ ಪ್ರಾಣ ಏವೋತ್ತಮೋಽಭವತ್ ।
ಪ್ರಾಣಸ್ಯಾಪಿ ಹಿ ಯಃ ಪ್ರಾಣಃ ಸೋಽಭೂತ್ಸರ್ವೋತ್ತಮೋತ್ತಮಃ||

ಆದ್ದರಿಂದ ಮುಖ್ಯಪ್ರಾಣನು ಸರ್ವದೇವತೆಗಳಿಗಿಂತ ಉತ್ತಮನಾದನು. ಆ ಪ್ರಾಣನಿಗೂ ಹರಿಯು ಪ್ರಾಣನಾದ್ದರಿಂದ ಅವನು ಸರ್ವೋತ್ತಮೋತ್ತಮನಾದನು. || ೭೧ ||

ಅಪಿ ಚಾನಂತಜೀವಾನಾಂ ಭವದ್ಭೂತಭವಿಷ್ಯತಾಂ ।
ಹೃದಿ ಸ್ಥಿತ್ವಾ ಪಂಚರೂಪೀ ಯಸ್ಯ ಮಂತ್ರತ್ರಯಂ ಸುಧೀಃ ||೭೨||
ಅಹರ್ನಿಶಂ ಚೈಕವಿಂಶತ್ಸಹಸ್ರಂ ಷಟ್‌ಶತಾಧಿಕಂ ।
ಯಥಾ ಭವತಿ ಮಾನೇನ ತಥಾನೂನತಯಾ ಜಪೇ || ೭೩ ||

ಮುಖ್ಯಪ್ರಾಣೋ ಮಮ ಗುರುಸ್ತಸ್ಯ ಹಂಸಾತ್ಮನೋ ಹರೇಃ ।
ಮುಖ್ಯದಾಸೋಽಭವನ್ನಿತ್ಯಮಿತ್ಥಂ ವಿಷ್ಣೋರ್ಮಹಾಮನುಂ ||

ಅಹರ್ನಿಶಂ ಚ ಜಪತಃ ಸ್ಯಾತ್ಕದಾ ಮತಿರನ್ಯಥಾ ।
ಹರೌ ಕದಾಚಿತ್ಸ್ಪರ್ಧಾಸ್ಯ ಯದಿ ಸ್ಯಾನ್ನ ಜಪೇತ್ತದಾ ॥ ೭೫ ॥
ಜಪಾಭಾವೇಪಿ ನಷ್ಟಂ ಸ್ಯಾಜ್ಜಗದೇತಚ್ಚರಾಚರಂ ।

ಅಲ್ಲದೆ, ಈಗಿರುವ ಹಿಂದೆ ಇದ್ದ ಮತ್ತು ಮುಂದೆ ಬರುವ ಅನಂತ-ಜೀವರುಗಳ ಹೃದಯದಲ್ಲಿ ಐದು ರೂಪಗಳಿಂದ ಇದ್ದವನಾಗಿ "ಹಂಸಃ, ಸೋಹಂ, ಸ್ವಾಹಾ" ಎಂಬ ಮೂರು ಮಂತ್ರಗಳನ್ನು ಹಗಲು ರಾತ್ರಿಗಳಲ್ಲಿ ಇಪ್ಪತ್ತೊಂದು ಸಾವಿರದ ಆರುನೂರು ಸಲಕ್ಕೆ ಕಡಿಮೆ ಇಲ್ಲದೆ (ಅಂದರೆ ಪೂರ್ಣವಾಗಿ ೨೧೬೦೦ ಸಲ) ಜಪಿಸತಕ್ಕ ನನ್ನ ಗುರುವಾದ ಮುಖ್ಯಪ್ರಾಣನು ಹಂಸನಾಮಕನಾದ ಹರಿಯ ಮುಖ್ಯದಾಸನು ಆದನು. ಹೀಗೆ ವಿಷ್ಣುವಿನ ಮಹಾಮಂತ್ರವನ್ನು ಹಗಲಿರುಳು ಜಪಿಸುವ ಮುಖ್ಯಪ್ರಾಣನಿಗೆ ಹರಿಯ ವಿಷಯದಲ್ಲಿ ಯಾವಾಗ ಬುದ್ಧಿಯು ಬೇರೆಯಾದೀತು? ಒಂದುವೇಳೆ ಹರಿಯ ವಿಷಯದಲ್ಲಿ ಯಾವಾಗಲಾದರೂ ಸ್ಪರ್ಧೆಯು ಬಂದಪಕ್ಷದಲ್ಲಿ ಆಗ ಈ ಹಂಸಜಪವನ್ನು ಎಲ್ಲಾ ಪ್ರಾಣಿಗಳಲ್ಲಿ ನಿಂತು ಜಪಿಸದೇ ಇದ್ದಾನು. ಹಾಗೆ ಜಪಿಸದಿದ್ದಲ್ಲಿ ಶ್ವಾಸವು ನಿರೋಧವಾಗಿ ಚರಾಚರಾತ್ಮಕವಾದ ಈ ಜಗತ್ತು ನಷ್ಟವಾಗಬೇಕಾದೀತು. ॥ ೭೩-೭೬ (೧) ॥

ಆದರೆ ಜಗತ್ತು ಹೀಗೆ ನಷ್ಟವಾಗಿಲ್ಲ. ಸ್ಪರ್ಧೆ ಇಲ್ಲದೆ ಹರಿಯ ವಿಷಯದಲ್ಲಿ ವಾಯುದೇವರು ಸದಾ ಶುದ್ಧಬುದ್ಧಿಯುಳ್ಳವರೆಂದು ಇದರ ಅಭಿಪ್ರಾಯ.

ಏವಂ ಚ ಜೀವನಾರ್ಥೀ ಯಃ ಸ ವಾಯೋಶ್ಚ ಶ್ರಿಯಃ ಪತೇಃ ॥
ಮೈತ್ರ್ಯೈಕ್ಯಂ ಘೋಷಯೇನ್ನಿತ್ಯಂ ದೂಷಯೇನ್ನ ಕದಾಚನ ।
ದಿನೇದಿನೇಽಪ್ಯಸಂಖ್ಯಾತನಾನಾಜೀವೇಷ್ವಹರ್ನಿಶಂ ॥ ೭೭ ॥

ಅನಂತಾನಂತಧಾ ವಿಷ್ಣೋರ್ಮನುಮೇತಮನುತ್ತಮಂ ।
ಜಪನ್ನಯಂ ವಾಯುದೇವಃ ಸರ್ವಜೀವೋತ್ತಮೋ ನ ಕಿಂ ॥೭೮॥

ಯಾವನಾದರೆ ಜೀವಿಸಲು ಅಪೇಕ್ಷಿಸುವನೋ ಅವನು ವಾಯುವಿನ ಮತ್ತು ರಮೇಶನ ಮೈತ್ರ್ಯೈಕ್ಯವನ್ನು ಘೋಷಿಸುವನೇ ವಿನಾ ಅವನ್ನು

ಎಂದಿಗೂ ನಿರಾಕರಿಸನು. ದಿನದಿನವಲ್ಲಿಯೂ ಅಸಂಖ್ಯಾತವಾದ ನಾನಾ ಜೀವರುಗಳಲ್ಲಿ ಹಗಲಿರಳು ಅನಂತಾನಂತಾವರ್ತಿ ವಿಷ್ಣುವಿನ ಸರ್ವೋತ್ತಮ ವಾದ ಈ ಮಂತ್ರವನ್ನು ಜಪಿಸುವ ವಾಯುದೇವನು ಸರ್ವಜೀವೋತ್ತಮ ನಲ್ಲವೇನು?

ವಿಷ್ಣುಭಕ್ತೌ ಚ ಸದೃಶಃ ಕಃ ಸ್ಯಾದಸ್ಯ ವಿಚಾರ್ಯತಾಂ ।
ಈದೃಶೊ ಯೋ ಜಗತ್ಪ್ರಾಣಹೇತುಭೂತಃ ಸಮೀರಣಃ ॥ ೭೯ ॥

ಸರ್ವಜೀವಾಗ್ರಣೀಸ್ತಸ್ಮಾತ್ತಸ್ಯಾಪೀಶಃ ಶ್ರಿಯಃ ಪತಿಃ ।
ಆಸೀತ್ಸರ್ವೋತ್ತಮೋ ಬ್ರಹ್ಮಪಿತಾ ಶಂಭೋಃ ಪಿತಾಮಹಃ ॥೮೦॥

ವಿಷ್ಣುಭಕ್ತಿಯಲ್ಲಿಯೂ ಇವನಿಗೆ ಸಮನಾದವನು ಯಾವನಾದಾನು? ಎಲ್ಲರಿಂದಲೂ ವಿಚಾರವಾಡಲ್ಪಡಲಿ. ಈರೀತಿಯಲ್ಲಿ ಜಗತ್ತು ಜೀವಿಸು ವುದಕ್ಕೆ ಕಾರಣಭೂತನಾದ ಸಮೀರನು ಸರ್ವಜೀವೋತ್ತಮನು. ಆದ್ದರಿಂದ ಅವನಿಗೂ ಸ್ವಾಮಿಯಾದ ಮತ್ತು ಬ್ರಹ್ಮನಿಗೆ ತಂದೆಯೂ ಶಂಭುವಿಗೆ ಪಿತಾಮಹನೂ ಆದ ಶ್ರೀಶನು ಸರ್ವೋತ್ತಮನಾದನು. ॥ ೭೯-೮೦ ॥

ವಾಯುಃ ಸ್ವಮೂಲರೂಪೇ ಚ ಸ್ವಾವತಾರೇಷ್ವಪಿ ಪ್ರಭುಃ ।
ಉಕ್ತರೀತ್ಯಾ ಯತಃ ಸಿದ್ಧಸ್ತತಃ ಶುದ್ಧತರೋಽಭವತ್ ॥ ೮೧ ॥

ಸಮರ್ಥನಾದ ವಾಯುವು ತನ್ನಮೂಲರೂಪದಲ್ಲಿಯೂ ಅವತಾರ- ರೂಪಗಳಲ್ಲಿಯೂ ಹಿಂದೆ ನಿರೂಪಿಸಿದಂತೆ ಪರಮಾತ್ಮನ ವಿಷಯದಲ್ಲಿ ನಿರ್ಮಲಚಿತ್ತನೆಂದು ಸಿದ್ಧವಾದ್ದರಿಂದ ಆತನು ಶುದ್ಧತರನೆಂದು ನಿರ್ಣಯ ವಾಯಿತು. ॥ ೮೧ ॥

ತಸ್ಮಾದುಕ್ತಪ್ರಕಾರೇಣ ವಾಯುರೇಕಃ ಪರೇ ಹರೌ ।
ಶುಕ್ಲೋಽಭೂತ್ಭಾರತೀ ಶುಕ್ಲತಮಾಸೀತ್ತದನುಗ್ರಹಾತ್ ॥ ೮೨ ॥

ಆದ್ದರಿಂದ ಈಗ ಹೇಳಲ್ಪಟ್ಟ ರೀತಿಯಲ್ಲಿ ವಾಯುವು ಮುಖ್ಯವಾಗಿ ಹರಿಯ ವಿಷಯದಲ್ಲಿ ಶುಕ್ಲನಾದನು. ಭಾರತೀದೇವಿಯು ಆ ವಾಯುವಿನ ಅನುಗ್ರಹದಿಂದ ಶುಕ್ಲತಮಳಾದಳು. ॥ ೮೨ ॥

ವಾಯುದೇವರ ಅನುಗ್ರಹದಿಂದ ಭಾರತೀದೇವಿಯರನ್ನು ಅಸುರರು ಮುಟ್ಟಲೂಕೂಡ ಸಾಧ್ಯವಿಲ್ಲ. ಕೆಲವು ವೇಳೆ ಅಸುರರು ಆಕೆಯನ್ನು ಮುಟ್ಟಿದ್ದು ಇತಿಹಾಸಾದಿಗಳಲ್ಲಿ ಕಂಡುಬಂದರೆ ಆಗ ವಾಯುದೇವರು ಹರಿಯ ಇಚ್ಛೆಯನ್ನನುಸರಿಸಿ ಸುಮ್ಮನಿದ್ದರೆಂದು ತಿಳಿಯಬೇಕು. ಈ ಅಭಿಪ್ರಾಯದಿಂದ ಭಾರತೀದೇವಿಯು ಶುದ್ಧತಮಳೆಂದು ವಾದಿರಾಜರು ಹೇಳಿರುತ್ತಾರೆ. ಭಾರತೀದೇವಿಯ ಮನಶ್ಶುದ್ಧತೆಯು ವಾಯುದೇವರ ಮನಶ್ಶುದ್ಧತೆಗಿಂತ ಉತ್ತಮವಾದದ್ದೆಂದು ಅವರ ಅಭಿಪ್ರಾಯವಲ್ಲ. (ಐದನೆಯ ವಿಲಾಸದ ೩೨-೩೩-೩೪-೩೫ನೆಯ ಶ್ಲೋಕಗಳನ್ನು ನೋಡಿರಿ).

ವಾದಿರಾಜಕೃತೇ ಶ್ರಾವ್ಯೇ ಕಾವ್ಯೇ ಭವ್ಯೇ ಸುಬುದ್ಧಿಭಿಃ ।
ಸೇವ್ಯೇ ಸರಸಭಾರತ್ಯಾಂ ವಿಲಾಸೋಽಭೂನ್ಮರುತ್ಪ್ರಿಯಃ ॥ ೪೩ ॥

ವಾದಿರಾಜರು ರಚಿಸಿದ, ಕೇಳಲು ಇಂಪಾದ, ಸುಂದರವಾದ, ಉತ್ತಮ ಬುದ್ಧಿಯುಳ್ಳವರಿಂದ ಸೇವಿಸಲ್ಪಡಲು ಯೋಗ್ಯವಾದ ಸರಸಭಾರತೀಕಾವ್ಯದಲ್ಲಿ ಎಂಟನೆಯ ವಿಲಾಸವು ವಾಯುಪ್ರಿಯವಾಯಿತು.

ಸರಸಭಾರತೀವಿಲಾಸಕಾವ್ಯದಲ್ಲಿ ಎಂಟನೆಯ ವಿಲಾಸವು ಪೂರ್ಣವಾಯಿತು.

ನವಮೋ ವಿಲಾಸಃ

॥ ಶ್ರೀಗುರುಭ್ಯೋ ನಮಃ ಹರಿಃ ಓಂ ॥

[ಗರುಡ, ಶೇಷ (ಬಲರಾಮ), ರುದ್ರ (ದುರ್ವಾಸ, ಅಶ್ವತ್ಥಾಮ) ಮತ್ತು ಇಂದ್ರಾದಿದೇವತೆಗಳಿಗೆ ಆಗಾಗ ಕಲಿಯ ಪ್ರವೇಶದಿಂದ ಪರಮಾತ್ಮನ ವಿಷಯದಲ್ಲಿ ಬುದ್ಧಿಮಾಲಿನ್ಯವು ಉಂಟು ಎಂಬುದಕ್ಕೆ ದೃಷ್ಟಾಂತಗಳನ್ನು ಈ ವಿಲಾಸದಲ್ಲಿ ಕೊಟ್ಟಿರುತ್ತಾರೆ.]

ವಿಶ್ವಂಭರಸ್ಯ ಭರ್ತುರ್ಮೇ ಶಕ್ತ್ಯಾ ಕೋಽಸ್ತಿ ಸಮಸ್ತ್ವಿತಿ ।
ಗರುಡೋಽಪ್ಯಸುರಾವೇಶಾದಹಂಚಕ್ರೇ ಕ್ವಚಿತ್ಕಿಲ ॥ ೧ ॥

ವಿಶ್ವವನ್ನು ಧರಿಸಿದ ಹರಿಯನ್ನು ಹೊರುವ ನನಗೆ ಬಲದಲ್ಲಿ ಸಮನಾರು ಇರುವನು ಎಂಬುದಾಗಿ ಗರುಡನೂ ಕೂಡ ಅಸುರಾವೇಶದಿಂದ ಒಂದಾನೊಂದು ಕಾಲದಲ್ಲಿ ಅಹಂಕಾರಪಟ್ಟನಷ್ಟೆ. ‖ ೧ ‖

ತಪಸಾರಾಧ್ಯ ಯೋ ವಿಷ್ಣುಂ ತಸ್ಯ ವಾಹನತಾಮುಗಾತ್ ।
ಈದೃಶಸ್ಯಾಪಿ ಕುಮತಿಃ ಕಲ್ಯಾವೇಶಾನ್ನ ಸಂಶಯಃ ॥ ೨ ॥

ತಪಸ್ಸಿನಿಂದ ವಿಷ್ಣುವನ್ನು ಪೂಜಿಸಿ ವಿಷ್ಣುವಿಗೆ ವಾಹನನಾದನು. ಇಂತಹವನಿಗೂ ಕೂಡ ಬುದ್ಧಿಯು ದುಷ್ಟವಾಗುವುದು ಕಲಿಯ ಆವೇಶದಿಂದಲೇ ಎಂಬುದರಲ್ಲಿ ಸಂಶಯವಿಲ್ಲ. ‖ ೨ ‖

ಕಿಂಚಿದ್ಭಾರಂ ದರ್ಶಯಿತ್ವಾ ತಂ ಚ ಕೃಷ್ಣೋಽನ್ಯಪಾತಯತ್ ।
ಮಹೀತಲೇ ತದಾ ಕಾಕಾಸ್ತಸ್ಯ ಶೋಕಂ ದದುಃ ಕಿಲ ॥ ೩ ॥

ಸ್ವಲ್ಪ ಭಾರವನ್ನು ಕೃಷ್ಣನು ಗರುಡನಿಗೆ ತೋರಿಸಿ ಅವನನ್ನು ಭೂಮಿಯಮೇಲೆ ಕೆಡವಿದನು. ಆಗ ಕಾಗೆಗಳು ಗರುಡನಿಗೆ ಶೋಕವನ್ನು ಉಂಟುಮಾಡಿದವಷ್ಟೆ. ‖ ೩ ‖

ಅತೋಽದ್ಯಾಪಿ ಸ್ವತುಂಡೇನ ಗರುಡಾಕಾರಧಾರಿಣಂ ।
ಅಭ್ಯೇತ್ಯ ಬಲವಂತಂ ಚ ಘ್ನಂತಿ ಕಾಕಾಃ ಪತತ್ರಿಣಂ ॥ ೪ ॥

ಆದ್ದರಿಂದ ಈಗಲೂಕೂಡ ಗರುಡನ ಆಕಾರವನ್ನು ಧರಿಸಿದ ಪಕ್ಷಿಯನ್ನು ಎದುರಿಸಿ ಬಲಿಷ್ಠವಾದ ಆ ಪಕ್ಷಿಯನ್ನು ಕಾಗೆಗಳು ಕೊಕ್ಕಿನಿಂದ ಕುಕ್ಕುತ್ತವೆ. ‖ ೪ ‖

ನಷ್ಟಾಹಂಕಾರಚಿತ್ತಂ ಚ ಪುನರಂಗೀಚಕಾರ ತಂ ।
ಇತ್ಯಾಹ ಭಾರತೇ ವ್ಯಾಸಸ್ತತ್ರಸ್ಯಾಪಿ ನ ಶುದ್ಧತಾ ॥ ೫ ॥

ಅಹಂಕಾರವು ಹೋದಮೇಲೆ ಆ ಗರುಡನನ್ನು ಹರಿಯು ಪುನಃ ಸಂಗ್ರಹಿಸಿದನು. ಹೀಗೆ ಭಾರತದಲ್ಲಿ ವ್ಯಾಸರು ಹೇಳಿದ್ದಾರೆ. ಆದ್ದರಿಂದ ಗರುಡನಿಗೂಕೂಡ ಶುದ್ಧತಾ ಇಲ್ಲ. ‖ ೫ ‖

ಭಾರತ-ಉದ್ಯೋಗಪರ್ವ-ಅಧ್ಯಾಯ ೧೦೫.

ಸ ತಸ್ಯ ವಚನಂ ಶ್ರುತ್ವಾ ಖಗಸ್ಯೋದರ್ಕದಾರುಣಾಂ ।
ಅಕ್ಷೋಭ್ಯಂ ಕ್ಷೋಭಯಂಸ್ತಾರ್ಕ್ಷ್ಯಮುವಾಚ ರಥಚಕ್ರಭೃತ್ ॥೨೦॥

ತ್ರೈಲೋಕ್ಯಮಪಿ ಮೇ ಕೃತ್ಸ್ನಮಶಕ್ತಂ ದೇಹಧಾರಣೇ ।
ಅಹಮೇವಾತ್ಮನಾತ್ಮಾನಂ ವಹಾಮಿ ತ್ವಾಂ ಚ ಧಾರಯೇ ॥ ೨೨ ॥

ಏವಂ ತಾವನ್ಮಮೈಕಂ ತ್ವಂ ಬಾಹುಂ ಸವ್ಯೇತರಂ ವಹ ।
ಯದ್ಯೇನಂ ಧಾರಯಸ್ಯೇಕಂ ಸಫಲಂ ತೇ ವಿಕತ್ಥಿತಂ ॥ ೨೩ ॥

ಇತ್ಯುಕ್ತ್ವಾ ಭಗವಾಂಸ್ತಸ್ಯ ಸ್ಕಂಧೇ ಬಾಹುಂ ಸಮಾಸಜತ್ ।
ನಿಪಪಾತ ಸ ಭಾರಾರ್ತೋ ವಿಹ್ವಲೋ ನಷ್ಟಚೇತನಃ ॥ ೨೪ ॥

ಸ್ಯಮಂತಕಾರ್ಥೇ ರಾಮೇಣ ಕೃತಃ ಶೇಷಸ್ವರೂಪಿಣಾ ।
ವಿರೋಧಂ ಸ್ವಾನುಜೇ ಕೃಷ್ಣೇ ದನುಜಾವಿಷ್ಟಚೇತಸಾ ॥ ೬ ॥

ಸ್ಯಮಂತಕಮಣಿಗಾಗಿ ಅಸುರಾವಿಷ್ಟಮನಸ್ಕನಾದ ಶೇಷರೂಪಿ ಬಲರಾಮನಿಂದ ತನ್ನ ತಮ್ಮನಾದ ಕೃಷ್ಣನಲ್ಲಿ ವಿರೋಧವು ಮಾಡಲ್ಪಟ್ಟಿತು.

ಅತೋ ಮನುಜ ದುರ್ಬುದ್ಧಿಂ ತ್ಯಜ ಸರ್ವೋತ್ತಮಂ ಭಜ ।
ವ್ರಜ ವೈಕುಂಠಪದವೀಂ ನಿಜಂ ಸ್ಥಾನಂ ತದಿಚ್ಛಯಾ ॥ ೭ ॥

ಆದ್ದರಿಂದ ಎಲೈ ಮನುಷ್ಯನೇ, ದುರ್ಬುದ್ಧಿಯನ್ನು ಬಿಡು. ಸರ್ವೋತ್ತಮನಾದ ಹರಿಯನ್ನು ಭಜಿಸು. ಆ ಪರಮಾತ್ಮನ ಅನುಗ್ರಹದಿಂದ ಸ್ವಂತಸ್ಥಾನವಾದ ವೈಕುಂಠವನ್ನು ಸೇರು. ॥ ೭ ॥

ದುರ್ವಾಸಾಃ ಶಂಕರಸ್ಯಾಂಶೋ ಹಂಸರೂಪೀ ನಿರಂಹಸೇ ।
ಅಂಬರೀಷಾಯ ಚುಕ್ರೋಧ ಕ್ರೋಧಾವಿಷ್ಟಮನೋರಥಃ ॥೮॥

ಶಂಕರನ ಅಂಶನಾದ ಪರಮಹಂಸಾಶ್ರಮವನ್ನು ತಾಳಿದ ಕೋಪಾವಿಷ್ಟವಾದ ಮನಸ್ಸುಳ್ಳ ದುರ್ವಾಸನು ನಿರಪರಾಧಿಯಾದ ಅಂಬರೀಷನ ಮೇಲೆ ಕೋಪವನ್ನು ತೋರಿಸಿದನು. ॥ ೮ ॥

ತದಾಸುರಾಣಾಮರಿಣಾ ಸೋಽರಿಣಾನುದ್ರುತೋ ಭಯಾತ್ ।
ಜಗಾಮ ಬ್ರಹ್ಮಸದನಂ ಸೋಽಪ್ಯಧೋವದನೋಽಭವತ್ ॥ ೯ ॥

ಆಗ ಅಸುರರಿಗೆ ಶತ್ರುವಾದ ಚಕ್ರದಿಂದ ಆತನು ಹಿಂಬಾಲಿಸಲ್ಪಟ್ಟವನಾಗಿ ಭಯದಿಂದ ಬ್ರಹ್ಮಲೋಕಕ್ಕೆ ಹೋದನು. ಆ ಬ್ರಹ್ಮನಾದರೋ ಮುಖವನ್ನು ತಗ್ಗಿಸಿಕೊಂಡನು. ಅಂದರೆ ಭಯಪಟ್ಟು ದುರ್ವಾಸನನ್ನು ರಕ್ಷಿಸಲು ಶಕ್ತನಾಗದೆ ಸುಮ್ಮನಿದ್ದನೆಂದು ಅಭಿಪ್ರಾಯ. ॥ ೯ ॥

ಅಲಬ್ಧಕಾರ್ಯಃ ಕೈಲಾಸಮಗಮಚ್ಛಂಕರಾಲಯಂ ।
ಸೋಽಪಿ ಭೀತೋ ಹರೇಶ್ಚಕ್ರಾದಾಹಾನುಸರ ತಂ ಹರಿಂ ॥ ೧೦ ॥

ಯಸ್ಯೇದಮಾಯುಧಂ ಪುತ್ರೇತ್ಯುಕ್ತೋ ವೈಕುಂಠಮಭ್ಯಗಾತ್ ।
ಹರಿಃ ಸ್ವಭಕ್ತವಾತ್ಸಲ್ಯಾನ್ನಾಮೋಚಯದಮುಂ ಮುನಿಂ ॥ ೧೧ ॥

ತನ್ನ ಇಷ್ಟಕಾರ್ಯವು ಆಗದಿರಲು ದುರ್ವಾಸನು ಶಂಕರನ ಲೋಕವಾದ ಕೈಲಾಸಕ್ಕೆ ಹೋದನು. ಆಗ ಆತನೂ ಕೂಡ ಹರಿಯ ಚಕ್ರಕ್ಕೆ ಭಯಪಟ್ಟು ಅಯ್ಯಾ ಪುತ್ರನೇ! ಈ ಚಕ್ರವು ಯಾರ ಆಯುಧವೋ ಆ ಹರಿಯನ್ನು ಅನುಸರಿಸು, ಎಂದು ಹೇಳಿದಾಗ ದುರ್ವಾಸನು ವೈಕುಂಠಕ್ಕೆ ಹೋದನು. ಆಗ ಹರಿಯು ಸ್ವಭಕ್ತನಾದ ಅಂಬರೀಷನಲ್ಲಿ ತನಗಿರುವ ವಾತ್ಸಲ್ಯದಿಂದ ಆ ಮುನಿಯನ್ನು ಬಿಡುಗಡೆಮಾಡಲಿಲ್ಲ. ॥ ೧೦-೧೧ ॥

ಅತೋಽಂಬರೀಷಧಾಮ್ನ್ಯೇವ ಗತಃ ಸೋಽಪಿ ಹರೇರರಿಂ ।
ಸ್ತುತ್ವೈವ ಮೋಚಯಾಮಾಸ ನ ತು ಸೋಽಪ್ಯಾತ್ಮಶಕ್ತಿತಃ ॥೧೨॥

ಅಲ್ಲಿಂದ ಅಂಬರೀಷನ ಮನೆಗೇನೆ ದುರ್ವಾಸನು ಹೋದನು. ಆ ಅಂಬರೀಷನೂ ಕೂಡ ಹರಿಯ ಚಕ್ರವನ್ನು ಸ್ತೋತ್ರಮಾಡಿಯೇ ದುರ್ವಾಸನನ್ನು ಬಿಡಿಸಿದನೇ ಹೊರ್ತು ಅವನೂಕೂಡ ತನ್ನ ಶಕ್ತಿಯಿಂದ ಬಿಡಿಸಲಿಲ್ಲ.

ಅತಃ ಶಿವಸ್ಯಾಪಿ ಮತಿರ್ವಿರುದ್ಧಾಭವದಚ್ಯುತೇ ।
ಹರೇಃ ಸರ್ವೋತ್ತಮತ್ವಂ ಚ ಸಿದ್ಧಮಾಸೀಜ್ಜಗತ್ರಯೇ ॥ ೧೩ ॥

ಆದ್ದರಿಂದ ಶಿವನ ಬುದ್ಧಿಯೂ ಕೂಡ ಅಚ್ಯುತನ ವಿಷಯದಲ್ಲಿ ವಿರುದ್ಧವಾಯಿತು. ಮತ್ತು ಹರಿಯ ಸರ್ವೋತ್ತಮತ್ವವು ಮೂರುಲೋಕಗಳಲ್ಲಿಯೂ (ಸತ್ಯಲೋಕ-ಕೈಲಾಸ-ವೈಕುಂಠ) ಉಪಲಕ್ಷಣಯಾ ಹದಿನಾಲ್ಕು ಲೋಕಗಳಲ್ಲಿಯೂ ನಿರ್ಣಯಿಸಲ್ಪಟ್ಟಿತು. || ೧೩ ||

ತಸ್ಮಾದ್ಧರ್ಯಾಯುಧಾದೇವ ಬಿಭ್ಯತುರ್ಬ್ರಹ್ಮಶಂಕರೌ |
ತಚ್ಚಕ್ರಂ ಯಸ್ಯ ವಶಗಂ ಸೋಽಭೂತ್ಸರ್ವೋತ್ತಮೋತ್ತಮಃ ||

ಹರಿಯ ಚಕ್ರಕ್ಕೇ ಬ್ರಹ್ಮಶಂಕರರು ಭಯಪಟ್ಟರು. ಆದ್ದರಿಂದ ಆ ಚಕ್ರವು ಯಾವನ ವಶವಲ್ಲಿದೆಯೋ ಅವನು ಸರ್ವೋತ್ತಮೋತ್ತಮನಾದನು.

ದ್ರೌಣ್ಯಾತ್ಮಾ ಶಂಕರಃ ಕೃಷ್ಣಮವಜಜ್ಞೇ ಪದೇಪದೇ |
ಹರಿಃ ಶಶಾಪ ಕಿಲ ತಂ ದುರ್ಯೋಧನಮತಾನುಗಂ || ೧೫ ||

ಶಂಕರಾಂಶನಾದ ದ್ರೋಣಪುತ್ರ ಅಶ್ವತ್ಥಾಮನು ಅಡಿಗಡಿಗೆ ಕೃಷ್ಣನನ್ನು ತಿರಸ್ಕಾರಮಾಡಿದನು. ಹರಿಯು ದುರ್ಯೋಧನನನ್ನು ಅನುಸರಿಸಿದ ಅವನನ್ನು ಶಪಿಸಿದನಷ್ಟೆ. || ೧೫ ||

[ಸೌಪ್ತಿಕಪರ್ವ ಅಧ್ಯಾಯ ೧೬-ಶ್ಲೋಕಗಳು ೬ ರಿಂದ ೧೫ರವರೆಗೆ ಇದಕ್ಕೆ ಪ್ರಮಾಣ]

ಹತೇ ಚ ರಾವಣೇ ಶಂಭುರ್ಧನುರಾದಾಯ ರಾಘವಂ |
ಆಜುಹಾವ ರಣಾಯೇತಿ ಕಥಾ ರಾಮಾಯಣೇ ಸ್ಫುಟಾ || ೧೬ ||

ರಾವಣನು ಹತನಾದಾಗ ಶಂಭುವು ಧನುಸ್ಸನ್ನು ಹಿಡಿದು ರಾಮನನ್ನು ಯುದ್ಧಕ್ಕೆ ಕರೆದನು, ಎಂಬ ಕಥೆಯು ರಾಮಾಯಣದಲ್ಲಿ ಸ್ಫುಟವಾಗಿ ಕಂಡುಬರುತ್ತೆ. || ೧೬ ||

ಏವಂ ಚ ಶಂಕರಸ್ಯಾಪಿ ಕಲ್ಯಾವಿಷ್ಟಂ ಮನೋಽಭವತ್ |
ತಸ್ಮಾದನ್ಯಸುರಾಣಾಂ ಕಾ ವಾರ್ತಾ ತದನುವರ್ತಿನಾಂ || ೧೭ ||

ಹೀಗೆ ಶಂಕರನಿಗೂ ಕೂಡ ಮನಸ್ಸು ಕಲಿಯಿಂದ ಆವಿಷ್ಟವಾಯಿತು.

ಅಂದಮೇಲೆ ಆ ರುದ್ರನನ್ನು ಅನುಸರಿಸಿವ ದೇವತೆಗಳ ಮಾತೇನು? ಅಂದರೆ ಅವರ ಮನಸ್ಸು ಕಲಿಯಿಂದ ಕೆಡುತ್ತದೆ ಎಂದು ಹೇಳಬೇಕೇನು?

ಇಂದ್ರಶ್ಚ ಪಾರಿಜಾತಾರ್ಥಂ ಯುಯುಧೇ ಹರಿಣಾ ಸಹ ।
ಅಚೀಕರದ್ಧರೌ ವೈರಂ ಮಖಭಂಗೇ ಕೃತೇ ಸತಿ ॥ ೧೮ ॥

ಪಾರಿಜಾತವೃಕ್ಷಕ್ಕಾಗಿ ಇಂದ್ರನೂ ಕೂಡ ಹರಿಯನ್ನು ಎದುರಿಸಿ ಯುದ್ಧಮಾಡಿದನು. ಅಲ್ಲದೆ ತನ್ನ ಪೂಜಾರೂಪವಾದ ಯಜ್ಞಕ್ಕೆ ಭಂಗ ಬಂದಾಗ ಕೃಷ್ಣನ ಕೂಡ ವೈರವನ್ನು ಮಾಡಿದನು. ॥ ೧೮ ॥

ಪಾರಿಜಾತಾಪಹರಣೇ ಸೇಶ್ವರಾದಿಗಧೀಶ್ವರಾಃ ।
ಅಯುಧ್ಯ ಹರಿಣಾ ಸಾರ್ಧಂ ಯುದ್ಧೇ ಕ್ರುದ್ಧಮನೋರಥಾಃ ॥
ಬಲಿನಾ ಕಲಿನಾ ವಿದ್ಧಾಸ್ತೇ ಚ ಸಿದ್ಧಾ ವಿಚಾರಣೇ ।

ಕೃಷ್ಣನು ಪಾರಿಜಾತವೃಕ್ಷವನ್ನು ತೆಗೆದುಕೊಂಡು ಹೋದಾಗ ಇಂದ್ರನಿಂದ ಸಹಿತರಾದ ದಿಕ್ಪಾಲಕರು ಕೋಪಾವಿಷ್ಟಮನಸ್ಕರಾಗಿ ಹರಿಯ ಕೂಡ ಯುದ್ಧಮಾಡಿದರು–ಎಂಬುದನ್ನು ವಿಚಾರಮಾಡಿದರೆ ಆ ದೇವತೆಗಳು ಬಲಿಷ್ಠನಾದ ಕಲಿಯಿಂದ ಭೇದಿಸಲ್ಪಟ್ಟರೆಂದು ಸಿದ್ಧವಾಗುತ್ತದೆ.

ಭೂಭಾರಭೂತದೈತ್ಯಾನಾಂ ವಧಾಯ ಕ್ಷೀರಸಾಗರಂ ॥ ೨೦ ॥

ಗತ್ವಾ ಯೇ ಪ್ರಾರ್ಥಯಾಮಾಸುರ್ಜಪ್ತ್ವಾ ತಪ್ತ್ವಾ ಚ ಸತ್ತಪಃ ।
ತೇಷಾಮುದ್ಯೇದೃಶೀ ಮನ್ಯೇ ಕುಬುದ್ಧಿರ್ನ ಸ್ವಭಾವತಃ ॥ ೨೧ ॥

ಅತೋsನ್ಯಾವೇಶತೋ ವಾಚ್ಯಾ ಭೂತಾವಿಷ್ಟಾಂತರಾತ್ಮವತ್ ।
ತಸ್ಮಾದ್ಯಾಯಿನ್ಯಿತರೇ ದೇವಾಃ ಕಲ್ಯಾಕ್ರಾಂತಮನೋರಥಾಃ ॥೨೨॥

ಭೂಭಾರಭೂತರಾದ ಕಂಸಾದಿದೈತ್ಯರ ವಧಾರ್ಥವಾಗಿ ಕ್ಷೀರಸಾಗರಕ್ಕೆ ಹೋಗಿ ಉತ್ತಮವಾದ ಜಪವನ್ನೂ ತಪಸ್ಸನ್ನೂ ಮಾಡಿ ಪರಮಾತ್ಮನನ್ನು ಅವತಾರಮಾಡೆಂದು ಪ್ರಾರ್ಥಿಸಿದ ಆ ದೇವತೆಗಳಿಗೆ ಪಾರಿಜಾತಾಪ-ಹರಣಸಮಯದಲ್ಲಿ ಬಂದ ಇಂತಹ ದುಷ್ಟಬುದ್ಧಿಯು ಅವರ ಸ್ವಭಾವ

ದಿಂದ ಆವಿಷ್ಟವಲ್ಲವೆಂದು ತಿಳಿಯುತ್ತೇನೆ. ಅಷ್ಟರಿಂದ ಪಿಶಾಚದಿಂದ ಆವಿಷ್ಟವಾದ ಮನಸ್ಸುಳ್ಳವನಿಗೆ ಹೇಗೋ ಹಾಗೆ ಅಸ್ಥಿರವಾದ ಅಸುರರ ಆವೇಶದಿಂದ ಎಂದು ಹೇಳಬೇಕು. ಹೀಗೆ ವಾಯುದೇವನಿಗಿಂತ ಅನ್ಯರಾದ ದೇವತೆಗಳು ಕಲಿಯಿಂದ ಆಕ್ರಾಂತವಾದ ಮನಸ್ಸುಳ್ಳವರು. (ಅಂದರೆ ಇವರ ಮನಸ್ಸನ್ನು ಕಲಿಯು ಪ್ರವೇಶಿಸಲು ಸಾಧ್ಯವೆಂದರ್ಥ. ‖ ೨೮(ಅ)-೨೨ ‖

ವಾಯೋರಪಿ ಸಮಾ ನಾಸಂಸ್ತತ್ಕಥಂ ಸ್ಯುಃ ಹರೇಃ ಸಮಾಃ ।
ಕಿಂ ಚ ತೂರ್ಣಂ ಗೃಹೀತ್ವೇತಿ ಶ್ಲೋಕಂ ತ್ವಂ ಚ ವಿಚಾರಯ ‖

ವಾಯುದೇವನಿಗೇ ದೇವತೆಗಳು ಸಮರಾಗಲಿಲ್ಲವೆಂದಮೇಲೆ ಅವರು ಹರಿಗೆ ಹೇಗೆ ಸಮರು ಆದಾರು? ಅಲ್ಲದೆ ಭಾಗವತದ ದಶಮಸ್ಕಂಧದಲ್ಲಿನ "ತೂರ್ಣಂ ಗೃಹೀತ್ವಾ" ಎಂಬ ಶ್ಲೋಕಾರ್ಥವನ್ನು ವಿಚಾರಮಾಡು.

"ತೂರ್ಣಂ ಗೃಹೀತ್ವಾ ಬಾಹುಭ್ಯಾಂ ವಿಷಾಣೇ ತಸ್ಯ ನಂದಿನಃ ।
"ಸಶೂಲಪಾಣಿಂ ಚಿಕ್ಷೇಪ ವೈನತೇಯೋ ಧನುಶ್ಶತಂ" ‖ ೪೮ ‖

"ತತೋ ವಿಸೃಜ್ಯ ಸಂಗ್ರಾಮಂ ತ್ರಿಶೂಲೀ ವೃಷವಾಹನಃ ।
ಪ್ರಮಥೈಃ ಸಹಿತಃ ಪ್ರಾಯಾತ್ಕುರುಶ್ರೇಷ್ಠ ಯಥಾಗತಂ ‖ ೪೯ ‖

(ಭಾಗವತ ದಶಮಸ್ಕಂಧ ೬೩ನೇ ಅಧ್ಯಾಯ)

ಪಾರಿಜಾತಾಪಹರಣಸಮಯದಲ್ಲಿ ಕೃಷ್ಣನಿಗೂ, ಇಂದ್ರನಿಗೆ ಸಹಾಯ ಮಾಡಲು ಬಂದ ರುದ್ರನಿಗೂ ಯುದ್ಧ ನಡೆದಾಗ ಹರಿಯ ವಾಹನನಾದ ಗರುಡನು ತಟ್ಟನೆ ನಂದಿಯ ಎರಡು ಕೊಂಬನ್ನು ಹಿಡಿದು ಶೂಲಪಾಣಿಯಿಂದ ಸಹಿತವಾದ ನಂದಿಯನ್ನು ನೂರು ಧನುಸ್ಸದೂರ ಬಿಸುಟನು. ನಂತರದಲ್ಲಿ ತ್ರಿಶೂಲಧಾರಿಯಾದ ವೃಷವಾಹನನು ಪ್ರಮಥಗಣಗಳಿಂದ ಕೂಡಿದವನಾಗಿ ಯುದ್ಧವನ್ನು ಬಿಟ್ಟು, ಅಯ್ಯಾ ಕುರುಶ್ರೇಷ್ಠನಾದ ಪರೀಕ್ಷಿತನೇ, ಬಂದ ದಾರಿಯನ್ನು ಹಿಡಿದು ಹೋದನು.

ನಿರಾಯುಧೋ ಹರೇಃ ಪಕ್ಷೀ ಸಾಯುಧಂ ಚ ಸವಾಹನಂ ।
ದೋರ್ಭ್ಯಾಂ ಗೃಹೀತ್ವಾ ತ್ರ್ಯಕ್ಷಂ ತೇ ಚಿಕ್ಷೇಪ ಕಿಲ ದೃಷ್ಟತಃ ‖

ಆಯುಧವಿಲ್ಲದ ಹರಿಯ ವಾಹನನಾದ ಗರುಡನು ಆಯುಧ ಮತ್ತು ವಾಹನಸಹಿತನಾದ ನಿನ್ನ ಮುಕ್ಕಣ್ಣನನ್ನು ತನ್ನ ಎರಡು ಕೋಳುಗಳಿಂದ ಹಿಡಿದು ಹಿಂದಕ್ಕೆ ಬಿಸುಟನು. ‖ ೨೪ ‖

ಸಮಸ್ಯಾಪಿ ಸಮೋ ನಾಭೂದ್ಯಸ್ತಾರ್ಕ್ಷ್ಯಸ್ಯ ಹರೇರ್ಬಲಾತ್ ।
ಸ ತೇ ಕಥಂ ವಿರೂಪಾಕ್ಷಃ ಸದೃಕ್ಷಃ ಸ್ಯಾನ್ಮನು ಪ್ರಭೋಃ ‖೨೫‖

ಯೋಗ್ಯತೆಯಲ್ಲಿ ಗರುಡನಿಗೆ ಸಮನಾದರೂ ಹರಿಯ ಬಲವಿದ್ದದ್ದರಿಂದ ಯಾವ ರುದ್ರನು ಸಮನಾಗಲಿಲ್ಲವೋ ಆ ನಿನ್ನ ವಿರೂಪಾಕ್ಷನು ನಮ್ಮ ಪ್ರಭುವಾದ ಕೃಷ್ಣನಿಗೆ ಹೇಗೆ ಸಮನಾದಾನು? ವಿರೂಪಾಕ್ಷನು ಪುಂಡರೀಕಾಕ್ಷನಿಗೆ ಹೇಗೆ ಸಮನಾದಾನು ಎಂದು ಧ್ವನಿತವಾಗುತ್ತೆ. ‖ ೨೫ ‖

ತಥಾಪಿ ಭಕ್ತವಾತ್ಸಲ್ಯಾತ್ಕರುಣಾಸಾಗರೋ ಹರಿಃ ।
ನ ಮುಂಚತಿ ಸುರಾನೇತಾನ್ಸೋಽಸೌ ಸರ್ವಂಸಹಾಪತಿಃ ‖ ೨೬ ‖

ಆದರೂ ಕೂಡ ಭಕ್ತರಲ್ಲಿ ತನಗಿರುವ ವಾತ್ಸಲ್ಯದಿಂದ ಸರ್ವವನ್ನೂ ಸಹಿಸತಕ್ಕವಳೆಂಬ ಕಾರಣದಿಂದ "ಸರ್ವಂಸಹಾ" ಎಂದು ಹೆಸರುಳ್ಳ ಧರಾದೇವಿಯ ಪತಿಯಾದ ಹರಿಯು ದೇವತೆಗಳನ್ನು (ಅವರು ಎಷ್ಟು ಅಪರಾಧ ಮಾಡಿದರೂ) ಬಿಡುವುದಿಲ್ಲ. ‖ ೨೬ ‖

ಪಂಕಾಕೀರ್ಣತನುಂ ಸೂನುಂ ಯಥಾ ಮಾತಾ ಕೃಪಾವತೀ ।
ಪಂಕಂ ಪ್ರಕ್ಷಾಳ್ಯ ರಕ್ಷೇದ್ಧಿ ತಥಾ ಸ್ವಾನ್ರಕ್ಷತಿ ಪ್ರಭುಃ ‖ ೨೭ ‖

ಕೆಸರಾದ ಮೈಯ್ಯುಳ್ಳ ಮಗುವನ್ನು ಯಾವರೀತಿಯಲ್ಲಿ ಕೃಪಾವಂತಳಾದ ತಾಯಿಯು ಕೆಸರನ್ನು ತೊಳೆದು ರಕ್ಷಿಸುವಳೋ ಹಾಗೆ ಪ್ರಭುವಾದ ನಾರಾಯಣನು ತನ್ನ ಭಕ್ತರನ್ನು ರಕ್ಷಿಸುತ್ತಾನೆ. ‖ ೨೭ ‖

ವಿಷಮುಷ್ಣಮ್ಮತೀಕ್ಷ್ಣತ್ವ ಪಪೌ ಕಿಲ ಮರುತ್ಪುರಾ ।
ವಾಯೌ ಭಕ್ತಿಮತಾಂ ಚಾಪಿ ಮತಿರಸ್ಯಾಕಮೀದೃಶೀ ‖ ೨೮ ‖

ವಿಷಕಲ್ಪೇನ ಕಲಿನೈವಾಲ್ಪೀಕೃತ್ಯ ಸುರಾವಲೀಂ ।
ಯತಃ ಪ್ರಸಾಧಯಾಮೋಽಸ್ಮನ್ಮತಂ ವಿಸ್ಮಾಪನಂ ಸತಾಂ ‖ ೨೯ ‖

ಪೂರ್ವದಲ್ಲಿ ವಾಯುದೇವರು ಸಮುದ್ರಮಥನಕಾಲದಲ್ಲಿ ಹುಟ್ಟಿದ ಕಾಲಕೂಟವಿಷವನ್ನು ಅಮೃತವನ್ನಾಗಿಮಾಡಿಕೊಂಡು ಕುಡಿದರಷ್ಟೆ. ವಾಯುವಿನಲ್ಲಿ ಭಕ್ತಿಯುಳ್ಳ ನಮ್ಮ ಬುದ್ಧಿಯೂಕೂಡ ಅಂತೆಯಾದದ್ದೇ. ಅಂದರೆ: ವಿಷದಂತಿರುವ ಕಲಿಯಿಂದಲೇ ದೇವತೆಗಳ ಸಮೂಹವನ್ನು ಅಲ್ಪವನ್ನಾಗಿ ಮಾಡಿಸಿ ಸಜ್ಜನರಿಗೆ ಆಶ್ಚರ್ಯವನ್ನುಂಟುಮಾಡುವ ನಮ್ಮ ಮತವನ್ನು ಚನ್ನಾಗಿ ಸಾಧಿಸುತ್ತೇವೆ. ಶ್ಲೋಕಾಭಿಪ್ರಾಯ ಹೀಗೆ:- ವಾಯುದೇವರು ವಿಷವನ್ನು ಅಮೃತವನ್ನಾಗಿ ಮಾಡಿಕೊಂಡು ಕುಡಿದರು. ಅವರ ಭಕ್ತರಾದನಮ್ಮ ಬುದ್ಧಿಯು ವಿಷಕ್ಕೆ ಸಮಾನವಾದ ಕಲಿಯು ದೇವತೆಗಳಲ್ಲಿ ಪ್ರವೇಶಮಾಡಿದ ಪ್ರಮೇಯವನ್ನೂ, ಆ ಕಲಿಯು ವಾಯುದೇವರನ್ನು ಪ್ರವೇಶಿಸಲಾರನೆಂಬುವನ್ನೂ ತಿಳಿದು, ವಾಯುದೇವರು ಇತರ ದೇವತೆಗಳಿಗಿಂತ ಉತ್ತಮರು, ನಾರಾಯಣನು ಆ ವಾಯುದೇವರಿಗಿಂತ ಶ್ರೇಷ್ಠನು ಎಂಬ ಪರಮಪ್ರಮೇಯವನ್ನು ಸಾಧನೆಮಾಡುತ್ತದೆ. ಈ ಪ್ರಮೇಯಜ್ಞಾನವೇ ಅಮೃತತ್ವಕ್ಕೆ (ಮುಕ್ತಿಗೆ) ಸಾಧನ. ನಮ್ಮಮತವೇನೆಂದರೆ ಜೀವಕೋಟಿಯಲ್ಲಿ ವಾಯುದೇವನು ಸರ್ವೋತ್ತಮನು. ನಾರಾಯಣನು ಅವನಿಗಿಂತ ಉತ್ತಮನಾದ್ದರಿಂದಲೇ ಹರಿಯು ಸರ್ವೋತ್ತಮೋತ್ತಮನಾದನು. "ಯಥಾರ್ಥಮಪರಾನ್ಯಪ" ಇಲ್ಲಿ ವಿಷ್ಣುವಿನ ಸರ್ವೋತ್ತಮತ್ವವನ್ನು ತಾರತಮ್ಯಾಂತರ್ಗತ್ವೇನ ತಿಳಿಯಬೇಕು ಎಂದು ಹೇಳಿದೆ. (ತಾ-ನಿ-೩-೧೧೦). ದೇವತಾತಾರತಮ್ಯವನ್ನು ಪ್ರತಿಪಾದಿಸಿ ಪರಮಾತ್ಮ ಎಲ್ಲಾ ದೇವತೆಗಳಿಗಿಂತ ಉತ್ತಮಳಾದ ರಮಾದೇವಿಗಿಂತ ಅತ್ಯುತ್ತಮೋತ್ತಮನೆಂದೂ, ಈ ಜ್ಞಾನವೇ ಮುಕ್ತಿಗೆ ಸಾಧನವೆಂದೂ, ಹೀಗೆ ವಿಷ್ಣುವಿನ ಸರ್ವೋತ್ತಮತ್ವವನ್ನು ತಿಳಿದವರೇ ಏಕಾಂತಿಗಳೆಂದೂ ಛಾಂದೋಗ್ಯ ಉಪನಿಷತ್ತಿನಲ್ಲಿ ನಿರೂಪಿಸಲ್ಪಟ್ಟಿದೆ. (ಛಾಂ-೧-೧)

ಯತೋ ಭಾಗವತೇ ವಿಷ್ಣುಪಾದೋದಕನಿಷೇವಣಾತ್ ।
ಶಿವಃ ಶಿವೋಭೂದಿತ್ಯಾಹ ಕುಳೀ ಪರಮಧಾರ್ಮಿಕೈಃ ॥ ೩೦ ॥

ಅತಃ ಪ್ರಾಗಶಿವತ್ವಂ ಚ ಕುಕಸ್ಯಾಪಿ ಹಿ ಸಂಮತಂ ।
ಸ್ವಭಾವತೋ ಶಿವತ್ವಂ ತು ಸುರಾಣಾಂ ನ ಕದಾಚನ ॥ ೩೧ ॥

ಪರಮಧಾರ್ಮಿಕರಾದ ಶುಕಾಚಾರ್ಯರು ಭಾಗವತದಲ್ಲಿ ವಿಷ್ಣು-ಪಾದೋದಕವಾದ ಗಂಗೆಯನ್ನು ಶಿರಸ್ಸಿನಲ್ಲಿ ಧರಿಸಿ ಶಿವನು ಶಿವನಾದನು ಎಂದು ಹೇಳಿರುವರು. ಆದುದರಿಂದ ವಿಷ್ಣುಪಾದೋದಕವನ್ನು ಶಿರಸ್ಸಿನಲ್ಲಿ ಧರಿಸುವದಕ್ಕೆ ಮೊದಲು ಅವನಿಗೆ ಶಿವತ್ವವು ಇರಲಿಲ್ಲವೆಂಬುದು ಶುಕಾ-ಚಾರ್ಯರಿಗೂ ಸಮ್ಮತವೇ ಸರಿ. ವಿಷ್ಣ್ವನುಗ್ರಹವಿಲ್ಲದಿದ್ದಲ್ಲಿ ದೇವತೆಗಳಿಗೆ ಯಾವಾಗಲೂ ತಮ್ಮ ಮಹಿಮೆಯಿಂದಲೇ ಶಿವತ್ವವು ಇಲ್ಲ. [ಇಲ್ಲಿ ಸ್ವಭಾವಶಬ್ದವು ದೇವತೆಗಳ ಸ್ವರೂಪವನ್ನು ಉದ್ದೇಶಿಸಿ ಪ್ರಯೋಗ ಮಾಡಿಲ್ಲ.] || ೩೦-೩೧ ||

ಶ್ವಪಚಾದಪಿ ಕಷ್ಟತ್ವಂ ಬ್ರಹ್ಮೇಶಾನಾದಯಸ್ಸುರಾಃ |
ತದೈವಾಚ್ಯುತ ಯಾಂತ್ಯೇವ ಯದೈನತ್ವಂ ಪರಾಙ್ಮುಖಃ ||

ಬ್ರ. ಸೂ. ಭಾ. ೧-೧-೧.

ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ |
ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ || ಅ.ವ್ಯಾ.

ಸಾತ್ವಿಕಾನಾಂ ತತಃ ಸಿದ್ಧಃ ಕಲ್ಯಾವೇಶಃ ಶಿವೇಽಪಿ ಚ |
ವ್ಯೋಮಕೇಶಃ ಕಿಲೇಶಾನೋ ವ್ಯೋಮ ವಿಷ್ಣುಪದಂ ಕಿಲ ||

ಶಿವನಲ್ಲಿಯೂ ಕೂಡ ಕಲ್ಯಾವೇಶವಿದ್ದದ್ದರಿಂದ ಮುಖ್ಯಪ್ರಾಣನನ್ನು ಬಿಟ್ಟು ಉಪಲಕ್ಷಣತಯಾ ಪರಶುಕ್ಲತ್ರಯರನ್ನು ಬಿಟ್ಟು ಮಿಕ್ಕ ಎಲ್ಲಾ ಸಾತ್ವಿಕರಿಗೂ ಕಲ್ಯಾವೇಶವಿರುವುದು ಸಿದ್ಧವಾಯಿತು. (ಚ = ಯತಃ) ರುದ್ರನು ವ್ಯೋಮಕೇಶನಷ್ಟೆ. ಅಂದರೆ ಆಕಾಶದಲ್ಲಿ ಕೂದಲುಳ್ಳವನು. ಆಕಾಶವು ವಿಷ್ಣುಪದವಷ್ಟೆ. ವಿಷ್ಣುಪದವೆಂದರೆ ವಿಷ್ಣುವಿನ ಪಾದವೆಂದೂ ಅರ್ಥ. ರುದ್ರನ ಕೂದಲು ವಿಷ್ಣುವಿನ ಪಾದದಲ್ಲಿದೆ ಎಂದರೆ ಸದಾ ರುದ್ರನು ವಿಷ್ಣುವನ್ನು ನಮಸ್ಕರಿಸುವನು ಎಂದರ್ಥ. || ೩೨ ||

ಶಾಸನಸ್ಥಾ ಭವತ್ತಸ್ಮಾದ್ಧರಸ್ಯ ಹರಿದಾಸತಾ |
ಅದ್ಯಾಪಿ ಭಕ್ತೇರ್ದ್ಯೋತಕಾಂ ದರ್ಶಯಂತೋ ನೃಪಾಂತಿಕೇ ||೩೩||

ಭೃತ್ಯಾ ಭಟಾ ಮಚ್ಛಿರಸಸ್ತ್ವಪಾದಸ್ಯ ಚ ಪ್ರಭೋ ।
ಗ್ರಂಥಿರಿತ್ಯಾಹುರೇವಂ ಚ ಸದಾ ವಿಷ್ಣುಪದೇ ಶಿರಃ ॥ ೩೪ ॥
ಘಟಯನ್ ಧೂರ್ಜಟಿರ್ವಿಷ್ಣುಭಕ್ತೇಷ್ವಗ್ರೇಸರೋಽಭವತ್ ।

ಆದ್ದರಿಂದ ಹರನು ಹರಿದಾಸನೆಂಬುದು ಶಿಲೆಯಲ್ಲಿ ಕೆತ್ತಿದ ಶಾಸನದಂತೆ ಆಯಿತು. ಈಗಲೂಕೂಡ ಭಕ್ತಿದಾರ್ಢ್ಯವನ್ನು ಪ್ರಕಟಿಸುವ ಭೃತ್ಯರೂ ಭಟರೂ ರಾಜನ ಸಮೀಪದಲ್ಲಿ ಎಲೈ ಪ್ರಭುವೇ ನನ್ನ ತಲೆಗೂ ನಿಮ್ಮ ಪಾದಕ್ಕೂ ಗಂಟುಹಾಕಿದೆ ಎಂಬ ರೀತಿಯಲ್ಲಿ ಹೇಳುವರು. ಹೀಗೆಯೇ ವಿಷ್ಣುಪಾದದಲ್ಲಿ ಶಿರವನ್ನಿಟ್ಟು ಧೂರ್ಜಟಿಯು ವಿಷ್ಣುಭಕ್ತರಲ್ಲಿ ಅಗ್ರೇಸರ ನಾದನು. ॥ ೩೩-೩೫ (೧) ॥

ಮಮ ಮೂರ್ಧ್ನಿ ಭವತ್ಪಾದ ಇತಿ ಯೋ ವಕ್ತಿ ಮಾನವಃ ॥೩೫॥
ಸಕೃದ್ಯಸ್ಯ ಪದಂ ಮೂರ್ಧ್ನಿ ಯೋ ಧಾರಯತಿ ಚ ಪ್ರಭೋಃ ।
ತಂ ಚ ತದ್ಭಕ್ತಮೇವಾಹುಃ ಪ್ರಾಂಚಃ ಶಾಸ್ತ್ರವಿದೋ ಬುಧಾಃ ॥

ನನ್ನ ತಲೆಯಲ್ಲಿ ನಿನ್ನ ಪಾದವು ಎಂದು ಹೇಳಿ ಯಾವ ಮನುಷ್ಯನು ಪ್ರಭುವಿನ ಪಾದವನ್ನು ಒಂದುಸಲ ಶಿರಸ್ಸಿನಲ್ಲಿ ಧರಿಸುತ್ತಾನೋ ಅವನನ್ನು ಆ ಪ್ರಭುವಿನ ಭಕ್ತನೆಂದೇ ಶಾಸ್ತ್ರವನ್ನುತಿಳಿದ ಪೂರ್ವಿಕರು ಹೇಳುತ್ತಾರೆ.

ಸದಾ ವಿಷ್ಣುಪದಾಸಕ್ತಮಸ್ತಕೋ ಯಸ್ತ್ರಿಲೋಚನಃ ।
ನಿತ್ಯಂ ಚ ಹರಿಭಕ್ತತ್ವಂ ತಸ್ಯ ಶಂಭೋರಭೂದ್ಬಲಾತ್ ॥ ೩೭ ॥

ಯಾವಾಗಲೂ ವಿಷ್ಣುಪದದಲ್ಲಿ ಸೇರಿದ ಶಿರಸ್ಸುಳ್ಳ ತ್ರಿಲೋಚನನಾದ ಶಂಭುವು ಸದಾ ಹರಿಭಕ್ತನೆಂಬುದು ಅವಶ್ಯಕವಾಗಿ ಸಿದ್ಧವಾಯಿತು. ॥೩೭॥

ಗಂಗಾಧರಃ ಕಿಲ ಶಿವೋ ಗಂಗಾ ವಿಷ್ಣುಪದೀ ಕಿಲ ।
ಅತೋಽಪಿ ಶಾಸನಸ್ಥಾಭೂದ್ಧರಸ್ಯ ಹರಿದಾಸತಾ ॥ ೩೮ ॥

ಶಿವನು ಗಂಗಾಧರನಷ್ಟೆ. ಗಂಗೆಯು ವಿಷ್ಣುಪಾದದಿಂದ ಹುಟ್ಟಿದವಳಷ್ಟೆ. ಹೀಗೆ ಗಂಗೆಯನ್ನು ಜಟೆಯಲ್ಲಿ ಧರಿಸಿದ್ದರಿಂದ ಹರನು ಹರಿದಾಸನೆಂಬುದು ಶಿಲಾಶಾಸನದಂತೆ ದೃಢವಾಯಿತು. ॥ ೩೮ ॥

ಸಕೃತ್ತೀರ್ಥಂ ಯಸ್ಯ ಮೂರ್ಧ್ನಿ ಸೋಽಪಿ ತತ್ಕಿಂಕರಃ ಕಿಲ ।
ನಿತ್ಯಂ ಚ ತೀರ್ಥಪಾದಸ್ಯ ತೀರ್ಥಶೋಭಿತಮಸ್ತಕಃ ॥ ೩೯ ॥

ಸ ತಸ್ಯ ನಿತ್ಯಭಕ್ತೋಭೂತ್ತೀರ್ಥಮೌಲಿಂ ವದಂತಿ ಯಂ ।

ಯಾವನು ಮತ್ತೊಬ್ಬನ ಪಾದೋದಕವನ್ನು ಒಂದುಸಲ ಶಿರಸ್ಸಿನಲ್ಲಿ ಧರಿಸುವನೋ ಅವನು ಅವನ ಕಿಂಕರನಷ್ಟೆ. ಸದಾ ಪವಿತ್ರವಾದ ಪಾದವುಳ್ಳ ಅಥವಾ ಪವಿತ್ರಸ್ವರೂಪನಾದ ಅಥವಾ ತೀರ್ಥಉದ್ಭವಿಸಿದ ಪಾದವುಳ್ಳ ಶ್ರೀ ಕೃಷ್ಣನ ಪಾದೋದಕದಿಂದ ಶೋಭಿತವಾದ ಶಿರಸ್ಸುಳ್ಳ ಹರನು ಆ ಕೃಷ್ಣನ ನಿತ್ಯಭಕ್ತನಾದನು. ಆದ್ದರಿಂದಲೇ ಅಲ್ಲವೇ ಆ ಶಿವನನ್ನು ತೀರ್ಥ-ಮೌಳಿ ಎಂದು ಜನಗಳು ಕರೆಯುವರು. ಅಂದರೆ ತೀರ್ಥವು ಯಾವನ ಜಟೆಯಲ್ಲಿಯೋ ಅವನು ತೀರ್ಥಮೌಳಿಯು. ॥ ೩೯-೪೦ (೧) ॥

ಗುರೂಣಾಂ ಶಾಸನಂ ಮಾನ್ಯಂ ಯದಾ ರಾಜ್ಞಾಂ ಚ ಶಾಸನಂ ॥

ತದಾ ಮಾನ್ಯತಮಂ ಸರ್ವಂ ಶ್ಲಾಘ್ಯಂ ಲಿಂಗಾನುಶಾಸನಂ ।
ಸಂದೇಹೇ ಸತಿ ಶಬ್ದಾನಾಂ ವದಂತ್ಯದ್ಯಾಪಿ ಯದ್ಬುಧಾಃ ॥ ೪೧ ॥

ಶಿಲಾಶಾಸನಕಲ್ಪಂ ತದಾಸೀದೇತದ್ಧಿ ಶಾಸನಂ ।
ಸ್ಥಾನೇ ಸ್ಥಾನೇ ಧರ್ಮಗುಪ್ತ್ಯೈ ದೇವತಾಯತನೇ ಕೃತಂ ॥೪೨॥

ಗ್ರಾಮೇ ಗ್ರಾಮೇ ಕೃತಂ ಕೋವಾ ಶಾಸನಂ ಲಂಘಯೇತ್ಪುಮಾನ್
ಭಾಷಯಾ ಲಿಖಿತಂ ಚಾಪಿ ಶಾಸನಂ ಶ್ಲಾಘ್ಯಮೇವಹಿ ॥ ೪೩ ॥

ಕಿಂ ವಾಚ್ಯಾ ಶ್ಲಾಘ್ಯತಾ ಸರ್ವಸಂಮುಕ್ತಾ ದೇವಭಾಷಯಾ ।
ಕೃತಸ್ಯ ಶಾಸನಸ್ಯಾಂಗೀಕೃತಸ್ಯ ಸಕಲೈರಪಿ ॥ ೪೪ ॥

ರುದ್ರನಿಗೆ ಗಂಗಾಧರನೆಂದು ನಾಮ. ಜಟಾದಲ್ಲಿ ವಿಷ್ಣು ಪಾದೋದಕವಾದ ಗಂಗೆಯನ್ನು ಶಿವನು ಧರಿಸಿರುವದು ಈ ಹೆಸರು ಬರುವದಕ್ಕೆ ಕಾರಣ. ಅಮರವೇ ಮೊದಲಾದ ಲಿಂಗಾನುಶಾಸನಗಳಲ್ಲಿ ಗಂಗಾಧರನೆಂಬ ನಾಮವು ರುದ್ರನಿಗೆ ಉಕ್ತವಾಗಿದೆ. ಗುರುಶಾಸನ ಮಾನ್ಯ. ರಾಜಶಾಸನವೂ ಮಾನ್ಯ.

ಹೀಗಿರುವಲ್ಲಿ ಸರ್ವರಿಂದ ಶ್ಲಾಘ್ಯವಾದ ಲಿಂಗಾನುಶಾಸನವು ಮಾನ್ಯತಮ. ಸಂದೇಹಬಂದರೆ ನಿರ್ಣಯಕ್ಕೆ ಕಾರಣವಾದದ್ದು ಲಿಂಗಾನುಶಾಸನ ಎಂದು ಪಂಡಿತರು ಹೇಳುವರು. ಅದ್ದರಿಂದ ಇದು ನಿಶ್ಚಯ. ಇದಕ್ಕನುಗುಣವಾಗಿ ಧರ್ಮಪಾಲನೆಗಾಗಿ ಪ್ರತಿಗ್ರಾಮದಲ್ಲಿಯೂ ರುದ್ರದೇವಾಲಯಗಳಲ್ಲೆಲ್ಲಾ ಗಂಗಾಧರನೆಂಬ ರುದ್ರನಿಗಿರುವ ನಾಮವು ಅನ್ವರ್ಥವೆಂದು ತೋರಿಸುವದಕ್ಕೆ ಲಿಂಗದಮೇಲೆ ನೀರು ತೊಟ್ಟುವಂತೆ ಗಂಗಾಪಾತ್ರೆಯನ್ನು ಮೇಲೆ ಕಟ್ಟಿರುತ್ತಾರೆ. ಅಮರಾದಿನಿಘಂಟುಗಳಲ್ಲಿರತಕ್ಕದ್ದು ಅನುಶಾಸನ. ಈ ಗಂಗಾಪಾತ್ರೆಯಾದರೋ ಲಿಂಗಾನುಶಾಸನ. ಪ್ರತಿಗ್ರಾಮದಲ್ಲಿಯೂ ಶಿವಾಲಯದಲ್ಲಿ ನೋಡಬಹುದಾದ ಶಾಸನದಂತಿರುವ ಚಿಹ್ನೆಯನ್ನು ಮೀರಿ ರುದ್ರನು ಗಂಗಾಧರನೆಂಬುದನ್ನು ಯಾವನು ತಾನೇ ನಿಷೇಧಿಸಬಲ್ಲನು? ಭಾಷೆಯಲ್ಲಿ ಲಿಖಿತವಾದ ಶಾಸನವೂ ಶ್ಲಾಘ್ಯವಾದುದೇ. ಹೀಗಿರುವಲ್ಲಿ ದೇವಭಾಷೆಯಾದ ಸಂಸ್ಕೃತಭಾಷೆಯಲ್ಲಿ ಮಾಡಲ್ಪಟ್ಟ, ರುದ್ರನ ವಿಷಯದಲ್ಲಿ ಗಂಗಾಧರ, ತೀರ್ಥಮೌಳಿ ಇವೇಮೊದಲಾದ ಅನುಶಾಸನವು ಸರ್ವರಿಂದಲೂ ಅತ್ಯಾದರದಿಂದ ಅಂಗೀಕರಿಸಲ್ಪಟ್ಟಿದೆ. ಇದು ತಾತ್ಪರ್ಯಾರ್ಥ.

ಅತಸ್ತೇ ಶಂಕರಃ ಕೃಷ್ಣಕಿಂಕರೋಽಭೂನ್ನ ಸಂಶಯಃ ।
ಈದೃಶಸ್ಯಾಪಿ ಕುಮತಿರ್ಯದಿ ಶಂಭೋರ್ಭವೇತ್ ಕ್ವಚಿತ್ ॥

ತದನ್ಯಾವೇಶಜಂ ಮನ್ಯೇ ನ ತು ತಸ್ಯ ಸ್ವಭಾವಜಂ ।
ಸರ್ವದಾ ಪಿತೃಭಕ್ತೋ ಯಃ ಪುತ್ರಃ ಕ್ವಾಪಿ ಕದಾಚನ ॥ ೪೬ ॥

ಯದಿ ದ್ವೇಷ್ಟಿ ಸ್ವಪಿತರಂ ಭೂತಾವಿಷ್ಟಂ ವದಂತಿ ತಂ ।
ತತ್ಸರ್ವಜನಸಂಮುಕ್ತ್ಯಾ ಸಿದ್ಧೋಽಭೂದ್ಭುವನತ್ರಯೇ ॥ ೪೭ ॥

ಅದ್ದರಿಂದ ನಿನ್ನ ಶಂಕರನು ಕೃಷ್ಣನ ಕಿಂಕರನಾದನು. ಇದರಲ್ಲಿ ಸಂಶಯವಿಲ್ಲ. ಇಂತಹ ಶಂಭುವಿಗೂ ಕೂಡ ಸ್ವಲ್ಪ ದುಷ್ಟಬುದ್ಧಿಯು ಬಂದರೆ ಅದು ಅನ್ಯಾವೇಶದಿಂದ ಹುಟ್ಟಿದ್ದೆಂದು ತಿಳಿಯುತ್ತೇನೆ. ಅದು ರುದ್ರನಿಗೆ ಸ್ವಭಾವವಾದದ್ದಲ್ಲ. ಲೋಕದಲ್ಲಿಯೂ ಕೂಡ ಯಾವಾಗಲೂ

ಪಿತೃಭಕ್ತನಾದ ಪುತ್ರನು ಯಾವದೋ ಒಂದು ಸಂದರ್ಭದಲ್ಲಿ ಒಂದಾವರ್ತಿ ತನ್ನ ತಂದೆಯನ್ನು ದ್ವೇಷಿಸಿದಲ್ಲಿ ಅವನು ಪಿಶಾಚಾವಿಷ್ಟನಾಗಿದ್ದಾನೆಂದು ಜನರು ಹೇಳುವರು. ಆದ್ದರಿಂದ ನಾವು ಹೇಳಿದ ಪ್ರಮೇಯವು ಸರ್ವಜನರ ಸಂಮತವಾಗಿ ಮೂರು ಲೋಕಗಳಲ್ಲಿಯೂ ಸಿದ್ಧವಾಯಿತು. || ೪೫-೪೭ ||

ವಾಯೋರಿತರದೇವಾನಾಂ ಕಲ್ಮಾವೇಶಃ ಕ್ವಚಿತ್ ಕ್ವಚಿತ್ |
ಅತಶ್ಚ ಮಧ್ವಮಾರ್ಗೋಽಯಮಭೂತ್ಸಕಲಸಂಮತಃ || ೪೮ ||

ವಾಯುವಿನಿಂದ ಇತರರಾದ ದೇವತೆಗಳಿಗೆ ಆಗಾಗ್ಗೆ ಸ್ವಲ್ಪ ಸ್ವಲ್ಪ ಕಲ್ಮಾವೇಶವುಂಟೆಂಬ ಮಧ್ವಾಚಾರ್ಯರ ಈ ಉಪದೇಶ ಮಾರ್ಗವು ಸಕಲ ಸಂಮತವಾದುದೆಂದು ಸಿದ್ಧವಾಯಿತು. || ೪೮ ||

ವಾದಿರಾಜಕೃತೇ ಶ್ರಾವ್ಯೇ ಕಾವ್ಯೇ ಭವ್ಯೇ ಸುಬುದ್ಧಿಭಿಃ |
ಸೇವ್ಯೇ ಸರಸಭಾರತ್ಯಾಂ ವಿಲಾಸೋಽಭೂಚ್ಛಿವಪ್ರಿಯಃ || ೪೯ ||

ವಾದಿರಾಜರು ರಚಿಸಿದ, ಕೇಳಲು ಇಂಪಾದ, ಸುಂದರವಾದ, ಉತ್ತಮ ಬುದ್ಧಿಯುಳ್ಳವರಿಂದ ಸೇವಿಸಲ್ಪಡಲು ಯೋಗ್ಯವಾದ ಸರಸಭಾರತೀಕಾವ್ಯದಲ್ಲಿ ಒಂಭತ್ತನೆಯ ವಿಲಾಸವು ಶಿವನಿಗೆ ಪ್ರಿಯವಾಯಿತು. || ೪೯ ||

ಸರಸಭಾರತೀವಿಲಾಸಕಾವ್ಯದಲ್ಲಿ ಒಂಭತ್ತನೆಯ ವಿಲಾಸವು ಪೂರ್ಣವಾಯಿತು.

ದಶಮೋ ವಿಲಾಸಃ

॥ ಶ್ರೀಗುರುಭ್ಯೋ ನಮಃ ಹರಿಃ ಓಂ ॥

[ವಿಷ್ಣುವಿನ ಸರ್ವೋತ್ತಮತ್ವವನ್ನು ಸರ್ವದಾ ಪ್ರತಿಪಾದಿಸು ಎಂದು ಶ್ರೀಮದಾಚಾರ್ಯರ ಅಜ್ಞಾ ಇರುವುದರಿಂದ ಈ ಸರ್ವೋತ್ತಮತ್ವವನ್ನು ಸಾಧಿಸುವುದಕ್ಕಾಗಿ ರುದ್ರಾದಿದೇವತೆಗಳಲ್ಲಿರುವ, ವೇದಪುರಾಣೋಕ್ತವಾದ ಪಾರತಂತ್ರ್ಯ ಅಜ್ಞಾನ ಇವೇ ಮೊದಲಾದ ದೋಷಗಳನ್ನು ಈ ವಿಲಾಸದಲ್ಲಿ ವರ್ಣಿಸುತ್ತಾರೆ. ಮತ್ತು ಜಗಜ್ಜನ್ಮಾದಿಕರ್ತೃತ್ವರೂಪಬ್ರಹ್ಮಲಕ್ಷಣವು ದೋಷಯುಕ್ತನಾದ ಶಂಭುವಿನಲ್ಲಿ ಕೂಡುವುದಿಲ್ಲವೆಂದು ಹೇಳುವ ಪತ್ಯುರಸಾಮಂಜಸ್ಯಾತ್ ಎಂಬ ಸೂತ್ರದ ಅರ್ಥವನ್ನು ವಿವರಿಸುತ್ತಾರೆ.]

ಕಿಂ ಚ ಶ್ರೌತೇ ಮಹೇ ಯಜ್ಞೇ ದೇವಾನಾಮಾಹುತಿಃ ಸ್ಮೃತಾ ।
ಉಚ್ಛಿಷ್ಟಾಹುತಿರೇವಾಂತೇ ದತ್ತಾ ಯತ್ನೇ ಕೃತೇಽಪಿ ಚ ॥ ೧ ॥
ಶಿವಸ್ಯ ಮುನಿಭಿರ್ದೇವೈಃ ಬ್ರಹ್ಮಣಾ ವಿಷ್ಣುನಾ ತಥಾ ।

ಅಲ್ಲದೆ ವೇದೋಕ್ತವಾದ ಯಜ್ಞವನ್ನು ಮಾಡುವ ಕಾಲದಲ್ಲಿ ದೇವತೆಗಳಿಗೆ ಆಹುತಿಯು ವಿಹಿತವಾಗಿದೆ. ರುದ್ರನಿಗೆ ಆಹುತಿಯನ್ನು ಕೊಡಿಸುವ ಪ್ರಯತ್ನವನ್ನು ಋಷಿಗಳೂ ದೇವತೆಗಳೂ ಬ್ರಹ್ಮನೂ ವಿಷ್ಣುವೂ ಮಾಡಿದರೂ ಉಚ್ಛಿಷ್ಟ ಅಂದರೆ ಎಲ್ಲದೇವತೆಗಳಿಗೂ ಆಹುತಿಕೊಟ್ಟಮೇಲೆ ಉಳಿದಿದ್ದದ್ದನ್ನೇ ಕೊನೆಯಲ್ಲಿ ಕೊಡುವುದು ನಿಶ್ಚಯವಾಯಿತು. ॥ ೧-೨(೧) ॥

ಅದ್ಯಾಪಿ ರುದ್ರಾಹುತಿದೋ ಹಸ್ತಂ ಪ್ರಕ್ಷಾಳಯೇತ್ಕಿಲ ॥ ೨ ॥
ಏವಂ ಪರಂಪರಾಪ್ರಾಪ್ತಸಮಾಚಾರಂ ವಿಚಾರಯ ।
ಸಮಸ್ತಯಜ್ಞಭೋಕ್ತಾರಂ ಹರಿಂ ಸರ್ವಸುರಾರ್ಚಿತಂ ॥ ೩ ॥

ಪಶ್ಯ ಮಾನವ ತಸ್ಯೈವೋಚ್ಛಿಷ್ಟಭೋಕ್ತುರ್ಮಖೇ ಮಹೇ ।
ದಾಸತ್ವೈವೋಚಿತಾ ಶಂಭೋರ್ನ ತು ತತ್ಸಮತಾ ಕ್ವಚಿತ್ ॥ ೪ ॥

ಈಗಲೂ ಕೂಡ ರುದ್ರನಿಗೆ ಆಹುತಿಯನ್ನು ಕೊಡತಕ್ಕವನು ಆಹುತಿಯನ್ನು ಕೊಟ್ಟಮೇಲೆ ಹಸ್ತವನ್ನು ತೊಳೆದುಕೊಳ್ಳುವನಷ್ಟೆ. ಹೀಗೆ

ಪರಂಪರೆಯಾಗಿ ಬಂದ ಉತ್ತಮವಾದ ಆಚಾರವನ್ನು ವಿಚಾರಮಾಡು. ಸರ್ವದೇವತೆಗಳಿಂದ ಪೂಜಿತನಾದ ಮತ್ತು ಸಮಸ್ತ ಯಜ್ಞಭೋಕ್ತೃವಾದ ಹರಿಯನ್ನು ಎಲ್ಲೈಮಾನವನೇ, ನೋಡು. ಪ್ರತಿಯೊಂದು ಯಜ್ಞದಲ್ಲಿಯೂ ಹರಿಗೆ ಕೊಟ್ಟ ಆಹುತಿಯ ಉಚ್ಛಿಷ್ಟವನ್ನೇ ಭಕ್ಷಿಸುವ ಶಂಭುವನ್ನು ಹರಿಯ ದಾಸನೆಂದು ಹೇಳುವುದೇ ಉಚಿತ. ಎಂದಿಗೂ ಶಂಭುವು ಹರಿಗೆ ಸಮನಲ್ಲ.

ಏಷ ತೇ ರುದ್ರ ಭಾಗೋಽಸ್ತು ಯದುಚ್ಛಿಷ್ಟೋಽಧ್ವರಸ್ಯ ವೈ ।
ಯಜ್ಞಸ್ತೇ ರುದ್ರಭಾಗೇನ ಕಲ್ಪತಾಮದ್ಯ ಯಜ್ಞಹನ್ ॥
(ಭಾಗವತ ೪ನೇ ಸ್ಕಂಧ ೭ನೇ ಅಧ್ಯಾಯ ೫೩ನೇ ಶ್ಲೋಕ)

ಯಜ್ಞದ ಅವಶಿಷ್ಟಭಾಗವನ್ನು ರುದ್ರನಿಗೆ ಕೊಡತಕ್ಕದ್ದು ಎಂಬಲ್ಲಿ ಮೇಲೆ ಉದಹರಿಸಿದ ಪ್ರಮಾಣ.

ಪಶುಃ ಕಿಲ ಹರೇರ್ಯಜ್ಞೇ ಶಿವಃ ಪಶುಪತಿಸ್ತವ ।
ಅತೋಽಪಿ ಜಗದೀಶಾಗ್ರೇ ಪಶುಭೂತಸ್ಯ ಕಾ ಕಥಾ ॥ ೫ ॥

ಹರಿಯನ್ನು ಉದ್ದೇಶಿಸಿ ಮಾಡುವ ಯಜ್ಞದಲ್ಲಿ ನಿನ್ನ ಪಶುಪತಿಯಾದ ಶಿವನು ಪಶುವಷ್ಟೆ. ಈ ಕಾರಣದಿಂದಲೂ ಜಗದೀಶನ ಎದುರಿಗೆ ಯಜ್ಞ-ಪಶುವಾದವನು ಎಷ್ಟುಮಾತ್ರದವನು? ॥ ೫ ॥

ನ ಹಿ ಯಜ್ಞಭುಜಾ ಸಾಮ್ಯಂ ಯಜ್ಞೇ ವಧ್ಯಪಶೋರ್ಭವೇತ್ ।
ಯೋ ಯಜ್ವನೋಽಪಿ ನ ಸಮಃ ಸ ಯಜ್ಞೇಶಸಮಃ ಕಥಂ ॥೬॥

ಯಜ್ಞದಲ್ಲಿ ಯಜ್ಞಭೋಕ್ತೃವಿನ ಸಮವು ಯಜ್ಞಪಶುವಾದೀತೇನು? ಆಗುವುದಿಲ್ಲ. ಯಾವ ಪಶುವು ಯಜ್ಞಮಾಡುವವನಿಗೇ ಸಮವಲ್ಲವೋ ಅದು ಯಜ್ಞೇಶನ ಸಮ ಹ್ಯಾಗಾದೀತು? ॥ ೬ ॥

ಅತೋ ವಿಷ್ಣುಮಖೇ ಯಜ್ವೀಭೂಯ ಹೋಮಂ ಚ ಕುರ್ವತಃ ।
ದೇವೇಶಿತುರ್ಬ್ರಹ್ಮಣಶ್ಚ ಸಮೋಽನಾಸೀಚ್ಛಿವಸ್ತವ ॥ ೭ ॥

ಅದ್ದರಿಂದ ವಿಷ್ಣುವನ್ನು ಉಪೇಕ್ಷಿಸಿ ಮಾಡುವ ಯಜ್ಞದಲ್ಲಿ ಯಜ್ಞವನ್ನು ಮಾಡುವ ದೇವಸ್ವಾಮಿಯಾದ ಪ್ರಪ್ರಾಸೇವರಿಗೆ ನಿನ್ನ ಶಿವನು ಸಮನಾಗಲಿಲ್ಲ. || ೭ ||

ಕಿಮು ಯಜ್ಞಾಧಿನಾಥಸ್ಯ ಸಹಸ್ರಶಿರಸೋ ಹರೇಃ |
ಸರ್ವಸ್ರಷ್ಟುಃ ಸಮೋನೇತಿ ತಚ್ಛ್ರೈಷ್ಠ್ಯಂ ತ್ರ್ಯಕ್ಷ್ಯಮೋರಸಃ ||೮||

ಹೀಗೆಂದಮೇಲೆ ಯಜ್ಞಸ್ವಾಮಿಯಾದ ಸಹಸ್ರಶಿರಸ್ಸುಳ್ಳ ಮತ್ತು ಸರ್ವವನ್ನೂ ಸೃಷ್ಟಿಸುವ ಹರಿಗೆ ಸಮನಲ್ಲವಷ್ಟೆ? ಆ ಹರಿಗಿಂತ ಉತ್ತಮನೆಂಬುದು ಹೇಗೆ ಆದೀತು? ಏಳನೇ ರಸವೇ ಇಲ್ಲದಮೇಲೆ ಎಂಟನೇ ರಸ ಎಲ್ಲಿ ಬಂತು? ಹಾಗೆಯೇ ಹರಿಗೆ ಸಮನೇ ಅಲ್ಲದ ರುದ್ರನು ಹರಿಗೆ ಉತ್ತಮನಾಗುವುದು ಹೇಗೆ ಸಾಧ್ಯ? || ೮ ||

ಈದೃಶಸ್ಯಾಪಿ ಕುಮತಿಃ ಕಲ್ಯಾವೇಶಾತ್ಕ್ವಚಿತ್ ಕ್ವಚಿತ್ |
ಕಿಂ ಚಾಧಶ್ಚ ಬುಕಾಜ್ಞಾ ಪಾ ಕೃತ್ವಾಸೀನೋ ಶಿವಸ್ತ್ವವ || ೯ ||

ಕ್ರಿಮಿರೂಪಧರಃ ಶಕ್ರೋ ಧನುರ್ಜ್ಯಾಮಚ್ಛಿನತ್ಕಿಲ |
ತದಾ ಹರಸ್ಯೈವ ಧನುಃ ಪಿನಾಕೋ ಲೋಕಪೂಜಿತಃ || ೧೦ ||

ಉತ್ಪತನ್ನತಿವೇಗೇನ ಚಿಚ್ಛೇದ ಕಿಲ ತಚ್ಛಿರಃ |
ತತ್ ಕ್ಷಣಾತ್ತ್ರ್ಯಕ್ಷಮೀಶಸ್ಯ ಮಸ್ತಕಂ ತದ್ಭುವಸ್ಥಲೇ || ೧೧ ||

ಪಪಾತ ಕಿಲ ಹಾಹೇತಿ ನಾದೋಭೂತ್ಸರ್ವತೋ ದಿಶಿ |
ಏವಂ ಚ ಧನುಷಾನಷ್ಟಂ ಕಷ್ಟಂ ಪ್ರಾಪ್ತಂ ಮಹೇಶ್ವರಂ || ೧೨ ||

ಪ್ರವರ್ಗ್ಯಾಖ್ಯಾಹುತಿಂ ದತ್ವಾ ಹರೇಃ ಕರುಣಯಾ ಸುರಾಃ |
ಯಥಾಪೂರ್ವಂ ಕಬಂಧೇಽಸ್ಯ ಸಂದಧುಃ ತಚ್ಛಿರಃ ಕಿಲ || ೧೩ ||

ಇಂತಹ ರುದ್ರನಿಗೂ ಕೂಡ ಆಗಾಗ ಕಲಿಯ ಆವೇಶದಿಂದ ಕೆಟ್ಟ ಬುದ್ಧಿಯು ಸ್ವಲ್ಪಸ್ವಲ್ಪ ಬರುವುದುಂಟು. ಒಂದಾನೊಂದು ಕಾಲದಲ್ಲಿ ರುದ್ರನು (ಹೆದೆಯನ್ನು ಕಟ್ಟಿದ ಪಿನಾಕಧನುಸ್ಸಿನ ಒಂದು ಕೊನೆಯನ್ನು

ತನ್ನ ಗಡ್ಡಕ್ಕೆ ಒತ್ತುಕೊಟ್ಟುಕೊಂಡು ಮತ್ತೊಂದು ಕೊನೆಯನ್ನು ಭೂಮಿಯ ಮೇಲಿಟ್ಟು ಕೂತಿದ್ದಾಗ ಇಂದ್ರನು ಹುಳುವಿನ ರೂಪದಿಂದ ಬಂದು ಹೆದೆಯನ್ನು ಕತ್ತರಿಸಲು, ಲೋಕ ಪೂಜಿತವಾದ ಹರನಧನುಸ್ಸೇ ಅತಿವೇಗದಿಂದ ಮೇಲಕ್ಕೆ ಹಾರಿ ಶಿವನ ತಲೆಯನ್ನು ಕತ್ತರಿಸಿತು. ಇದು (ವೇದ) ಪ್ರಸಿದ್ಧ. ತಕ್ಷಣವೇ ಈಶನ ಮೂರುಕಣ್ಣುಳ್ಳ ತಲೆಯು ನೆಲಕ್ಕುರುಳಿತು. ಆಗ ಎಲ್ಲ ದಿಕ್ಕುಗಳಲ್ಲಿಯೂ ಹಾಹಾಕಾರವಾಯಿತು. ಹೀಗೆ ಧನುಸ್ಸಿನಿಂದ ನಷ್ಟನಾಗಿ ಕಷ್ಟಕ್ಕೆ ಒಳಗಾದ ಮಹೇಶ್ವರನನ್ನು ಪ್ರವರ್ಗ್ಯವೆಂಬ ಆಹುತಿಯನ್ನು ಕೊಟ್ಟು ದೇವತೆಗಳು ಹರಿಯ ವಯದಿಂದ ಪೂರ್ವದಂತೆ ಆ ಶಿರಸ್ಸನ್ನು ಮುಂಡಕ್ಕೆ ಸೇರಿಸಿದರಷ್ಟೆ. ॥ ೯-೧೩ ॥

ಕಥಾಮೇತಾಂ ಯಜುರ್ವೇದೇ ವದಂತ್ಯದ್ಯಾಪಿ ವೈದಿಕಾಃ ।
ಅಜಾನಂತಂ ಶಕ್ರಚೇಷ್ಟಾಮಸರ್ವಜ್ಞಂ ತವೇಶ್ವರಂ ॥ ೧೪ ॥

ನಷ್ಟಂ ಸ್ವಸ್ಯೈವ ಚಾಪೇನ ನಿತ್ಯಂ ಸರ್ವಜ್ಞವಿಷ್ಣುನಾ ।
ಕಥಂ ಸಮಂ ವದಸ್ಯಜ್ಞ ಮುಖಂ ಮುದ್ರಯ ಸಂಸದಿ ॥ ೧೫ ॥

ಈ ಕಥೆಯನ್ನು ಯಜುರ್ವೇದದಲ್ಲಿ ವೈದಿಕರು ಈಗಲೂ ಕೂಡ ಹೇಳುತ್ತಾರೆ. ಇಂದ್ರನ ಚೇಷ್ಟೆಯನ್ನು ತಿಳಿಯದಿದ್ದುದರಿಂದ ಅಸರ್ವಜ್ಞನಾದ ಮತ್ತು ತನ್ನ ಧನುಸ್ಸಿನಿಂದಲೇ ನಷ್ಟನಾದ ನಿನ್ನ ಈಶ್ವರನನ್ನು ಸರ್ವದಾ ಸರ್ವಜ್ಞನಾದ ವಿಷ್ಣುವಿಗೆ ಹೇಗೆ ಸಮನು ಎಂದು ಹೇಳುತ್ತಿ? ಎಲೋಅಜ್ಞ ! ಸಭೆಯಲ್ಲಿ ನಿನ್ನ ಬಾಯಿಗೆ ಬೇಗಮುದ್ರೆಹಾಕಿಕೊ..

ಅಸಂಖ್ಯಾಸುರಶಸ್ತ್ರೇಣ ಯಸ್ಯ ರೋಮಕ್ಷಯೋಪಿ ನ ।
ಅಜಸ್ಯ ಶತಕೋಟ್ಯಂಡಭೇದೇ ಯಸ್ಯ ಪದಾಂಗುಲೇಃ ॥ ೧೬ ॥

ನಖಸ್ಯಾಪಿ ನ ವಿಚ್ಛೇದಸ್ತಸ್ಯ ಸ್ವಧನುಷೈವ ಹಿ ।
ವಿಚ್ಛಿನ್ನಶಿರಸಂ ಶಂಭುಂ ಕದಾಪಿ ನ ಸಮಂ ವದ ॥ ೧೭ ॥

ಅಸಂಖ್ಯಾತವಾದ ಅಸುರರ ಶಸ್ತ್ರಗಳಿಂದ ಪರಮಾತ್ಮನ ಒಂದು ರೋಮಕ್ಕಾದರೂ ಕುಂದುಇಲ್ಲ. ಮತ್ತು ಅನೇಕ ಕೋಟಿ ಬ್ರಹ್ಮಾಂಡಗಳ

ಖರ್ಪರವನ್ನು ಛೇದಿಸಿದರೂ ಶ್ರೀಹರಿಯ ಪಾದಾಂಗುಲಿಯ ಉಗುರಿಗೂ ಕೂಡ ವಿಚ್ಛೇದವಿಲ್ಲ (ಅಪಾಯವಾಗಲಿಲ್ಲ.) ಹೀಗಿರುವಲ್ಲಿ ತನ್ನ ಧನುಸ್ಸಿನಿಂದಲೇ ಯಾವನ ಶಿರಸ್ಸು ಕತ್ತರಿಸಲ್ಪಟ್ಟಿತೋ ಅಂತಹ ಶಂಭುವನ್ನು ಆ ತ್ರಿವಿಕ್ರಮನಿಗೆ ಎಂದಿಗೂ ಸಮನೆಂದು ಹೇಳಬೇಡ. || ೧೬-೧೭ ||

ಅತಃ ಸರ್ವೋತ್ತಮೋ ವಿಷ್ಣುರ್ವಾಯುಸ್ತದನಂತರಂ |
ಅನಯೋರುಭಯೋಃ ಸರ್ವೇಪ್ಯರ್ವಾಚೀನಾಃ ಶಿವಾದಯಃ ||

ಆದುದರಿಂದ ವಿಷ್ಣುವು ಸರ್ವೋತ್ತಮನು. ಅನಂತರದಲ್ಲಿ ವಾಯುದೇವನು. ಶಿವನೇ ಮೊದಲಾದ ಇತರರೆಲ್ಲರೂ ಇವರಿಬ್ಬರ ಕೆಳಗೆ. (ಇರುವವರು) || ೧೮ ||

ಹರೇಸ್ತು ಸದೃಶೋ ದೇವೋ ನ ಭೂತೋ ನ ಭವಿಷ್ಯತಿ |
ಶಿವೈಕಶರಣಾ ಬಾಣರಾವಣಾದ್ಯಾಃ ಕ್ವ ತೇ ಗತಾಃ || ೧೯ ||
ಹರ್ಯೇಕಶರಣಾನ್ಪಶ್ಯ ಪ್ರಹ್ಲಾದಧ್ರುವಪೂರ್ವಕಾನ್ |

ಹರಿಗೆ ಸಮನಾದ ದೇವನು ಹಿಂದೆ ಇರಲಿಲ್ಲ. (ಈಗ ಇಲ್ಲ) ಮುಂದೆ ಇರುವದಿಲ್ಲ. ಶಿವನನ್ನೇ ಶರಣುಹೊಂದಿದ ನಿನ್ನ ಬಾಣಾಸುರ ರಾವಣನೇ ಮೊದಲಾದವರು ಎಲ್ಲಿ ಹೋದರು? ನೋಡು. ಹರಿಯನ್ನೇ ಶರಣು ಹೊಂದಿದ ಪ್ರಹ್ಲಾದ, ಧ್ರುವ ಮೊದಲಾದವರನ್ನು ನೋಡು. ಅಂದರೆ ಹರಿಯ ಭಕ್ತರು ಅವನ ಅನುಗ್ರಹದಿಂದ ಉತ್ತಮವಾದ ಸ್ಥಾನವನ್ನು ಪಡೆಯುವರು, ಎಂದಭಿಪ್ರಾಯ. || ೧೯-೨೦(೧) ||

ಅತೋ ದುರಾಗ್ರಹಂ ತ್ಯಕ್ತ್ವಾ ಶ್ರುತ್ವಾ ಮತ್ವಾ ಹರೇಃ ಕಥಾಃ ||
ಲಯೇಪಿ ಯೋಽಲಯಸ್ತಸ್ಯ ಭಜ ಪಾದಾಂಬುಜೇ ದ್ವಿಜ |

ಆದ್ದರಿಂದ ಎಲೈ ದ್ವಿಜನೇ! ದುರಾಗ್ರಹವನ್ನು ಬಿಟ್ಟು ಹರಿಯ ಕಥೆಗಳನ್ನು ಕೇಳಿ ಮನನಮಾಡಿ ಪ್ರಲಯದಲ್ಲಿಯೂ ಲಯವಿಲ್ಲದ ಆ ಹರಿಯ ಎರಡು ಪಾದಕಮಲಗಳನ್ನು ಭಜಿಸು. || ೨೦(೨)-೨೧(೧) ||

ಶ್ಲೋಕೈರನೇಕೈಃ ಸರಸೈಃ ಪ್ರಾಕ್ ಪ್ರಸ್ತೂಯ ಶ್ರಿಯಃಪತಿಂ ||೨೧||
ಶ್ರಿಯಂ ದುರ್ಗಾಂ ವಿಧಿಂ ವಾಯುಂ ಭಾರತೀಂ ಚ ಸರಸ್ವತೀಂ |
ಶೇಷಂ ವೀಶಂ ಗಿರೀಶಂ ಚ ಪದ್ಯೈರ್ಹೃದ್ಯೈರ್ಜಗದ್ಗುರೂನ್ ||೨೨||
ಪ್ರಸಾದ್ಯ ತೇಷಾಂ ಕೃಪಯಾ ವಿಶುದ್ಧಮತಿನಾಂಜಸಾ |
ವಿಷ್ಣೋಃ ಸರ್ವೋತ್ತಮತ್ವಾಖ್ಯಾಂ ತತ್ವಂ ಬೋಧಯಿತುಂ ಪರಂ ||
ಅಧಃಕೃತ್ಯ ಸುರಾನ್ ಸರ್ವಾನ್ನಿದಂ ಕಾವ್ಯಂ ಕೃತಂ ಮಯಾ |

ರಸಪೂರಿತವಾದ ಅನೇಕಶ್ಲೋಕಗಳಿಂದ ರಮಾಪತಿಯನ್ನು ಮೊದಲು ಸ್ತೋತ್ರಮಾಡಿ ನಂತರದಲ್ಲಿ ಜಗದ್ಗುರುಗಳಾದ ಶ್ರೀದೇವಿ, ಭೂದೇವಿ, ದುರ್ಗಾದೇವಿ, ಬ್ರಹ್ಮ, ವಾಯು, ಭಾರತೀ, ಸರಸ್ವತೀ, ಶೇಷ, ಗರುಡ ಮತ್ತು ರುದ್ರ ಇವರನ್ನು ಹೃದಯಂಗಮವಾದ ಶ್ಲೋಕಗಳಿಂದ ಸ್ತುತಿಸಿ ಅವರನ್ನು ಪ್ರಸನ್ನೀಕರಿಸಿಕೊಂಡು ಅವರ ಕೃಪೆಯಿಂದ ಅತಿಶುದ್ಧವಾದ ಬುದ್ಧಿಯುಳ್ಳ ನನ್ನಿಂದ ಸರ್ವದೇವತೆಗಳನ್ನೂ ಕ್ರಮದಿಂದ ಕೆಳಗೆಮಾಡಿ ಕೇವಲ ವಿಷ್ಣುವು ಸರ್ವೋತ್ತಮನೆಂಬ ತತ್ವವನ್ನು ಬೋಧಿಸುವದಕ್ಕೆ ಈ ಕಾವ್ಯವು ಮಾಡಲ್ಪಟ್ಟಿತು. || ೨೧(೨)-೨೪(೧) ||

ಯದೀಷದಪಿ ದೋಷೇಣ ಸ್ಪೃಷ್ಟಾ ನ ಸ್ಯುಃ ಸುರಾ ಇಮೇ ||೨೪||
ತದಾ ಸರ್ವೋತ್ತಮತ್ವಂ ಸ್ಯಾತ್ಕಥಂ ವಿಷ್ಣೋರ್ವಿಚಾರಯ |

ಈ ದೇವತೆಗಳು ಸ್ವಲ್ಪಮಟ್ಟಿಗೂ ದೋಷಸಂಪರ್ಕವಿಲ್ಲದವರಾದ ಪಕ್ಷದಲ್ಲಿ, ಆಗ ವಿಷ್ಣುವಿನ ಸರ್ವೋತ್ತಮತ್ವವು ಹೇಗೆ ಸಿದ್ಧಿಸೀತು? ಇದನ್ನು ವಿಚಾರಮಾಡು. || ೨೪(೨)-೨೫(೧) ||

ವಿಷ್ಣೋಃ ಸರ್ವೋತ್ತಮತ್ವಂ ತು ಸರ್ವದಾ ಪ್ರತಿಪಾದಯ ||
ಇತಿ ಗುರ್ವಾಜ್ಞಯಾ ಖರ್ವೀಕೃತಾ ಶರ್ವಾದಯೋ ಮಯಾ |
ಶ್ರುತಿಭಿಃ ಸ್ಮೃತಿಭಿಶ್ಚೈವ ತೇಷಾಂ ದೋಷೋಪಿ ವರ್ಣ್ಯತೇ ||೨೬||

"ವಿಷ್ಣುವಿನ ಸರ್ವೋತ್ತಮತ್ವವನ್ನೇ ಸರ್ವದಾ ಪ್ರತಿಪಾದಿಸು." ಎಂಬ ಗುರುಗಳಾದ ಆನಂದತೀರ್ಥರ ಆಜ್ಞಾನುಸಾರವಾಗಿ ನನ್ನಿಂದ

ರುದ್ರಾದಿದೇವತೆಗಳು ಅಲ್ಪರೆಂದು ತೋರಿಸಲ್ಪಟ್ಟಿರು. ಈ ಅಭಿಪ್ರಾಯದಿಂದಲೇ ಶ್ರುತಿಸ್ಮೃತಿಗಳಿಂದ ಇವರ ದೋಷವೂ ವರ್ಣಿಸಲ್ಪಡುತ್ತೆ. (ಆ ದೇವತೆಗಳನ್ನು ದೂಷಿಸುವವರಲ್ಲಿ ತಾತ್ಪರ್ಯವಿಲ್ಲ.) ಯತಿಪ್ರಣವಕಲ್ಪದಲ್ಲಿ ಸಂನ್ಯಾಸಾಶ್ರಮವನ್ನು ಶಿಷ್ಯನಿಗೆ ಕೊಡುವಾಗ "ವಿಷ್ಣೋಸ್ಸರ್ವೋತ್ತಮತ್ವಂ ಚ ಸರ್ವದಾ ಪ್ರತಿಪಾದಯ" ಎಂದು ಆಶ್ರಮಸ್ವೀಕಾರ ಮಾಡುವವರಿಗೆ ಗುರುಗಳು ತಿಳಿಸತಕ್ಕದ್ದು ಎಂದು ಶ್ರೀಮದಾಚಾರ್ಯರು ಹೇಳಿರುತ್ತಾರೆ.

ವಿಷ್ಣೋರುತ್ತಮತಾ ಸಿದ್ಧ್ಯೈ ತತಸ್ತದ್ದೋಷವರ್ಣನಂ ।
ಸುರಾಣಾಂ ವಿಷ್ಣುಭಕ್ತಾನಾಂ ಪ್ರಿಯಮೇವ ನ ಸಂಶಯಃ ॥೨೭॥

ಅತಃ ಶ್ರೌತಮತಸ್ಥಾನಾಮಸ್ಮಾಕಂ ತತ್ತ್ವವಾದಿನಾಂ ।
ಹರೇರುತ್ಕರ್ಷಸಿದ್ಧ್ಯರ್ಥಂ ತದನ್ಯೇಷಾಂ ದಿವೌಕಸಾಂ ।
ಯಾ ನ್ಯೂನತಾಸ್ತಿ ಸಾ ವರ್ಣ್ಯಾ ತೇನ ವೇದಾಭಿಮಾನಿನಃ ॥೨೮॥

ತೇಽಸ್ಮಾನನುಗೃಹ್ಣಂತಿ ನಿಗೃಹ್ಣಂತಿ ನ ಕರ್ಹಿಚಿತ್ ।

ಈ ರೀತಿಯಲ್ಲಿ ವಿಷ್ಣುವಿನ ಸರ್ವೋತ್ತಮತ್ವವು ಸಿದ್ಧಿಯಾಗುವದಕ್ಕೆ ಈ ದೇವತೆಗಳ ದೋಷವನ್ನು ವರ್ಣಿಸುವದು ವಿಷ್ಣುಭಕ್ತರಾದ ಆ ದೇವತೆಗಳಿಗೆ ಇಷ್ಟವಾದದ್ದೇ. ಇದರಲ್ಲಿ ಸಂಶಯವಿಲ್ಲ. ಆದ್ದರಿಂದ ವೇದಮತವನ್ನು ಅವಲಂಬಿಸಿದ ತತ್ತ್ವವಾದಿಗಳಾದ ನಮಗೆ ಹರಿಯ ಉತ್ತಮತ್ವವು ಸಿದ್ಧಿಯಾಗುವದಕ್ಕೋಸ್ಕರ ಹರಿಯಿಂದ ಭಿನ್ನರಾದ ಆ ದೇವತೆಗಳಿಗೆ ಯಾವ ನ್ಯೂನತೆಯು ಇದೆಯೋ ಅದು ವರ್ಣಿಸಲು ಯೋಗ್ಯವಾದದ್ದು. ವೇದಾಭಿಮಾನಿಗಳಾದ ಆ ದೇವತೆಗಳೂ ಕೂಡ ಹೀಗೆ ಮಾಡುವ ನಮ್ಮಲ್ಲಿ ಅನುಗ್ರಹಮಾಡುವರೇ ಹೊರ್ತು ಸರ್ವಥಾ ನಮ್ಮನ್ನು ನಿಗ್ರಹಮಾಡುವದಿಲ್ಲ. ಅಂದರೆ ಶಿಕ್ಷಿಸುವುದಿಲ್ಲ. ॥ ೨೭-೨೯(೧) ॥

ನಚೇಚ್ಛ್ರುತಿಃ ಕಥಂ ವಕ್ತಿ ದೋಷಾನೇಷಾಂ ಮಹಾತ್ಮನಾಂ ॥
ತೇ ಚ ಸರ್ವೇ ತಥಾಪ್ಯೇನಾಂ ಮಾನಯಂತಿ ಕುತೋ ವದ ॥೩೦॥

ಹೀಗಲ್ಲದಿದ್ದರೆ ಶ್ರುತಿಯು ಮಹಾತ್ಮರಾದ ದೇವತೆಗಳ ದೋಷವನ್ನು ಏಕೆ ಹೇಳುತ್ತದೆ? ಅಲ್ಲದೆ ಆ ಸರ್ವದೇವತೆಗಳೂ ಕೂಡ ಇಂತಹ ಶ್ರುತಿಯನ್ನು ಏಕೆ ಗೌರವಿಸುತ್ತಾರೆ? ಹೇಳು. ಇದರ ಅಭಿಪ್ರಾಯ:– ಶ್ರುತಿಯಲ್ಲಿ ಇತರದೇವತೆಗಳ ದೋಷವು ಉಕ್ತವಾಗಿದೆ. ಆದರೂ ದೇವತೆಗಳು ಶ್ರುತಿಯನ್ನು ಗೌರವಿಸುತ್ತಾರೆ. ಏಕೆಂದರೆ:–ತಮಗೆ ಅತಿ ಪ್ರಿಯವಾದ ವಿಷ್ಣು ಸರ್ವೋತ್ತಮತ್ವವು ಇದರಿಂದ ಸಿದ್ಧವಾಗುತ್ತದೆ.

ವಿಷ್ಣೋರುತ್ಕರ್ಷಸಿದ್ಧ್ಯರ್ಥಂ ಸ್ವಸ್ವದೋಷಾನುವರ್ಣಿನೀಂ ।
ರಮಾಮಮಾನಯನ್ಕಿಂ ನ ಸರ್ವೇದೇವಾಃ ಸ್ವಯಂವರೇ ॥೩೧॥

ಸ್ವಯಂವರಕಾಲದಲ್ಲಿ ವಿಷ್ಣುವಿನ ಉತ್ತಮತ್ವವನ್ನು ಸ್ಥಾಪಿಸುವುದಕ್ಕಾಗಿ, ತಮ್ಮ ತಮ್ಮ ದೋಷವನ್ನು ವರ್ಣಿಸಿದ, ಕ್ಷೀರಸಮುದ್ರದಿಂದ ಪ್ರಾದುರ್ಭೂತಳಾದ ಲಕ್ಷ್ಮೀದೇವಿಯನ್ನು ಸರ್ವದೇವತೆಗಳೂ ಗೌರವಿಸಲಿಲ್ಲವೇನು?

[ಭಾಗವತ ೮ ನೆಯ ಸ್ಕಂಧ ೮ ನೆಯ ಅಧ್ಯಾಯ ೧೮ರಿಂದ ೨೫ರವರಗಿನ ಶ್ಲೋಕಗಳನ್ನು ನೋಡಿರಿ.] ॥ ೩೧ ॥

ಶ್ರೀರ್ಮಾತಾ ಕಿಲ ಲೋಕಾನಾಂ ಮಾತ್ರಾ ಪುಷ್ಟಾಃ ಸುತಾ ವಯಂ
ಅತಸ್ತದುಕ್ತಮಾರ್ಗೋಽಯಂ ಹೇತುಃ ಸ್ವರ್ಗಾಪವರ್ಗಯೋಃ ॥

ಶ್ರೀದೇವಿಯು ಸರ್ವಜನಕ್ಕೂ ತಾಯಿಯಷ್ಟೆ–ತಾಯಿಯಿಂದ ಪುಷ್ಟರಾದ ಮಕ್ಕಳು ನಾವು. ಆದ್ದರಿಂದ ಆಕೆಯು ತೋರಿಸಿದ ಈ ಮಾರ್ಗವು ಅಂದರೆ ವಿಷ್ಣುವಿನ ಉತ್ತಮತ್ವವನ್ನು ಹೇಳುವದಕ್ಕಾಗಿ ಇತರ ದೇವತೆಗಳ ದೋಷಗಳನ್ನು ವರ್ಣಿಸುವುದು ಸ್ವರ್ಗಮೋಕ್ಷಗಳಿಗೆ ಕಾರಣವಾಗುವುದು.

ಕೃತಂ ಕೃತಘ್ನಂ ದುಷ್ಕರ್ಮಕಾರಿಣಂ ಪಾಪಭಾಜನಂ ।
ಅಪರಾಧಸಹಸ್ರಾಣಾಮಾಕರಂ ಕರುಣಾಕರ ॥ ೩೩ ॥

ಕೃಪಯಾ ಮಾಂ ಕೇವಲಯಾ ಗೃಹಾಣ ಮಧುರಾಧಿಪ ।
ಇತಿ ಸ್ವಪಿತರಿ ಶ್ರೀಶೇ ಭಕ್ತ್ಯಾ ಯಸ್ತು ಪಿತಾಮಹಃ ॥ ೩೪ ॥

ಯದ್ವರ್ಣಯತ್ಸ್ವದೋಷಾನ್ನಃ ಕುಲವೃದ್ಧೋ ಗುರುಃ ಸದಾ ।
ತಸ್ಮಾದ್ಗುರೂಣಾಮಾಚಾರೇ ಕುಲಾಚಾರೇ ಚ ಧೀಮತಾಂ ॥೩೫॥

ಸತಾಂ ವೃತ್ತಿರ್ಯತೋ ಯುಕ್ತಾ ತದುಕ್ತಂ ಸೂಕ್ತಮೇವ ನಃ ।

ದುರ್ಬಲನೂ ಕೃತಘ್ನನೂ ದುಷ್ಟಕರ್ಮವನ್ನು ಮಾಡುವವನೂ ಪಾಪಕ್ಕಾಶ್ರಯನೂ ಸಹಸ್ರಾರು ಅಪರಾಧಗಳಿಗೆ ಗಣಿಯೂ ಆದ ನನ್ನನ್ನು ಏಕೈಕರುಣಾಕರನಾದ ಮಧುರಾಸ್ವಾಮಿಯೇ! ಕೇವಲ ಕೃಪೆಯಿಂದ ಸ್ವೀಕರಿಸು. ಹೀಗೆ ತನ್ನ ತಂದೆಯಾದ ಶ್ರೀಶನಲ್ಲಿ ಭಕ್ತಿಯಿಂದ ಯಾವ ಪಿತಾಮಹನು ತನ್ನ ದೋಷಗಳನ್ನು ಪ್ರಕಟಿಸುವನೋ ಆತನು ನಮಗೆ ಸದಾ ಕುಲದ ವೃದ್ಧನಾದ ಗುರುವು ಆಗಿದ್ದಾನೆ. ಆದ್ದರಿಂದ ವಿವೇಕಿಗಳಿಗೆ ಗುರುಗಳು ಆಚರಿಸಿದ್ದು ಕುಲಾಚಾರವೇ ಸರಿ. ಸಜ್ಜನರ ನಡವಳಿಕೆಯು ನಮ್ಮ ಆಚರಣೆಗೆ ಯೋಗ್ಯವಾದದ್ದು. ಅಲ್ಲದೆ ಅವರು ಹೇಳಿದ್ದು ನಮಗೆ ಉತ್ತಮವಾದ ಮಾತು. ॥ ೩೩-೩೬(೧) ॥

ಕಿಂತು ಪತ್ಯುರಸಾಮಂಜಸ್ಯಾದಿತ್ಯಾಹ ಹಿ ಸೂತ್ರಕೃತ್ ॥ ೩೬ ॥
ಅಸಾಮಂಜಸ್ಯಂ ಚ ದೋಷಾಸ್ಪದತ್ವಂ ಕವಯೋ ವಿದುಃ ।

ಮತ್ತು ಸೂತ್ರಕಾರರಾದ ಬಾದರಾಯಣರು "ಪತ್ಯುರಸಾಮಂಜಸ್ಯಾತ್" ಎಂಬ ಸೂತ್ರವನ್ನು ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ಹೇಳಿರುವರಷ್ಟೆ. "ಓಂ ಪತ್ಯುರಸಾಮಂಜಸ್ಯಾತ್ ಓಂ" ಇದರ ಅರ್ಥ :– "ಪಶುಪತಿಗೆ (ರುದ್ರದೇವರಿಗೆ) ಜಗಜ್ಜನ್ಮಾದಿ ಕರ್ತೃತ್ವವು ಇಲ್ಲ. ಏಕೆಂದರೆ:– ಪಾರತಂತ್ರ್ಯಾದಿ ದೋಷಗಳು ಅವನಿಗಿರುವುದರಿಂದ ಅವನು ಜಗತ್ಕಾರಣನೆಂದು ಹೇಳುವುದು ಯೋಗ್ಯವಾಗುವುದಿಲ್ಲ." ಪಂಡಿತರು ಅಸಾಮಂಜಸ್ಯ ಅಂದರೆ ದೋಷಕ್ಕೆ ಆಸ್ಪದವಾಗಿರುವುದು ಎಂದು ತಿಳಿದಿರುವರು. ॥ ೩೬-೩೭ (೧)॥

"ಜನ್ಮಾದ್ಯಸ್ಯೇತಿ"ಸೂತ್ರೇ ಯಾ ಜಗಜ್ಜನ್ಮಾದಿಹೇತುತಾ ॥೩೭॥
ಉಕ್ತಾ ವ್ಯಾಸೇನ ತಾಮಾಹುರ್ಜಿಜ್ಞಾಸ್ಯಬ್ರಹ್ಮಲಕ್ಷಣಂ ।

"ಜನ್ಮಾದ್ಯಸ್ಯಯತಃ" ಎಂಬೀಸೂತ್ರದಲ್ಲಿ ಯಾವ ಜಗಜ್ಜನ್ಮಾದಿ ಕಾರಣತ್ವವು ವ್ಯಾಸರಿಂದ ಹೇಳಲ್ಪಟ್ಟಿತೋ ಅದು ಜಿಜ್ಞಾಸಕ್ಕೆ ವಿಷಯನಾದ ಬ್ರಹ್ಮನ ಲಕ್ಷಣವೆಂದು ಪಂಡಿತರು ಹೇಳುವರು. ‖ ೩೭-೩೮(೧) ‖

ಸ ವಿಷ್ಣುರಾಹಹೀತ್ಯಾದ್ಯಸೂತ್ರೇ ಯಃ ಪ್ರಸ್ತುತೋ ಹರಿಃ ‖೩೮‖

ಸ ಏವೋತ್ತರಸೂತ್ರೇಽಪಿ ಬ್ರಹ್ಮಶಬ್ದೋದಿತಃ ಕಿಲ ।
ತಸ್ಮಾಜ್ಜನ್ಮಾದಿಹೇತುತ್ವಂ ವಿಷ್ಣೋರ್ಯಲ್ಲಕ್ಷಣಂ ಪುರಾ ‖ ೩೯ ‖

ಸೂತ್ರಯಾಮಾಸ ಸೂತ್ರೇ ಸ್ವೇ ವ್ಯಾಸೋ ಮತಿಮತಾಂ ವರಃ ।
ತಸ್ಯ ಶೈವೋಕ್ತಮಾರ್ಗೇಣ ಶಿವೇಽತಿವ್ಯಾಪ್ತಿಶಂಕಯಾ ‖ ೪೦ ‖
ಸಮಯಾನ್ ಶಮಯನ್ ಸರ್ವಾನ್ ಸೂತ್ರಮೇತದಚೀಕ್ಲ್ಲಪತ್

ವೈಮೀಮಾಂಸದ ಕೊನೆಯಭಾಗದಲ್ಲಿ "ಸವಿಷ್ಣುರಾಹಹಿ" ಎಂಬ ಸೂತ್ರದಲ್ಲಿ ಪ್ರಸಕ್ತನಾದ ಹರಿಯೇನೇ "ತಂ ಬ್ರಹ್ಮೇತ್ಯಾಚಕ್ಷತೇ–ತಂ ಬ್ರಹ್ಮೇತ್ಯಾಚಕ್ಷತೇ" ಎಂಬ ಸಾಕ್ಷಾತ್ ಮುಂದಿನ ಸೂತ್ರದಲ್ಲಿ ಬ್ರಹ್ಮಶಬ್ದ ದಿಂದ ಹೇಳಲ್ಪಟ್ಟಿರುವನಷ್ಟೆ. ಆದ್ದರಿಂದ ಯಾವ ಜಗಜ್ಜನ್ಮಾದಿಕಾರಣತ್ವವು ವಿಷ್ಣುವಿನ ಲಕ್ಷಣವಾಗಿ "ಜನ್ಮಾದ್ಯಸ್ಯಯತಃ" ಎಂಬ ಸೂತ್ರದಲ್ಲಿ ಜ್ಞಾನಿ-ಶ್ರೇಷ್ಠರಾದ ವೇದವ್ಯಾಸರು ಹೇಳಿದರೋ ಆ ಲಕ್ಷಣವನ್ನು ಶೈವರು ಹೇಳುವ ರೀತಿಯಲ್ಲಿ ಶಿವನಲ್ಲಿ ಅತಿವ್ಯಾಪ್ತಿಯನ್ನು ಶಂಕಿಸಿ ಸರ್ವ ವಿರುದ್ಧಮತ ಗಳನ್ನೂ ನಿರಾಕರಿಸಿದ ಮೇಲೆ "ಪತ್ಯುರಸಾಮಂಜಸ್ಯಾತ್" ಎಂಬ ಸೂತ್ರವನ್ನು ರಚಿಸಿದರು. ‖ ೩೮-೪೧ ‖

ಪತ್ಯುಃ ಪಶುಪತೇಃ ಶೈವ ನೈವ ಜನ್ಮಾದಿಹೇತುತಾ ‖ ೪೧ ‖

ಮೃತ್ಯಜ್ಞಾನಾದಿಭಿರ್ದೋಷೈರ್ವ್ಯರ್ತೋಽಸಾವಸಮಂಜಸಃ ।
ಅತೋಽಸ್ಯ ಚೈತ್ರವಜ್ಜನ್ಮಹೇತುತಾ ಚ ನ ಶೋಭತೇ ‖ ೪೨ ‖

ಎಲೈ ಶೈವ, ಪತ್ಯುಃ = ಪಶುಪತಿಗೆ, ಜನ್ಮಾದಿಹೇತುತಾ = ಜಗ-ಜ್ಜನ್ಮಾದಿಕಾರಣತ್ವವು, ನೈವ = ಇಲ್ಲವು. ಏಕೆಂದರೆ :– ಇವನು ಮರಣ,

ಅಜ್ಞಾನ ಇವೇ ಮೊದಲಾದ ದೋಷಗಳಿಂದ ಕೂಡಿರುವನು. ಇಲ್ಲಿ ಅನುಮಾನವು ಹೀಗೆ. ಪಶುಪತಿಗೆ ಜಗಜ್ಜನ್ಮಾದಿಕಾರಣತ್ವವು ಇಲ್ಲ. ದೋಷವುಳ್ಳವನಾದ್ದರಿಂದ ಚೈತ್ರನಂತೆ. || ೪೨-೪೩ ||

ಅಸಾಮಂಜಸ್ಯಂ ಚ ಹೇತುಂ ಕೃತ್ವಾ ಸಾಧ್ಯಸ್ಯ ಸಿದ್ಧಯೇ ।
ಯತೋ ಮೀಮಾಂಸಕಾಚಾರ್ಯೋ ವ್ಯಾಸೋ ನಿರಣಯತ್ಪ್ರಭುಃ

ಏವಂ ಚ ವ್ಯಾಸಮಾರ್ಗೇಽಸ್ಮಿನ್ ಯಸ್ತು ವಿದ್ವಾನ್ ಧುರಂಧರಃ ।
ತಸ್ಯ ದೋಷೋತ್ಕೀರ್ತನಂ ಚ ಯುಕ್ತಿಯುಕ್ತಮಭೂಚ್ಛಿವೇ ॥

ಜಗಜ್ಜನ್ಮಾದಿಕರ್ತೃತ್ವವು ರುದ್ರನಲ್ಲಿ ಇಲ್ಲವೆಂಬ ಸಾಧ್ಯವು ಸಿದ್ಧಿಯಾಗುವುದಕ್ಕೋಸ್ಕರ ರುದ್ರನಲ್ಲಿರುವ ದೋಷಗಳನ್ನು ಹೇತುವನ್ನಾಗಿ ಮಾಡಿ ಮೀಮಾಂಸಾಚಾರ್ಯರಾದ ವೇದವ್ಯಾಸರು ಜಗಜ್ಜನ್ಮಾದಿಕರ್ತೃತ್ವ ರೂಪ ವಿಷ್ಣುವಿನ ಲಕ್ಷಣವು ರುದ್ರನಲ್ಲಿ ಅತಿವ್ಯಾಪ್ತಿಯಾಗುವುದಿಲ್ಲವೆಂದು ನಿರ್ಣಯಮಾಡಿರುವುದರಿಂದ ಜ್ಞಾನಿಶ್ರೇಷ್ಠರೂ, ವೇದವ್ಯಾಸರು ತೋರಿಸಿರುವ ಪದ್ಧತಿಯನ್ನು ಅವಲಂಬಿಸುವುದರಲ್ಲಿ ನಿಪುಣರೂ ಆದ ಆನಂದತೀರ್ಥರು ತಮ್ಮ ಭಾಷ್ಯದಲ್ಲಿ ವ್ಯಾಸೋಕ್ತರೀತಿಯಿಂದ ರುದ್ರನಲ್ಲಿ ದೋಷವನ್ನು ಉದ್ಘಾಟನೆ ಮಾಡುವುದು ನ್ಯಾಯೋಪೇತವೇ ಆಯಿತು. || ೪೪ ||

ವ್ಯಾಖ್ಯಾತಾ ಯೋಽಸ್ಯ ಸೂತ್ರಸ್ಯ ದೋಷಾಖ್ಯಾತಾ ಕಥಂ ನ ಸಃ ।
ಗುರ್ವಾಜ್ಞೋಲ್ಲಂಘನಾದ್ದೋಷೋ ನಚೇನ್ಮಂದಭವೇನ್ಮಮ ॥

"ಪತ್ಯುರಸಾಮಂಜಸ್ಯಾತ್" ಎಂಬ ಸೂತ್ರವನ್ನು ತಮ್ಮ ಭಾಷ್ಯದಲ್ಲಿ ವ್ಯಾಖ್ಯಾನಮಾಡಿದಮೇಲೆ, ರುದ್ರನ ದೋಷವನ್ನು ಹೇಳದೇ ಇದ್ದವರು ಹೇಗೆ ಆದಾರು? ಮತ್ತು ನಾವೂ ಕೂಡ ಆ ಮಾರ್ಗವನ್ನನುಸರಿಸಿ ರುದ್ರನ ದೋಷವನ್ನು ಹೇಳದಿದ್ದಲ್ಲಿ ಎಲೈ ಮಂದ! ಗುರ್ವಾಜ್ಞೆಯನ್ನು ಮೀರಿದ ದೋಷವು ನಮಗೆ ಬಂದೀತು. || ೪೫ ||

ಇದಂ ಚ ಬ್ರಹ್ಮಶಕ್ತ್ಯಾದಿಮುಕ್ತಾನಾಮುಪಲಕ್ಷಣಂ ।
ಅನ್ಯಥಾ ತೇಷ್ವತಿವ್ಯಾಪ್ತಿರ್ಲಕ್ಷಣಸ್ಯ ಭವಿಷ್ಯತಿ ॥ ೪೬ ॥

ರುದ್ರನಿಗೆ ಜಗತ್ಕರ್ತೃತ್ವವನ್ನು ನಿರಾಕರಿಸುವ ಅಧಿಕರಣಕ್ಕೆ "ಪತ್ಯು-ರಸಾಮಂಜಸ್ಯಾತ್" ಎಂಬ ಸೂತ್ರವು ಮೊದಲನೆಯದು. ಈ ಅಧಿಕರಣವು ಬ್ರಹ್ಮದೇವರು ಶಕ್ತಿದೇವತಾಮೊದಲಾದವರನ್ನು ಜಗಜ್ಜನ್ಮಾದಿಕರ್ತರೆಂದು ಹೇಳುವ ಮತಗಳನ್ನು ನಿರಾಕರಿಸುವುದರಲ್ಲಿ ಉಪಲಕ್ಷಣವೆಂದು ತಿಳಿಯಬೇಕು. ಅಂದರೆ ಯಾವ ಮಾರ್ಗದಿಂದ ರುದ್ರನ ಜಗತ್ಕರ್ತೃತ್ವವು ಈ ಅಧಿಕರಣದಲ್ಲಿ ನಿರಾಕರಿಸಲ್ಪಟ್ಟಿದೆಯೋ ಅದೇರೀತಿಯಲ್ಲಿ ವಿಷ್ಣುವಿನಿಂದ ಇತರರಾದವರನ್ನು ಜಗಜ್ಜನ್ಮಾದಿಕರ್ತರೆಂದು ಹೇಳುವ ಮತಗಳನ್ನು ನಿರಾಕರಿಸತಕ್ಕದ್ದು. ಹಾಗೆ ಉಪಲಕ್ಷಣವೆಂದು ಇಟ್ಟುಕೊಳ್ಳದಿದ್ದಲ್ಲಿ ಜಗಜ್ಜನ್ಮಾದಿಕರ್ತೃತ್ವರೂಪವಾದ ವಿಷ್ಣುವಿನ ಲಕ್ಷಣವು ಇತರರಲ್ಲಿ ಅತಿ-ವ್ಯಾಪ್ತಿಯಾದೀತು. || ೪೬ ||

ಕಲ್ಯಾವೇಶಾಖ್ಯದೋಷೋ ಯಃ ಪರಶುಕ್ಲತ್ರಯೇ ನ ಸಃ ।
ಅಪೂರ್ಣತ್ವಾಸ್ವತಂತ್ರತ್ವಪೂರ್ವದೋಷಾಸ್ತು ತೇಷ್ವಪಿ || ೪೭ ||

ಕಲ್ಯಾವೇಶವೆಂಬ ಯಾವ ದೋಷವೋ ಅದು ಪರಶುಕ್ಲತ್ರಯರಲ್ಲಿ (ಶ್ರೀದೇವಿ, ಬ್ರಹ್ಮ, ವಾಯು, ಸರಸ್ವತೀ, ಭಾರತೀ) ಇಲ್ಲ. ಆದರೂ ಅಪೂರ್ಣತ್ವ, ಅಸ್ವತಂತ್ರತ್ವ ಇವೇಮೊದಲಾದ ದೋಷಗಳು ಅವರಲ್ಲಿಯೂ ಉಂಟೇಉಂಟು. || ೪೭ ||

ಪರ್ಯವಜ್ಞಾಙ್ಗಕಾದ್ಯಾಸ್ತು ಮಹಾದೋಷಾಸ್ತು ಶಂಕರೇ
ಸಂತಿ ತತ್ಪಕ್ಷಿಣಶ್ಚೈವ ಬಹವಃ ಸಂತಿ ದುರ್ಜನಾಃ || ೪೮ ||

ಅತಃ ಪಶುಪತಿಂ ಸೂತ್ರೇ ನಿಬಬಂಧ ಸ ಸೂತ್ರಕೃತ್ ।
ಲಕ್ಷಣಸ್ಯ ತ್ವತಿವ್ಯಾಪ್ತಿರ್ನಶ್ರಿಯಾಂ ನ ಚತುರ್ಮುಖೇ || ೪೯ ||

ನಾಪಿ ವಾಯೌ ಪರೇಶತ್ವೇ ಶುದ್ಧತ್ವಸ್ಯಾವಿರೋಧಿನಾ ।
ತಾರತಂಮ್ಯಾಖ್ಯಾಲ್ಪದೋಷೇಣೈವ ಯುಕ್ತಾ ಯತಸ್ತ್ವಮೀ ||

ಯತ್ಸ್ವತಂತ್ರಸ್ಯ ಕರ್ತೃತ್ವಂ ಯತಶ್ಚೋಕ್ತಂ ಸ್ವಲಕ್ಷಣಂ ।
ಜಗತ್ಕರ್ತೃತ್ವಮೇತಚ್ಚಾನ್ಯತಂತ್ರೇಷು ಕಥಂ ವದ || ೫೧ ||

ವೇದವ್ಯಾಸರು ಶೈವಾಗಮವನ್ನು ನಿರಾಕರಿಸುವುದರಲ್ಲಿ ಹೀಗೆ ಅಭಿಪ್ರಾಯ–ರುದ್ರನಲ್ಲಿ ಹರಿಯ ವಿಷಯದಲ್ಲಿ ಅಜ್ಞಾನ, ಹರಿಯ ಇಚ್ಛೆಗೆ ವಿರುದ್ಧವಾಗಿ ನಡೆದು ಅವಹೇಲನಮಾಡೋಣ ಇವೇ ಮೊದಲಾದ ಮಹಾ ದೋಷಗಳು ಉಂಟು. ಅಲ್ಲದೆ ಆ ಮತವನ್ನು ಅವಲಂಬಿಸಿದ ದುರ್ಜನರು ಬಹುವಾಗಿರುವರು. ಆದ್ದರಿಂದಲೇ "ಪತ್ಯುರಸಾಮಂಜಸ್ಯಾತ್" ಎಂಬ ಸೂತ್ರದಲ್ಲಿ "ಪತ್ಯುಃ" ಎಂದು ಪಶುಪತಿಯನ್ನು ಸೂತ್ರಕಾರರು ಗ್ರಹಿಸಿದ್ದಾರೆ. ಲಕ್ಷಣದ ಅತಿವ್ಯಾಪ್ತಿಯು ರಮಾದೇವಿಯಲ್ಲಿಯೇ ಆಗಲೀ ಚತುರ್ಮುಖನಲ್ಲಿಯೇ ಆಗಲಿ, ವಾಯುವಿನಲ್ಲಿಯೇ ಆಗಲಿ ಇಲ್ಲ. ಏಕೆಂದರೆ ಇವರು ಪರತತ್ವನಾದ ಹರಿಯ ವಿಷಯದಲ್ಲಿ ಶುದ್ಧತ್ವಕ್ಕೆ ವಿರೋಧವಲ್ಲದ ಪಾರತಂತ್ರ್ಯವೆಂಬ ಅಲ್ಪದೋಷದಿಂದ ಕೂಡಿದವರು. ಕರ್ತನೆಂದರೆ ಸ್ವತಂತ್ರವಾಗಿ ವ್ಯಾಪಾರಮಾಡುವವನೆಂದರ್ಥ. "ಜನ್ಮಾದ್ಯಸ್ಯಯತಃ" ಎಂಬೀ ಸೂತ್ರದಲ್ಲಿ ಉಕ್ತವಾದ ಜಗಜ್ಜನ್ಮಾದಿಕರ್ತೃತ್ವರೂಪ ವಿಷ್ಣುವಿನ ಲಕ್ಷಣವು ವಿಷ್ಣುವಿನ ಸ್ವರೂಪಲಕ್ಷಣವೆಂದು ಹೇಳಲ್ಪಟ್ಟಿತು. ಆದ್ದರಿಂದ ಪರತಂತ್ರರಾದ ರಮಾದೇವಿ, ಬ್ರಹ್ಮ-ವಾಯುಗಳು, ಸರಸ್ವತೀ, ಭಾರತೀ ಇವರು ಹೇಗೆ ಜಗಜ್ಜನ್ಮಾದಿಕರ್ತರಾದಾರು? ಹೇಳು. || ೪೮-೫೧ ||

ಸ ಚ ದೋಷೋ ಭಕ್ತಿಹೇತುರೇವ ನಾಭಕ್ತಿಕಾರಣಂ ।
ಈಶೋಽಸೌ ತಸ್ಯ ದಾಸಾಶ್ಚ ವಯಮಿತ್ಯನಿಶಂ ಮತಿಃ || ೫೨ ||

ಯೇಷಾಂ ತೇಷಾಮಯಂ ದೋಷೋ ಭೂಷಣಂ ನತು ದೂಷಣಂ
ಏತೇಭ್ಯಸ್ತ್ವಿತರೇ ದೇವಾಃ ಕಲ್ಯಾವೇಶಾತ್ಪರಂ ಹರಿಂ || ೫೩ ||

ಅವಜಾನಂತ್ಯಧೀಶಂ ತಂ ನ ಜಾನಂತಿ ಕ್ವಚಿತ್ಕ್ವಚಿತ್ ||
ಯುಧ್ಯಂತಿ ಹರಿಣಾ ಸಾರ್ಧಂ ವಿಧ್ಯಂತಿ ಸ್ವಾಯುಧೇನ ತಂ ||೫೪||

ಪಾರತಂತ್ರ್ಯವೆಂಬ ದೋಷವು ಭಕ್ತಿಗೆ ಕಾರಣವಾಗುತ್ತದೆಯೇ ಹೊರತು ಅಭಕ್ತಿಗೆ ಕಾರಣವಾಗಲಾರದು. ಈ ಹರಿಯು ಈಶನು. ಅವನ ದಾಸರು ನಾವುಗಳು ಎಂಬುವುದಾಗಿ ಸದಾ ಯಾರು ತಿಳಿದಿರುವರೋ

ಅಂತಹವರಿಗೆ ಪಾರತಂತ್ರ್ಯವೆಂಬ ದೋಷವು ಭೂಷಣವೇ ಹೊರತು ದೂಷಣವಲ್ಲ. ಶುಕ್ಲತ್ರಯರಿಂದ ಅನ್ಯರಾದ ದೇವತೆಗಳು ಕಲಿಯ ಆವೇಶದಿಂದ ಸರ್ವೋತ್ತಮನಾದ ಹರಿಯನ್ನು ಅವಹೇಲನಮಾಡುವರು. ಕೆಲವು ವೇಳೆ ತಿಳಿಯದೇ ಇರುವರು. ಮತ್ತೆ ಕೆಲವು ಸಂದರ್ಭದಲ್ಲಿ ಹರಿಯಕೂಡ ಯುದ್ಧವನ್ನು ಮಾಡುವರು. ಇಷ್ಟೇ ಅಲ್ಲ, ಅವನನ್ನು ತಮ್ಮ ಆಯುಧದಿಂದ ಹೊಡೆಯಲೂ ಹೊಡೆಯುವರು. || ೫೨-೫೪ ||

ಅತಃ ಶುದ್ಧತ್ವಮೇತೇಷಾಂ ದೇವಾನಾಂ ಸ್ಯಾತ್ಕಥಂ ವದ ।
ಪಶ್ಯ ವ್ಯಾಸಸ್ಯ ಕೌಶಲ್ಯಂ ಯತ್ಸ್ವತಂತ್ರಸ್ಯ ಕರ್ತೃತಾ || ೫೫ ||

ಅತಃ ಕೃಷ್ಣವಶೇಷ್ವೇಷು ಸ್ವೋಕ್ತಲಕ್ಷಣಧರ್ಮಿತಾಂ ।
ದೂರೀಚಕ್ರೇ ಶುಕ್ಲಕಾಂತು ಸ್ಥಿರೀಚಕ್ರೇ ಕಿಲ ಪ್ರಭುಃ || ೫೬ ||

ಆದ್ದರಿಂದ ಈ ರುದ್ರಾದಿದೇವತೆಗಳಿಗೆ ಶುದ್ಧತ್ವವು ಹೇಗೆ ಬಂದೀತು? ಹೇಳು. ವೇದವ್ಯಾಸರ ಸೂತ್ರರಚನಾಕೌಶಲ್ಯವನ್ನು ನೋಡು. "ಪತ್ಯುರಸಾಮಂಜಸ್ಯಾತ್" ಎಂಬ ಸೂತ್ರದಲ್ಲಿ ರುದ್ರನಿಗೆ ಜಗತ್ಕರ್ತೃತ್ವವಿಲ್ಲವೆಂಬಲ್ಲಿ ಅವನಲ್ಲಿರುವ ಪಾರತಂತ್ರ್ಯಾದಿ ದೋಷಗಳನ್ನು ಹೇತುವಾಗಿ ಹೇಳಿದ್ದಾರೆ. ಇತರ ದೋಷಗಳು ಹಾಗಿರಲಿ. ಎಲ್ಲಿ ಪಾರತಂತ್ರ್ಯವೋ ಅಲ್ಲಿ ಜಗತ್ಕರ್ತೃತ್ವವಿಲ್ಲ. ಕೃಷ್ಣನ ವಶದಲ್ಲಿರುವ ಶುಕ್ಲತ್ರಯದಲ್ಲಿ ಸೇರಿರುವ ದೇವತೆಗಳಲ್ಲಿ ಇತರ ದೋಷಗಳಿಲ್ಲದಿದ್ದರೂ ಪಾರತಂತ್ರ್ಯವು ಇವರಲ್ಲಿದೆ ಎಂಬುದು ಸುಪ್ರಸಿದ್ಧ. ಆದ್ದರಿಂದ ಇವರಲ್ಲಿ ವಿಷ್ಣುವಿನ ಲಕ್ಷಣವಾದ ಜಗತ್ಕರ್ತೃತ್ವವು ಇಲ್ಲವೆಂಬುದು ನಿರಾಯಾಸವಾಗಿ ಸಿದ್ಧವಾಯಿತು. ಇಷ್ಟೇ ಅಲ್ಲ, ಇನ್ಯಾವ ದೋಷವೂ ಇಲ್ಲದಿರುವುದರಿಂದ ಇವರ ಶುದ್ಧತ್ವವು ನಿರ್ಣೀತವಾಯಿತು.

ಯತಃ ಪತ್ಯುರಧೀನಾ ಯಾ ನಾರೀ ಶುಕ್ಲೇತಮೈವ ಹಿ ।
ತಸ್ಮಾದ್ದೋಷಮಿಮಂ ವಾಚಾ ನೋವಾಚಾಲ್ಪತ್ವತಃ ಕಿಲ ||೫೭||

ಪತಿಯ ಅಧೀನಳಾದ ನಾರಿಯು ಶುದ್ಧತಮಳೆಂಬುದು ಪ್ರಸಿದ್ಧ. ಆದ್ದರಿಂದ ರಮಾದೇವಿಯಲ್ಲಿ ಅಲ್ಪವಾದ ಪಾರತಂತ್ರ್ಯಾಖ್ಯದೋಷವನ್ನು

ವ್ಯಕ್ತವಾಗಿ ವೇದವ್ಯಾಸರು ಹೇಳಲಿಲ್ಲ. ಲೋಕದಲ್ಲಿ ಪತಿಯ ಅಧೀನಳಾದ ನಾರಿಯು ಪರಮಪವಿತ್ರಳೆಂದು ವ್ಯವಹಾರಮಾಡುತ್ತಿರುವಾಗ ಹೇಗೆತಾನೇ ಶಿಷ್ಟಾಗ್ರಣಿಗಳಾದ ವೇದವ್ಯಾಸರು ಹರ್ಯಧೀನಳಾದ ರಮಾದೇವಿಯಲ್ಲಿ ದೋಷವನ್ನು ಹೇಳುವ ಸೂತ್ರವನ್ನು ಮಾಡಿಯಾರು? ಯದ್ಯಪಿ ಪಾರ-ತಂತ್ರ್ಯವು ದೋಷವೇ. ಆದರೆ ಈ ಶುಕ್ಲತ್ರಯರಲ್ಲಿ ಈ ಧರ್ಮವನ್ನು ದೋಷವೆಂದು ವ್ಯವಹಾರಮಾಡಬಾರದು. || ೫೭ ||

ನೆಚೇದ್ಗುರುತಮಾನೇತಾನೇವಂಸ್ಪಷ್ಟಂ ಸ ಸೂತ್ರಯೇತ್ ।
ಪರೇ ಹರೌ ವಿರೋಧಾಖ್ಯಮಹಾದೋಷಾನುಷಂಗಿಣಂ || ೫೮ ||

ಅಜ್ಞಂ ಚ ವಿಪರೀತಜ್ಞಂ ಭಯಕಂಪಾದಿಭಾಜನಂ ।
ಸ ಸೂತ್ರೇ ಸೂತ್ರಯಾಮಾಸ ಸಾಕ್ಷಾತ್ಪಶುಪತಿಂ ತವ || ೫೯||

ಇತರ ದೇವತೆಗಳಿಗೂ, ಶುಕ್ಲತ್ರಯರಿಗೂ ವೈಲಕ್ಷಣ್ಯವನ್ನು ತೋರಿ ಸುವುದಕ್ಕೇನೇ "ಇವರಲ್ಲಿ ಪಾರತಂತ್ರ್ಯಾದಿ ದೋಷವಿದೆ. ಆದುದರಿಂದ ಜಗತ್ಕರ್ತೃತ್ವವು ಇವರಿಗೆ ಕೂಡುವುದಿಲ್ಲ" ಎಂದು ಸ್ಪಷ್ಟವಾಗಿ ಹೇಳುವ ಸೂತ್ರವನ್ನು ಮಾಡಲಿಲ್ಲ. ಹೀಗಲ್ಲದಲ್ಲಿ ಇವರಿಗಾಗಿ ಬೇರೆ ಸೂತ್ರವನ್ನು ಮಾಡಬೇಕಾಗಿತ್ತು. ನಿನಗೆ ಸಮ್ಮತವಾದ ಪಶುಪತಿಯನ್ನು ಸೂತ್ರದಲ್ಲಿ ಗ್ರಹಿಸಿದ್ದಾರೆ. ಏಕೆಂದರೆ:– ಸರ್ವೋತ್ತಮನಾದ ಹರಿಯಲ್ಲಿ ವಿರೋಧ ಮಾಡುವ ಮಹಾದೋಷ ಶಿವನಿಗುಂಟು. ಮತ್ತು ಅಜ್ಞಾನ, ವಿಪರೀತ-ಜ್ಞಾನ, ಭಯ, ಕಂಪ ಇವೇಮೊದಲಾದ ದೋಷಗಳಿಗೆ ಇವನು ಆಶ್ರಯನು. ಆದ್ದರಿಂದಲೇ ಸೂತ್ರದಲ್ಲಿ ಅವನನ್ನು ಸಾಕ್ಷಾತ್ತಾಗಿ ಉಪಲಕ್ಷಣವಾಗಿ ಗ್ರಹಿಸಿರುವರು. ಉಪಲಕ್ಷಣಕ್ಕೆ ದೃಷ್ಟಾಂತ:– 'ಕಾಗೆಯು ಬರದಂತೆ ಮೊಸರನ್ನು ಕಾಪಾಡು' ಎಂದು ಹೇಳಿದರೆ, ಕಾಗೆಯು ಬರದಂತೆ ಎಂಬಲ್ಲಿ ಕಾಗೆಯು ಮಟ್ಟಿಗೆ ಅಭಿಪ್ರೇತವಲ್ಲ, ಆದರೆ ಮೊಸರನ್ನು ತಿನ್ನುವ ಬೆಕ್ಕೇ ಮೊದಲಾದ ಎಲ್ಲವೂ ಉಪಲಕ್ಷಣದಿಂದ ಉಕ್ತವಾಯಿತು. ಅಂದರೆ ಕಾಗೆಯು ಬೆಕ್ಕೇಮೊದಲಾದ ಎಲ್ಲಕ್ಕೂ ಉಪಲಕ್ಷಣ. || ೫೮–೫೯ ||

ಉಪಲಕ್ಷಣಯಾ ದೋಷಾನಲ್ಪಾನ್ ಶ್ರೀಬ್ರಹ್ಮಣೋರಪಿ ।
ಊರೀಚಕ್ರೇಽಖಿಲಾನ್ ದೋಷಾನ್ ದೂರೀಚಕ್ರೇ ಚ ಸೂತ್ರಕೃತ್

ಪಕ್ಷೇ ಹರೌ ಸ್ಥಿರೀಚಕ್ರೇ ಸರ್ವದೋಷಾತಿದೂರತಾಂ ।
ನಚೇದಸಿದ್ಧಿರ್ಹೇತೌ ಸ್ಯಾತ್ಸಂದಿಗ್ಧಾ ಸಿದ್ಧತಾಪಿ ವಾ ॥ ೬೧ ॥

ಪ್ರಕೃತ ರುದ್ರನು ಜಗತ್ಕರ್ತನಲ್ಲ. ಅಸ್ವಾತಂತ್ರ್ಯಾದಿದೋಷವುಳ್ಳವನಾದ್ದರಿಂದ ದೇವದತ್ತನಹಾಗೆ. ಇಲ್ಲಿ ಅಸ್ವಾತಂತ್ರ್ಯವು ದೋಷ. ಅದು ರಮಾದೇವಿಯಲ್ಲಿಯೂ, ಚತುರ್ಮುಖನಲ್ಲಿಯೂ ಇದೆ. ಆದ್ದರಿಂದ "ಪತ್ಯುರಸಾಮಂಜಸ್ಯಾತ್" ಎಂಬಲ್ಲಿ ಪತ್ಯುಃ ಎಂಬುದು ರಮಾಬ್ರಹ್ಮರನ್ನೂ ಉಪಲಕ್ಷಣೆಯಿಂದ ಹೇಳುತ್ತದೆ. ಮತ್ತು ಹರಿಯು ಜಗತ್ಕರ್ತನು, ಅಸ್ವಾತಂತ್ರ್ಯಾದಿದೋಷವಿಲ್ಲದವನಾದ್ದರಿಂದ, ವ್ಯತಿರೇಕದಿಂದ ರುದ್ರನಹಾಗೆ. ಪತ್ಯುಃ ಎಂಬುವುದರಿಂದ ರಮಾಬ್ರಹ್ಮರನ್ನು ಉಪಲಕ್ಷಣೆಯಿಂದ ತೆಗೆದುಕೊಳ್ಳದಿದ್ದಲ್ಲಿ ಪಾರತಂತ್ರ್ಯಾದಿದೋಷರಾಹಿತ್ಯರೂಪಹೇತುವನ್ನು ಅವರಿಬ್ಬರಲ್ಲಿ ಶಂಕಿಸಬಹುದಾದ್ದರಿಂದ ಹೇತುವು ವಿಷ್ಣುವಿನಲ್ಲಿ ಮಟ್ಟಿಗೆ ಇದೆ ಎಂಬುದು ಸಂದಿಗ್ಧವಾದೀತು. ಆದ್ದರಿಂದ ಉಪಲಕ್ಷಣೆಯಿಂದ ರಮಾ-ಬ್ರಹ್ಮಾದಿಗಳನ್ನೂ ಕೂಡ "ಪತ್ಯುರಸಾಮಂಜಸ್ಯಾತ್" ಎಂಬಲ್ಲಿ ಗ್ರಹಿಸಬೇಕು. ಮತ್ತು ಶ್ರೀಹರಿಯು ಸ್ವತಂತ್ರನು ಎಂದು ಸೂತ್ರಕಾರರಿಗೆ ಅಭಿಪ್ರಾಯವಿಲ್ಲದಿದ್ದಲ್ಲಿ ಅಸ್ವಾತಂತ್ರ್ಯಾದಿದೋಷರಹಿತತ್ವರೂಪಹೇತುವು ಅಸಿದ್ಧಿಯಾದೀತು. ಅಂತೂ "ಪತ್ಯುರಸಾಮಂಜಸ್ಯಾತ್" ಎಂದು ಸೂತ್ರ ಮಾಡಿರುವ ವೇದವ್ಯಾಸರಿಗೆ ಹೀಗೆ ಅಭಿಪ್ರಾಯ–ರಮಾಬ್ರಹ್ಮರು ಅಸ್ವತಂತ್ರರು ಆದ್ದರಿಂದ ಜಗತ್ಕರ್ತೃತ್ವ ಅವರಲ್ಲಿಲ್ಲ. ಹರಿಯಲ್ಲಿಯಾದರೋ ಪಾರತಂತ್ರ್ಯವೇಮೊದಲಾದ ಯಾವ ದೋಷವೂ ಇಲ್ಲ. ಹೀಗೆ ಒಪ್ಪಿಕೊಳ್ಳದಿದ್ದಲ್ಲಿ ಹಿಂದೆ ಹೇಳಿದ ದೋಷಗಳು ಬರುತ್ತವೆ. ಆದ್ದರಿಂದಲೇ ಸ್ವತಂತ್ರನಾದ ಹರಿಯೇನೇ ಜಗಜ್ಜನ್ಮಾದಿಕರ್ತನು. ॥ ೬೦-೬೧ ॥

ಯಸ್ತು ದೋಷಾತಿದೂರೋಽಸ್ಯ ಕಥಂ ಸ್ಯಾದ್ದೋಷವಾನ್ಸಮಃ ॥
ತಸ್ಮಾದುತ್ತಮತಾಂ ಕೋವಾ ಭಾವಯೇತ್ಸೂತ್ರಭಾವವಿತ್ ।

ಅತಃ ಸೂತ್ರಕೃತಃ ಸೋಽಯಂ ಮತಃ ಸರ್ವೋತ್ತಮೋತ್ತಮಃ ||

ಯಾವನು ದೋಷಾತಿದೂರನೋ ಅವನಿಗೆ ದೋಷವುಳ್ಳವನು ಹೇಗೆ ಸಮನಾದಾನು? ಸೂತ್ರಭಾವವನ್ನು ತಿಳಿದವನು ಯಾವನು ತಾನೇ ದೋಷವುಳ್ಳವನಿಗೆ ಹರಿಗಿಂತ ಉತ್ತಮತ್ವವನ್ನು ಭಾವಿಸಿಯಾನು? ಬಾದರಾಯಣರ ವಿಷ್ಣುಸರ್ವೋತ್ತಮತ್ವಸ್ಥಾಪನಾರೀತಿಯು ಅತ್ಯುತ್ತಮವಾದದ್ದೆಂದು ಅಭಿಪ್ರಾಯ. || ೬೨-೬೩ ||

ಕಿಂಚ ಶಾಕ್ತಮತೇ ದೋಷಂ ಪೃಥಗೇವ ವದನ್ನಪಿ |
ಆಹ ಸ್ತ್ರೀಮಾತ್ರತಃ ಪುತ್ರೋತ್ಪತ್ತ್ಯಸಂಭವಮೇವ ಸಃ || ೬೪ ||

ಅಲ್ಲದೇ ಶಾಕ್ತಮತದಲ್ಲಿ ದೋಷವನ್ನು ಪೃಥಕ್ಕಾಗಿ ಹೇಳಿದವರಾದರೂ, ಸ್ತ್ರೀಯಿಂದ ಮಾತ್ರ ಪುತ್ರೋತ್ಪತ್ತಿಯು ಸಂಭಾವಿತವಲ್ಲ ಎಂಬುದನ್ನು ಮಟ್ಟಿಗೆ ಸೂತ್ರಕಾರರು ಹೇಳಿದರು. || ೬೪ ||

ನ ತು ದೋಷಾನಾಹ ಚಾಸ್ಯಾಂ ಶಿವೇ ಪಶುಪತಾವಿವ |
ಅತಃ ಶುಕ್ಲತಮೈವಾಸೀಚ್ಛಕ್ತಿಃ ಪತಿಮತೀ ರಮಾ || ೬೫ ||

ಪಶುಪತಿಯಾದ ಶಿವನಲ್ಲಿ ಹೇಳಿದಹಾಗೆ ಈಕೆಯಲ್ಲಿ ದೋಷಗಳನ್ನು ಹೇಳಲಿಲ್ಲ. ಆದ್ದರಿಂದ ಶಕ್ತಿಯು ಅಂದರೆ ಪತಿಮತಿಯಾದ (ಪತಿಯನ್ನುಳ್ಳ) ರಮಾದೇವಿಯು ಶುಕ್ಲತಮಳಾದಳು. || ೬೫ ||

ಮಮಯೋನಿರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂ ದಧಾಮ್ಯಹಂ |
ಇತಿ ಗೀತೋದಿತೇನಾಪಿ ತಥಾ ವಿಶ್ವಸ್ಯ ಕರ್ತೃತಾ || ೬೬ ||

ರಮಾಯಾಂ ಪರತಂತ್ರಾಯಾಂ ನ ಭವೇದ್ಧಿ ವಿಚಾರಣೇ |
ನಹ್ಯನ್ನಭಾಂಡಮನ್ನಸ್ಯ ಕರ್ತೃಪಾಚಕವದ್ಭವೇತ್ || ೬೭ ||

ಗೀತೆಯಲ್ಲಿ ಶ್ರೀಕೃಷ್ಣಪರಮಾತ್ಮನು "ಮಹದ್ಬ್ರಹ್ಮವೆಂದು ಕರೆಸಿಕೊಳ್ಳುವ ರಮಾದೇವಿಯಲ್ಲಿ ನಾನು ಗರ್ಭವನ್ನು ಇಡುತ್ತೇನೆ" ಎಂದು ಹೇಳಿದ್ದಾನೆ. ಇದರಿಂದಲೂ ಪರತಂತ್ರಳಾದ ರಮಾದೇವಿಯಲ್ಲಿ ವಿಶ್ವ-

ಕರ್ತೃತ್ವವು ಇಲ್ಲ. ಹೀಗೆ ಗೀತೆಯಲ್ಲಿ ಹೇಳಿರುವುದರಿಂದಲೂ, ಪರತಂತ್ರಳಾದ ರಮಾದೇವಿಯಲ್ಲಿ ವಿಶ್ವಕರ್ತೃತ್ವ ಇಲ್ಲವೆಂಬುದು ವಿಚಾರದಿಂದ ಸಿದ್ಧಿಸುತ್ತದೆ. ಅನ್ನ ಬೇಯಿಸುವ ಪಾತ್ರೆಯು ಅನ್ನವನ್ನು ಬೇಯಿಸುವವನಂತೆ ಅನ್ನದ ಕರ್ತೃವಲ್ಲವಷ್ಟೆ? || ೬೬-೬೭ ||

ಯದ್ಬ್ರಹ್ಮಾನ್ಯಸ್ಯ ಕರ್ತೃತ್ವಂ ವ್ಯಾಸಸ್ಯಾಪಿ ನ ಸಂಮತಂ |
ಅತಶ್ಚ ವ್ಯಾಸವಾಕ್ಯೇಽಸ್ಮಿನ್ನಚೋದ್ಯಾವಸರಸ್ತ್ವವ || ೬೮ ||

"ಮಮಯೋನಿರ್ಮಹದ್ಬ್ರಹ್ಮ" ಎಂಬ ವಾಕ್ಯದಲ್ಲಿ ಬ್ರಹ್ಮವಸ್ತುವಿನಿಂದ ಬೇರೆಯಾದದ್ದು ಜಗತ್ತಿಗೆ ಕಾರಣವಾದದ್ದೆಂದು ತೋರುತ್ತದೆ ಎಂಬ ಆಕ್ಷೇಪಕ್ಕೆ ಕಾರಣವಿಲ್ಲ. ಏಕೆಂದರೆ—ಸೂತ್ರಕಾರರು ಬ್ರಹ್ಮವಸ್ತುವಿನಿಂದ ಬೇರೆಯಾದದ್ದು ಜಗತ್ತಿಗೆ ಕಾರಣವಲ್ಲವೆಂದು ಸೂತ್ರಗಳಲ್ಲಿ ನಿರ್ಣಯಿಸಿದುವುದರಿಂದ ಈ ವೇದವ್ಯಾಸರಿಂದಲೇ ರಚಿತವಾದ ಗೀತಾವಾಕ್ಯದಲ್ಲಿ ಉಕ್ತವಾದ ಮಹದ್ಬ್ರಹ್ಮಶಬ್ದದಿಂದ ವಾಚ್ಯವಾದದ್ದು ಬೇರೇವಸ್ತು. ಅದು ಇತರ ಪ್ರಮಾಣಗಳಿಂದ ರಮಾದೇವಿಯೆಂದು ಸಿದ್ಧವಾಗುತ್ತದೆ. || ೬೮ ||

ಕಿಂಚ ಯುಕ್ತ್ಯಂತರೇಣಾಪಿ ಮಾತುಃ ಕರ್ತೃತ್ವವಾಕ್ತ್ವವ |
ನ ಶೋಭತೇ ತಾಂ ಚ ಯುಕ್ತಿಂ ವದಾಮ್ಯವಹಿತಃ ಶೃಣು ||೬೯||

ಅಲ್ಲದೆ ಬೇರೆ ಯುಕ್ತಿಯಿಂದಲೂ ಕೂಡ ತಾಯಿಯು ಕರ್ತಳೆಂಬ ನಿನ್ನ ಮಾತು ಶೋಭಿಸುವುದಿಲ್ಲ. ಆ ಯುಕ್ತಿಯನ್ನು ಹೇಳುವೆನು ಮನಸ್ಸಿಟ್ಟು ಕೇಳು. || ೬೯ ||

ಮಾತಾ ಭಸ್ತ್ರಾ ಪಿತುಃ ಪುತ್ರ ಇತಿ *ಭಾರತವಾಕ್ಯತಃ |
ಸೃಷ್ಟಿಕರ್ತಾ ಪಿತೈವಾತೋ ಲಕ್ಷಣಂ ಚ ಪ್ರಭೋರಭೂತ್ ||೭೦||

ತಾಯಿಯು ಶಿಲ್ಪಿಯ ತಿದಿಯಂತೆ. ತಂದೆಯ ದೆಶೆಯಿಂದ ಮಗನ ಜನ್ಮ—ಎಂಬೀ ಭಾರತವಾಕ್ಯದಿಂದ ಸೃಷ್ಟಿಕರ್ತನು ತಂದೆಯೇ ಆದ್ದರಿಂದ

---

*ಶಕುಂತಲೋಪಾಖ್ಯಾನ, ಆದಿಪರ್ವ.

ಜಗಜ್ಜನ್ಮಾದಿಕರ್ತೃತ್ವರೂಪಲಕ್ಷಣವು ಪ್ರಭುವಾದ ಹರಿಯದೆಂದಾಯಿತು. ಶಿಲ್ಪಿಯು ಕಡಗ ಮೊದಲಾದ ಕಾರ್ಯಕ್ಕೆ ಕರ್ತಾ. ಶಿದಿಯು ಅವನು ಉಪಯೋಗಿಸುವ ಸಲಕರಣ. ‖ ೭೦ ‖

ಅತಃ ಸರ್ವೇಽಪಿ ಲೋಕೇಽಸ್ಮಿನ್ ಕರ್ಮಕಾರಂ ವದಂತಿ ತಂ ।
ಕಾರುಶ್ಚ ಕರ್ಮಕರಣಶೀಲಃ ಕರ್ತೈವ ಕಿಂ ನ ಸಃ ‖ ೭೧ ‖

ಆದ್ದರಿಂದ ಸರ್ವಜನರೂ ಲೋಕದಲ್ಲಿ ಶಿಲ್ಪಿಯನ್ನು ಕರ್ಮಕಾರ ಎಂದರೆ ಕಮ್ಮಾರನೆಂದು ಹೇಳುವರು. ಕೆಲಸಮಾಡುವ ಸ್ವಭಾವವುಳ್ಳ ಕರ್ತನು 'ಕಾರು' ಎಂದು ಕರೆಸಿಕೊಳ್ಳಲ್ಪಡುವುದಿಲ್ಲವೇನು? ಆದ್ದರಿಂದಲೇ ಶಿಲ್ಪಿಗೆ ಕಮ್ಮಾರನೆಂದೂ, ಕಾರು ಎಂದೂ ಹೆಸರು. ‖ ೭೧ ‖

ಅತಃ ಕರ್ತಾ ಸ್ವತಂತ್ರತ್ವಾದ್ಧರಿರೇವ ನ ಚಾಪರಃ ।
ಕಲ್ಪಕ್ಷಯೇ ಸ್ವಸ್ಯ ಕುಕ್ಷೌ ನಿಕ್ಷಿಪ್ತಾಃ ಪರಮಾತ್ಮನಾ ‖ ೭೨ ‖
ಸರ್ವಜೀವಾಃ ಸೃಷ್ಟಿಕಾಲೇ ಪ್ರಾಪ್ತೇ ಸತಿ ತದಿಚ್ಛಯಾ ।
ಸೃಷ್ಟಂ ಪ್ರಾಕೃತಕುಕ್ಷಿಂತೇ ಪ್ರವಿಷ್ಟಾಸ್ತೇನ ಲೀಲಯಾ ‖ ೭೩ ‖

ಆದಕಾರಣ ಸ್ವತಂತ್ರನಾದ ಹರಿಯೇ ಜಗತ್ಕರ್ತ. ಅನ್ಯರು ಅಲ್ಲ. ಕಲ್ಪಕ್ಷಯದಲ್ಲಿ ಪರಮಾತ್ಮನಿಂದ ತನ್ನ (ಹರಿಯ) ಕುಕ್ಷಿಯಲ್ಲಿ ಇಡಲ್ಪಟ್ಟ ಆ ಸರ್ವ ಜೀವರುಗಳೂ ಸೃಷ್ಟಿಕಾಲಬಂದಾಗ ಅವನ ಇಚ್ಛೆಯಿಂದ ಸೃಷ್ಟವಾದ ಪ್ರಾಕೃತಕುಕ್ಷಿವನ್ನು ಅವನಿಂದ ಪ್ರವೇಶಿಸಲ್ಪಡುತ್ತಾರೆ. ಇದು ಶ್ರೀಹರಿಯ ಲೀಲಾ.

ಪ್ರವೇಶಿತಾಃ ಶ್ರಿಯಃ ಕುಕ್ಷೌ ತಸ್ಯಾಃ ಪ್ರಾಕೃತಶೋಣಿತೇ ।
ನಿಮಜ್ಜಿತಾ ದೋಹಲಾದ್ರ್ರಜಲೇ ಪ್ರಕ್ಷಿಪ್ತಬೀಜವತ್ ‖ ೭೪ ‖

ಶ್ರೀದೇವಿಯ ಕುಕ್ಷಿಯಲ್ಲಿ ಪ್ರವೇಶಿಸಲ್ಪಟ್ಟವರಾಗಿ ಆಕೆಯ ಪ್ರಾಕೃತ ಶೋಣಿತದಲ್ಲಿ *ದೋಹಲದ ವದ್ದೆಯ ನೀರಿನಲ್ಲಿ ಹಾಕಿದ ಬೀಜದಂತೆ ಮುಳುಗಿಸಲ್ಪಡುತ್ತಾರೆ. ‖ ೭೪ ‖

---

*ದೋಹಲ = ಬೀಜ ಬಿತ್ತುವುದಕ್ಕೆ ಮೊದಲು ಬೀಜಗಳನ್ನು ಇಡುವ ತೊಯ್ದ ಮೂಡೆ.

ಹರೇರನುಗ್ರಹಾತ್ತಸ್ಯಾ ಯೋನ್ಯಾಖ್ಯದ್ವಾರಮಾತ್ರತಃ ।
ಪ್ರಸೂಯಂತೇ ಪ್ರಜಾಃ ಸರ್ವಾಃ ಸುಕ್ಷೇತ್ರಾದಂಕುರಾ ಇವ ॥

ನಂತರ ಉತ್ತಮವಾದ ಕ್ಷೇತ್ರದಿಂದ ಮೊಳಕೆಗಳು ಹೇಗೋ ಹಾಗೆ ಹರಿಯ ಅನುಗ್ರಹದಿಂದ ಆಕೆಯ ಯೋನಿಯೆಂಬ ದ್ವಾರದಮೂಲಕ ಸರ್ವ ಪ್ರಜೆಗಳೂ ಕೂಡ ಹೊರಗೆ ಬರುತ್ತಾರೆ. ॥ ೭೫ ॥

ಏವಂ ಚ ಬೀಜಾವಾಪಸ್ಯ ಯಃ ಕರ್ತಾ ಪುರುಷೋತ್ತಮಃ ।
ಸ ಏವ ಜಗತಾಂ ಕರ್ತಾ ಭವೇದ್ಧಿ ಕೃಷಿಕರ್ತೃವತ್ ॥ ೭೬ ॥

ಈ ರೀತಿಯಲ್ಲಿ ಯಾವ ಪುರುಷೋತ್ತಮನು ಬೀಜವನ್ನು ಹಾಕುವುದರ ಕರ್ತನೋ ಅವನೇ ಕೃಷಿ ಮಾಡುವವನಂತೆ ಜಗತ್ತಿಗೆ ಕರ್ತನಾದಾನು. ॥ ೭೬ ॥

ಶ್ರೀಶ್ಚ ಕರ್ತುರಧಿಷ್ಠಾನಮಾತ್ರಂ ತಸ್ಯಾಸ್ತು ಕರ್ತೃತಾ ।
ನ ಲೋಕಸಂಮತಾ ಕಿಂತು ಯಸ್ಯ ವೀರ್ಯೋದ್ಭವಂಜಗತ್ ॥

ಸ ಏವ ಸರ್ವಜಗತಾಂ ಕರ್ತಾ ತದ್ಧರಿಲಕ್ಷಣಂ ।
ಜಗಜ್ಜನ್ಮಾದಿಕರ್ತೃತ್ವರೂಪಂ ನಾನ್ಯತ್ರ ಕುತ್ರಚಿತ್ ॥ ೭೮ ॥

ಶ್ರೀದೇವಿಯಾದರೋ ಕರ್ತನಿಗೆ ಅಧಿಷ್ಠಾನಮಾತ್ರಳು. ಆದ್ದರಿಂದ ಆಕೆಗೆ ಕರ್ತೃತ್ವವನ್ನು ಹೇಳುವುದು ಲೋಕಸಮ್ಮತವಲ್ಲ. ಆದರೆ ಯಾವನ ವೀರ್ಯದಿಂದ ಜಗತ್ತು ಹುಟ್ಟಿದೆಯೋ ಅವನೇ ಸರ್ವಜಗತ್ತಿಗೆ ಕರ್ತ. ಜಗಜ್ಜನ್ಮಾದಿಕರ್ತೃತ್ವರೂಪವಾದ ಆ ಹರಿಲಕ್ಷಣವು ಇನ್ನು ಯಾರಲ್ಲಿಯೇ ಆಗಲೀ ಸರ್ವಥಾ ಇಲ್ಲ. ॥ ೭೭-೭೮ ॥

ಯತಃ ಪಿತ್ರೈವ ಪುತ್ರಸ್ಯ ಕರ್ತಾ ತತ್ಪಿತುರೇವ ಸಃ ।
ಭರ್ತ್ರೋಪಹಮಾತು ಯಾ ಭಾರ್ಯಾ ಸಾ ಕರ್ತಾ ನ ಕಥಂಚನ ॥

ತಂದೆಯೇ ಪುತ್ರನಿಗೆ ಕರ್ತನಾದ್ದರಿಂದ ಪುತ್ರನು ತಂದೆಗೇ ಸೇರಿದವನು ಎಂದು ಅನ್ನಿಸಿಕೊಳ್ಳುತ್ತಾನೆ. (ಆತ್ಮಾ ವೈ ಪುತ್ರನಾಮಾಸಿ ಎಂಬ

ಪ್ರಮಾಣಾನುಸಾರ.) ತಿದಿಗೆ ಸಮಾನಳಾದ ಹೆಂಡತಿಯು ಸರ್ವಥಾ ಕರ್ತಳಲ್ಲ. || ೭೯ ||

ಪಿತುರೌದರ್ಯವೀರ್ಯಂ ಹಿ ಪುತ್ರದೇಹೋ ನ ಚಾಪರಃ |
ಅತಸ್ತದ್ದೇಹಕರ್ತಾಪಿ ಪಿತಾಭೂತ್ಕುಂಭಕಾರವತ್ || ೮೦ ||

ತಂದೆಯ ಉದರದ ವೀರ್ಯವು ಪುತ್ರನ ದೇಹವು. ಬೇರೆಯಲ್ಲ. ಆದ್ದರಿಂದ ಕುಂಬಾರನಂತೆ ಪುತ್ರನ ದೇಹದ ಕರ್ತನೂ ಕೂಡ ತಂದೆಯೇ ಆದನು. || ೮೦ ||

ಮೃದ್ವದ್ವೀರ್ಯಂ ತಸ್ಯ ಶಾಲೋಽಪವಾಸೀಜ್ಜನನೀ ತು ಯಾ |
ಏವಂ ಚ ಹರಿರೇವಾಭೂತ್ಕರ್ತಾ ಬ್ರಹ್ಮಾದಿದೇಹಕೃತ್ || ೮೧ ||

ಮಣ್ಣಿನಂತೆ ತಂದೆಯ ವೀರ್ಯವು. ತಾಯಿಯು ಆ ಕುಂಬಾರನ ಗಡಿಗೆಗಳಿಡುವ ಮನೆಯಂತೆ ಆದಳು. ಏವಂಚ ಬ್ರಹ್ಮಾದಿಗಳ ದೇಹಗಳನ್ನು ಸೃಷ್ಟಿಸಿದ ಹರಿಯೇ ಕರ್ತನಾದನು. || ೮೧ ||

ಕಾರಣಂ ವೀರ್ಯಮೇವಾಸೀದಧಿಷ್ಠಾನಮಭೂದ್ರಮಾ |
ಸೂತ್ರಸ್ಯ ಕರ್ತಾ ಯೋ ವ್ಯಾಸಃ ಸ ಕರ್ತಾ ಭಾರತಸ್ಯ ಚ ||೮೨||

ಅವನ (ಹರಿಯ) ವೀರ್ಯವು ಕಾರಣವಾಯಿತು. ಅಧಿಷ್ಠಾನವು ರಮಾದೇವಿಯಾದಳು. ಸೂತ್ರಗಳನ್ನು ಮಾಡಿದ ಯಾವ ವ್ಯಾಸರೋ ಅವರೇ ಭಾರತವನ್ನು ಮಾಡಿದವರು. || ೮೨ ||

ಅತಸ್ತ್ವತ್ರೋದಿತೋ ಯೋಽರ್ಥಃ ಸೂತ್ರಾರ್ಥೋಽಪಿ ಸ ಏವ ಸಃ |
ಏವಂ ಚ ಲಕ್ಷಣಸ್ಯಾಸ್ಯ ಕ್ವಾತಿವ್ಯಾಪ್ತಿರ್ವಿಚಾರ್ಯತಾಂ || ೮೩ ||

ಆದ್ದರಿಂದ ಭಾರತದಲ್ಲಿರುವ ಅರ್ಥವೇ ಸೂತ್ರದ ಅರ್ಥವು. ಹೀಗೆ ಇರುವಲ್ಲಿ ಜಗಜ್ಜನ್ಮಾದಿಕರ್ತೃತ್ವರೂಪಲಕ್ಷಣವು ಶಕ್ತಿದೇವತೆಯಲ್ಲಿ ಹೇಗೆ ಅತಿವ್ಯಾಪ್ತಿಯಾಯಿತು? ವಿಚಾರಮಾಡಿರಿ. || ೮೩ ||

ಕಿಂಚ ಪುಂಸೂಕ್ತಮಾರ್ಗೇಣ ಚಕ್ಷುಃ ಶ್ರೋತ್ರಮುಖೈಃ ಸ್ವಕೈಃ |
ಪದ್ಭ್ಯಾಂ ಭುಜಾಭ್ಯಾಮೂರುಭ್ಯಾಂ ನಾಭೇರಾಸ್ಯಾಚ್ಚ ಮಸ್ತಕಾತ್||

ಯದಾ ಸೃಜತಿ ಚಂದ್ರೇಂದ್ರಸೂರ್ಯಾಗ್ನಿಶ್ವಸನಾದಿಕಾನ್ |
ವಿಪ್ರಕ್ಷತ್ರಾದಿವರ್ಣಾಂಶ್ಚ ಲೋಕಾನ್ ಪಾತಾಳಪೂರ್ವಕಾನ್ ||೬೫||

ತದಾ ರಮಾವಿಧೀಶಾದೇಃ ಕರ್ತೃತಾಪಿ ತೇ ಗತಾ |
ವಿನಾಪಿ ಯಾನ್ ಭವೇತ್ಕಾರ್ಯಂ ತೇಷಾಂ ಕಾರಣತೈವ ನ ||೬೬||

ಅಲ್ಲದೆ ಪುರುಷಸೂಕ್ತದಲ್ಲಿ ಹೇಳಿದ ರೀತಿಯಲ್ಲಿ, ತನ್ನ ಕಣ್ಣು, ಕಿವಿ, ಮುಖ, ಪಾದ, ಭುಜ, ತೊಡೆ, ನಾಭಿ, ಶಿರಸ್ಸು ಇವುಗಳಿಂದ ಚಂದ್ರ, ಇಂದ್ರ, ಸೂರ್ಯ, ಅಗ್ನಿ, ವಾಯು ಇವರೇ ಮೊದಲಾದವರನ್ನೂ, ಬ್ರಾಹ್ಮಣ ಕ್ಷತ್ರಿಯಾದಿ ವರ್ಣಗಳನ್ನೂ, ಪಾತಾಳವೇ ಮೊದಲಾದ ಲೋಕಗಳನ್ನೂ ಹರಿಯು ಸೃಷ್ಟಿಸುತ್ತಾನೆ. ಮನಸ್ಸಿನಿಂದ ಚಂದ್ರನನ್ನೂ, ಚಕ್ಷುಸ್ಸಿನಿಂದ ಸೂರ್ಯನನ್ನೂ, ಮುಖದಿಂದ ಇಂದ್ರಾಗ್ನಿಗಳನ್ನೂ, ಪ್ರಾಣದಿಂದ ವಾಯುವನ್ನೂ, ಹೀಗೆ ದೇವತೆಗಳನ್ನೂ, ಪಾದದಿಂದ ಶೂದ್ರರನ್ನೂ, ತೊಡೆಯಿಂದ ವೈಶ್ಯರನ್ನೂ, ಭುಜದಿಂದ ಕ್ಷತ್ರಿಯರನ್ನೂ, ಮುಖದಿಂದ ಬ್ರಾಹ್ಮಣರನ್ನೂ ಹೀಗೆ ನಾಲ್ಕು ವರ್ಣಗಳನ್ನೂ, ನಾಭಿಯಿಂದ ಅಂತರಿಕ್ಷವನ್ನೂ, ಶಿರಸ್ಸಿನಿಂದ ಸ್ವರ್ಗವನ್ನೂ, ಪಾದದಿಂದ ಪಾತಾಳಾದಿ ಲೋಕಗಳನ್ನೂ ಸೃಷ್ಟಿ ಮಾಡುತ್ತಾನೆ ಅಂದಮೇಲೆ, ರಮಾ, ಬ್ರಹ್ಮ, ರುದ್ರ ಇವರೇ ಮೊದಲಾದವರು ಕರ್ತರು ಎಂಬ ನಿನ್ನ ಆಶೆಯೂ ಕೂಡ ಹೋಯಿತು. ಯಾರು ಇಲ್ಲದೇ ಇದ್ದರೂ ಕಾರ್ಯವು ಆಗುತ್ತದೆಯೋ ಆ ಕಾರ್ಯಕ್ಕೆ ಅವರು ಕಾರಣರಾಗಲೇ ಆಗಲಾರರು. || ೬೪-೬೬ ||

ಸ್ವತಂತ್ರಕಾರಣತ್ವಾಖ್ಯಕರ್ತೃತ್ವಂ ತ್ವಷ್ಟನೋ ರಸಃ |
ಅನ್ವಯವ್ಯತಿರೇಕಾಭ್ಯಾಂ ಯದ್ವ್ಯಾಪ್ತಂ ತದ್ಧಿ ಕಾರಣಂ || ೬೭ ||

ಈ ರಮಾಬ್ರಹ್ಮಾದಿಗಳಿಗೆ ಸ್ವತಂತ್ರಕಾರಣತ್ವವಂತೂ ಎಂಟನೇ ರಸದಂತೆ ಅತ್ಯಂತ ದೂರಾಪಾಸ್ತವಾಯಿತು. ಯಾವದಿದ್ದರೇನೇ ಕಾರ್ಯ

ವಾಗುತ್ತದೆಯೋ, ಯಾವುದಿಲ್ಲದಿದ್ದರೆ ಕಾರ್ಯವಾಗುವುದಿಲ್ಲವೋ ಅದೇನೇ ಕಾರಣವು. ಹೀಗೆ ಅನ್ವಯವ್ಯತಿರೇಕಗಳಿಂದ ಯಾವುದು ವ್ಯಾಪಿಸಲ್ಪಟ್ಟಿದೆಯೋ ಅದೇನೇ ಕಾರಣವು ಎಂದು ಹೇಳಿದಹಾಗಾಯಿತು. || ೮೭ ||

ಏವಂ ಚ ಶೋಭತೇ ವಿಷ್ಣೋರೇವ ಸರ್ವಸ್ಯ ಕರ್ತೃತಾ |
ತತ್ಸೂತ್ರಲಕ್ಷಣಂ ಸರ್ವದುರ್ವಾದಿಮತಶಿಕ್ಷಣಂ || ೮೮ ||

ಆದ್ದರಿಂದ “ಜನ್ಮಾದ್ಯಸ್ಯಯತಃ” ಎಂಬ ಸೂತ್ರವು ಪರಬ್ರಹ್ಮನಾದ ವಿಷ್ಣುವಿನ ಲಕ್ಷಣವನ್ನು ಹೇಳುತ್ತದೆ. ಈ ಸೂತ್ರವು ಜಗತ್ಕರ್ತೃತ್ವವನ್ನು ಇತರರಿಗೆ ಉಂಟೆಂದು ಹೇಳುವ ಸರ್ವ ದುರ್ಮತಗಳನ್ನೂ ನಿರಾಕರಿಸುತ್ತದೆ.

ತದ್ವ್ಯಾಸವಚಸಾಂ ಭಾವಂ ತಚ್ಛಿಷ್ಯೋ ವೇತ್ತಿ ಭಾಷ್ಯಕೃತ್ |
ಯಸ್ತತ್ವವಾದಿನಾಂ ಸಾಕ್ಷಾದಾಚಾರ್ಯೋ ಮಧ್ವನಾಮಕಃ ||

ಈ ವ್ಯಾಸರ ವಾಕ್ಯಗಳ ಭಾವವನ್ನು ಅವರ ಶಿಷ್ಯರಾದ ತತ್ವವಾದಿಗಳ ಸಾಕ್ಷಾದಾಚಾರ್ಯರೂ ಆದ ಮಧ್ವನಾಮಕ ಭಾಷ್ಯಕಾರರು ತಿಳಿದಿದ್ದಾರೆ.

ವಾದಿರಾಜಕೃತೇ ಶ್ರಾವ್ಯೇ ಕಾವ್ಯೇ ಭವ್ಯೇ ಸುಬುದ್ಧಿಭಿಃ |
ಸೇವ್ಯೇ ಸರಸಭಾರತ್ಯಾಂ ವಿಲಾಸೋಭೂದ್ಧರಿಪ್ರಿಯಃ || ೯೦ ||

ವಾದಿರಾಜರು ರಚಿಸಿದ, ಕೇಳಲು ಇಂಪಾದ, ಸುಂದರವಾದ, ಉತ್ತಮ ಬುದ್ಧಿಯುಳ್ಳವರಿಂದ ಸೇವಿಸಲ್ಪಡಲು ಯೋಗ್ಯವಾದ ಸರಸಭಾರತೀಕಾವ್ಯದಲ್ಲಿ ಹತ್ತನೆಯ ವಿಲಾಸವು ಶ್ರೀಹರಿಪ್ರೀತಿಯಾಯಿತು. || ೯೦ ||

ಸರಸಭಾರತೀವಿಲಾಸಕಾವ್ಯದಲ್ಲಿ ಹತ್ತನೆಯ ವಿಲಾಸವು ಪೂರ್ಣವಾಯಿತು.

ಏಕಾದಶೋ ವಿಲಾಸಃ

॥ ಶ್ರೀಗುರುಭ್ಯೋ ನಮಃ ಹರಿಃ ಓಂ ॥

[ಈ ವಿಲಾಸದಲ್ಲಿ ಭಾಗವತೋಕ್ತರೀತಿಯಿಂದ "ಸತ್ಕೃತಿಸಾಮಂಜಸ್ಯಾತ್" ಎಂಬ ಸೂತ್ರದಲ್ಲಿ ಸೂಚಿತವಾದ ರುದ್ರದೇವರ ದೋಷಗಳನ್ನು ವಿವರಿಸುತ್ತಾರೆ. ವೃಕಾಸುರೋಪಾಖ್ಯಾನದಲ್ಲಿ ರುದ್ರದೇವರಿಗೆ ಅಜ್ಞಾನ, ಕಾಮಕ್ರೋಧಾದಿಗಳು ಉಂಟು ಎಂದು ತೋರಿಸಿ ರುದ್ರನಲ್ಲಿ ಕಂಡುಬರುವ ಯಾವ ದೋಷವೂ ಹರಿಯಲ್ಲಿ ಇಲ್ಲವೆಂದು ತೋರಿಸುತ್ತಾರೆ.

ಮೂಲರೂಪದಲ್ಲಿಯೂ, ಅವತಾರರೂಪಗಳಲ್ಲಿಯೂ, ಶ್ರೀಹರಿಯ ಸೃಷ್ಟಿಯು ಅವನ ಇಚ್ಛಾಮಾತ್ರದಿಂದಲೇ, ತನ್ನರೇತಸ್ಸಿನಿಂದಲ್ಲ ಎಂಬ ಪ್ರಮೇಯವನ್ನು ಸಮರ್ಥಿಸಿದ್ದಾರೆ.]

ಕಿಂ ಚ ವಿಸ್ತೃತ್ಯ ಸೂತ್ರೋಕ್ತದೋಷಾನ್ವಚ್ಮಿ ಶಿವೇ ತವ ।
ಗ್ರಂಥೇ ಭಾಗವತೇ ತೇನ ವ್ಯಾಸೇನೈವ ಪ್ರಪಂಚಿತಾನ್ ॥ ೧ ॥

ಇನ್ನು ಸೂತ್ರದಲ್ಲಿ ಹೇಳಿರುವ ನಿನ್ನ ಶಿವನಲ್ಲಿರುವ ದೋಷಗಳನ್ನು ಆ ವ್ಯಾಸರೇ ಭಾಗವತದಲ್ಲಿ ವಿಸ್ತರಿಸಿರುವುದನ್ನು ಹೇಳುತ್ತೇನೆ.

ನಿಜಶಕ್ತಿಂ ಭಾವಿಕಾರ್ಯಂ ರಕ್ಷಃಪ್ರಕೃತಿಮೇವ ಚ ।
ಸ್ವತೋಽಪ್ರತಿಕ್ರಿಯಾಮನ್ಯದೇವೇಭ್ಯಶ್ಚಾಪ್ರತಿಕ್ರಿಯಾಂ ॥ ೨ ॥

ಪೂರ್ವಂ ಸರ್ವೇಷ್ವಶಕ್ತಿಂ ಚಾಜಾನನ್ ಪಶುಪತಿಃ ಶಿವಃ ।
ವೃಕಾಸುರಾಯಾತ್ಮಶೋಕಕರಂ ವರಮದಾತ್ಕಿಲ ॥ ೩ ॥

ವೃಕಾಸುರನ ತಪಸ್ಸಿಗೆ ಒಲಿದು, ಶಿವನು ತನಗೇ ದುಃಖವನ್ನುಂಟು ಮಾಡತಕ್ಕ ವರವನ್ನು ಅವನಿಗೆ ಕೊಟ್ಟನಷ್ಟೆ. ಆಗ ತನ್ನ ಶಕ್ತಿಯನ್ನೂ, ಮುಂದಿನ ಪರಿಣಾಮವನ್ನೂ, ರಾಕ್ಷಸರ ಸ್ವಭಾವವನ್ನೂ, ಬಂದ ಕಷ್ಟದ ಪರಿಹಾರವನ್ನು ಮಾಡಲು ತನಗೇ ಆಗಲೀ, ಇತರ ದೇವತೆಗಳಿಗೇ ಆಗಲೀ ಸಾಧ್ಯವಲ್ಲವೆಂಬುದನ್ನೂ, ತನ್ನನ್ನು ಕಾಪಾಡಲು ಯಾರಿಗೂ ಶಕ್ತಿಯಿಲ್ಲವೆಂಬುದನ್ನೂ ಆತನು ಮೊದಲೇ ತಿಳಿಯಲಿಲ್ಲವಲ್ಲವೇ?

ತತೋಽತಿಭೀತೋ ಯಾತೋಽಪಿ ತ್ರಿಶೂಲೀ ಸರ್ವತೋ ದಿಶಃ ।
ತ್ರಾತಾರಂ ತ್ವಾಪ್ಯಲಬ್ಧ್ವಾಂತೇ ಶ್ರೀಕಾಂತಂ ಶರಣಂ ಗತಃ ॥ ೪ ॥
ರಕ್ಷೋ ಹತ್ವಾಥ ಭಕ್ತಂ ತಂ ರರಕ್ಷ ಕಿಲ ಕೇಶವಃ ।

ವರವನ್ನು ಕೊಟ್ಟನಂತರ ಬಹಳ ಭಯಪಟ್ಟವನಾಗಿ ತ್ರಿಶೂಲಿಯು ಯಾವ ದಿಕ್ಕಿನಲ್ಲಿಯೂ ಕಾಪಾಡುವವನನ್ನು ಕಾಣದೆ ಎಲ್ಲ ದಿಕ್ಕುಗಳಲ್ಲಿಯೂ ಓಡಾಡಿ ಕೊನೆಯಲ್ಲಿ ರಮಾಕಾಂತನನ್ನು ಶರಣುಹೊಂದಿದನು. ರಾಕ್ಷಸನನ್ನು ಸಂಹರಿಸಿ, ಭಕ್ತನಾದ ರುದ್ರನನ್ನು ಕೇಶವನು ಕಾಪಾಡಿದನಲ್ಲವೇ? ಇದರಿಂದ ರುದ್ರನಿಗೆ ಅಜ್ಞಾನ, ಭಯ, ಪಾರತಂತ್ರ್ಯ, ಇವುಗಳು ಸಿದ್ಧವಾದವು. ॥ ೪-೫(೧) ॥

ಜಾತಮಾತ್ರಶಿಶುರ್ಯೋಽಸಾವರೋದೀತ್ಪಿತರಂ ಪ್ರತಿ ॥ ೫ ॥
ನಾಮಾನಿ ಕುರು ಮೇ ಧಾತಃ ಸ್ಥಾನಾನಿ ಚ ಜಗದ್ಗುರೋ ।

ಹುಟ್ಟಿದ ಕೂಡಲೇ ಶಿಶುವಾದ ರುದ್ರನು ತನ್ನ ತಂದೆಯಾದ ಬ್ರಹ್ಮದೇವರನ್ನು ಕುರಿತು "ಸ್ವಾಮೀ ಜಗದ್ಗುರುವೇ, ನನಗೆ ನಾಮಗಳನ್ನು ಕೊಡು. ಇರುವುದಕ್ಕೆ ಸ್ಥಳವನ್ನು ತೋರಿಸು" ಎಂದು ಅಳುತ್ತಾ ಕೇಳಿಕೊಂಡನು. ॥ ೫(೨)-೬(೧) ॥

ತಸ್ಯ ರುದ್ರಸ್ಯ ಲೋಭಾಖ್ಯದೋಷೋ ಹ್ಯಾಜಾನಜೋಽಭವತ್ ॥

ಅಹಂಕಾರಾಖ್ಯತತ್ವಸ್ಯಾಭಿಮಾನಾಜ್ಜನಪೂಜನಾತ್ ।
ಮಹಾದೇವಾಖ್ಯನಾಮ್ನಾ ಚ ಮದೋತ್ಕಲಿತಚೇತಸಃ ॥ ೬ ॥

ವಿಪ್ರೀರೂಪೇಂದ್ರದುಷ್ಕರ್ಮಾಹಂಮತೇರವಿಜಾನತಃ ।
ಕರಸ್ಥಸ್ಯಧನುಷ್ಕೋಟ್ಯಾ ಶಿರಚ್ಛೇದಾನ್ಮೃತಸ್ಯ ಚ ॥ ೮ ॥

ಪ್ರವರ್ಗ್ಯಾಹುತಿತುಷ್ಟೇನ ವಿಷ್ಣುನೋಜ್ಜೀವಿತಸ್ಯ ಚ ।
ಸಸೈನ್ಯಂ ರಾವಣಂ ಹತ್ವಾ ರಾಮೋ ರಾಜತಿ ಭೂತಲೇ ॥ ೯ ॥

ಬ್ರಹ್ಮರುದ್ರಾದಯೋ ದೇವಾಸ್ತಂ ಮಾನಯಿತುಮಾಗತಾಃ ।
ತದಾ ಸ್ವದತ್ತವರತಃ ಸರ್ವೈರಪ್ಯಜಿತಂ ಖಲು ॥ ೧೦ ॥

ಹತವಾನಿತಿ ಶರ್ವೋಽಸೌ ಸರ್ವೇಶೇ ಕೃತಮತ್ಸರಃ ॥ ೧೧ ॥

ಧನುರಾದಾಯ ಯುದ್ಧಾಯ ಜುಹಾವ ಕಿಲ ರಾಘವಂ ।
ಕಟಾಕ್ಷಕ್ಷೇಪಮಾತ್ರೇಣ ಸ್ಥಾಣುಂ ಚಕ್ರೇ ಹರಂ ಹರಿಃ ॥
ಇತಿ ರಾಮಾಯಣಕಥಾ ಯಚ್ಛ್ರುತಾ ತೇನ ಮತ್ಸರೀ ॥ ೧೨ ॥

ಗಿರೀಶ ಇತಿ ಸರ್ವೇಷಾಂ ವಿದುಷಾಮಪಿ ಸಂಮತಂ ॥ ೧೩ ॥

ಸ ವೈ ರುರೋದ ದೇವಾನಾಂ ಪೂರ್ವಜೋ ಭಗವಾನ್ ಭವಃ ।
ನಾಮಾನಿ ಕುರು ಮೇ ಧಾತಃ ಸ್ಥಾನಾನಿ ಚ ಜಗದ್ಗುರೋ ॥೧೪॥

ಇತಿ ಭಾಗವತೇ ಸ್ಪಷ್ಟಮುಕ್ತತ್ವಾದ್ಧನಲೋಭತಃ ।
ಯದ್ರುರೋದ ತತೋ ರುದ್ರೋ ಜನ್ಮಪ್ರಭೃತಿಲೋಭವಾನ್ ॥

ಮತ್ಸರಾತ್ಕುತ್ಸಿತಮತೇರ್ಲೋಭಾದ್ರೋದನಕಾರಿಣಃ ।
ಕ್ರೋಧಾದ್ಬ್ರಹ್ಮಶಿರಚ್ಛೇತ್ತುಃ ಕಾಮಾದ್ಗೌರ್ಯರ್ಧದೇಹಿನಃ ॥

ಮೋಹಾನ್ಮೋಹಿನೀಸ್ಪೃಷ್ಟ್ಯಾ ಮಾತ್ರಾಮಾತ್ರೇಣ ಸ್ರುತರೇತಸಃ ।
ಇತೋಽಪಿ ಪ್ರಾಗ್ಭಿತೇನೈವ ಕಾಮೇನ ವಿಜಿತಸ್ಯ ಚ ॥ ೧೭ ॥

ಕ್ರೋಧಾಯಾಭ್ಯಾಗತಮುನೇರ್ವಧಾಯೋದ್ಯತಶೂಲಿನಃ ।
ಸಾಕ್ಷಾತ್ಸ್ವಸ್ಯ ಪಿತುರ್ಮಸ್ತಕಚ್ಛೇದಾದಾತತಾಯಿನಃ ॥ ೧೮ ॥

ಶ್ಮಶಾನಚಾರಿಣೋ ನಿತ್ಯಂ ನೃಕಪಾಲಕರಸ್ಯ ಚ ।
ನಾರೀ ಸಂಗಮಮತ್ತೋಽಸೌ ಯಸ್ಮಾನ್ಮಾಮವಮನ್ಯತೇ ॥ ೧೯ ॥

ಯೋನಿಲಿಂಗಸ್ವರೂಪಂ ವೈ ತಸ್ಮಾದಸ್ಯ ಭವಿಷ್ಯತಿ ।
ಇತಿ ಪಾದ್ಮಪುರಾಣೋಕ್ತ ಭೃಗುಶಾಪಸ್ಯ ಸಾಹಸಂ ॥ ೨೦ ॥

ಪಶ್ಯಂತು ಪಂಚಶೀರ್ಷಾಣಿ ಭುಜಾನಾಂ ಚ ಚತುಷ್ಟಯಂ ।
ದ್ವೌ ಪಾದಾವುದರಂ ವಕ್ಷಃ ಕಟಿಶ್ಚೋರೂ ಚ ಧೂರ್ಜಟೇಃ ॥೨೧॥

ವಿಚ್ಛಿದ್ಯ ತತ್ಕ್ಷಣಾದೇವ ಪೇತುಃ ಕಿಲ ಮಹೀತಲೇ ।
ಶಿಶ್ನಮಾತ್ರಂ ಚೋರ್ವರಿತಂ ತಚ್ಚ ಯೋನ್ಯಾಂ ನಿವೇಶಿತಂ ॥೩೨॥

ಅತ್ರ ಪ್ರಮಾಣಂ ಶೈವಾನಾಂ ಕಂಠೇ ಕಂಠೇ ವಿಲಂಬಿನೀ ।
ಲಿಂಗಮಾಲೈವ ಯಾ ನಿತ್ಯಂ ಕರೇ ವಾಮೇ ಪ್ರಪೂಜ್ಯತೇ ॥ ೩೩ ॥

ಏವಂ ಚ ಹರಿಭಕ್ತಸ್ಯ ಭೃಗೋರದ್ಭುತತೇಜಸಃ ।
ಶಾಪಾಚ್ಛಿನ್ನಾಖಿಲಾಂಗಸ್ಯ ಲಿಂಗಾಕಾರಧರಸ್ಯ ಚ ॥ ೩೪ ॥

ವರಂ ದತ್ವಾ ಮಾರಕಸ್ಯ ದುರಾಚಾರಿಪ್ರಿಯಸ್ಯ ಚ ।
ವಿಷೇಣ ನೀಲಗ್ರೀವಸ್ಯ ವಿಷಾದಾನ್ಮೋಹರೂಪಿಣಃ ॥ ೩೫ ॥

ಮೋಹರೂಪಶಿವತ್ರಾತೇತ್ಯುಕ್ತೋ(ಕ್ತೇ) ಯೋ ನರಕೇಸರೀ ।
ಜುಗೋಪ ಕಿಲ ಯನ್ಮೋಹರೂಪಶಂಕರವಾಹನಃ ॥ ೩೬ ॥

ಯೋಗಿನೀಗ್ರಸ್ತಗಿರಿಶಂ ತಸ್ಯ ಸ್ತ್ರೀರೂಪಶಕ್ತಿಭಿಃ ।
ಪರಾಜಿತಸ್ಯ ತ್ರಾತಸ್ಯ ಹರಿಣಾ ಕರುಣಾವತಾ ॥ ೩೭ ॥

ಯೋಗ್ಯಾಯೋಗ್ಯಂ ತಥಾ ಕಾರ್ಯಾಕಾರ್ಯಂ ಚಾಪ್ಯವಿಜಾನತಃ
ನಾಮಮಾತ್ರಾನ್ಮಹೇಶಸ್ಯ ನಾಮ್ನಾ ಮೃತ್ಯುಂಜಯಸ್ಯ ಚ ॥೩೮॥

ವೇಪಮಾನಸ್ಯ ಮರಣಶಂಕಯಾ ದಿಕ್ಷು ಧಾವತಃ ।
ಚಲತ್ತ್ರಿಶೂಲಹಸ್ತಸ್ಯ ಗಲೇಲೋಲತ್ಪಿನಾಕಿನಃ ॥ ೩೯ ॥

ಸ್ರಂಸತ್ಕಪರ್ದಬಂಧಸ್ಯ ಸಂತ್ರಸ್ತಸ್ಯ ಪದೇಪದೇ ।
ಅಸಮಂಜಸತಾತ್ಮಸ್ಯ ಕಿಂ ವಾಚ್ಯಾ ಕೋಽಚ್ಯಕರ್ಮಣಃ ॥ ೪೦ ॥

[೬ನೇ ಶ್ಲೋಕದ ಉತ್ತರಾರ್ಧದಿಂದ ೪೦ನೇ ಶ್ಲೋಕದವರೆಗೆ ಇರುವ ೩೪ ಶ್ಲೋಕಗಳ ಒಟ್ಟು ಅಭಿಪ್ರಾಯ.]

ಇದರಿಂದ ರುದ್ರನಿಗೆ ಲೋಭವೆಂಬ ದೋಷವು ಹುಟ್ಟಿದಾಗಿನಿಂದ ಆಯಿತು. ಪಶುಪತಿಯು ಪಾರತಂತ್ರ್ಯ, ಜನಿ, ಮೃತ್ಯು ಇವೇ ಮೊದಲಾದ

ದೋಷವುಳ್ಳವನಾದ್ದರಿಂದ ಜಗತ್ಕರ್ತನಲ್ಲ ಎಂದು "ಪತ್ಯುರಸಾಮಂಜ-ಸ್ಯಾತ್" ಎಂಬ ಸೂತ್ರದಲ್ಲಿ ಸೂತ್ರಕಾರರು ಹೇಳಿರುವರಷ್ಟೆ. ಪಶುಪತಿಯ ನ್ಯೂನತೆಗಳನ್ನು ಮುಂದೆ ವಿವರಿಸುತ್ತೇವೆ.

ಅಹಂಕಾರತತ್ವಕ್ಕೆ ಅಭಿಮಾನಿಯಾಗಿರುವುದರಿಂದಲೂ, ಜನರು ತನ್ನನ್ನು ಪೂಜೆಮಾಡುವುದರಿಂದಲೂ, ಮಹಾದೇವನೆಂಬ ಹೆಸರು ಇರುವುದರಿಂದಲೂ, ಮದದಿಂದ ಕೂಡಿದ ಮನಸ್ಸುಳ್ಳವನು.

ಅಹಂಕಾರದಿಂದ ಉನ್ಮತ್ತನಾಗಿ ತಿಳುವಳಿಕೆ ಇಲ್ಲದವನಾಗಿದ್ದುದರಿಂದ ಆಗಿನ ಕಾಲದಲ್ಲಿ ತನ್ನ ಕರದಲ್ಲಿದ್ದ ಧನುಸ್ಸಿನ ಕೊನೆಯಿಂದಲೇ, ಇರುವೆಯ ರೂಪದಲ್ಲಿ ಬಂದು ಬಿಲ್ಲಿನ ಹೆದೆಯನ್ನು ಇಂದ್ರನು ಕತ್ತರಿಸಿದಾಗ ಶಿರಸ್ಸು ಛೇದವಾಗಿ ಶಿವನು ಮೃತನಾದನು. ಆಗ ಯಜ್ಞದಲ್ಲಿ ಪ್ರವರ್ಗ್ಯವೆಂಬ ಆಹುತಿಯನ್ನು ವಿಷ್ಣುವನ್ನುದ್ದೇಶಿಸಿ ಋಷಿಗಳೂ, ದೇವತೆಗಳೂ ಕೊಟ್ಟದ್ದರಿಂದ ತುಷ್ಟನಾದ ವಿಷ್ಣುವಿನ ಅನುಗ್ರಹದಿಂದ ಪುನಃ ಜೀವಂತನಾದನು.

ಸೈನ್ಯಸಹಿತವಾಗಿ ರಾವಣನನ್ನು ಸಂಹಾರಮಾಡಿ ಭೂತಲದಲ್ಲಿ ರಾಮನು ವಿರಾಜಮಾನನಾಗಿರಲು, ಆಗ ಬ್ರಹ್ಮರುದ್ರಾದಿದೇವತೆಗಳು ಆತನಿಗೆ ಮರ್ಯಾದೆ ಮಾಡಲು ಬಂದಾಗ "ಯಾರಿಂದಲೂ ಜಯಿಸಲ್ಪಡದೆ ಇರುವವನಾಗು" ಎಂದು ವರವನ್ನು ತನ್ನಿಂದ ಪಡೆದ ರಾವಣನನ್ನು ರಾಮನು ಕೊಂದನೆಂದು ಈ ರುದ್ರನು ಸರ್ವೇಶನಾದ ರಾಮನಲ್ಲಿ ಮತ್ಸರವನ್ನು ಮಾಡಿದನು. ನಂತರ ಧನುಸ್ಸನ್ನು ತೆಗೆದುಕೊಂಡು ರಾಘವನನ್ನು ಯುದ್ಧಕ್ಕೆ ಕರೆದನು. ಹರಿಯು ತನ್ನ ಕಡೆಗಣ್ಣನೋಟದಿಂದಲೇ ರುದ್ರನನ್ನು ನಿರ್ವ್ಯಾಪಾರನನ್ನಾಗಿ ಮಾಡಿದನು. ಈ ರಾಮಾಯಣದ ಕಥೆಯಿಂದ ರುದ್ರನು ಮತ್ಸರವುಳ್ಳವನೆಂದು ಸಿದ್ಧವಾಯಿತು. ಈ ಕಥೆಯು ಸರ್ವಜ್ಞಾನಿಗಳಿಗೂ ಸಮ್ಮತವಾದದ್ದು.

ಭಾಗವತದಲ್ಲಿ ಹೀಗೆ ಹೇಳಿದೆ– "ಬ್ರಹ್ಮದೇವರ ಭ್ರೂಮಧ್ಯದಿಂದ ರುದ್ರದೇವನು ಹುಟ್ಟಿದನು. ಆಗ ದೇವತೆಗಳಲ್ಲಿ ಮೊದಲು ಹುಟ್ಟಿದ ಪೂಜ್ಯನಾದ ರುದ್ರನು ಪೋಷಣಕರ್ತನಾದ್ದರಿಂದ ಧಾತಾ ಎಂದು ಕರೆಸಿಕೊಳ್ಳುವ

ಜಗದ್ಗುರುವಾದ ಬ್ರಹ್ಮನೇ, ನನಗೆ ಹೆಸರನ್ನು ಇಡು. ಇರುವುದಕ್ಕೆ ಸ್ಥಳ ವನ್ನು ತೋರಿಸು, ಹೀಗೆಂದು ಧನಲೋಭದಿಂದ ಅತ್ತನು. ಆದುದರಿಂದ ಹುಟ್ಟಿದಮೊದಲು ಲೋಭವುಳ್ಳವನಾದನು. ಮತ್ತು ರೋದನಮಾಡಿದ್ದರಿಂದ ರುದ್ರನೆಂದು ಅವನಿಗೆ ಹೆಸರು.

ರಾಮದೇವರಲ್ಲಿ ಮತ್ಸರ ಮಾಡಿದ್ದರಿಂದ ದೀನಮನಸ್ಕನಾದನು. ಲೋಭದಿಂದ ಅತ್ತನು. ದಕ್ಷನ ಶಿರಸ್ಸನ್ನು ಕತ್ತರಿಸಿದ್ದರಿಂದ ಕೋಪವುಳ್ಳವ ನಾದನು. ಗೌರಿಯೇ ಅರ್ಧದೇಹವುಳ್ಳವನಾದ್ದರಿಂದ ಕಾಮಿಯಾದನು. ವಿಷ್ಣುವು ತನ್ನ ಮೋಹಿನೀರೂಪವನ್ನು ತೋರಿಸಿದಾಗ, ಮೋಹದಿಂದ ವಿಷ್ಣುವಿನ ಹಿಂದೆ ಓಡಿ ತನ್ನ ರೇತಸ್ಸನ್ನು ಸ್ಖಲನಮಾಡಿಕೊಂಡನು. ಇದರಿಂದ ರುದ್ರನು ಮೋಹವುಳ್ಳವನೆಂದು ಸಿದ್ಧವಾಯಿತು. ಅಲ್ಲದೆ ಇದರಿಂದ ಹಿಂದೆ ತನ್ನಿಂದ ಜಯಿಸಲ್ಪಟ್ಟ ಕಾಮನಿಂದ ಜಿತನಾದನೆಂಬುದೂ ಸಿದ್ಧ ವಾಯಿತು.

ಭೃಗುಋಷಿಗಳು ತ್ರಿಮೂರ್ತಿಗಳಲ್ಲಿ ಯಾರು ಶ್ರೇಷ್ಠರು ಎಂಬು ವುದನ್ನು ನಿಶ್ಚಯಿಸಲು ಬಂದಾಗ ಅವರನ್ನು ಕೊಲ್ಲಲೋಸುಗ ಶೂಲವನ್ನು ಎತ್ತಿ ಎದುರಿಗೆ ಹೋದನು. ಅಲ್ಲದೆ, ತನ್ನ ಸಾಕ್ಷಾತ್ ತಂದೆಯಾದ ಬ್ರಹ್ಮ ದೇವರ ಐದನೆಯ ತಲೆಯನ್ನು ಕತ್ತರಿಸಿದನು. ಇದರಿಂದ ಆತತಾಯಿ ಎನಿಸಿಕೊಂಡನು. ನಿತ್ಯವೂ ಸ್ಮಶಾನದಲ್ಲಿ ಸಂಚಾರ ಮಾಡುವನು. ಅಲ್ಲದೆ ಕೈಯಲ್ಲಿ ಮನುಷ್ಯನ ಕಪಾಲವನ್ನು ಧರಿಸಿರುವನು.

ಸ್ತ್ರೀಸಂಗದಲ್ಲಿ ಉನ್ಮತ್ತನಾಗಿರುವನು. ಆದುದರಿಂದ ನನಗೆ ಅಮರ್ಯಾದೆ ಯನ್ನು ಮಾಡಿರುವನು ಎಂದು ಕೋಪಗೊಂಡ ಭೃಗುಋಷಿಗಳ ಶಾಪ ದಿಂದ ಯೋನಿಲಿಂಗಸ್ವರೂಪನಾದನು ಎಂಬುದಾಗಿ ಪದ್ಮಪುರಾಣದಲ್ಲಿ ಹೇಳಿದೆ. ವಿಷ್ಣುಭಕ್ತರಾದ ಭೃಗುಋಷಿಗಳ ಶಾಪದ ಮಹಿಮೆಯನ್ನು ನೋಡಿರಿ. ಈ ಶಾಪದಿಂದ (ರುದ್ರನ) ಐದು ಶಿರಸ್ಸು, ನಾಲ್ಕು ಭುಜಗಳು, ಎರಡು ಪಾದ, ಉದರ, ವಕ್ಷಸ್ಥಳ, ಸೊಂಟ, ತೊಡೆ ಇವೆಲ್ಲವೂ ಧೂರ್ಜಟಿಗೆ ನಷ್ಟವಾಗಿ ಭೂಮಿಯಲ್ಲಿ ಬಿದ್ದುಹೋದವು ಅಲ್ಲವೇ ? ಶಿಶ್ನಮಾತ್ರ

ಉಳಿಯಿತು. ಅದು ಯೋನಿಯಲ್ಲಿ ಸ್ಥಾಪಿತವಾಯಿತು. ಈ ವಿಷಯದಲ್ಲಿ ಶೈವರು ಒಬ್ಬೊಬ್ಬರ ಕಂಠದಲ್ಲಿ ಶಿವಲಿಂಗವಾಲೆಯನ್ನು ಧರಿಸಿ ಆ ಲಿಂಗ ವನ್ನು ಎಡ ಹಸ್ತವಲ್ಲಿಟ್ಟು ಪೂಜೆಮಾಡುವುದೇ ಪ್ರಮಾಣ. ಒಟ್ಟಿನಲ್ಲಿ ಅದ್ಭುತ ಮಹಿಮೆಯುಳ್ಳ ಹರಿಭಕ್ತರಾದ ಭೃಗುಋಷಿಗಳ ಶಾಪದಿಂದ ಸರ್ವಾಂಗ ಗಳೂ ನಷ್ಟವಾಗಿ ಲಿಂಗಾಕಾರವುಳ್ಳವನು ಶಿವನು.

ಕೊಲೆಪಾತಕನಿಗೆ ವರವನ್ನು ಕೊಡುವುದರಿಂದ ದುರಾಚಾರಿಗಳಿಗೆ ಪ್ರಿಯನೆಂದೆನಿಸಿಕೊಂಡನು. ವಿಷವನ್ನು ಕುಡಿಯುವುದರಿಂದ ನೀಲಕಂಠ ನಾದನು.

ಒಂದಾನೊಂದು ಕಾಲದಲ್ಲಿ ಶಿವನನ್ನು ನುಂಗಲು ಪಾತಾಳಲೋಕ ದಿಂದ ದುಷ್ಟಭೂತಗಳಿಂದ ಸುತ್ತಲ್ಪಟ್ಟವಳಾಗಿ ಒಬ್ಬ ಯೋಗಿನಿಯು ಬಂದಳು. ಆಗ ರುದ್ರದೇವನು ಭಯಪಟ್ಟು ಮೇಷರೂಪವನ್ನು ತಾಳಿ ನರಸಿಂಹನನ್ನು ಮೊರೆಯಿಡಲು, ಆಗ ದೇವನು ಮೇಷರೂಪಿಯಾದ ಶಿವನನ್ನೇ ವಾಹನವನ್ನಾಗಿ ಮಾಡಿಕೊಂಡು ತನ್ನ ಚಕ್ರದಿಂದ ಆ ಪಿಶಾಚದ ಸಮೂಹವನ್ನು ಸಂಹರಿಸಿದನು.

ಯೋಗ್ಯವಾದುದು ಯಾವುದು, ಅಯೋಗ್ಯವಾದುದು ಯಾವುದು, ಯಾವುದು ಮಾಡಬಹುದು, ಯಾವುದು ಮಾಡಬಾರದು ಎಂಬುದನ್ನು ತಿಳಿಯದೇ ಹೋದನು. ಇದಕ್ಕೆ ದೃಷ್ಟಾಂತ–ಭೃಗುಋಷಿಗಳು ತನ್ನಲ್ಲಿ ಬಂದಾಗ ಅವರಿಗೆ ಮರ್ಯಾದೆಯನ್ನು ಮಾಡುವುದು ಯೋಗ್ಯವಾದದ್ದೆಂದು ತಿಳಿಯಲಿಲ್ಲ. ಅವರಮೇಲೆ ಕೋಪಮಾಡುವುದು ಅಯೋಗ್ಯವೆಂದು ತಿಳಿಯಲಿಲ್ಲ. ರಾವಣನನ್ನು ರಾಮದೇವರು ಸಂಹರಿಸಿದ ಕಾಲದಲ್ಲಿ ಬ್ರಹ್ಮಾದಿಗಳು ರಾಮದೇವರನ್ನು ಸ್ತೋತ್ರಮಾಡುವುದು ತಮ್ಮ ಕಾರ್ಯ ವೆಂದು ಹೇಗೆ ತಿಳಿದರೋ ಹಾಗೆ ರುದ್ರದೇವನು ತಿಳಿಯಲಿಲ್ಲ.

ಶಿವನನ್ನು ಮಹೇಶನೆಂದೂ, ಮೃತ್ಯುಂಜಯನೆಂದೂ ಕರೆಯುತ್ತಾರೆ. ಆದರೆ ಇವು ಹೆಸರುಮಾತ್ರ. ನಿಜವಾಗಿ ಮಹೇಶನಾಗಿದ್ದಲ್ಲಿ ವೃಕಾಸುರನಿಗೆ ಭಯಪಟ್ಟು ಓಡುತ್ತಿದ್ದನೇನು? ಹಾಗೆಯೇ ನಿಜವಾಗಿ ಮೃತ್ಯುಂಜಯ

ನಾಗಿದ್ದಲ್ಲಿ ಮೃತ್ಯುಭಯದಿಂದ ಓಡುತ್ತಿದ್ದನೇನು? ಓಡುವಾಗ ಮರಣಶಂಕೆಯಿಂದ ನಡುಗಿದವನು. ತ್ರಿಶೂಲವೂ ಅಲ್ಲಾಡುತ್ತಿತ್ತು. ಪಿನಾಕಧನುಸ್ಸು ಕೊರಳಲ್ಲಿ ಜೋಲಾಡುತ್ತಿತ್ತು. ಜಟೆಯ ಗಂಟು ಬಿಚ್ಚಿತ್ತು. ಹೀಗೆ ಪದೇಪದೇ ಭಯಗ್ರಸ್ತನಾಗಿ ದಿಕ್ಕುದಿಕ್ಕುಗಳಲ್ಲಿ ಓಡಿದನು. ಇಂತಹ ಶೋಚನಾರ್ಹವಾದ ಕರ್ಮಗಳನ್ನು ಮಾಡುವ ರುದ್ರನಿಗೆ ಸೂಕ್ತೋಕ್ತವಾದ ಅಸಮಂಜಸತಾ ಎಂಬರಿ ದೋಷವು ಉಂಟೆಂದು ಹೇಳತಕ್ಕದ್ದೇನು? ಅದು ಇದ್ದೇಇದೆ ಎಂದರ್ಥ. || ೭-೨೦ ||

ರುದ್ರಾನುದ್ರುತದುರ್ದೈತ್ಯಮರ್ದನಾಯೋದ್ಯತಸ್ಯ ಚ ।
ನ್ಯಸ್ತಹಸ್ತಗಶಸ್ತ್ರಸ್ಯ ಭೃತ್ಯಕೃತ್ಯಾನುಪೇಕ್ಷಿಣಃ || ೨೧ ||

ಶ್ರೀಹರಿಯು ಈ ಮುಂದೆಹೇಳುವ ಗುಣಕ್ರಿಯೆಗಳುಳ್ಳವನು. ರುದ್ರನನ್ನು ಹಿಂಬಾಲಿಸಿದ ದುಷ್ಟದೈತ್ಯನನ್ನು ಸಂಹರಿಸಲು ಪ್ರಯತ್ನವುಳ್ಳವನಾದವನು. ತನ್ನ ಹಸ್ತದಲ್ಲಿನ ಚಕ್ರಾಯುಧವನ್ನು ತನ್ನ ಭಕ್ತನಾದ ಅಂಬರೀಷನ ರಕ್ಷಣಾರ್ಥವಾಗಿ ಅವನಲ್ಲಿ ಇಟ್ಟನು. ಅಲ್ಲದೆ ಅಂಬರೀಷನ ಮೇಲೆ ದೂರ್ವಾಸರು ಬಿಟ್ಟ ಕೃತ್ಯಾವನ್ನು ಉಪೇಕ್ಷೆಮಾಡಲಿಲ್ಲ. || ೨೧ ||

ಭೃಗೋ ರಾಗಾನುಕೂಲಸ್ಯ (ಯೋವಿಷ್ಣೋ) ಕ್ರೋಧಜಿಷ್ಣುತಾಂ |
ಅಘೋಷಯಿತುಮಾಗಚ್ಛ ದ್ವಿಬುಧಾಧಿಕ್ಯಸಿದ್ಧಯೇ || ೨೨ ||

ದೇವತೆಗಳಲ್ಲಿ ವಿಷ್ಣುವು ಸರ್ವೋತ್ತಮನೆಂದು ಸಿದ್ಧಿಸುವುದಕ್ಕಾಗಿ, ಆತನ ಕೋಪವನ್ನು ಜಯಿಸುವ ಸ್ವಭಾವವನ್ನು ಪ್ರಸಿದ್ಧಪಡಿಸಲು ಯಾವ ಭೃಗುಋಷಿಗಳು ಬಂದರೋ ಅವರ ಕೋಪಕ್ಕೆ ಅನುಕೂಲನಾದನು. ಅಂದರೆ ಅವರ ಕೋಪವನ್ನು ಸಹಿಸಿದನು. || ೨೨ ||

ಮದಾಂಧಜನದೂರಸ್ಯ ವಧೂಕರ್ಣಚ್ಛಿದೋವನೇ ।
ಭಕ್ತಾಯ ದತ್ತರಾಜ್ಯಸ್ಯ ಪಾರ್ಥಸಾರಥ್ಯಕಾರಿಣಃ || ೨೩ ||

ಗರ್ವಿಷ್ಠರಾದ ಜನರಿಗೆ ಹರಿಯು ದೂರನಾದವನು. ವನದಲ್ಲಿ ಕಾಮಮೋಹಿತಳಾಗಿ ಬಂದ ಶೂರ್ಪಣಖೆಯ ಕಿವಿಯನ್ನು ಕತ್ತರಿಸಿದನು.

ಭಕ್ತನಾದ ಸುಗ್ರೀವನಿಗೆ ವಾಲಿಯನ್ನು ಸಂಹಾರಮಾಡಿ ಕಪಿಸಾಮ್ರಾಜ್ಯ ವನ್ನು ಕೊಟ್ಟನು. ಭಕ್ತನಾದ ವಿಭೀಷಣನಿಗೆ ರಾವಣನ ರಾಜ್ಯವನ್ನು ಕೊಟ್ಟನು. ಮತ್ತು ಭಕ್ತನಾದ ಅರ್ಜುನನಿಗೆ ಸಾರಥ್ಯವನ್ನು ಮಾಡಿದನು.

ಅಗಣ್ಯ(ಶರೇಣ)ರಕ್ಷಃಶಸ್ತ್ರೇಭ್ಯೋಽಪ್ಯನಿರ್ಭಿನ್ನತ್ವಚೋ ಹರೇಃ ।
ಅಜಾಂಡಭಂಗೇಽಪ್ಯಕ್ಷುಣ್ಣರಾಜನ್ನಖಶಿಖಸ್ಯ ಚ ॥ ೩೪ ॥

ಅಸಂಖ್ಯಾತರಾದ ರಾಕ್ಷಸರಿಂದ ಪ್ರಯೋಗಿಸಲ್ಪಟ್ಟ ಶಸ್ತ್ರಗಳಿಂದ ಹರಿಯ ಚರ್ಮವು ಸೀಳಲಿಲ್ಲ. ಬ್ರಹ್ಮಾಂಡವನ್ನು ಸೀಳಿದರೂ ಇವನ ಪ್ರಕಾಶಮಾನವಾದ ನಖದ ಮೊನೆಯು ಮುರಿಯಲಿಲ್ಲ. ॥ ೩೪ ॥

ದ್ವಿಧಾ ವನಾಗ್ನಿಪಾನೇನಾಪ್ಯದಗ್ಧರಸನಸ್ಯ ಚ ।
ಸರ್ಗಸ್ಥಿತ್ಯಂತಕರಣೇಽಪ್ಯನಹಂಕೃತಚೇತಸಃ ॥ ೩೫ ॥

ಎರಡಾವರ್ತಿ ಕಾಡ್ಗಿಚ್ಚನ್ನು ಪಾನಮಾಡಿದರೂ ಇವನ ನಾಲಿಗೆಯು ಸುಡಲಿಲ್ಲ. ಸೃಷ್ಟಿ-ಸ್ಥಿತಿ-ಲಯಗಳನ್ನು ಮಾಡಿದರೂ ಇವನ ಮನಸ್ಸಿನಲ್ಲಿ ಅಹಂಕಾರವಿಲ್ಲ. ॥ ೩೫ ॥

ಅಸಂಖ್ಯಾಸುರಸಂಹಾರೇಽಪ್ಯಘಲೇಶೋಜ್ಝಿತಸ್ಯ ಚ ।
ನ ತತ್ರ ಸಜ್ಜಸ ಇತಿ ಸ್ಮೃತಿಗೀತಸುಕರ್ಮಣಃ ॥ ೩೬ ॥

ಅಸಂಖ್ಯಾತರಾದ ಅಸುರರನ್ನು ಸಂಹಾರಮಾಡಿದರೂ ಈ ಹರಿಯು ಪಾಪಲೇಶವಿಲ್ಲದವನು. ಜಗತ್ಸೃಷ್ಟಿಯೇ ಮೊದಲಾದ ಅನೇಕ ಕರ್ಮ ಗಳನ್ನು ಮಾಡಿದರೂ ಫಲಾಸಕ್ತಿಯಿಲ್ಲದವನಾದ್ದರಿಂದ ಕರ್ಮಲೇಪವಿಲ್ಲ ದವನು ನೀನು ಎಂದು ಭಗವದ್ಗೀತೆಯೇ ಮೊದಲಾದ ಸ್ಮೃತಿಗಳಲ್ಲಿ ಸ್ತುತ್ಯನಾದವನು. ॥ ೩೬ ॥

ನ ಚ ಮಾಂ ತಾನಿ ಕರ್ಮಾಣಿ ನಿಬಧ್ನಂತಿ ಧನಂಜಯ ।
ಉದಾಸೀನವದಾಸೀನಮಸಕ್ತಂ ತೇಷು ಕರ್ಮಸು ॥ ಗೀತಾ-೯-೯ ॥

ಸುಧಾಂ ಪ್ರಸಾಧ್ಯ ದೇವೇಭ್ಯೋ ದತ್ವಾ ತೃಪ್ತಿಮುಪೇಯುಷಃ ।
ಶಿಷ್ಟೇಽಪ್ಯದಸ್ಯ ನಿಯಮಾದ್ದುಷ್ಟಾನಾಂ ನಚ್ಚಿದಸ್ಯ ಚ ॥ ೩೭ ॥

ದೇವತೆಗಳಿಗೆ ಅಮೃತವನ್ನು ಸಾಧಿಸಿಕೊಟ್ಟು ತೃಪ್ತಿಯನ್ನು ಹೊಂದಿದವನು. ನಿಯಮವಾಗಿ ಸಜ್ಜನರಿಗೆ ಇಷ್ಟದಾಯಕನು. ಹಾಗೆಯೇ ದುಷ್ಟರಿಗೆ ಅನಿಷ್ಟವನ್ನು ಕೊಡುವವನು. ‖ ೩೭ ‖

ಮಿಥ್ಯಾಗತ್ಯತಿ(ಮತ್ಯತಿ)ದೂರಸ್ಯ ನಿತ್ಯತೃಪ್ತಾಂತರಾತ್ಮನಃ ।
ಲಯೇಽಪಿ ಲಯಹೀನಸ್ಯ ಶಯಾನಸ್ಯ ಶ್ರಿಯಾ ಸಹ ‖ ೩೮ ‖

ಸರ್ವಥಾ ಮಿಥ್ಯಾಜ್ಞಾನದಿಂದ ದೂರನಾದವನು, ಸದಾ ತೃಪ್ತವಾದ ಮನಸ್ಸುಳ್ಳವನು. ಪ್ರಲಯಕಾಲದಲ್ಲಿಯೂ ಲಯವಿಲ್ಲವನಾಗಿ ಶ್ರೀದೇವಿಯ ಸಹಿತವಾಗಿ ಪ್ರಲಯೋದಕದಲ್ಲಿ ಮಲಗಿರುವವನು. ‖ ೩೮ ‖

ಪ್ರಾಗಭಾವಬಹಿರ್ಭಾವಾತ್ಸ್ವಪ್ರಾ ಜನ್ಮೋಜ್ಝಿತಸ್ಯ ಚ ।
ಸ್ತಂಭಸಂಭೂತನರಹರ್ಯಕ್ಷಸ್ಯಾಕ್ಷೋಭ್ಯತೇಜಸಃ ‖ ೩೯ ‖

ಲಯಕಾಲದಲ್ಲಿಯೂ ಲಯವಿಲ್ಲವನಾದ್ದರಿಂದ ನಿತ್ಯನಾಗಿ ಸೃಷ್ಟಿ ಕಾಲದಲ್ಲಿ ಪ್ರಾಕೃತದೇಹಯೋಗರೂಪ ಜನ್ಮರಹಿತನು. ಯಾರಿಂದಲೂ ಕುಂದಿಸಲಸಾಧ್ಯವಾದ ತೇಜಸ್ಸಿನಿಂದ, ಸ್ತಂಭದಲ್ಲಿ ಪ್ರಾದುರ್ಭೂತನಾದ ನರಸಿಂಹರೂಪಿಯು. ‖ ೩೯ ‖

ಗರ್ಭಾದ್ಬಹಿರ್ನಿರ್ಗಮೇಽಪಿ ಶಂಖಚಕ್ರಾಂಕಧಾರಿಣಃ ।
ಸ್ವಮೂಲರೂಪವಕ್ಷಸ್ಥಶ್ರೀವತ್ಸಾಂಕೋಜ್ಜ್ವಲೋರಸಃ ‖ ೪೦ ‖

ಕೃಷ್ಣಾವತಾರದಲ್ಲಿಯೂ, ವಾಮನಾವತಾರದಲ್ಲಿಯೂ ಗರ್ಭದಿಂದ ಹೊರಗೆ ಬರುವಾಗಲೇನೇ ಶಂಖ ಚಕ್ರಾದಿ ಆಯುಧಗಳನ್ನು ಧರಿಸಿ ತನ್ನ ಮೂಲರೂಪದಲ್ಲಿನ ಶ್ರೀವತ್ಸಾಂಕವೆಂಬ ಗುರುತಿನಿಂದ ಹೊಳೆಯುವ ವಕ್ಷಸ್ಥಳವುಳ್ಳವನಾಗಿ ತೋರಿಸಿಕೊಂಡನು. ‖ ೪೦ ‖

[ಭಾಗವತ ಸ್ಕಂಧ ೧೦ ಅ. ೪-ಶ್ಲೋ. ೧೦-೧೧-೧೨ ಮತ್ತು
,, ಸ್ಕಂಧ ೮ ಅ. ೧೭-ಶ್ಲೋ. ೧-೨-೩.]

ಉದರಸ್ಥಜಗಜ್ಜಾಲಶಿಶುರೂಪಧರಸ್ಯ ಚ ।
ಭೂದೇವೀಹಿತಕೃದ್ರೂಪವರಾಹಾಯೋರ್ಧ್ವಮುಖೇಯುಷಃ ‖

ಶಿಶುವಾಗಿದ್ದಾಗಲೇ ತನ್ನ ಉದರದಲ್ಲಿ ಸರ್ವ ಜಗತ್ತನ್ನೂ ಧರಿಸಿದವನು. ಭೂದೇವಿಗೆ ಹಿತವನ್ನು ಮಾಡುವುದಕ್ಕೋಸ್ಕರ ಯೋಗ್ಯವಾದ ರೂಪವನ್ನು ಧರಿಸಿ ಸಮುದ್ರದಿಂದ ಮೇಲಕ್ಕೆ ಬಂದವನು (ವರಾಹ ರೂಪಿಯು). || ೪೧ ||

ನಿರನಿಷ್ಟಸ್ಯ ಸತತಂ ನಿರವದ್ಯಸ್ಯ ಚ ಪ್ರಭೋಃ |
ಅಸ್ಮಾಕಂ ನೃಹರೇಃ ಸರ್ವವಿಸ್ಮಾಪನಪರಾಕ್ರಮಂ || ೪೨ ||

ಅಕ್ರೋಧತಾಮಕಾಮಿತ್ವಮಲೋಭಮನಹಂಕೃತಿಂ |
ಖಲಹೃಚ್ಛಲ್ಯಕೌಶಲ್ಯಮಕುತೋಭಯತಾಂ ತಥಾ || ೪೩ ||

ಸ್ವತಃ ಸರ್ವಜ್ಞತಾಂ ಚೈವ ಸದಾಶ್ರಿತಹಿತೇರತಿಂ |
ವಟುರೂಪಸ್ಯ ವಟುತಾಂ ಚಾಟುವಾಕ್ಯೇಷು ಚಾಟುತಾಂ ||೪೪||

ಕಿಂಬ್ರೂಮಸ್ತ್ರ್ಯಂಬಕಸ್ಯಾಪಿ ಯಂ ಬ್ರುವಂತಿ ಪರಾಯಣಂ |

ಇಂತಹ ಮಹಿಮೋಪೇತನಾಗಿರುವ ಸರ್ವದಾ ಅನಿಷ್ಟರಹಿತನೂ, ದೋಷದೂರನೂ, ಸರ್ವರಿಗೂ ಆಶ್ಚರ್ಯವನ್ನುಂಟುಮಾಡುವ ಪರಾಕ್ರಮ ಕೋಪಾಭಾವ, ಅಕಾಮಿತ್ವ, ಅಲೋಭತಾ, ಅಹಂಕಾರರಾಹಿತ್ಯ, ಖಲರ ಹೃದಯಕ್ಕೆ ಶಲ್ಯರೂಪವಾದ ಕೌಶಲ್ಯ, ಯಾವುದರಿಂದಲೂ ಭಯವಿಲ್ಲದಿರೋಣ ಹಾಗೆಯೇ ಅನನ್ಯಾಧೀನವಾದ ಸ್ವರೂಪಭೂತವಾದ ಸರ್ವಜ್ಞತಾ ಸದಾ ತನ್ನನ್ನು ಆಶ್ರಯಿಸಿದವರಿಗೆ ಹಿತವನ್ನು ಮಾಡುವುದರಲ್ಲಿ ಆಸಕ್ತಿ ವಟುರೂಪಧರಿಸಿದಕಾಲದಲ್ಲಿ ವಟುತಾ ಚಮತ್ಕಾರವಾಗಿ ಮಾತನಾಡುವಲ್ಲಿ ವಾಕ್ಚಾತುರ್ಯ, ಹೀಗೆ ತ್ರ್ಯಂಬಕನಿಗೂ (ರುದ್ರ) ಆಶ್ರಯನೆಂದು ಹೇಳಿಸಿಕೊಳ್ಳುವ ಈ ನಮ್ಮ ಮಹಾಪ್ರಭುವಿನ ಗುಣಗಾನವನ್ನು ಎಷ್ಟೆಂದು ಮಾಡೋಣ. [ಯಾವ ದೋಷಗಳು ರುದ್ರದೇವರಲ್ಲಿ ಇವೆ ಎಂದು ಪ್ರಮಾಣಪೂರ್ವಕವಾಗಿ ಹಿಂದೆ ಹೇಳಲ್ಪಟ್ಟವೋ ಆ ದೋಷಗಳು ಯಾವವೂ ನಾರಾಯಣನಲ್ಲಿ ಇಲ್ಲವೆಂದು ಹೇಳುವುದರಲ್ಲಿ ಇಲ್ಲಿ ತಾತ್ಪರ್ಯ]. || ೪೨-೪೫ (೧) ||

ಬ್ರಹ್ಮಾಬ್ದಶತಪರ್ಯಂತಂ ಭೂಮ್ನ್ಯಾರಮ್ಯಶ್ರಿಯಾಲಯೇ ||೪೫||

ರಹಸ್ಯಾಲಿಂಗಿತಾಂಗೋಽಪಿ ವಟಪತ್ರಪುಟೇ ಪ್ರಭುಃ ।
ಯೋಽಸ್ಖಲನ್ನಿಜವೀರ್ಯೋರ್ಭೂತ್ತಸ್ಯ ವೀರ್ಯಚ್ಯುತಿಃ ಕದಾ ||

ಪ್ರಲಯದಲ್ಲಿ ಬ್ರಹ್ಮಮಾನದ ನೂರು ವರ್ಷಪರ್ಯಂತ ಏಕಾಂತದಲ್ಲಿ ಮನೋಹರವಾದ ಕಾಂತಿಯುಳ್ಳ ಲಕ್ಷ್ಮಿಯಿಂದ ಆಲಿಂಗಿತನಾಗಿ ವಟಪತ್ರದಲ್ಲಿ ಪ್ರಭುವು ಇದ್ದರೂ ಯಾವನ ವೀರ್ಯವು ಸ್ಖಲನವಾಗಲಿಲ್ಲವೋ ಅಂತಹವನ ವೀರ್ಯಸ್ಖಲನವು ಯಾವಾಗ ಆಗಬೇಕು? ಯಾವಾಗಲೂ ಇಲ್ಲ– [ಇಂದ್ರಿಯಸ್ಖಲನರೂಪವಾದ ವಿಕಾರವು ಉಮಾಪತಿಗೆ ಪರಮಾತ್ಮನ ಮೋಹಿನೀರೂಪವನ್ನು ನೋಡಿದಾಗ ಆಯಿತು.] || ೪೫-೪೬ ||

ಅಮೋಘವೀರ್ಯಸ್ಯ ಹರೇರ್ಯದಿವೀರ್ಯಂ ಸ್ಖಲೇತ್ತದಾ ।
ಮನೋಹರಾಃ ಕುಮಾರಾಶ್ಚ ಲಯೇಽಪಿ ಸ್ಯುರನೇಕಶಃ || ೪೭ ||

ವ್ಯರ್ಥವಾಗದ ಹರಿಯ ವೀರ್ಯವು ಆಗ ಸ್ಖಲನವಾಗಿದ್ದಲ್ಲಿ ಮನೋಹರರಾದ ಅನೇಕ ಕುಮಾರರು ಲಯಕಾಲದಲ್ಲಿಯೂ ಹುಟ್ಟಬೇಕಾಗಿತ್ತು. || ೪೭ ||

ತದಾ ಕಾಮಃ ಕ್ವ ಕಾಮಸ್ಯ ಶರಾಃ ಕ್ವ ಮದಕಾರಿಣಃ ।
ಕಾರ್ಯಾಭಾವೇ ಕಾರಣಸ್ಯಾಪ್ಯಭಾವೋ ಯದಿ ನೋಚ್ಯತೇ ||೪೮||

ತದಾ ಘಟೋಽಪಿ ಜ್ಞಾನೀ ಸ್ಯಾತ್ತಟಾಕಾಜ್ಜಲಮಾಹರೇತ್ ।
ಅತಃ ಕಾರಣಶೂನ್ಯಸ್ಯ ಕಾರ್ಯಸ್ಯ ಚ ನ ಕಲ್ಪನಾ || ೪೯ ||

ಶೋಭತೇ ಕಾರ್ಯಶೂನ್ಯಂ ಚ ಕಾರಣಂ ನೈವ ಕಲ್ಪಯೇತ್ ।
ಏವಂ ಚ ಕಾಮಿನೀಕಾಮಃ ಕಾಮಾಭಾವೇ ಕಥಂ ವದ || ೫೦ ||

ಆ ಕಾಲದಲ್ಲಿ ಕಾಮನು ಎಲ್ಲಿ? ಮದವನ್ನುಂಟುಮಾಡುವ ಕಾಮನ ಬಾಣಗಳೆಲ್ಲಿಯವು? ಕಾರ್ಯವು ಇಲ್ಲದಲ್ಲಿ ಕಾರಣವೂ ಇಲ್ಲವೆಂದು ಹೇಳದಿದ್ದರೆ, ಆಗ, ಘಟವೂ ಕೂಡ ಜ್ಞಾನಿಯಾಗಿ ಕೊಳದಿಂದ ನೀರು

ತರಬೇಕಾದೀತು—ಅದು ಕೂಡುವುದಿಲ್ಲ—ಆದ್ದರಿಂದ ಕಾರಣವಿಲ್ಲದ ಕಾರ್ಯ ವನ್ನು ಕಲ್ಪನಮಾಡುವುದು ಶೋಭಿಸುವುದಿಲ್ಲ—ಹಾಗೆಯೇ ಕಾರ್ಯವಿಲ್ಲದ ಕಾರಣವನ್ನು ಕಲ್ಪನೆಮಾಡಬಾರದು—ಏಕೆಂದರೆ—ನೀರುತರುವ ಕಾರ್ಯವು ಚೇತನನ ಧರ್ಮ—ಘಟವು ಜಡವಾಗಿ ಅದಕ್ಕೆ ಸಾಧನಮಾತ್ರ. ಆದ್ದರಿಂದ ಚೇತನನ ಕಾರ್ಯವಿಲ್ಲದಾಗ ಕೇವಲ ಸಾಧನವು ಮಾತ್ರ ಕಾರ್ಯಮಾಡ ಲಾರದು—ಎಂದಭಿಪ್ರಾಯ—ಏವಂಚ ಕಾಮನು ಇಲ್ಲದಿರುವ ಕಾಲದಲ್ಲಿ ಕಾಮಿನಿಯಲ್ಲಿ ಕಾಮವು ಹೇಗೆ ಆಗಬೇಕು? ಹೇಳು. ॥ ೫೦ ॥

ಪುತ್ರಾಭಾವೇ ಚ ಕೋರೇತಃ ಪ್ರಚ್ಯುತಿಂ ಕಲ್ಪಯೇದ್ವದ ।
ತದಾ ಲಯಾದಾಚ ಸೃಷ್ಟೇರ್ಯಸ್ಯ ಕಾಮೋ ನ ಚೇತಸಿ ॥ ೫೧ ॥

ಶ್ರಿಯಾ ಸಹ ಶಯಾನಸ್ಯಾಸ್ಯಸ್ಯ ನ ಕ್ವಾಪಿ ವಿಕ್ರಿಯಾಂ ।
ಕಲ್ಪಯೇತ್ಸೃಷ್ಟಿಕಾಲೇಽಪಿ ಯತೋ ದೃಷ್ಟಾನುಸಾರಿಣೀ ॥ ೫೨ ॥

ಕಲ್ಪನೇತಿ ವದಂತ್ಯಾರ್ಯಾ ಯದ್ಯದೃಷ್ಟಂ ಚ ಕಲ್ಪ್ಯತೇ ।
ತದಾ ಶೃಂಗದ್ವಯಂ ಚ ಸ್ಯಾತ್ಪಶುವತ್ತ್ವ ಮಸ್ತಕೇ ॥ ೫೩ ॥

ಪುತ್ರನಿಲ್ಲದಿರುವಾಗ ಯಾವನು ತಾನೇ ರೇತಸ್ಸಿನ ಸ್ಖಲನವನ್ನು ಕಲ್ಪನೆ ಮಾಡಿಯಾನು? ಹೇಳು. ಲಕ್ಷ್ಮೀದೇವಿಯ ಸಹಿತನಾಗಿ ಪ್ರಲಯ ಕಾಲದ ಮೊದಲು ಸೃಷ್ಟಿಯವರಿಗೆ ಮಲಗಿರುವ ಯಾವ ಪರಮಾತ್ಮನ ಮನಸ್ಸಿನಲ್ಲಿ ಕಾಮವು ಇರಲಿಲ್ಲವೋ ಅಂತಹವನಿಗೆ ಸರ್ವಥಾ ಕಾಮದಿಂದ ರೇತಸ್ಖಲನರೂಪವಾದ ವಿಕಾರವನ್ನು ಸೃಷ್ಟಿಕಾಲದಲ್ಲಿಯೂ ಕಲ್ಪನ ಮಾಡ ಕೂಡದು. ಇದು ಹೀಗೆಯೇ ಸರಿ. ಏಕೆಂದರೆ:— ಆರ್ಯರು ಕಂಡು ಬಂದದ್ದಕ್ಕನುಸಾರವಾಗಿ ಕಲ್ಪನೆಯು ಎಂದು ತಿಳಿಯುತ್ತಾರೆ. ದೃಷ್ಟವಲ್ಲ ದ್ದನ್ನೂ ಕಲ್ಪಿಸಬಹುದಾದರೆ ಆಗ ಪಶುವಿನಂತೆ ನಿನ್ನ ತಲೆಯಲ್ಲಿಯೂ ಎರಡು ಕೊಂಬುಗಳು ಇರಬೇಕಾದೀತು. ॥ ೫೧–೫೩ ॥

ಅಯೇ ಸಖಿ ಸ್ವೋದರಸ್ಥಂ ಜಗತ್ಸರ್ವಂ ಜನಾರ್ದನಃ ।
ಸ್ವಯಮೇವ ಬಹಿಷ್ಕೃತ್ಯ ಕ್ಷಿಪೇನ್ನಾರ್ಯಂತರೋದರೇ ॥ ೫೪ ॥

ಪ್ರಲಯಕಾಲ ಬಂದಾಗ ತನ್ನ ಉದರದಲ್ಲಿದ್ದ ಸರ್ವ ಜಗತ್ತನ್ನೂ ಜನಾರ್ದನನು ತಾನಾಗಿಯೇ ಹೊರಗೆ ಮಾಡಿ ತನ್ನದೇ ಆದ ಬೇರೊಂದು ರೂಪದ ಉದರದಲ್ಲಿ ಇಡುತ್ತಾನೆ. || ೫೪ ||

ಸಾ ಚ ಮೂರ್ತಿರ್ವಿನಾ ಭಾರ್ಯಾಯೋನಿದ್ವಾರಂ ನಿಜೇಚ್ಛಯಾ |
ಗುಣತ್ರಯೇಣ ಪ್ರಕೃತೇರ್ಯಥಾಪೂರ್ವಂ ಸೃಜೇತ್ಕಿಲ || ೫೫ ||

ಆ ಮೂರ್ತಿಯೂ ಕೂಡ ಹೆಂಡತಿಯ ಯೋನಿದ್ವಾರವನ್ನು ಬಿಟ್ಟು ತನ್ನ ಇಚ್ಛೆಯಿಂದಲೇ ಹಿಂದಿನ ಸೃಷ್ಟಿಕಾಲದಲ್ಲಿ ಹೇಗೋ ಹಾಗೆ ಪ್ರಕೃತಿಯ ಗುಣತ್ರಯದಿಂದ ಜಗತ್ತನ್ನು ಸೃಷ್ಟಿಸುತ್ತಾನೆಂಬುದು ಪ್ರಸಿದ್ಧವಾದ ಪ್ರಮೇಯ. || ೫೫ ||

ಸ ಇದಂ ಸರ್ವಮಸೃಜತೇತ್ಯಾದ್ಯುಪನಿಷತ್ಸ್ಫುಟಂ |
ಇತ್ಥಮಾಹ ಮುಖಾದಿಂದ್ರಶ್ಚಾಗ್ನಿಶ್ಚಂದ್ರಸ್ತು ಮಾನಸಾತ್ || ೫೬ ||

ಚಕ್ಷೋಃ ಸೂರ್ಯಃ ಪ್ರಾಣತಶ್ಚ ವಾಯುಃ ಪದ್ಭ್ಯಾಮಭೂಚ್ಚ ಭೂಃ
ಇತಿ ಯಂ ಸ್ತೌತಿ ಪುಂಸೂಕ್ತಂ ತಸ್ಯ ಸೃಷ್ಟಿರ್ನ ರೇತಸಾ || ೫೭ ||

"ಸ ಇದಂ ಸರ್ವಮಸೃಜತ" (ಅವನು ಈ ಸರ್ವವನ್ನೂ ಸೃಷ್ಟಿ ಮಾಡಿದನು.) ಎಂಬುದಾಗಿ ತೈತ್ತಿರೀಯ ಶ್ರುತಿಯೇ ಮೊದಲಾದ ಶ್ರುತಿಗಳು ಸ್ಫುಟವಾಗಿ ಹೇಳುತ್ತವೆ. ಅಲ್ಲದೆ ಪುರುಷಸೂಕ್ತವು ಪರಮಪುರುಷನು ತನ್ನ ಮುಖದಿಂದ ಇಂದ್ರಾಗ್ನಿಗಳನ್ನೂ, ಮನಸ್ಸಿನಿಂದ ಚಂದ್ರನನ್ನೂ, ನೇತ್ರದಿಂದ ಸೂರ್ಯನನ್ನೂ, ಪ್ರಾಣದಿಂದ ವಾಯುವನ್ನೂ ಸೃಷ್ಟಿಸಿದನೆಂಬುದಾಗಿ ಪರಮಾತ್ಮನನ್ನು ಸ್ತುತಿಸುತ್ತದೆ. ಆದುದರಿಂದ ಪರಮಾತ್ಮನು ಮಾಡುವ ಸೃಷ್ಟಿಯು ರೇತಸ್ಸಿನಿಂದ ಅಲ್ಲ. ರೇತಸ್ಸಿನಿಂದ ಸೃಷ್ಟಿಮಾಡಿದನೆಂದು ವಾಕ್ಯವಿದ್ದಕಡೆ ಆ ರೇತಸ್ಸು ಶ್ರೀಹರಿಯ ಸ್ವರೂಪವಲ್ಲವೆಂಬುದು ಮುಂದಿನ ಶ್ಲೋಕಗಳಿಂದ ಸ್ಪಷ್ಟವಾಗುತ್ತದೆ. || ೫೬-೫೭ ||

ಕಿಂ ಚ ಸರ್ವಸ್ಯ ಪಿತರಂ ಯಸ್ತು ನಾಭೇಶ್ಚತುರ್ಮುಖಂ |
ನಾಗಭೋಗೇ ಪದ್ಮನಾಭಃ ಶಯಾನಃ ಸಹ ಭಾರ್ಯಯಾ ||೫೮||

ಮನೋಜ್ಞಯಾ ಸರ್ವಸಂಪದ್ರೂಪಿಣ್ಯಾ ದೋಷದೂರಯಾ ।
ಉಪೇಕ್ಷ್ಯ ತಾಂ ಸ್ವಶಕ್ತ್ಯೈವ ಸಸರ್ಜ ನ ತು ರೇತಸಾ ॥ ೫೯ ॥

ಇದಲ್ಲದೆ ಮನೋಹರಳೂ, ಸರ್ವಸಂಪದ್ರೂಪಿಯೂ, ದೋಷ-ದೂರಳೂ, ಪತ್ನಿಯೂ, ಆದ ಶ್ರೀದೇವಿಯೊಡನೆ ಯಾವ ಪದ್ಮನಾಭನು ಶೇಷಶಾಯಿಯಾಗಿದ್ದನೋ ಅವನು ಆ ಭಾರ್ಯೆಯನ್ನುಪೇಕ್ಷಿಸಿ ಸರ್ವರಿಗೂ ತಂದೆಯಾದ ಚತುರ್ಮುಖಬ್ರಹ್ಮನನ್ನು ತನ್ನ ನಾಭಿಯದ್ವಾರಾ ತನ್ನ ಶಕ್ತಿಯಿಂದಲೇ ಸೃಷ್ಟಿಸಿದನು. ರೇತಸ್ಸಿನಿಂದಲ್ಲ. ॥ ೫೮-೫೯ ॥

ಕುಕ್ಷೌ ನಿಕ್ಷಿಪ್ತತತ್ತ್ವಾನಾಂ ಅಂಶಾನ್ವೀರ್ಯಾತ್ಮನಾ ಪ್ರಭುಃ ।
ಪರಿಣಾಮ್ಯ ಪುನರ್ಲಕ್ಷ್ಮ್ಯಾಃ ಕುಕ್ಷೌ ನಿಕ್ಷಿಪ್ಯ ಲೀಲಯಾ ॥೬೦॥

ತಸ್ಯಾ ಯೋನಿಮುಖೇನೈವ ಬಹಿಷ್ಕೃತ್ಯ ಹಿರಣ್ಮಯಂ ।
ತತ್ತ್ವಾನಾಮಂಶರೂಪಂ ತದ್ವೀರ್ಯಂ ತೇನೈವ ಭಾಸ್ವರಂ ॥ ೬೧ ॥

ಅಜಾಂಡಂ ನಿರ್ಮಮೇ ಹ್ಯೇವಂ ನ ತು ವಿಷ್ಣುಃ ಸ್ವರೇತಸಾ ।
ಮೃದಾ ಕುಂಭಂ ಕುಂಭಕಾರ ಇವ ತಸ್ಯಾತ್ರಸ್ಯ ವಿಕ್ರಿಯಾ ॥೬೨॥

ತನ್ನ ಉದರದಲ್ಲಿದ್ದ ತತ್ತ್ವಗಳ ಅಂಶವನ್ನು ವೀರ್ಯರೂಪವಾಗಿ ಪರಿಣಾಮವಮಾಡಿ ಪುನಃ ಲೀಲೆಯಿಂದ ಅವನ್ನು ಲಕ್ಷ್ಮೀದೇವಿಯ ಉದರದಲ್ಲಿಟ್ಟು ಆಕೆಯ ಯೋನಿದ್ವಾರಾ ಹಿರಣ್ಮಯವಾದ, ತತ್ತ್ವಗಳ ಅಂಶದ ಸ್ವರೂಪವಾದ ಆ ವೀರ್ಯವನ್ನು ಹೊರಗೆ ಬರುವಹಾಗೆ ಮಾಡಿ ಆ ವೀರ್ಯದಿಂದಲೇ ಹೊಳೆಯುವ ಹಿರಣ್ಮಯವಾದ ಬ್ರಹ್ಮಾಂಡವನ್ನು ಕುಂಬಾರನು ಮಣ್ಣಿನಿಂದ ಗಡಿಗೆಯನ್ನು ಸೃಷ್ಟಿಮಾಡುವಹಾಗೆ ಪ್ರಭುವಾದ ವಿಷ್ಣುವು ಸೃಷ್ಟಿಸಿದನು. ತನ್ನ ರೇತಸ್ಸಿನಿಂದಲ್ಲ. ಅದ್ದರಿಂದ ಈ ವಿಷ್ಣುವಿಗೆ ವಿಕಾರವು ಎಲ್ಲಿಂದ ಬಂತು? ॥ ೬೦-೬೨ ॥

ಪರೇಣ ವಿಶತಾ ಸ್ವಸ್ಮಿನ್ ಮಾತ್ರಯಾ ವಿಶ್ವಸೃಗ್ಗಣಃ ।
ಚುಕ್ಷೋಭಾನ್ಯೋನ್ಯಮಾಸಾದ್ಯ ಯಸ್ಮಿನ್ ಲೋಕಾಶ್ಚರಾಚರಾಃ ॥
[ಭಾಗವತ ೩-೬-೫]

ಪ್ರಬುದ್ಧಃ ಕರ್ಮ ದೈವೇನ ತ್ರಯೋವಿಂಶತಿಕೋ ಗಣಃ ।
ಪ್ರೇರಿತೋಽಜನಯತ್ಸ್ವಾಭಿರ್ಮಾತ್ರಾಭಿರಧಿಪೂರುಷಂ ॥ ೬೪ ॥
[ಭಾಗವತ ೩-೬-೪]

ತಮ್ಮಲ್ಲಿ ಪ್ರವೇಶಮಾಡಿದ ಪರಮಾತ್ಮನಿಂದ (ಪ್ರೇರಿತರಾಗಿ) ವಿಶ್ವವನ್ನು ಸೃಷ್ಟಿಸುವ ತತ್ವಗಳ ಸಮೂಹವು ತಮ್ಮ ಅಂಶಗಳಿಂದ ಅನ್ಯೋನ್ಯವಾಗಿ ಮಿಳಿತವಾಗಿ ವಿಷ್ಣುವಿನ ವೀರ್ಯರೂಪವಾಗಿ ಪರಿಣಾಮವನ್ನು ಹೊಂದಿ ಬ್ರಹ್ಮಾಂಡಾಕಾರವಾಯಿತು. ಈ ಬ್ರಹ್ಮಾಂಡದಲ್ಲಿ ಚರಾಚರಾತ್ಮಕವಾದ ಲೋಕಗಳಿವೆ. ಈ ವೀರ್ಯವು ವಿಷ್ಣುವಿನ ಸ್ವರೂಪವಲ್ಲ. ಅವನಿಂದ ಬೇರೆಯಾದುದು (ಭಾಗವತದ ೩-೬-೫ ಯಾದುಪತ್ಯ ಟಿಪ್ಪಣಿ ನೋಡಿರಿ.) ಇಪ್ಪತ್ತುಮೂರು ತತ್ವಗಳು ತಮ್ಮಲ್ಲಿ ಪ್ರವೇಶಮಾಡಿದ ಪರಮಾತ್ಮನಿಂದ ಪ್ರೇರಿತರಾಗಿ ಸೃಷ್ಟಿಮಾಡಿದ ಅಧಿಪುರುಷನಾಮಕ ವಿರಾಜನನ್ನು ಅಧಿಕರಿಸಿಕೊಂಡು ಇರುವ ಬ್ರಹ್ಮಾಂಡವು ಇದೇನೆ. ॥ ೬೩-೬೪ ॥

ಇತಿ ಭಾಗವತೇ ಸ್ಪಷ್ಟಂ ತತ್ವಮೇತದುದೀರಿತಂ ।
ಚೋದಿತೋ(ಚೋದಿತಾ) ನಿಜವೀರ್ಯೇಣೇತ್ಯಾಹಾನ್ಯತ್ರ ಚ ಸ ಪ್ರಭುಃ ॥ ೬೫ ॥

ಈಪ್ರಕಾರವಾಗಿ ಸೃಷ್ಟಿವಿಷಯಕ ಈ ತತ್ವವು ಭಾಗವತದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟದೆ. "ಚೋದಿತೋ ನಿಜವೀರ್ಯೇಣ" ಅಂದರೆ ತನ್ನ ಸ್ವಂತ ವೀರ್ಯದಿಂದ (ಸಾಮರ್ಥ್ಯದಿಂದ) ಪ್ರೇರಿತವಾಗಿ ಎಂದು ಬೇರೇ ಕಡೆಯಲ್ಲಿ ಪರಮಾತ್ಮನು ಹೇಳಿದ್ದಾನೆ. ॥ ೬೫ ॥ [ಭಾಗವತ ೧-೧೦-೨೩]

ಈದೃಶಸ್ಯ ಪ್ರಭೋಃ ಕೃಷ್ಣರಾಮಾದ್ಯಾಕೃತಿಧಾರಿಣಃ ।
ಯಾ ಪುತ್ರಸೃಷ್ಟಿಃ ಸಾ ಚಾಸ್ಯ ಮನಸಾ ನ ತು ರೇತಸಾ ॥ ೬೬ ॥

ಕೃಷ್ಣರಾಮಾದಿರೂಪವನ್ನು ತಾಳಿದ ಇಂತಹ ಸಮರ್ಥನಾದ ಪ್ರಭುವಿನ ಮಕ್ಕಳ ಸೃಷ್ಟಿಯು ಮನಸ್ಸಿನಿಂದ (ಇಚ್ಛಾಮಾತ್ರದಿಂದ) ಆದ ಸೃಷ್ಟಿಯೇ ಹೊರತು ಅವನ ರೇತಸ್ಸಿನಿಂದಾದದ್ದಲ್ಲ. ॥ ೬೬ ॥

ಆದಿಸೃಷ್ಟಿಶ್ಚ ಮಹತೀ ನ ಯಸ್ಯ ನಿಜರೇತಸಾ ।
ತಸ್ಯ ತುಚ್ಛಾಮಿಮಾಂ ಸೃಷ್ಟಿಂ ಕೋ ವದೇನ್ನಿಜರೇತಸಾ ।
ಯದಿ ರೇತೋಮಯೀ ಸೃಷ್ಟಿಃ ಕೃಷ್ಣಸ್ಯ ದ್ವಾರಕಾಪುರೇ ॥೭೭॥

ತರ್ಹಿ ಷೋಡಶಸಾಹಸ್ರ ಪತ್ನೀಷ್ವೇಕೈಕಶಃ ಪ್ರಭೋಃ ।
ಪುತ್ರಾ ದಶದಶೈವಾಸನ್ನ ನ್ಯೂನಾನಾಧಿಕಾ ಕುತಃ ॥ ೭೮ ॥

ಮಹತ್ತಾದ ಆದಿಸೃಷ್ಟಿಯೇ ಯಾವನ ರೇತಸ್ಸಿನಿಂದ ಅಲ್ಲವೋ ಅಂತಹ ಪ್ರಭುವಿನ ಅಲ್ಪವಾದ ಈ ಪುತ್ರಸೃಷ್ಟಿಯನ್ನು ಅವನ ರೇತಸ್ಸಿನಿಂದ ಆಯಿತೆಂದು ಯಾವ ವಿವೇಕಿಯು ತಾನೇ ಹೇಳಿಯಾನು? ದ್ವಾರಕಾ ಪಟ್ಟಣದಲ್ಲಿ ಕೃಷ್ಣನ ಮಕ್ಕಳ ಸೃಷ್ಟಿಯು ಅವನ ರೇತಸ್ಸಿನಿಂದ ಆಗಿದ್ದಲ್ಲಿ ಹದಿನಾರುಸಹಸ್ರ ಪತ್ನಿಯರಲ್ಲಿ ಒಬ್ಬೊಬ್ಬಳಲ್ಲಿ ಹೆಚ್ಚೂ ಇಲ್ಲದೆ ಕಡಿಮೆಯೂ ಇಲ್ಲದೆ ಹತ್ತು ಹತ್ತೇ ಮಕ್ಕಳು ಉತ್ಪನ್ನರಾದದ್ದು ಹೇಗೆ ಕೂಡುತ್ತೆ?

ಆದಿಪುಂಸೋ ಯಶ್ಚ ಕೃಷ್ಣ ಕೇಶಸ್ತಸ್ಯ ಪರಾಕ್ರಮಂ ।
ವಿಚಾರಯಂತು ವಿದ್ವಾಂಸಸ್ತಸ್ಯ ವೀರ್ಯಸಮುದ್ಭವಾಃ ॥ ೭೯ ॥

ಪುತ್ರಾ ಸ್ಯುರ್ಯದಿ ಸಾಂಬಾದ್ಯಾಃ ಪ್ರದ್ಯುಮ್ನಾದ್ಯಾಸ್ತಥಾ ಪರೇ ।
ಯೋ ರಕ್ಷಸಾ ಬಲಾನ್ನೀತಃ ತಸ್ಯ ಗೇಹೇ ಸ್ವಭಾರ್ಯಯಾ ॥೮೦॥

ಪೋಷಿತಶ್ಚ ತಯಾ ವಿದ್ಯಾಂ ದತ್ವಾಂತೇ ಮೋಚಿತಃ ಕಿಲ ।
ಯಶ್ಚ ದುರ್ಯೋಧನಪುರೇ ಬಲಾದ್ಬದ್ಧಃ ಸ್ವಯಂವರೇ ॥ ೮೧ ॥

ರಾಮಸ್ಯ ತೇಜಸೈವಾಂತೇ ಮೋಚಿತೋ ನ ಸ್ವಶಕ್ತಿತಃ ।
ಈದೃಶಾ ದುರ್ಬಲಾಃ ಪುತ್ರಾಃ ಕಥಂ ಪುಂಶಕ್ತಿರೂಪಿಣಾ ॥ ೮೨ ॥
ವೀರ್ಯೇಣ ನಿರ್ಮಿತಾಸ್ತಸ್ಮಾತ್ಸೇಯಂ ಸೃಷ್ಟಿಶ್ಚ ಮಾನಸೀ ।

ಆದಿಪುರುಷನ ಕೇಶರೂಪನಾದ ಕೃಷ್ಣನ ಪರಾಕ್ರಮವನ್ನು ವಿದ್ವಾಂಸರು ವಿಚಾರಮಾಡಲಿ. ಅಂತಹ ಪರಾಕ್ರಮವುಳ್ಳ ಕೃಷ್ಣನ ಸ್ವಂತ ರೇತಸ್ಸಿನಿಂದ ಪ್ರದ್ಯುಮ್ನ ಸಾಂಬಾದಿಗಳು ಹುಟ್ಟಿದ್ದಪಕ್ಷದಲ್ಲಿ ಪ್ರದ್ಯುಮ್ನನದೇ

ಆಗಲಿ, ಸಾಂಬನದೇ ಆಗಲಿ ಅತ್ಯಲ್ಪತೆಯು ಹೇಗೆ ಕೂಡುತ್ತದೆ? ಪ್ರದ್ಯುಮ್ನನನ್ನು ಬಲಾತ್ಕಾರದಿಂದ ಶಂಬರಾಸುರನು ಎತ್ತಿಕೊಂಡುಹೋದನು. ಅವನ ಮನೆಯಲ್ಲಿ ತನ್ನ ಹೆಂಡತಿಯಾದ ರತಿಯಿಂದ ಪೋಷಿಸಲ್ಪಟ್ಟನು. ಆ ರತಿಯಿಂದಲೇ ಶಂಬರಾಸುರನನ್ನು ಸಂಹಾರಮಾಡುವ ವಿದ್ಯೆಯನ್ನು ಕಲಿತುಕೊಂಡು ಬಂಧನದಿಂದ ಬಿಡಿಸಿಕೊಂಡನು. ಸಾಂಬನಾದರೋ ಸ್ವಯಂವರ ಕಾಲದಲ್ಲಿ ದುರ್ಯೋಧನನಿಂದ ಬಲಾತ್ಕಾರವಾಗಿ ಬಂಧಿಸಲ್ಪಟ್ಟನು. ಕೊನೆಯಲ್ಲಿ ಬಲರಾಮದೇವರ ತೇಜಸ್ಸಿನಿಂದ ಬಿಡುಗಡೆ ಹೊಂದಿದನು. ಇಂತಹ ದುರ್ಬಲರಾದ ಪುತ್ರರು ಪರಮಪುರುಷನ ಶಕ್ತಿರೂಪವಾದ ವೀರ್ಯದಿಂದ ಉತ್ಪನ್ನರಾದರೆಂದು ಹೇಳುವುದು ಹೇಗೆ ತಾನೇ ಸಾಧ್ಯ? ಇವರ ಉತ್ಪತ್ತಿಯು ಕೇವಲ ಪರಮಾತ್ಮನ ಇಚ್ಛೆಯಿಂದಲೇ ಎಂದು ಹೇಳಬೇಕು.

ಅನಿರ್ದಶಸ್ಯ ಬಾಲಸ್ಯ ಕೃಷ್ಣಸ್ಯ ವರಯೋಷಿತಾಂ ॥ ೭೩ ॥

ಸಂಗೇನ ವೀರ್ಯಸ್ಖಲನಂ ಕೋ ಮೇಧಾವೀ ಪ್ರಕಲ್ಪಯೇತ್ ।
ಸ್ವರೂಪಾಂಶಾಸ್ತು ಮತ್ಸ್ಯಾದ್ಯಾ ಯಥಾಸ್ಯುಃ ಕೃತಕೌತುಕಾಃ ।
ಸರ್ವಜ್ಞಾಃ ಸರ್ವಶಕ್ತಾಶ್ಚ ಸರ್ವದೈತ್ಯಭಯಂಕರಾಃ ॥ ೭೪ ॥

ಇಮೇ ಸುತಾಶ್ಚ ತದ್ವತ್ಸ್ಯುರ್ಯದಿವೀರ್ಯಸಮುದ್ಭವಾಃ ॥೭೫॥

ಹತ್ತುವರ್ಷದ ಒಳಗಿನ ಬಾಲಕನಾದ ಕೃಷ್ಣನಿಗೆ ವಯಸ್ಕರಾದ ಉತ್ತಮ ಸ್ತ್ರೀಯರ ಸಂಗದಿಂದ ವೀರ್ಯಸ್ಖಲನವಾಯಿತೆಂದು ಯಾವ ವಿವೇಕಿಯುತಾನೇ ಕಲ್ಪಿಸಿಯಾನು? ಪರಮಾತ್ಮನ ಸ್ವರೂಪಾಂಶರಾದ ಮತ್ಸ್ಯಾದಿಗಳು ಅತ್ಯಾಶ್ಚರ್ಯಕರವಾದ ಕಾರ್ಯಗಳನ್ನು ಮಾಡತಕ್ಕವರೂ ಸರ್ವಜ್ಞರೂ, ಸರ್ವಶಕ್ತರೂ, ಸರ್ವದೈತ್ಯಭಯಂಕರರೂ ಹೇಗೆ ಆಗಿದ್ದರೋ ಹಾಗೆಯೇ ಈ ಮಕ್ಕಳು ಕೃಷ್ಣನ ಸ್ವರೂಪಭೂತವಾದ ವೀರ್ಯದಿಂದ ಉತ್ಪನ್ನರಾಗಿದ್ದ ಪಕ್ಷದಲ್ಲಿ ಹಾಗೆಯೇ ಆಗಿರಬೇಕಾಗಿತ್ತು. ಅಂದರೆ ಅಂತಹ ಗುಣವುಳ್ಳವರೇ ಆಗಬೇಕಾಗಿತ್ತು, ಹಾಗಿಲ್ಲ. ಆದ್ದರಿಂದ ಕೃಷ್ಣನ ವೀರ್ಯದಿಂದ ಹುಟ್ಟಿದವರಲ್ಲ—ಕೇವಲ ಪರಮಾತ್ಮನ ಸ್ವತಂತ್ರವಾದ ಇಚ್ಛೆಯಿಂದ ಹುಟ್ಟಿದವರು. ॥ ೭೩-೭೫ ॥

ಅತೋ ಹರೇಃ ಕಾಮರೂಪದೋಷೋಭೂದಷ್ಯತೋ ರಸಃ ।
ಸಯುಕ್ತಿಕಾಂ ಶುಕೋಕ್ತಿಂ ಚ ಪಶ್ಯ ನಶ್ಯತು ತೇ ಭ್ರಮಃ ॥೭೬॥

ಈ ಕಾರಣದಿಂದ ಹರಿಗೆ ಕಾಮರೂಪವಾದ ದೋಷವು ಇರುವುದು, ಎಂಟನೇ ರಸವು ಇರುವುದು ಹೇಗೆ ಅಸಂಭಾವಿತವೋ ಹಾಗೆ ಅಸಂಭಾವಿತವು. ಇನ್ನೂ ನಿನಗೆ ಭ್ರಮವಿದ್ದಲ್ಲಿ ಯುಕ್ತಿಯುಕ್ತವಾದ ಶುಕಾಚಾರ್ಯರ ಮಾತನ್ನು ನೋಡು. ನಂತರ ನಿನ್ನ ಭ್ರಾಂತಿಯು ನಾಶವಾಗಲಿ. ॥ ೭೬ ॥

ವಾಚಂ ದುಹಿತರಂ ತನ್ವೀಂ ಸ್ವಯಂಭೂರ್ಹರತೀಂ ಮನಃ ।
ಅಕಾಮಾಂ ಚಕಮೇ ಕ್ಷತ್ತಃ ಸಕಾಮ ಇತಿ ನಃ ಶ್ರುತಂ ॥ ೭೭ ॥
[ಭಾಗವತ ೩-೧೩-೨೮]

ಮನೋಹರಳಾದ, ವಾಗಭಿಮಾನಿಯಾದ ತನ್ನ ಮಗಳನ್ನು ಅವಳಿಗೆ ಅಪೇಕ್ಷೆಯಿಲ್ಲದಿದ್ದರೂ ಕಾಮಯುಕ್ತನಾಗಿ ಆಕೆಯನ್ನು ಸ್ವಯಂಭುವು ಅಪೇಕ್ಷಿಸಿದನು ಎಂದು, ಅಯ್ಯಾ ವಿದುರನೇ, ಹೀಗೆ ನಮ್ಮಿಂದ ಕೇಳಲ್ಪಟ್ಟಿದೆ.

ತಮಧರ್ಮೇ ಕೃತಮತಿಂ ವಿಲೋಕ್ಯ ಪಿತರಂ ಪ್ರಜಾಃ ।
ಮರೀಚಿಮುಖ್ಯಾ ಋಷಯೋ ವಿಸ್ರಂಭಾತ್ಪ್ರತ್ಯಬೋಧಯನ್ ॥೭೮॥
[ಭಾಗವತ ೩-೧೩-೨೯]

ಹೀಗೆ ಅಧರ್ಮದಲ್ಲಿ ಮನಸ್ಸುಮಾಡಿದ ತಮ್ಮ ತಂದೆಯನ್ನು ನೋಡಿ ಅವನ ಮಕ್ಕಳಾದ ಮರೀಚಿಯೇ ಮೊದಲಾದ ಋಷಿಗಳು ಆದರಪೂರ್ವಕ ವಾಗಿ ಧರ್ಮವನ್ನು ತಿಳಿಸಿಕೊಟ್ಟರು. ॥ ೭೮ ॥

ತತ್ಸೃಷ್ಟಸೃಷ್ಟಸೃಷ್ಟೇಷು ಕೋನ್ವಖಂಡಿತಧೀಃ ಪುಮಾನ್ ।
ಋಷಿಂ ನಾರಾಯಣಮೃತೇ ಯೋಷಿನ್ಮಯ್ಯೇಹಮಾಯಯಾ ॥
[ಭಾಗವತ ೨-೭-೬]

ಅಂತಹ ಬ್ರಹ್ಮದೇವನಿಂದ ಸೃಷ್ಟರಾದವರಿಂದ ಸೃಷ್ಟರಾದವರಲ್ಲಿ ಯಾವನು ತಾನೇ ನಾರಾಯಣಋಷಿಯನ್ನು ಬಿಟ್ಟು ಹೆಂಗಸೆಂಬ ಮಾಯೆ ಯಿಂದ ಬುದ್ಧಿಮೋಹವನ್ನು ಹೊಂದದೇ ಇದ್ದಾನು? ॥ ೭೯ ॥

ನಾರೀಣಾಂ ದಶಸಾಹಸ್ರೀ ಕಾಮಸ್ಯ ಭ್ರಮಕಾರಿಣೀ ।
ಯಸ್ಯ ಶೌಚೋದಕಾಹರ್ತ್ರೀ ಕರ್ತ್ರೀ ಚ ವಿವಿಧಾಃ ಕ್ರಿಯಾಃ ॥

ನ ಕದಾಪಿ ಮನೋಹರ್ತ್ರೀ ಬಭೂವ ಜಿತಚೇತಸಃ ।
ಪಾದಸಂಹನನಸ್ಯೈವ ಕರ್ತ್ರೀ ಶ್ರೀಶ್ಚ ದ್ವಿರೂಪಿಣೀ ॥ ೮೧ ॥

ತಸ್ಯ ಚಿತ್ತಾಪಹಾರಾಯ ಶಕ್ತಾ ಸ್ತ್ರೀ ಕ್ವ ಜಗತ್ತ್ರಯೇ ।
ಸಾಮಂಜಸ್ಯಂ ಚಾಸ್ಯ ವಿಷ್ಣೋಃ ಕಿಂ ವಾಚ್ಯಂ ಪೂಜ್ಯಕರ್ಮಣಃ ॥

ರಮಾದೇವಿಗೆ ಹರಿಪಾದಪ್ರಕ್ಷಾಳನೋದಕವನ್ನು ತರುವ ಮತ್ತು ಆಕೆಯ ಇತರ ಕಾರ್ಯಗಳನ್ನು ಮಾಡುವ, ಮನ್ಮಥನಿಗೂ ಮೋಹವನ್ನು ಉಂಟುಮಾಡುವ ಹತ್ತುಸಹಸ್ರ ಸ್ತ್ರೀ ಪರಿವಾರವು ಉಂಟು. ಇವರಿಂದ ಕೂಡಿದ ಎರಡು ರೂಪವುಳ್ಳ ರಮಾದೇವಿಯು ಪರಮಾತ್ಮನ ಪಾದವನ್ನು ಒತ್ತುವುದರಲ್ಲಿ ಮಟ್ಟಿಗೆ ನಿರತಳಾದಳೇ ಹೊರತು ಜಿತಮನಸ್ಸನಾದ ಆತನ ಮನಸ್ಸನ್ನು ಅಪಹರಿಸಲಿಲ್ಲ. ಹೀಗೆಂದಮೇಲೆ ಆತನ ಚಿತ್ತವನ್ನು ಅಪಹರಿಸಲು ಮೂರು ಲೋಕದಲ್ಲಿ ಯಾವ ಸ್ತ್ರೀಯೇ ಆಗಲಿ ಶಕ್ತಳಾದಾಳು? ಪೂಜಾರ್ಹವಾದ ವ್ಯಾಪಾರವುಳ್ಳ ಇಂತಹ ವಿಷ್ಣುವಿನ ಸಾಮಂಜಸ್ಯವನ್ನು ಅಂದರೆ ನಿರ್ದೋಷತ್ವವನ್ನು ಹೇಳತಕ್ಕದ್ದೇನು? [ಹೇಗೆ ಅಸಾಮಂಜಸ್ಯವು ರುದ್ರನಲ್ಲಿದೆಯೋ ಹಾಗೆ ವಿಷ್ಣುವಿನಲ್ಲಿ ಇಲ್ಲ ಎಂದರ್ಥ. ಅಂತು ಪರಮಾತ್ಮನು ಅತ್ಯಂತ ದೋಷದೂರನು ಎಂದು ಸಿದ್ಧಿಸಿತು.] ॥ ೮೦-೮೨ ॥

ಅತೋ ಜಿಜ್ಞಾಸ್ಯತಾ ವಿಶ್ವಕರ್ತೃತಾ ಶಾಸ್ತ್ರಯೋನಿತಾ ।
ಅಸ್ಯೈವ ಶೋಭತೇ ನಾನ್ಯಸ್ಯೇತಿ ವ್ಯಾಸೋ ಮಹಾಮತಿಃ ॥೮೩॥

ಸೂತ್ರೇ ಸೂತ್ರೇ ಸೂತ್ರಕರ್ತಾ ಹರೇಃ ಸುಗುಣಸನ್ನತೇಃ ॥೮೪॥

ಆದ್ದರಿಂದ ಇಂತಹ ವಿಷ್ಣುವಿನ ಜಿಜ್ಞಾಸ್ಯತ್ವವೂ, ಜಗತ್ಕರ್ತೃತ್ವವೂ, ಶಾಸ್ತ್ರಯೋನಿತ್ವವೂ ಶೋಭಿಸುತ್ತದೆ. ಇತರರಿಗೆ ಶೋಭಿಸುವುದಿಲ್ಲ. ಹೀಗೆ ಮಹಾಜ್ಞಾನಿಗಳಾದ ವೇದವ್ಯಾಸರು ಸೂತ್ರ ಸೂತ್ರದಲ್ಲಿಯೂ ಹರಿಯ

ಉತ್ತಮಗುಣಗಳೆಂಬ ಶ್ರೇಷ್ಠವಾದ ಮಣಿಗಳನ್ನು ಪೋಣಿಸಿದ್ದಾರೆ. ಅಂದರೆ ಪ್ರತಿಪಾದಿಸಿದ್ದಾರೆ. || ೮೩-೮೪ ||

ದುರ್ವಾದಿಮರ್ಕಟೈರ್ನೀತಾಂ ರತ್ನಮಾಲಾಮಿಮಾಂ ಬಲಾತ್ ।
ಆಹೃತ್ಯಾಸ್ಮದ್ಗುರುರ್ಮಧ್ವಃ ಕಂಠೇ ಕಂಠೇ ನ್ಯಧಾತ್ಸತಾಂ || ೮೫ ||

ದುರ್ವಾದಿಗಳೆಂಬ ಮರ್ಕಟಗಳಿಂದ ಒಯ್ಯಲ್ಪಟ್ಟ ಈ ರತ್ನಮಾಲೆಯನ್ನು ಬಲಾತ್ಕಾರದಿಂದ ಹಿಂದಕ್ಕೆ ತಂದು ನಮ್ಮ ಗುರುಗಳಾದ ಮಧ್ವಾಚಾರ್ಯರು ಸಜ್ಜನರ ಪ್ರತಿಯೊಬ್ಬರ ಕಂಠದಲ್ಲಿಯೂ ಹಾಕಿದ್ದಾರೆ. ||೮೫||

ವಾದಿರಾಜಕೃತೇ ಶ್ರಾವ್ಯೇ ಕಾವ್ಯೇ ಭವ್ಯೇ ಸುಬುದ್ಧಿಭಿಃ ।
ಸೇವ್ಯೇ ಸರಸಭಾರತ್ಯಾಂ ವಿಲಾಸೋಽಭೂದ್ಧರಿಪ್ರಿಯಃ || ೮೬ ||

ವಾದಿರಾಜರು ರಚಿಸಿದ, ಕೇಳಲು ಇಂಪಾದ, ಸುಂದರವಾದ ಉತ್ತಮಬುದ್ಧಿಯುಳ್ಳವರಿಂದ ಸೇವಿಸಲ್ಪಡಲು ಯೋಗ್ಯವಾದ ಸರಸಭಾರತೀ ಕಾವ್ಯದಲ್ಲಿ ಹನ್ನೊಂದನೆಯ ವಿಲಾಸವು ಹರಿಗೆ ಪ್ರೀತಿಯಾಯಿತು. || ೮೬ ||

ಸರಸಭಾರತೀವಿಲಾಸಕಾವ್ಯದಲ್ಲಿ ಹನ್ನೊಂದನೆಯ ವಿಲಾಸವು ಪೂರ್ಣವಾಯಿತು.

ದ್ವಾದಶೋ ವಿಲಾಸಃ

|| ಶ್ರೀಗುರುಭ್ಯೋ ನಮಃ ಹರಿಃ ಓಂ ||

[ಶಂಭುವಿನ ಅವತಾರರಾದ ಶುಕಾಚಾರ್ಯರಿಗೆ ತಮ್ಮ ತಂದೆ ಬಾದರಾಯಣರು ಸೂತ್ರದಲ್ಲಿ ಹೇಳಿರುವ ಅಸಾಮಂಜಸ್ಯವು ಇಷ್ಟವಾದುದೇ.

ಸೂತ್ರಗಳಿಗೆ ಮುಖ್ಯಾಧಿಕಾರಿಗಳು ದೇವತೆಗಳು. ಆದ್ದರಿಂದ ಸೂತ್ರೋಕ್ತವಾದ ರುದ್ರನ ದೋಷವು ದೇವಶ್ರೇಷ್ಠನಾದ ಆ ರುದ್ರನಿಗೂ ಸಂಮತವೇ ಆಗಿರಬೇಕು.

ಕರ್ತುಂ-ಅಕರ್ತುಂ-ಅನ್ಯಥಾಕರ್ತುಂ ಎಂದರೆ ಮಾಡುವುದಕ್ಕೂ ಮಾಡದೇ ಇರುವುದಕ್ಕೂ ಅನ್ಯಥಾ ಮಾಡುವುದಕ್ಕೂ ಶಕ್ತಿಯು ನಿಯಮವಾಗಿ ಪರಮಾತ್ಮನಲ್ಲಿ ಮಾತ್ರ ಉಂಟು. ಇತರದೇವತೆಗಳಲ್ಲಿಲ್ಲ.

ಲಕ್ಷ್ಮೀದೇವಿಯ ಪ್ರೀತ್ಯರ್ಥವಾಗಿ "ಯಾವ ನಾನು ರುಕ್ಮಿಣೀಶವಿಜಯವನ್ನು ಮಾಡಿದೆನೋ, ಆ ನಾನು ಭಾರತೀದೇವಿಯ ಪ್ರೀತ್ಯರ್ಥವಾಗಿ ಈ ಸರಸಭಾರತೀ ವಿಲಾಸವನ್ನು ಮಾಡಿರುವೆನು" ಎಂದು ಹೇಳಿ ಹರಿವಾಯುಗಳಿಗೆ ನಮಸ್ಕಾರ ಮಾಡಿ ಗ್ರಂಥವನ್ನು ಮುಗಿಸುತ್ತಾರೆ.]

ಶುಕರೂಪಸ್ಯ ಯಾ ಸ್ವಸ್ಯ ಪಿತ್ರಾ ಸೂತ್ರಕೃತೋದಿತಾ ।
ಅಸಮಂಜಸತಾ ಶಂಭೋರಪಿ ಚಿತ್ತಪ್ರಿಯೈವ ಸಾ ॥ ೧ ॥

ಶುಕರೂಪಿಯಾದ ಶಂಭುವಿನ ಮನಸ್ಸಿಗೆ ತಮ್ಮ ತಂದೆಗಳಾದ ಸೂತ್ರಕಾರರು ಸೂತ್ರದಲ್ಲಿ ಹೇಳಿದ ಶಂಭುವಿಷಯಕ ಅಸಾಮಂಜಸ್ಯವು ಇಷ್ಟವಾದದ್ದೇ ಆಗಿದೆ. ॥ ೧ ॥

ಯೋ ಗುರುರ್ವೇದವಿದುಷಾಂ ಯೋ ಗುರುಃ ಸರ್ವದೇಹಿನಾಂ ।
ತಸ್ಯ ವ್ಯಾಸಸ್ಯ ಮರ್ಯಾದಾಮಂಗೀಕಾರ್ಯಾಂ ಸುರೈರಪಿ ॥ ೨ ॥
ಮನ್ಯಾಮಹೇ ನಚೇತ್ ಜ್ಞಾನಶೂನ್ಯಂ ಸ್ಯಾತ್ಸಕಲಂ ಜಗತ್ ।

ವೇದವನ್ನು ತಿಳಿದವರಿಗೆ ಬಾದರಾಯಣರು ಗುರುಗಳು. ಅಷ್ಟೇಕೆ? ಎಲ್ಲ ಪ್ರಾಣಿಗಳಿಗೂ ಗುರುಗಳು. ಆದ್ದರಿಂದ ಆ ವ್ಯಾಸರ ನಿಯಮವು ದೇವತೆಗಳಿಂದಲೂ ಅಂಗೀಕಾರ್ಯವಾದದ್ದೆಂದು ನಾವು ತಿಳಿಯುತ್ತೇವೆ. ಹಾಗಲ್ಲದಿದ್ದಲ್ಲಿ ಸರ್ವಜಗತ್ತೂ ಜ್ಞಾನಹೀನವಾಗಬೇಕಾದೀತು. ॥೨-೩(೧)॥

ಯೋಷ್ಟಾದಶಪುರಾಣಾನಾಂ ಕರ್ತಾ ವಕ್ತಾ ಶ್ರುತೇರಪಿ ॥ ೩ ॥
ತಸ್ಯ ಮಾರ್ಗೋ ಹರಸ್ಯಾಪಿ ಪ್ರಿಯಃ ಸ್ವರ್ಗಾಪವರ್ಗದಃ ।

ಹದಿನೆಂಟು ಪುರಾಣಗಳನ್ನು ಮಾಡಿದ ಅಲ್ಲದೆ ಸರ್ವಶ್ರುತಿಗಳನ್ನೂ ಹೇಳಿದ ಆ ವೇದವ್ಯಾಸರ ಸ್ವರ್ಗಮೋಕ್ಷಗಳನ್ನು ಕೊಡುವ ದಾರಿಯು ಹರನಿಗೂ ಪ್ರಿಯವಾದದ್ದೇ. ॥ ೩(೨)-೪(೧) ॥

ನಾರಾಯಣಾದ್ವಿನಿಷ್ಪನ್ನಂ ಜ್ಞಾನಂ ಕೃತಯುಗೇ ಸ್ಥಿತಂ || ೪ ||

ಕಿಂಚಿತ್ತದನ್ಯಥಾ ಜಾತಂ ತ್ರೇತಾಯಾಂ ದ್ವಾಪರೇಽಖಿಲಂ |
ಗೌತಮಸ್ಯ ಋಷೇಃ ಶಾಪಾತ್ ಜ್ಞಾನೇತ್ವಜ್ಞಾನತಾಂ ಗತೇ ||

ಸಂಕೀರ್ಣಬುದ್ಧಯೋ ದೇವಾ ಬ್ರಹ್ಮರುದ್ರಪುರಸ್ಸರಾಃ |
ಶರಣ್ಯಂ ಶರಣಂ ಜಗ್ಮುರ್ನಾರಾಯಣಮನಾಮಯಂ || ೬ ||

ನಾರಾಯಣದೇವರಿಂದ ಉಪದಿಷ್ಟವಾಗಿ ಬಂದ ಜ್ಞಾನವು ಕೃತಯುಗದಲ್ಲಿ ಹೇಗೆ ಉಪದಿಷ್ಟವಾಗಿತ್ತೋ ಹಾಗೆಯೇ ಇತ್ತು. ತ್ರೇತಾಯುಗವಲ್ಲಿ ಸ್ವಲ್ಪ ಬೇರೆಯಾಯಿತು. ಗೌತಮರ ಶಾಪದಿಂದ ದ್ವಾಪರಯುಗದಲ್ಲಿ ಸರ್ವಜ್ಞಾನವೂ ಬದಲಾವಣೆಯಾಯಿತು. ಇದರಿಂದ ವಿಷ್ಣುಸರ್ವೋತ್ತಮತ್ವಾದಿಸಮ್ಯಕ್‌ಜ್ಞಾನವು ಮಿಥ್ಯಾಜ್ಞಾನವೆಂದು ಜನರು ತಿಳಿಯುತ್ತಾ ಬಂದರು. ಆಗ ಬ್ರಹ್ಮರುದ್ರರೇ ಮೊದಲಾದ ದೇವತೆಗಳು ಲೋಕದಲ್ಲಿನ ಸಜ್ಜನರಲ್ಲಿ ದಯೆಯುಳ್ಳವರಾಗಿ ಕಷ್ಟಕಾಲವಲ್ಲಿ ಶರಣುಹೊಂದಲು ಯೋಗ್ಯನಾದ ದೋಷರಹಿತನಾದ ನಾರಾಯಣನನ್ನು ಮೊರೆಹೊಕ್ಕರು. || ೪-೬ ||

ತೈರ್ವಿಜ್ಞಾಪಿತಕಾರ್ಯಸ್ತು ಭಗವಾನ್ ಪುರುಷೋತ್ತಮಃ |
ಅವತೀರ್ಣೋ ಮಹಾಯೋಗೀ ಸತ್ಯವತ್ಯಾಂ ಪರಾಶರಾತ್ ||

ಭಗವಂತನಾದ ಪುರುಷೋತ್ತಮನು ದೇವತೆಗಳಿಂದ ವಿಜ್ಞಾಪಿಸಿಕೊಳ್ಳಲ್ಪಟ್ಟವನಾಗಿ ಅವರಿಷ್ಟಾರ್ಥವನ್ನು ಪೂರ್ಣಮಾಡಲೋಸುಗ ಪರಾಶರರಿಂದ ಸತ್ಯವತೀದೇವಿಯಲ್ಲಿ ಯೋಗಿಶ್ರೇಷ್ಠನಾದ ವ್ಯಾಸನಾಗಿ ಅವತರಿಸಿದನು. || ೭ ||

ಉತ್ಸನ್ನಾನ್ಭಗವಾನ್ ವೇದಾನುಜ್ಜಹಾರ ಹರಿಃ ಸ್ವಯಂ |
ಚತುರ್ಧಾವ್ಯಭಜತ್ತಾಂಶ್ಚ ಚತುರ್ವಿಂಶತಿಧಾ ಪುನಃ || ೮ ||

ಶತಧಾ ಚೈಕಧಾ ಚೈವ ತಥೈವ ಚ ಸಹಸ್ರಧಾ |
ಕೃಷ್ಣೋ ದ್ವಾದಶಧಾ ಚೈವ ಪುನಸ್ತಸ್ಯಾರ್ಥವಿತ್ತಯೇ || ೯ ||

ಚಕಾರ ಬ್ರಹ್ಮಸೂತ್ರಾಣಿ ಯೇಷಾಂ ಸೂತ್ರತ್ವಮಂಜಸಾ ।
ಏವಂ ವಿಧಾನಿ ಸೂತ್ರಾಣಿ ಕೃತ್ವಾ ವ್ಯಾಸೋ ಮಹಾಯಶಾಃ ॥
ಬ್ರಹ್ಮರುದ್ರಾದಿದೇವೇಷು ಮನುಷ್ಯಪಿತೃಪಕ್ಷಿಷು ।
ಜ್ಞಾನಂ ಸಂಸ್ಥಾಪ್ಯ ಭಗವಾನ್ ಕ್ರೀಡತೇ ಪುರುಷೋತ್ತಮಃ ॥೧೧॥

ಕೂಡಲೇ ಅಪಪಾಠಗಳಿಂದ ತಿರೋಹಿತವಾದ ವೇದಗಳನ್ನು ಶುದ್ಧ ವಾದ ರೀತಿಯಲ್ಲಿ ಉಚ್ಚರಿಸಿ ವ್ಯಕ್ತಮಾಡಿದನು. ವೇದಗಳನ್ನು ನಾಲ್ಕು ಭಾಗಮಾಡಿ, ಅದರಲ್ಲಿ ಋಗ್ವೇದವನ್ನು ೨೪ ಭಾಗವಾಗಿಯೂ ಯಜುರ್ವೇದ ವನ್ನು ೧೦೧ ಭಾಗವಾಗಿಯೂ ಸಾಮವೇದವನ್ನು ೧೦೦೦ ಭಾಗವಾಗಿಯೂ ಅಥರ್ವವೇದವನ್ನು ೧೨ ಭಾಗವಾಗಿಯೂ ಸಾಕ್ಷಾತ್ ಹರಿಯು ವಿಂಗಡಿಸಿ ದನು. ಅನಂತರ ಅದರ ಅರ್ಥವನ್ನು ತಿಳಿಸುವುದಕ್ಕಾಗಿ, ಬ್ರಹ್ಮಸೂತ್ರ ಗಳನ್ನು ಮಾಡಿದನು. ಆ ಸೂತ್ರಗಳು ಸರ್ವಸೂತ್ರಲಕ್ಷಣಗಳಿಂದ ಚನ್ನಾಗಿ ಕೂಡಿದ್ದು. ಇಂಥಾ ಸೂತ್ರಗಳನ್ನು ಮಾಡಿ ಮಹಾಯಶಸ್ಸುಳ್ಳ ಕೃಷ್ಣ-ದ್ವೈಪಾಯನರು ಬ್ರಹ್ಮರುದ್ರಾದಿದೇವತೆಗಳಲ್ಲಿಯೂ ಮನುಷ್ಯೋತ್ತಮರ ಲ್ಲಿಯೂ ಪಿತೃಗಳಲ್ಲಿಯೂ ಜರಿತಾರಿಯಾದಿ ಪಕ್ಷಿಗಳಲ್ಲಿಯೂ ಯಥಾರ್ಥ-ಜ್ಞಾನವನ್ನು ಚನ್ನಾಗಿ ಸ್ಥಾಪಿಸಿದರು. ಹೀಗೆ ಪುರುಷೋತ್ತಮನು ಕ್ರೀಡಿ ಸುತ್ತಾನೆ. ॥ ೮-೧೧ ॥

ಇತಿ ಸ್ಕಾಂದಪುರಾಣೋಕ್ತೇಃ ಸೂತ್ರೇ ಮುಖ್ಯಾಧಿಕಾರಿಣಃ ।
ಸೋಽಯಂ ಸೂತ್ರೋದಿತೋ ನ್ಯಾಯೋ ಹರಸ್ಯೈವ ಮನೋಹರಃ

ಈ ರೀತಿಯಲ್ಲಿ ಸ್ಕಾಂದಪುರಾಣದಲ್ಲಿ ಹೇಳಿರುವುದರಿಂದ ಸೂತ್ರಗಳಿಗೆ ಮುಖ್ಯಾಧಿಕಾರಿಯಾದ ಹರನಿಗೆ ಸೂತ್ರದಲ್ಲಿ ಹೇಳಲ್ಪಟ್ಟ ತನ್ನ ಸಂಬಂಧಿ ಯಾದ ಅಸಾಮಂಜಸ್ಯವು ಮನೋಹರವಾಗಿಯೇ ಇರಬೇಕು. ॥ ೧೨ ॥

ಯಥಾ ಬಲವತಾವಿಷ್ಟಿಗೃಹೀತೋ ಭುವಿ ಮಾನವಃ ।
ನಾಕರ್ತುಮೀಷ್ಟೇ ಭಗವಾನ್ ಸ್ವಾತಂತ್ರ್ಯಾನ್ನತಥಾ ಕಿಲ ॥ ೧೩ ॥
ತೇನಾಕರ್ತುಂ ಶಕ್ತತಾ ಯಾ ಸಾಪಿ ವಿಷ್ಣೋರ್ಮಹಾನ್ ಗುಣಃ ।
ತಸ್ಮಾದಕರ್ತುಂ ಕಿಂ ಶಕ್ತ್ಯಾ ಶಿಕೋಃ ಕೃತಪಕೋರಿವ ॥ ೧೪ ॥

ಇತಿ ಮಂದಮತೀನಾಂ ಯಾ ಸಾ ಶಂಕಾಪಿ ಬಹಿರ್ಗತಾ |
ಯತೋ ಯತ್ನೇ ಮಹತಿ ಚ ಕೃತೇ ಮುಕ್ತಿಕೃತೇ ಖಲೈಃ ||೧೫||

ನ ಕ್ವಾಪಿ ಕುರುತೇ ಕೃಷ್ಣಃ ತತೋಽಕರ್ತುಂ ಚ ಶಕ್ತತಾ |
ತಸ್ಯೈವಾಸ್ತಿ ಸ್ವತಂತ್ರಸ್ಯ ನತ್ವನ್ಯೇಷಾಂ ದಿವೌಕಸಾಂ || ೧೬ ||

ಲೋಕದಲ್ಲಿ ಬಿಟ್ಟಿಹಿಡಿದು (ವೇತನವಿಲ್ಲದೆ) ಮನುಷ್ಯರಿಂದ ಕೆಲಸ ತೆಗೆದುಕೊಳ್ಳುವದುಂಟಷ್ಟೆ. ಬಿಟ್ಟಿಹಿಡಿದ ಮನುಷ್ಯನು ಹೇಳಿದ ಕೆಲಸ ಮಾಡದೇ ಇರಲು ಸಮರ್ಥನಾಗನು. ಪರಮಾತ್ಮನಾದರೋ ಸ್ವತಂತ್ರ ನಾದುದರಿಂದ ಯಾರ ಶಕ್ತಿಗೇ ಆಗಲಿ ಒಳಗಾಗಿ ಬಲವಂತದಿಂದ ಕೆಲಸ ಮಾಡುವವನಲ್ಲ. ಆದ್ದರಿಂದಲೇ "ಅಕರ್ತುಂ ಈಶಃ" ಎಂದು ಅವನ ವಿಷಯದಲ್ಲಿ ಜ್ಞಾನಿಗಳು ವ್ಯವಹರಿಸುತ್ತಾರೆ. ಆದ್ದರಿಂದ ಬಲವಂತ ಕ್ಕೊಳಗಾಗಿ ಮಾಡದೇ ಇರುವುದು ವಿಷ್ಣುವಿನಲ್ಲಿ ದೊಡ್ಡಗುಣವೇ. ಇದರಿಂದ ಮಂದರು ಮಾಡಬಹುದಾದ ಶಂಕೆಯು ದೂರವಾಯಿತು. ಈ ಶಂಕೆಯು ಹೀಗೆ—ಬಡಕಲಾದ ಆಕಳಕರುವು ಯಾವುದು ಮಾಡಬಲ್ಲದು? ಇದು ಒಂದು ಶಕ್ತಿಯೇ?

ಉತ್ತರ:—ಪರಮಾತ್ಮನ ಮಾಡದೇ ಇರುವ ಶಕ್ತಿಯು ಇಂತಹದಲ್ಲ. ಆದ್ದರಿಂದ ಕರುವಿನಲ್ಲಿ ಇರುವ ಅಶಕ್ತತೆಯು ಒಳ್ಳೆಯ ಗುಣವೆಂದು ಹೇಳು ವುದಕ್ಕಾಗದಿದ್ದರೂ ಪರಮಾತ್ಮನಲ್ಲಿ "ಅಕರ್ತುಂ ಶಕ್ತಃ" ಎಂಬ ಗುಣವು ಹಿಂದೆ ಹೇಳಿದಂತೆ ಬೇರೆಯಾದದ್ದು. ಅವನಲ್ಲಿ ಅದು ಮಹಾಗುಣವೇ. ಅಸುರರು ಮುಕ್ತಿಗಾಗಿ ಪ್ರಯತ್ನಮಾಡಿದರೂ ಕೂಡ ಅವರನ್ನು ಎಂದಿಗೂ ಮುಕ್ತರನ್ನಾಗಿ ಮಾಡುವುದಿಲ್ಲ. ಇದರಿಂದಲೂ "ಅಕರ್ತುಂ ಚ ಶಕ್ತತಾ" ಎಂಬೀ ಗುಣವು ಸ್ವತಂತ್ರನಾದ ವಿಷ್ಣುವಿಗೊಬ್ಬನಿಗೇ ಉಂಟು. ಇತರ ದೇವತೆಗಳಿಗಾಗಲಿ ಇಲ್ಲ. || ೧೫-೧೬ ||

ವರಂ ದದತಿ ಯೇಽನ್ಯೇಷಾಮೇವಾಂತೇ ಭಯಕಾರಿಣಾಂ |
ಹಿರಣ್ಯಕಶ್ಯಪಾದೀನಾಂ ನಾಕರ್ತುಂ ಶಕ್ತತಾಸ್ತಿತತ್ || ೧೭ ||

ತೇಷಾಂ ಸುರಾಣಾಂ ವಿಷ್ಣೋಃ ಸಾ ಶಕ್ತಿಸ್ತ್ವಸ್ತ್ಯಕರ್ತೃತಾ ।
ಅವಧ್ಯತಾವರೋಪೇತಾನಪಿ ವಧ್ಯಾನ್ಕರೋತಿ ಯಃ ॥ ೧೮ ॥

ವಿಷಂ ಚ ದತ್ತಂ ರಾಕ್ಷಸ್ಯಾ ಯೋಽಮೃತೀಕೃತವಾನ್ ಪ್ರಭುಃ ।
ಶಿಶುಶ್ಚ ಧತ್ತೇ ಯೋ ಗರ್ಭೇ ವಿಶ್ವಮೇತಚ್ಚರಾಚರಂ ॥ ೧೯ ॥

ತಮ್ಮನ್ನು ಕುರಿತು ತಪಸ್ಸುಮಾಡುವ ಮುಂದೆ ತಮಗೇ ಅಥವಾ ತಮ್ಮವರಿಗೇನೇ ಭಯವನ್ನುಂಟುಮಾಡುವ ಹಿರಣ್ಯಕಶಿಪು ವೃಕಾದಿಗಳಿಗೆ ದೇವತೆಗಳು ವರವನ್ನು ಕೊಡುತ್ತಾರೆ. ಹಾಗೆ ವರವನ್ನು ಕೊಡದೇ ಇರುವಲ್ಲಿ ಸಮರ್ಥರಾಗರು. ಇದರ ಅಭಿಪ್ರಾಯ ಹೀಗೆ:–ಬ್ರಹ್ಮದೇವರು ಹಿರಣ್ಯಕಶಿಪುವಿಗೆ ವರವನ್ನು ಕೊಟ್ಟರು. ಸರ್ವಜ್ಞರಾದ್ದರಿಂದ, ಇವನು ಭಗವದ್ಭಕ್ತನಾದ ಪ್ರಹ್ಲಾದನನ್ನು ಹಿಂಸಿಸುವನೆಂದು ತಿಳಿದಿದ್ದರೂ, ಅಸ್ವತಂತ್ರರಾದ್ದರಿಂದ ಪರಮಾತ್ಮನ ಇಚ್ಛೆಯನ್ನು ಅನುಸರಿಸಿ ವರವನ್ನು ಕೊಟ್ಟರು. ವರವನ್ನು ಕೊಡದೇ ಇರಲು ಶಕ್ತರಾಗಲಿಲ್ಲ. ವೃಕಾಸುರನಿಗೆ ರುದ್ರದೇವರು ವರವನ್ನು ಕೊಟ್ಟರು. ಆ ವರದಿಂದ ರುದ್ರದೇವರಿಗೇನೇ ಭಯವುಂಟಾಯಿತು. ರುದ್ರದೇವರಲ್ಲಿ ಅಜ್ಞಾನವೂ ಪಾರತಂತ್ರ್ಯವೂ ಇರುವುದರಿಂದ ವರವನ್ನು ಕೊಡದೇ ಇರಲು ಶಕ್ತರಾಗಲಿಲ್ಲ. ಆದ್ದರಿಂದ ದೇವತೆಗಳಿಗೆ “ಅಕರ್ತೃತಾ” ಶಕ್ತಿ ಇಲ್ಲ. ವಿಷ್ಣುವಿಗಾದರೋ ಹಿಂದೆ ಹೇಳಿದ ರೀತಿಯಲ್ಲಿ ಅದುಂಟು. ಇಷ್ಟೇ ಅಲ್ಲ. ಅವಧ್ಯತಾ ವರವನ್ನು ಪಡೆದ ಅಸುರರನ್ನು ಪರಮಾತ್ಮನು ವಧ್ಯರನ್ನಾಗಿ ಮಾಡುತ್ತಾನೆ. ರಾಕ್ಷಸಿಯಾದ ಪೂತನಿಯಿಂದ ಕೊಡಲ್ಪಟ್ಟ ವಿಷವನ್ನು ಅಮೃತವನ್ನಾಗಿ ಮಾಡಿದನು. ಹಾಗೆಯೇ ಶಿಶುವಾಗಿದ್ದಾಗಲೇ ತನ್ನ ಉದರದಲ್ಲಿ ಚರಾಚರಾತ್ಮಕವಾದ ಪ್ರಪಂಚವನ್ನು ಧರಿಸುತ್ತಾನೆ. ಹೀಗೆ ಇತರರಿಂದ ಸಾಧ್ಯವಲ್ಲದ ಮಹತ್ಕಾರ್ಯವನ್ನು “ಕರ್ತುಂ ಶಕ್ತಃ” ಮಾಡಲು ಶಕ್ತನು. ॥ ೧೭-೧೯ ॥

ವರಂ ಚ ದುಸ್ತರಂ ಸರ್ವೈರ್ಹಿರಣ್ಯಕಶಿಪೋಃ ಪುರಾ ।
ಅನ್ಯಥಾ ಕೃತವಾನ್ನಾರಸಿಂಹರೂಪೀ ಮಹಾಬಲಃ ॥ ೨೦ ॥

ಯಾರಿಂದಲೂ ದಾಟಲಶಕ್ಯವಾದ ಬ್ರಹ್ಮದೇವರಿಂದ ಕೊಡಲ್ಪಟ್ಟ

ವರವನ್ನು ಮಹಾಬಲಿಷ್ಠನಾದ ನರಸಿಂಹರೂಪಿ ವಿಷ್ಣುವು "ಅನ್ಯಥಾ ಕೃತವಾನ್" ವ್ಯತ್ಯಾಸವನ್ನಾಗಿ ಮಾಡಿದನು. || ೨೦ ||

ಅನ್ಯಥಾ ಕರ್ತುಮಸ್ಯೈಷ ಏವ ಶಕ್ತೋ ನ ಚಾಪರಃ |
ಯೋ ವಿಷಾನ್ನೀಲಕಂಠೋಭೂದ್ವರಂ ದತ್ವಾಪ ಸಂಕಟಂ ||೨೧||

ತಮಃ ಪರಾಕ್ರಮಂ ಚೈವ ಯೋ ವಿಧಿರ್ನಾನ್ಯಥಾಕರೋತ್ |
ಬ್ರಹ್ಮಹತ್ಯಾಭಯಾತ್ಪದ್ಮನಾಲಾಂತರವಿಶಚ್ಚ ಯಃ || ೨೨ ||

ಅನ್ಯಥಾ ಮಾಡುವುದಕ್ಕೂ ಇವನೇ ಶಕ್ತನು. ಇತರರಲ್ಲ. ರುದ್ರನು ವಿಷದಿಂದ ನೀಲಕಂಠನಾದನು. ವೃಕಾಸುರನಿಗೆ ವರವನ್ನು ಕೊಟ್ಟು ಸಂಕಟವನ್ನು ಹೊಂದಿದನು. ತಮೋಭಿಮಾನಿಯಾದ ರುದ್ರನು ಬ್ರಹ್ಮ-ದೇವರ ಐದನೆಯ ಶಿರಸ್ಸನ್ನು ಕತ್ತರಿಸಲು ಬಂದಾಗ ಬ್ರಹ್ಮದೇವನು ಅವನ ಪರಾಕ್ರಮವನ್ನು ವ್ಯರ್ಥಮಾಡಲಿಲ್ಲ. ಬ್ರಹ್ಮಹತ್ಯಾದೋಷದಿಂದ ಇಂದ್ರನು ಪದ್ಮನಾಳದೊಳಗೆ ಪ್ರವೇಶಿಸಿದನು. ಆದ್ದರಿಂದ ಇವರ್‍ಯಾರೂ ಅನ್ಯಥಾ ಮಾಡಲು ಶಕ್ತರಾಗಲಿಲ್ಲ. || ೨೧-೨೨ ||

ಯೋ ಲೀಲಯಾ ಜಗಚ್ಚಕ್ರೇ ಯೋ ದಧಾರ ಚ ಲೀಲಯಾ |
ಯೋ ನಿಯುಂಕ್ತೇಽಖಿಲಂ ಸಾಕ್ಷೀಭೂಯ ವಿಶ್ವಂ ಚರಾಚರಂ ||

ದೋಷೇ ಸತ್ಯಪಿ ಭಕ್ತೌಘಂ ನಿತ್ಯಮುಕ್ತಂ ಕರೋತಿ ಯಃ |
ಅವತೀರ್ಯ ಖಲಾನೀಕಂ ಯೋ ನಿಹಂತಿ ಯುಗೇ ಯುಗೇ ||

ಅಂತೇ ನಿಹಂತಿ ಯಃ ಸರ್ವಂ ಚಿಂತಾಸಂತಾಪವರ್ಜಿತಃ |
ಅಸ್ಯೈವ ಶೋಭತೇ ಕರ್ತುಂ ಶಕ್ತತಾ ಚಿತ್ರಕರ್ಮಣಃ || ೨೫ ||

ಈ ವಿಷ್ಣುವು ಲೀಲೆಯಿಂದ ಜಗತ್ತನ್ನು ಸೃಷ್ಟಿಮಾಡಿದನು. ಅದನ್ನು ಲೀಲೆಯಿಂದ ಧರಿಸಿದನು. ಅಲ್ಲದೆ ಜಗತ್ತಿಗೆ ಸಾಕ್ಷಿಯಾಗಿದ್ದು ಚರಾ-ಚರಾತ್ಮಕವಾದ ಸಮಸ್ತವನ್ನೂ ಲೀಲೆಯಿಂದ ನಿಯಮನಮಾಡುತ್ತಾನೆ. ದೋಷವಿದ್ದರೂ ಅದನ್ನು ದೂರಮಾಡಿ ತನ್ನ ಭಕ್ತರನ್ನು ಪುನಃ ಸಂಸಾರಕ್ಕೆ

ಬರದಂತೆ ಮುಕ್ತರನ್ನಾಗಿ ಮಾಡುತ್ತಾನೆ. ಯುಗಯುಗದಲ್ಲಿಯೂ ಅವತರಿಸಿ ದುಷ್ಟರನ್ನು ಸಂಹರಿಸುತ್ತಾನೆ. ಚಿಂತಾಸಂತಾಪವಿಲ್ಲದವನಾಗಿ ಕೊನೆಯಲ್ಲಿ ಸರ್ವವನ್ನೂ ಸಂಹರಿಸುತ್ತಾನೆ. ಆದ್ದರಿಂದಲೇ ಇಂತಹ ವಿಚಿತ್ರಕರ್ಮಗಳನ್ನು ಮಾಡುವ ಈ ಪರಮಾತ್ಮನಿಗೇನೇ "ಕರ್ತುಂಶಕ್ತತಾ" ಮಾಡುವಶಕ್ತಿಯು ಉಂಟು ಎಂಬುದು ಶೋಭಿಸುತ್ತದೆ. || ೨೩-೨೫ ||

ಅಕರ್ತುಮನ್ಯಥಾಕರ್ತುಂ ಕರ್ತುಂ ಶಕ್ತಿಶ್ಚ ಮತ್ಪ್ರಭೋಃ |
ಕಿಂ ವಕ್ತವ್ಯಾ ಸ್ವತಂತ್ರಸ್ಯ ಮುಕ್ತಾಮುಕ್ತ ಜಗತ್ಪತೇಃ || ೨೬ ||

ಸ್ವತಂತ್ರನೂ ಮುಕ್ತಾಮುಕ್ತ ಜಗತ್ಸ್ವಾಮಿಯೂ ಆದ ನನ್ನ ಪ್ರಭುವಿಗೆ "ಕರ್ತುಂ, ಅಕರ್ತುಂ, ಅನ್ಯಥಾಕರ್ತುಂ" ಅಂದರೆ ಮಾಡುವುದಕ್ಕೂ ಮಾಡದೇ ಇರುವುದಕ್ಕೂ ಅನ್ಯಥಾ ಮಾಡುವುದಕ್ಕೂ ಇರುವ ಶಕ್ತಿಯನ್ನು ಎಷ್ಟೆಂದು ಬಣ್ಣಿಸೋಣ. || ೨೬ ||

ಅತಃ ಸೂತ್ರಕೃತೋಕ್ತಾ ಯೇ ದೋಷಾಃ ಪಶುಪತೇಸ್ತ್ವ |
ತೇಷಾಂ ವಾರ್ತಾಪಿ ಚಾಪಾಸ್ತಾ ಶ್ರೀಸಹಾಯೇ ಮಮಪ್ರಭೌ ||

ಆದ್ದರಿಂದ ಸೂತ್ರಕಾರರು ನಿನ್ನ ಪಶುಪತಿಯಲ್ಲಿ ಯಾವ ದೋಷಗಳನ್ನು ಹೇಳಿದ್ದಾರೆಯೋ ಅವುಗಳ ಸುದ್ದಿಯೂ ಕೂಡ ಇಂದಿರೇಶನಾದ ನನ್ನ ಪ್ರಭುವಿನಲ್ಲಿ ದೂರವಾಯಿತು. || ೨೭ ||

ಅತಃ ಸಪತ್ನೀಕವಾಯುಬ್ರಹ್ಮಾಣೌ ಶ್ರೀಶ್ಚ ಕೇಶವೇ |
ಶುದ್ಧಾಶ್ಚ ಸರ್ವದೇವೇಭ್ಯೋಽಪ್ಯುತ್ತಮಾಶ್ಚ ಸದಾಽಭವನ್ || ೨೮ ||

ಸರ್ವದೋಷಾತಿದೂರತ್ವಾದ್ಧರಿಃ ಸರ್ವೋತ್ತಮೋತ್ತಮಃ |
ಶ್ರುತ್ಯಾ ಸ್ಮೃತ್ಯಾ ಚ ಯುಕ್ತ್ಯಾ ಚ ಸಿದ್ಧೋಽಭೂದ್ಧಿ ನ ಸಂಶಯಃ ||

ಈ ಕಾರಣದಿಂದ ಪತ್ನಿಯರಿಂದ ಸಹಿತರಾದ ಬ್ರಹ್ಮವಾಯುಗಳೂ ಮತ್ತು ಶ್ರೀದೇವಿಯೂ ಕೇಶವನ ವಿಷಯದಲ್ಲಿ ಸರ್ವದಾ ಶುದ್ಧರೂ, ಸರ್ವದೇವತೆಗಳಿಗಿಂತ ಉತ್ತಮರೂ ಆದರು. ಹೀಗೆ ಹರಿಯು ಸರ್ವದೋಷ-

ಮೂರನಾಗಿ ಶ್ರುತಿ, ಸ್ಮೃತಿ, ಯುಕ್ತಿರೂಪಪ್ರಮಾಣಗಳಿಂದ ಸರ್ವೋತ್ತ-ಮೋತ್ತಮನೆಂದು ಸಿದ್ಧವಾದನು. ಇವರಲ್ಲಿ ಸಂಶಯವಿಲ್ಲ. || ೨೮-೨೯ ||

ಅತಃ ಶ್ರಾವ್ಯಮಿದಂ ಕಾವ್ಯಂ ವಸ್ತುತತ್ತ್ವವಿವೇಚನಾತ್ ।
ಹರೇಶ್ಚ ಹರಿದಾಸಾನಾಂ ಸುರಾಣಾಂ ಚ ಮನಃಪ್ರಿಯಂ || ೩೦ ||

ಆದ್ದರಿಂದ ಕೇಳಲು ಇಂಪಾದ, ವಸ್ತುತತ್ತ್ವವನ್ನು ವಿಚಾರಪೂರ್ವಕ ವಾಗಿ ತಿಳಿಸುವ ಈ ಕಾವ್ಯವು ಹರಿಯ ಮತ್ತು ಹರಿದಾಸರಾದ ದೇವತೆಗಳ ಮನಸ್ಸಿಗೆ ಪ್ರಿಯವಾದದ್ದು. || ೩೦ ||

ಶ್ರುತೇಶ್ಚ ಸಂಮತಂ ಸರ್ವಂ ನೃಣಾಂ ಭಕ್ತಿಪ್ರದಂ ಹರೌ ।
ಅಂತೇ ವಿಮುಕ್ತಿದಂ ತಸ್ಮಾತ್ ಕೀರ್ತನೀಯಂ ದಿನೇದಿನೇ || ೩೧||

ಈ ಗ್ರಂಥವಲ್ಲಿ ಹೇಳಿರತಕ್ಕ ಸರ್ವಪ್ರಮೇಯವೂ ಶ್ರುತಿಸಮ್ಮತ ವಾದದ್ದು. ಜನಗಳಿಗೆ ಹರಿಯಲ್ಲಿ ಭಕ್ತಿಯನ್ನು ಕೊಡತಕ್ಕದ್ದು. ಕೊನೆಯಲ್ಲಿ ಮುಕ್ತಿದಾಯಕವಾದದ್ದು. ಆದ್ದರಿಂದ ಪ್ರತಿದಿನವಲ್ಲಿಯೂ ಪಠನಮಾಡು ವುದಕ್ಕೆ ಯೋಗ್ಯವಾದದ್ದು. || ೩೧ ||

ಚರತಾ ಸ್ಥಿರತಾ ಯಸ್ಮಾತ್ಪರತಾವರತಾ ತಥಾ ।
ನರತಾಮರತಾ ಯಸ್ಮಾತ್ಸ್ಮರತಾತ್ಸ್ಮರತಂ ಹರಿಂ || ೩೨ ||

ಚಲನವೂ ಸ್ಥಿರತೆಯೂ ಯಾವನಿಂದಲೋ, ಉತ್ತಮತೆಯೂ ಅವ-ರತೆಯೂ ಯಾರಿಂದಲೋ ಹಾಗೆಯೇ ನರತ್ವ, ಅಮರತ್ವವು ಯಾರದೆಶೆ ಯಿಂದಲೋ ಅಂದರೆ ಎಲ್ಲವೂ ಯಾರ ಅಧೀನವೋ ಅಂತಹ ಸ್ಮರಮಣ ನಾದ ಹರಿಯನ್ನು ಸ್ಮರಿಸು. || ೩೨ ||

ಏವಂ ತತ್ತ್ವಪರಾಮರ್ಶೇ ಸತ್ಯೇವ ಶ್ರೀಪತಿರ್ನೃಣಾಂ ।
ಮುಕ್ತಿದಸ್ತನ್ಮಯಾ ಸರ್ವಂ ಚೋಕ್ತಂ ಯುಕ್ತಮಿತಿಸ್ಥಿತಂ ||೩೩||

ಈ ರೀತಿಯಲ್ಲಿ ತತ್ತ್ವವನ್ನು ವಿಮರ್ಶೆಮಾಡಿ ತಿಳಿದರೇನೇ ಶ್ರೀಪತಿಯು ಮನುಷ್ಯರಿಗೆ ಮುಕ್ತಿದಾಯಕನಾಗುತ್ತಾನೆ. ಆದ್ದರಿಂದ ನಾನು ಈ ಗ್ರಂಥ ದಲ್ಲಿ ಹೇಳಿದ ಸರ್ವತತ್ತ್ವವೂ ಯುಕ್ತವಾದದ್ದೆಂದು ಸಿದ್ಧವಾಯಿತು. ||೩೩||

ಅನೇನ ಪ್ರೀಯತಾಂ ವಿಷ್ಣುರ್ವರ್ಣನೇನ ಮಹಾತ್ಮನಾಂ ।
ಮನಸ್ಯಸ್ತು ಸ ನಃ ಸರ್ವೋತ್ತಮೋ ಯಸ್ತು ಹಯಾನನಃ ॥೩೪॥

ಈ ಗ್ರಂಥದಲ್ಲಿ ಮಾಡಿರುವ ಮನನದಿಂದ ವಿಷ್ಣುವು ಪ್ರೀತನಾಗಲಿ ಮತ್ತು ಸರ್ವೋತ್ತಮನಾದ ಹಯವದನನು ಮಹಾತ್ಮರ ಮನಸ್ಸಿನಲ್ಲಿ ನೆಲಸಲಿ. ॥ ೩೪ ॥

ತಮೇವ ಚಾರ್ಚಯೇ ನಿತ್ಯಂ ತಮೇವ ಪ್ರಾರ್ಥಯೇಽನಿಶಂ ।
ತಮೇವ ಕೀರ್ತಯೇ ಚಿತ್ತೇ ಧ್ಯಾಯೇ ಮಹಿತಮೇವ ಹಿ ॥೩೫॥

ಈ ಹಯವದನನನ್ನೇ ನಿತ್ಯವೂ ಪೂಜಿಸುವೆನು. ಅವನನ್ನೇ ಸದಾ ಪ್ರಾರ್ಥಿಸುವೆನು. ಅವನನ್ನೇ ಕೀರ್ತಿಸುವೆನು. ಪೂಜ್ಯನಾದ ಅವನನ್ನೇ ಮನಸ್ಸಿನಲ್ಲಿ ಧ್ಯಾನಮಾಡುತ್ತೇನೆ. ಇದು ನಿಶ್ಚಯ. ॥ ೩೫ ॥

ಯತ್ನಾಸಾಧ್ಯಮಿದಂ ಕಾವ್ಯಮಯತ್ನೇನೈವ ಯತ್ಕೃತಂ ।
ಅತಃ ಕರ್ತುಮಕರ್ತುಂ ಚ ಸಮರ್ಥೋಽಭೂನ್ಮಮ ಪ್ರಭುಃ॥೩೬॥

ಯತ್ನಮಾಡಿದರೂ ರಚಿಸಲು ಸಾಧ್ಯವಲ್ಲದ ಈ ಕೃತಿಯು ನನ್ನಿಂದ ಯತ್ನವಿಲ್ಲದೇನೇ ಮಾಡಲ್ಪಟ್ಟಿತು. ಆದ್ದರಿಂದ ನನ್ನ ಸ್ವಾಮಿಯಾದ ಹಯವದನನು ಮಾಡುವುದಕ್ಕೂ, ಮಾಡದೇ ಇರುವುದಕ್ಕೂ ಅಥವಾ ಮಾಡಿಸುವುದಕ್ಕೂ, ಮಾಡಿಸದೇ ಇರುವುದಕ್ಕೂ ಸಮರ್ಥನು.

ಮಾಡುವುದಕ್ಕೂ, ಮಾಡದೇ ಇರುವುದಕ್ಕೂ ಎಂದು ಅರ್ಥಮಾಡುವಾಗ "ಓಂ ತದಧೀನತ್ವಾದರ್ಥವತ್ ಓಂ" ಎಂಬ ಸೂತ್ರೋಕ್ತವಾದ ನ್ಯಾಯವನ್ನು ನೆನಪಿನಲ್ಲಿಡತಕ್ಕದ್ದು.

ಮಾಡಿಸುವುದಕ್ಕೂ, ಮಾಡಿಸದೇ ಇರುವುವಕ್ಕೂ ಎಂದು ಅರ್ಥ ಮಾಡಿದಾಗ "ಕರ್ತುಂ" ಅಂದರೆ "ಕಾರಯಿತುಂ" ಎಂದು ತಿಳಿಯಬೇಕು. ಇದು "ಅಂತರ್ಣೀತಣಿಚ್". ॥ ೩೬ ॥

ಅಹರ್ನಿಶಂ ಹಯಗ್ರೀವಸೇವೀ ತತ್ಕೃಪಯಾ ಕವಿಃ ।
ಮಹಾಕಾವ್ಯಮಿದಂ ಚಕ್ರೇ ವಾದಿರಾಜೋ ಮಹಾಮತಿಃ ॥ ೩೭ ॥

ಹಗಲಿರುಳು ಹಯಗ್ರೀವನನ್ನು ಸೇವಿಸುವ ಮಹಾಮತಿಯಾದ ವಾದಿ-ರಾಜನು ಆ ಹಯವದನನ ಕೃಪೆಯಿಂದ ಕವಿತಾಶಕ್ತಿಯನ್ನು ಹೊಂದಿದವನಾಗಿ ಈ ಮಹಾಕಾವ್ಯವನ್ನು ರಚಿಸಿದನು. ‖ ೩೭ ‖

ಲಕ್ಷ್ಮೀಪ್ರಿಯಾಯ ಯಶ್ಚಕ್ರೇ ರುಗ್ಮಿಣೀಶಜಯಂ ಪುರಾ ।
ಸ ಚಕ್ರೇ ಭಾರತೀಪ್ರೀತ್ಯೈ ಭಾರತೀಶಜಯಂ ತ್ವಮುಂ ‖ ೩೮ ‖

ಲಕ್ಷ್ಮೀದೇವಿಗೆ ಪ್ರೀತಿಯಾಗಲೆಂದು ಯಾವ ವಾದಿರಾಜನು ಹಿಂದೆ ರುಕ್ಮಿಣೀಶವಿಜಯವನ್ನು ರಚಿಸಿದನೋ ಅದೇ ವಾದಿರಾಜನು ಭಾರತೀದೇವಿಯು ಪ್ರೀತಳಾಗಲೆಂದು ಭಾರತೀಶನಾದ ವಾಯುವಿನ ಜಯವನ್ನು ಪ್ರತಿಪಾದಿಸುವ ಈ ಗ್ರಂಥವನ್ನು ರಚಿಸಿದನು. ‖ ೩೮ ‖

ಶ್ರಿಯಃಪತ್ಯುರ್ಭಿಯಾಂ ಹರ್ತುರ್ಜ್ಞಸ್ತ್ರಯೀವೇತ್ತುರ್ಹಯಾಸ್ಯ ತೇ ।
ಪ್ರಿಯಾಯ ಮೇ ಜಯಾಯ ಸ್ಯಾದಿಯಂ ಸರಸಭಾರತೀ ‖ ೩೯ ‖

ಲಕ್ಷ್ಮೀಪತಿಯಾದ, ಭಕ್ತರ ಭಯವನ್ನು ದೂರಮಾಡುವ, ವೇದಾರ್ಥವನ್ನು ತಿಳಿದ, ಎಲೈ ಹಯವದನನೇ, ನಿನ್ನ ಪ್ರೀತಿಗೂ, ನನ್ನ ಜಯಕ್ಕೂ ಈ ಸರಸಭಾರತೀಗ್ರಂಥವು ಆಗಲಿ. ‖ ೩೯ ‖

ನಮೋಽಸ್ತು ಪದ್ಮನಾಭಾಯ ಪದ್ಮಾಕಾಂತಾಯ ವಿಷ್ಣವೇ ।
ಪರೇತತ್ತ್ವೇ ವಿಶುದ್ಧಾಯ ಮಧ್ವಾಯ ಚ ನಮೋನಮಃ ‖ ೪೦ ‖

ರಮಾಕಾಂತನೂ, ಪದ್ಮನಾಭನೂ ಆದ ವಿಷ್ಣುವಿಗೆ ನಮಸ್ಕಾರವಿರಲಿ. ಪರತತ್ತ್ವನಾದ ಪರಮಾತ್ಮನಲ್ಲಿ ಸದಾ ಶುದ್ಧನಾದ ಮಧ್ವನಿಗೆ (ಮಧ್ವಾ-ಚಾರ್ಯರಿಗೆ) ನಮಸ್ಕಾರಗಳು. ‖ ೪೦ ‖

ವಾದಿರಾಜಕೃತೇ ಶ್ರಾವ್ಯೇ ಕಾವ್ಯೇ ಭವ್ಯೇ ಸುಬುದ್ಧಿಭಿಃ ।
ಸೇವ್ಯೇ ಸರಸಭಾರತ್ಯಾಂ ವಿಲಾಸೋಽಭೂದ್ದ್ವರಿಪ್ರಿಯಃ ‖

ವಾದಿರಾಜರು ರಚಿಸಿದ, ಕೇಳಲು ಇಂಪಾದ, ಸುಂದರವಾದ, ಉತ್ತಮ ಬುದ್ಧಿಯುಳ್ಳವರಿಂದ ಸೇವಿಸಲ್ಪಡಲು ಯೋಗ್ಯವಾದ ಸರಸಭಾರತೀಕಾವ್ಯದಲ್ಲಿ ಹನ್ನೆರಡನೆಯ ವಿಲಾಸವು ಶ್ರೀಹರಿಗೆ ಪ್ರಿಯವಾಯಿತು. ‖ ೪೧ ‖

ಸರಸಭಾರತೀವಿಲಾಸವು ಸಂಪೂರ್ಣವಾಯಿತು.